ಹುಬ್ಬಳ್ಳಿ
ಸೋಮವಾರ, 20 ಏಪ್ರಿಲ್ 2026
ಸಂಪುಟ 16, ಸಂಚಿಕೆ 26, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸೋನಿಯಾ, ರಾಗಾ ವಿರುದ್ಧ ವಿಚಾರಣೆ ಇಂದು | 02
ಅಮೆರಿಕ ಪ್ರಜೆಗಳಿಬ್ಬರ ಸೆರೆ | 02
ಪವನ್ ಕಲ್ಯಾಣ್ ಅಸ್ವಸ್ಥ, ಚೇತರಿಕೆ | 02

ಕಾಂಗ್ರೆಸ್, ಟಿಎಂಸಿ, ಡಿಎಂಕೆ ವಿರುದ್ಧ ಮೋದಿ, ಶಾ ವಾಗ್ದಾಳಿ

ಮಹಿಳೆಯರಿಗೆ ಮೋಸ

ಬಂಕುರಾ/ವಾಸುದೇವನಲ್ಲೂರು/ಈರೋಡ್: ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವ ಉದ್ದೇಶದ ಸಂವಿಧಾನ(131ನೇ ತಿದ್ದುಪಡಿ) ಮಸೂದೆ ಸೋಲಿನ ನಂತರ, ವಿರೋಧ ಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಯುತ್ತಿದ್ದು, ಮಹಿಳೆಯರಿಗೆ ಕಾಂಗ್ರೆಸ್, ಟಿಎಂಸಿ ಮತ್ತು ಡಿಎಂಕೆ ಸೇರಿದಂತೆ ವಿಪಕ್ಷಗಳು ವಂಚನೆ ಮಾಡಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ ಆರೋಪಿಸಿದ್ದಾರೆ.

ಪಶ್ಚಿಮ ಬಂಗಾಳದ ಬಂಕುರಾದಲ್ಲಿ ನಡೆದ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ತೃಣಮೂಲ ಕಾಂಗ್ರೆಸ್ (ಟಿಎಂಸಿ) ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಮಹಿಳೆಯರಿಗೆ ಮೀಸಲಾತಿ



ನೀಡುವ ಮಸೂದೆಯನ್ನು ತಡೆದು, ಟಿಎಂಸಿ ಮಹಿಳೆಯರನ್ನು ವಂಚಿಸಿದೆ ಎಂದು ಆರೋಪಿಸಿದ ಅವರು, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಮಹಿಳೆಯರು ಇದಕ್ಕೆ ತಕ್ಕ ಉತ್ತರ ನೀಡಲಿದ್ದಾರೆ ಎಂದು ಹೇಳಿದರು.

ದೇಶ ನಿರ್ಮಾಣದಲ್ಲಿ ನಮ್ಮ ಹೆಣ್ಣುಮಕ್ಕಳ ಪಾತ್ರವನ್ನು ವಿಸ್ತರಿಸಲು ನಾವು ಬಯಸುತ್ತೇವೆ. ಆದರೆ ಸಂಸತ್ತಿನಲ್ಲಿ ಏನಾಯಿತೆಂಬುದನ್ನು ನೀವು ನೋಡಿದ್ದೀರಿ. ಟಿಎಂಸಿ ಮತ್ತೆ ಪಶ್ಚಿಮ ಬಂಗಾಳದ ಮಹಿಳೆಯರನ್ನು ವಂಚಿಸಿದೆ ಎಂದು ಹೇಳಿದರು. 2029ರಿಂದ ಮೀಸಲಾತಿ ಜಾರಿಯಾಗಬೇಕೆಂಬ ಜನರ ಆಸೆಯನ್ನು ಟಿಎಂಸಿ ತಡೆದಿದೆ ಎಂದು ಆರೋಪಿಸಿದರು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯ ಕೊರತೆ ವಿರುದ್ಧ ಮಹಿಳೆಯರು ಧ್ವನಿ ಎತ್ತುತ್ತಿರುವುದರಿಂದ ಟಿಎಂಸಿ ಆತಂಕದಲ್ಲಿದೆ ಎಂದು ಹೇಳಿದರು.

ಕಾಂಗ್ರೆಸ್, ಡಿಎಂಕೆ ವಿರುದ್ಧ ರಾಜನಾಥ್ ಕಿಡಿ: ತಮಿಳುನಾಡಿನ ವಾಸುದೇವನಲ್ಲೂರಿನಲ್ಲಿ ನಡೆದ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕಾಂಗ್ರೆಸ್, ಡಿಎಂಕೆ ಸೇರಿದಂತೆ ಹಲವು ಪಕ್ಷಗಳನ್ನು ಟೀಕಿಸಿದರು. ಮಹಿಳಾ ಮೀಸಲಾತಿ ಮಸೂದೆ ಅಂಗೀಕಾರಕ್ಕೆ ವಿರೋಧ ವ್ಯಕ್ತಪಡಿಸಿದವರನ್ನು ಅವರು ಗುರಿಯಾಗಿಸಿಕೊಂಡರು.

ನಮ್ಮ ಸರ್ಕಾರ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡಲು ಬದ್ಧವಾಗಿದೆ.

➡ಪುಟ ೪



ಪಶ್ಚಿಮ ಬಂಗಾಳದ ಝಾರ್‌ಗ್ರಾಮದಲ್ಲಿ ಪ್ರಧಾನಿ ಮೋದಿ ಝುಲ್‌ಮುರಿ (ಚುರ್‌ಮುರಿ ರೀತಿಯ ಬೀದಿ ಬದಿ ತಿನಿಸು) ಸವಿದ ಅಪರೂಪದ ಕ್ಷಣ.

ಇಂಡಿ ಒಕ್ಕೂಟದ ಮಾನಸಿಕ ಸ್ಥಿತಿ ಅನಾವರಣ: ಸಂಸದ ಅನುರಾಗ್

ಬೆಂಗಳೂರು: ಕಾಂಗ್ರೆಸ್ ಪಕ್ಷ ಹಾಗೂ ಅವರ ಮಿತ್ರ ಪಕ್ಷಗಳು ದೇಶದಲ್ಲಿ ಶೇ.50 ರಷ್ಟಿರುವ ಮಹಿಳೆಯರಿಗೆ ದ್ರೋಹವೆಸಗಿದ್ದಾರೆ. ಇಂಡಿ ಒಕ್ಕೂಟದ ಪಕ್ಷಗಳ ಮಹಿಳಾ



ವಿರೋಧಿ ಮಾನಸಿಕ ಸ್ಥಿತಿ ಅನಾವರಣಗೊಂಡಿದೆ ಎಂದು ಸಂಸದ ಅನುರಾಗ್ ಸಿಂಗ್ ಠಾಕೂರ್ ಕಿಡಿಕಾರಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಮಸೂದೆ ಸೋಲಲು ಕಾರಣರಾದ ಕಾಂಗ್ರೆಸ್ ಪಕ್ಷ ಹಾಗೂ ಅವರ ಮಿತ್ರ ಪಕ್ಷದವರನ್ನು ದೇಶದ ತಾಯಂದಿರು ಮತ್ತು ಸೋದರಿಯರು ಯಾವತ್ತೂ ಕ್ಷಮಿಸಲಾರರು ಎಂದು ಆಕ್ರೋಶ ವ್ಯಕ್ತಪಡಿಸಿದರು. ಮಸೂದೆ ಕುರಿತು 2 ದಿನ ಚರ್ಚೆ ನಡೆದಿತ್ತು. 2023ರಲ್ಲಿ ವಿಪಕ್ಷಗಳು 2024ರ ಚುನಾವಣೆ ಕಾರಣಕ್ಕಾಗಿ ಮಹಿಳಾ ಮೀಸಲಾತಿ ಮಸೂದೆಯನ್ನು ಬೆಂಬಲಿಸಿದ್ದವು.

➡ಪುಟ ೪

> **ನೀತಿ ನಿರೂಪಣೆಯಲ್ಲಿ ಮಹಿಳೆಯರಿಗೆ ಅವಕಾಶ ನೀಡುವ ಆಶಯ ಪ್ರಧಾನಿ ಮೋದಿ ಅವರದಾಗಿತ್ತು. ಆದರೆ, ವಿಪಕ್ಷಗಳು ಆದಕ್ಕೆ ಅವಕಾಶ ಕೊಟ್ಟಿಲ್ಲ. ಕಾಂಗ್ರೆಸ್ ಮತ್ತಿತರ ಪಕ್ಷಗಳು ಮಹಿಳೆಯರಿಗೆ ನಿರಂತರವಾಗಿ ದ್ರೋಹವೆಸಗಿವೆ.**
> ■ **ದೀಪ್ತಿ ರಾವತ್ ಭಾರದ್ವಾಜ್,** ಮಹಿಳಾ ಮೋರ್ಚಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಧರ್ಮಸಭೆ ಕಾರ್ಯಕ್ರಮದಲ್ಲಿ ಸಿಎಂ ಸಲಹೆ

ಮೂಢನಂಬಿಕೆ ಬಿಡಿ ದೇವರಪೂಜೆ ಮಾಡಿ



ರಾಣೇಬೆನ್ನೂರು: ಮಾನವ ಸಮಾಜ ನಿರ್ಮಾಣದಲ್ಲಿ ಎಲ್ಲರೂ ಪಾಲುದಾರರಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ರಾಣೇಬೆನ್ನೂರಿನ ನಿಟ್ಟೂರು ಗ್ರಾಮದಲ್ಲಿ ಭಾನುವಾರ ಆಯೋಜಿಸಲಾಗಿದ್ದ ಶ್ರೀ ಬೀರೇಶ್ವರ ಸ್ವಾಮಿ ದೇವಸ್ಥಾನದ 50ನೇ ವರ್ಷದ ಸುವರ್ಣ ಮಹೋತ್ಸವ ಹಾಗೂ ಶ್ರೀ ಭಕ್ತ ಕನಕದಾಸರ ಮಹಾದ್ವಾರದ ಉದ್ಘಾಟನೆ ಹಾಗೂ ಧರ್ಮಸಭೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ನಮ್ಮ ನಾಡು, ನಮ್ಮ ದೇಶ ಸರ್ವಜನಾಂಗದ ಶಾಂತಿಯ ತೋಟವಾಗಬೇಕೆಂದು ಬುದ್ಧ, ಬಸವ, ಮಹಾ ಗಾಂಧಿ, ಅಂಬೇಡ್ಕರ್, ಕುವೆಂಪು ಬಯಸಿದ್ದರು. ಅದನ್ನೇ ನಮ್ಮ ಸರ್ಕಾರ ಪಾಲಿಸುತ್ತಿದೆ ಎಂದರು.

ನಿಟ್ಟೂರಿನಲ್ಲಿ ಕೇವಲ 13 ಕುರುಬರ ಮನೆಗಳಿವೆ. ಆದರೆ, ಬೀರಲಿಂಗೇಶ್ವರ ದೇವಾಲಯ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವುದು ಊರಿನ ಸಾಮರಸ್ಯಕ್ಕೆ ದ್ಯೋತಕವಾಗಿದೆ. ದೇವರನ್ನು ನಂಬಿ, ಮೂಢನಂಬಿಕೆಗಳನ್ನು ತ್ಯಜಿಸಿ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಎಂಬ ವಿಚಾರಗಳು ಸಂವಿಧಾನದ ಆಧಾರ ಸ್ತಂಭಗಳು. ದೇವರ ಪೂಜೆ ಮಾಡಿ, ಆದರೆ ಮೂಢನಂಬಿಕೆಗಳನ್ನು ಇಟ್ಟುಕೊಳ್ಳದಿರಿ, ಬಸವಣ್ಣ ಕರ್ಮ ಸಿದ್ಧಾಂತವನ್ನು ತಿರಸ್ಕರಿಸಿದ್ದರು ಎನ್ನುವುದನ್ನು ಸ್ಮರಿಸಿಕೊಳ್ಳಿ ಎಂದು ಸಲಹೆ ನೀಡಿದರು. ನಾನು ಬಸವಣ್ಣನ ಅನುಯಾಯಿ, ಬಸವಣ್ಣನವರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ನಮ್ಮ ಸರ್ಕಾರ ಘೋಷಣೆ ಮಾಡಿದೆ.

➡ಪುಟ ೪

ಉನ್ನತ ವಿದ್ಯೆ ಕಲಿತವರಿಂದಲೇ ಜಾತಿ ವ್ಯವಸ್ಥೆ ಪೋಷಣೆ

ದೇಶದ ಸ್ವಾತಂತ್ರ್ಯ, ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯದ ತಳಹದಿಯ ಮೇಲೆ ನಿಂತಿದೆ. ಇಲ್ಲದಿದ್ದರೆ ರಾಜಕೀಯ ಸ್ವಾತಂತ್ರ್ಯ ಯಶಸ್ವಿಯಾಗಲ್ಲ ಎಂದು ಅಂಬೇಡ್ಕರ್ ಹೇಳಿದ್ದರು. ಸಮಾನತೆಯ ಆಶಯದಿಂದಲೇ ಭಾಗ್ಯಗಳನ್ನು, ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿರುವುದಾಗಿ ಸಿಎಂ ಸಿದ್ದರಾಮಯ್ಯ ತಿಳಿಸಿದರು. ಹಿಂದು, ಕ್ರಿಶ್ಚಿಯನ್, ಇಸ್ಲಾಂ, ಧರ್ಮಗಳು ಜನರನ್ನು ಪ್ರೀತಿಸಬೇಕೆಂದು ಬೋಧಿಸುತ್ತವೆ. ಇದು ಆದಾಗ ಮಾತ್ರ ಮಾನವ ಸಮಾಜ ನಿರ್ಮಾಣ ಸಾಧ್ಯ. ಸೈದ್ಧಾಂತಿಕವಾಗಿ ನಮ್ಮ ವಿರೋಧಿಗಳಾದರೂ ಜನರನ್ನು ಪ್ರೀತಿಸಬೇಕು. ಕುಲದ ನೆಲೆಯನ್ನು ಬಲ್ಲಿರಾ ಎಂದ ಕನಕದಾಸರ ಹಾಗೂ ಇವ ನಮ್ಮವ ಎಂಬ ಬಸವಣ್ಣನ ತತ್ವವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಉನ್ನತ ವಿದ್ಯೆ ಕಲಿತವರೇ ಜಾತಿ ವ್ಯವಸ್ಥೆಯನ್ನು ಪೋಷಿಸುವುದು ನಮ್ಮ ಸಮಾಜದ ದುರಂತ ಎಂದರು.

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ ಉಪರಿ ಚೌತಿ, ನಕ್ಷತ್ರ: ರೋಹಿಣಿ

ದಿನದ ಮಾತು

ಸತ್ಯವು ಅಪರೂಪಕ್ಕೊಮ್ಮೆ ನೇರವಾಗಿರುತ್ತದೆ. ಎಂದಿಗೂ ಸರಳವಾಗಿರುವುದಿಲ್ಲ.

▲ಸುಭಾಷಿತ

ಬಯಲಿಗೆ ಬಂತು 'ಕಾರ್ಪೊರೇಟ್ ಜಿಹಾದ್'

ನೇರ ನೋಟ

ದು.ಗು.ಲಕ್ಷ್ಮಣ

ಪುಟ ೬

ಕಿರುಸುದ್ದಿ

ಕೆ.ಆರ್.ನಗರದಲ್ಲಿ ಆರು ಮಂದಿ ಕಾವೇರಿ ಪಾಲು

ಕೆ.ಆರ್.ನಗರ: ಪಟ್ಟಣದ ಹೊರ ವಲಯದ ಹಳೆ ಎಡತೊರೆಯಲ್ಲಿರುವ ಸೈಯದ್ ಖಾದರ್ ಲಿಂಗಾವಲಿ ದರ್ಗಾದಲ್ಲಿ ನಡೆಯುವ ಉರುಸ್ ಕಾರ್ಯಕ್ರಮ ಮತ್ತು ಖವಾಲಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಆರು ಮಂದಿ ಭಾನುವಾರ ಕಾವೇರಿ ನದಿಯಲ್ಲಿ ಈಜುವಾಗ ನೀರುಪಾಲಾಗಿದ್ದಾರೆ. ಬೆಂಗಳೂರಿನವರಾದ ಐಮಾ(13), ಯಾಸಿನ್(23), ನೇಹಾ(20), ಊಟಿಯ ಸೈಯದ್‌ಫಾತಿಮಾ(35), ಮೈಸೂರಿನ ಉಮ್ಮೇರಾ(7), ಕೆ.ಆರ್.ನಗರದ ಅಫಿಜಾ(20) ಮೃತರು. ಘಟನೆಯಿಂದ ಆಘಾತಕ್ಕೊಳಗಾಗಿ ಅಸ್ವಸ್ಥಗೊಂಡ ಇಬ್ಬರನ್ನು ಮೈಸೂರಿನ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

➡ಪುಟ ೪

ಎಕ್ಸ್‌ಪ್ರೆಸ್‌ವೇ ಅಪಾಯದ ದಾರಿ ಆಗಬಾರದು: ಸುಪ್ರೀಂ

ಪುಟ ೭

ಹತ್ಯೆಗೀಡಾಗಿ ತಿಂಗಳಾದರೂ ನಡೆದಿಲ್ಲ ಖಮೇನಿ ದಫನ್!

ಪುಟ ೭

ಭಾರತ ನಂಟಿಗಿದೆ 5,000 ವರ್ಷದ ಬಂಧ: ಇರಾನ್

ಪುಟ ೭

ಬಾಂಗ್ಲಾ ಹೈಕಮಿಷನರ್ ಆಗಿ ದಿನೇಶ್ ತ್ರಿವೇದಿ?

ಪುಟ ೭

ಇಂಧನ ಪರಿವರ್ತನೆಗೆ ಕ್ರಮ: ಸಚಿವ ಜಾರ್ಜ್

ಪುಟ ೫

ಸಮಯ ಬರಲಿ, ಉತ್ತರ ಸಿಗಲಿದೆ: ಡಿಸಿಎಂ ಡಿಕೆಶಿ

ಪುಟ ೫



ಮಹಿಳಾ ಮೀಸಲಾತಿ ಮಸೂದೆ ಅವಶ್ಯಕತೆ

ಮಹಿಳಾ ಮೀಸಲಾತಿ ಪುನರಾವೃತ ಪ್ರಶ್ನೆಗಳು

ಪುಟ ೭

ಸುದ್ದಿ ಸಮಗ್ರ

ದೇಶದ ಮೂಲಭೂತ ಸೌಕರ್ಯಗಳ ಮೇಲೆ ದಾಳಿ ಎಚ್ಚರಿಕೆ

ಇರಾನ್‌ಗೆ ಟ್ರಂಪ್ ಮತ್ತೆ ಬೆದರಿಕೆ

ಹೊಸದಿಲ್ಲಿ: ಪ್ರಸ್ತಾವಿತ ಒಪ್ಪಂದವನ್ನು ತಿರಸ್ಕರಿಸಿದರೆ ಇರಾನ್‌ನ ವಿದ್ಯುತ್ ಸ್ಥಾವರಗಳು ಮತ್ತು ಸೇತುವೆಗಳನ್ನು ನಾಶಪಡಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾನುವಾರ ಎಚ್ಚರಿಕೆ ನೀಡಿದ್ದಾರೆ. ಒಂದು ವೇಳೆ ಅತ್ಯಂತ ನ್ಯಾಯಯುತ ಮತ್ತು ಸಮಂಜಸ ಒಪ್ಪಂದವನ್ನು ಒಪ್ಪಿಕೊಳ್ಳದಿದ್ದರೆ, ಇನ್ನು



ಮುಂದೆ ನಾನು ಸಭ್ಯನಾಗಿ ಇರುವುದಿಲ್ಲ ಎಂದು ಟ್ರಂಪ್ ಹೇಳಿದ್ದಾರೆ.


ಟೆಹ್ರಾನ್ ಪ್ರಸ್ತುತ ಮಾತುಕತೆಯ ನಿಯಮಗಳನ್ನು ಒಪ್ಪಿಕೊಳ್ಳದಿದ್ದರೆ ಇರಾನ್ ವಿರುದ್ಧ ಭೀಕರ ದಾಳಿ ನಡೆಸುತ್ತೇವೆ. ಹಾರ್ಮುಜ್ ಜಲಸಂಧಿಯಲ್ಲಿ ಫ್ರೆಂಚ್ ಮತ್ತು ಯುಕೆ ಹಡಗುಗಳ ಮೇಲೆ ಗುಂಡು ಹಾರಿಸುವ ಮೂಲಕ ಇರಾನ್ ಕದನ ವಿರಾಮ ಒಪ್ಪಂದ ಉಲ್ಲಂಘಿಸಿದೆ ಎಂದು ಅವರು ಹೇಳಿದರು. ಯುಎಸ್ ಪ್ರತಿನಿಧಿಗಳು ಮುಂದಿನ ಮಾತುಕತೆಗಾಗಿ ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ತಲುಪುವುದು ನಿಗದಿಯಾಗಿದೆ.

ಹಾರ್ಮುಜ್ ಜಲಸಂಧಿ ದಿಗ್ಬಂಧನ: ಇರಾನ್ ಬಂದರುಗಳ ಮೇಲೆ ಯುಎಸ್ ವಿಧಿಸಿರುವ ನೌಕಾ ದಿಗ್ಬಂಧನಕ್ಕೆ ಪ್ರತಿಕ್ರಿಯೆಯಾಗಿ ಇರಾನ್ ಹಾರ್ಮುಜ್ ಜಲಸಂಧಿಯ ನಿರ್ಬಂಧವನ್ನು ಮುಂದುವರಿಸಿದೆ.

➡ಪುಟ ೪

ಶಾಂತಿ ಮಾತುಕತೆಗೆ ಪಾಕ್ ಸಕಲ ಸಿದ್ಧತೆ

ಇಸ್ಲಾಮಾಬಾದ್: ಅಮೆರಿಕ–ಇರಾನ್ ನಡುವಿನ ಎರಡನೇ ಹಂತದ ಕದನ



ವಿರಾಮ ಮಾತುಕತೆ ಪಾಕಿಸ್ತಾನದಲ್ಲಿ ಸೋಮವಾರ ನಡೆಯಲಿದ್ದು, ವಿದೇಶಿ ಪ್ರತಿನಿಧಿಗಳ ಆಗಮನ ಹಿನ್ನೆಲೆಯಲ್ಲಿ ಪಾಕಿಸ್ತಾನ ಕಠಿಣ ಭದ್ರತಾ ಕ್ರಮಗಳನ್ನು ಜಾರಿಗೊಳಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. • ವಿವರ ಪುಟ ೭

ಆರೆಸ್ಸೆಸ್ ಶತಮಾನೋತ್ಸವ ಹಿನ್ನೆಲೆ | ವಿದೇಶದಲ್ಲಿ ಸಂವಾದ

ದೇಶ ನಿಷ್ಠೆ ಇರಲಿ: ಹೊಸಬಾಳೆ

ಸ್ಟ್ಯಾನ್‌ಫೋರ್ಡ್: ವಿದೇಶದಲ್ಲಿರುವ ಭಾರತೀಯರ ಕುರಿತು ಮಾತನಾಡಿದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು, ಸಂಘದ ದೃಷ್ಟಿಕೋನ ಎರಡು ಮುಖಗಳನ್ನು ಹೊಂದಿದೆ ಎಂದು ವಿವರಿಸಿದರು. ಮೊದಲನೆಯದಾಗಿ,



ಭಾರತೀಯ ಮೂಲದವರು ತಾವು ವಾಸಿಸುವ ದೇಶಕ್ಕೆ ಸಂಪೂರ್ಣ ನಿಷ್ಠೆ ತೋರಿಸಿ, ಆ ದೇಶದ ಪ್ರಗತಿ ಮತ್ತು ಸಮೃದ್ಧಿಗೆ ಕೆಲಸ ಮಾಡಬೇಕು. ಎರಡನೆಯದಾಗಿ, ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಯೊಂದಿಗೆ ತಮಗೆ ಇರುವ ಸಂಬಂಧವನ್ನು ಕಾಪಾಡಿಕೊಳ್ಳಬೇಕು ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಶತಮಾನೋತ್ಸವದ ಹಿನ್ನೆಲೆಯಲ್ಲಿ ಅವರು ವಿದೇಶದಲ್ಲಿ ನೀಡಿದ ಸಂವಾದವೊಂದರಲ್ಲಿ, ಸ್ಥಳೀಯ ಸಮಾಜದೊಂದಿಗೆ ಹೊಂದಾಣಿಕೆ ಸಾಧಿಸುವುದರ ಜತೆ ಸ್ಥಳೀಯ ಹಿಂದು ಸಮುದಾಯವನ್ನು ಸಂಘಟಿಸುವುದು, ಸಾಮಾಜಿಕ ಅಭಿವೃದ್ಧಿಗೆ ಕೈಜೋಡಿಸುವುದು ಮತ್ತು ಸಂಸ್ಕೃತಿಯ ಮೂಲಕ ಭಾರತಕ್ಕೂ ಸೇವೆ ಸಲ್ಲಿಸುವುದು ಈ ದೃಷ್ಟಿಕೋನದ ಭಾಗವೆಂದು ಹೇಳಿದರು.

➡ಪುಟ ೪

ಮೊದಲು ರಾಷ್ಟ್ರ ಹಿತ, ಜತೆಗೆ ಸಂಸ್ಕೃತಿ ನಂಟು

ಸ್ಟ್ಯಾನ್‌ಫೋರ್ಡ್/ವಾಷಿಂಗ್ಟನ್: ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರ್‌ಎಸ್‌ಎಸ್)ದ ಶತಮಾನೋತ್ಸವದ ಹಿನ್ನೆಲೆಯಲ್ಲಿ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹಲವು ಪ್ರಮುಖ ರಾಷ್ಟ್ರೀಯ ಮತ್ತು ಜಾಗತಿಕ ಪ್ರಶ್ನೆಗಳ ಕುರಿತು ಸಮಗ್ರ ಸಂದೇಶ ನೀಡಿದ್ದಾರೆ. ವಿದೇಶಗಳಲ್ಲಿ ವಾಸಿಸುವ ಭಾರತೀಯರು ತಾವು ನೆಲೆಸಿರುವ ದೇಶದ ಹಿತಾಸಕ್ತಿ, ಕಲ್ಯಾಣ ಮತ್ತು ಪ್ರಗತಿಗೆ ಮೊದಲ ಆದ್ಯತೆ ನೀಡಬೇಕು. ಅದರ ಜತೆಯಲ್ಲೇ ಭಾರತೀಯ ಸಂಸ್ಕೃತಿಯೊಂದಿಗೆ ಜೀವಂತ ನಂಟು ಉಳಿಸಿಕೊಳ್ಳಬೇಕು ಎಂದು ಅವರು ಕರೆನೀಡಿದ್ದಾರೆ. • ವಿವರ ಪುಟ ೩

ತೃತೀಯ ಭಾಷಾ ಪರೀಕ್ಷೆಗೆ ಅಂಕ: ಹೈಗೆ ಸರ್ಕಾರ ಅರ್ಜಿ

ಗ್ರೇಡ್ ಬದಲು ಅಂಕ ನೀಡಲು ನಿರ್ದೇಶನ ನೀಡಿದ್ದ ಹೈಕೋರ್ಟ್

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ (ಕೆಎಸ್‌ಇಎಬಿ) ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷೆಗೆ ಗ್ರೇಡ್ ಬದಲಿಗೆ ಅಂಕ ನೀಡಲು ನಿರ್ದೇಶಿಸಿ ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸುವಂತೆ ಕೋರಿ ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ರಾಜ್ಯ ಸರ್ಕಾರ ಮರುಪರಿಶೀಲನಾ ಅರ್ಜಿ ಸಲ್ಲಿಸಿದ್ದು, ತುರ್ತಾಗಿ ವಿಚಾರಣೆ ನಡೆಸುವಂತೆ ನ್ಯಾ. ಇ.ಎಸ್.ಇಂದಿರೇಶ್ ಅವರ ಏಕಸದಸ್ಯ ಪೀಠಕ್ಕೆ ಕೋರಲು ಸಿದ್ಧತೆ ನಡೆಸಿದೆ.

➡ಪುಟ ೪

ಪಟಾಕಿ ಘಟಕದಲ್ಲಿ ಭಾರೀ ಸ್ಫೋಟ: 18 ಮಂದಿ ಬಲಿ

ಚೆನ್ನೈ: ತಮಿಳುನಾಡಿನ ವಿರುಧುನಗರ್ ಜಿಲ್ಲೆಯ ಪಟಾಕಿ ತಯಾರಿಕಾ ಘಟಕದಲ್ಲಿ ಭಾನುವಾರ ಸಂಭವಿಸಿದ ಭಾರೀ ಸ್ಫೋಟದಲ್ಲಿ 18 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಈಗಾಗಲೇ 18 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಆರು ಗಾಯಾಳುಗಳ ಪೈಕಿ ನಾಲ್ವರ ಸ್ಥಿತಿ ಚಿಂತಾಜನಕವಾಗಿದೆ. ವಿರುಧುನಗರ್ ಜಿಲ್ಲೆಯ ಕತ್ತನಾರ್‌ಪಟ್ಟಿ ಪ್ರದೇಶದ ವನಜಾ ಫೈರ್‌ವರ್ಕ್ಸ್ ಪಟಾಕಿ ಕಾರ್ಖಾನೆಯಲ್ಲಿ ಈ ಸ್ಫೋಟ ಸಂಭವಿಸಿದೆ.

➡ಪುಟ ೪

ಕಿರುಸುದ್ದಿ

ಪುಸ್ತಕ ಬಿಡುಗಡೆ ನಾಳೆ

ಹುಬ್ಬಳ್ಳಿ: ಏ.21 ರಂದು ಸಂಜೆ 6 ಗಂಟೆಗೆ ಹುಬ್ಬಳ್ಳಿ ದೇಶಪಾಂಡೆ ನಗರದ ಸವಾಯಿ ಗಂಧರ್ವ ಕಲಾಮಂದಿರದಲ್ಲಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ವಿಚಾರಗಳ ನಾನೂ ಕಾಫೀರ ಎಂಬ ಪುಸ್ತಕ ಬಿಡುಗಡೆ ಆಗಲಿದೆ. ಮಂಡ್ಯದ ಡಾ. ಸುಧಾಕರ ಹೊಸಳ್ಳಿ ಅವರು ಬರೆದ ಪುಸ್ತಕವನ್ನು ಚಿತ್ರದುರ್ಗ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಡಾ. ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಬಿಡುಗಡೆ ಮಾಡಲಿದ್ದಾರೆ. ಚಕ್ರವರ್ತಿ ಸೂಲಿಬೆಲೆ ಅವರ ಮುಖ್ಯ ಭಾಷಣ ಇರಲಿದೆ. ಶ್ರೀಧರ ನಾಡಿಗೇರ ಉಪಸ್ಥಿತರಿರುವರು. ಪುಸ್ತಕ ಇಸ್ಲಾಂ ಕುರಿತು ಡಾ. ಅಂಬೇಡ್ಕರ್ ಅವರ ನಿಲುವನ್ನು ಅವರ ಪುಸ್ತಕಗಳ ಆಧಾರದ ಮೇಲೆ ಪ್ರಸ್ತುತ ಪಡಿಸುತ್ತದೆ. ಕಾರ್ಯಕ್ರಮವನ್ನು ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕರ್ನಾಟಕ ಮತ್ತು ಲೋಕಹಿತ ಟ್ರಸ್ಟ್ ಹುಬ್ಬಳ್ಳಿ ಆಯೋಜಿಸಿವೆ.



ನರಗುಂದ: ಪಟ್ಟಣದ ಸುಕ್ಷೇತ್ರ ವೀರಕ್ತಮಠದ ಕರ್ತೃ ಚನ್ನಬಸವ ಮಹಾಶಿವಯೋಗಿಗಳ 157ನೇ ಪುಣ್ಯಸ್ಮರಣೋತ್ಸವದ ನಿಮಿತ್ತ ಭಾನುವಾರ ಮಹಾರಥೋತ್ಸವ ವಿಜೃಂಭಣೆಯಿಂದ ಸಾಗಿಬಂತು. ಶಿವಕುಮಾರ ಸ್ವಾಮೀಜಿ ಚಾಲನೆ ನೀಡಿದರು.

ಮಹಿಳಾ ಶಕ್ತಿಗೆ ಅಪಮಾನ



ಗಜೇಂದ್ರಗಡ: ಕಾಂಗ್ರೆಸ್ ಪಕ್ಷ ಮಹಿಳಾ ವಂದನಾ (ಮಹಿಳೆಯರ ಮೀಸಲಾತಿ) ಬಿಲ್ಲನ್ನು ವಿರೋಧ ಮಾಡಿ ಸಮಗ್ರ ಭಾರತ ಮಹಿಳಾ ಶಕ್ತಿಗೆ ಅಪಮಾನ ಮಾಡಿದೆ. ಕಾಂಗ್ರೆಸ್‌ನವರು 30 ವರ್ಷದಿಂದ ಮಾಡಿಕೊಂಡು ಬಂದಿರುವುದನ್ನು ಈಗ ಮತ್ತೆ ಮುಂದುವರೆಸಿದ್ದಾರೆ ಎಂದು ಅಕ್ಕನ ಬಳಗದ ಅಧ್ಯಕ್ಷೆ ಸಂಯುಕ್ತಾ ಬಂಡಿ ಆರೋಪಿಸಿದರು.

ಈ ಕುರಿತು ಪತ್ರಿಕೆಯೊಂದಿದೆ ಮಾತನಾಡಿದ ಅವರು, ದೇಶದ ಮಹಿಳೆಯರ ಸಬಲೀಕರಣಕ್ಕೆ ಗೌರವ ಮತ್ತು ರಾಜಕೀಯ ಪ್ರತಿನಿಧಿತ್ವವನ್ನು ಹೆಚ್ಚಿಸುವ ಮಹತ್ವಾಕಾಂಕ್ಷಿ ದೃಷ್ಟಿಕೋನದೊಂದಿಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾರಿ ಶಕ್ತಿ ವಂದನ ಅಧಿನಿಮಿಯಮ್-2026 ದೇಶದ ಇತಿಹಾಸದಲ್ಲಿಯೇ ಸುವರ್ಣ ಅಕ್ಷರದಲ್ಲಿ ಬರೆದಿಡುವ ಮಸೂದೆಯಾಗುತ್ತಿತ್ತು. ಆದರೆ ಕಾಂಗ್ರೆಸ್ ಸರ್ಕಾರ ಹಾಗೂ ಮಿತ್ರ ಪಕ್ಷಗಳ ಒಕ್ಕೂಟದವರು ಈ ಬಿಲ್ ವಿರೋಧಿಸಿ ದೇಶದ ಮಹಿಳೆಯರಿಗೆ ಅನ್ಯಾಯ ಮಾಡಿದೆ ಎಂದರು.

ಮೋದಿ ಸೇವಾ ರತ್ನ ಪ್ರಶಸ್ತಿ



ಧಾರವಾಡ: ಉತ್ತರ ಪ್ರದೇಶ ರಾಜ್ಯದ ಭಾರತ ವಿಕಾಸ್ ಸೇವಾ ಫೌಂಡೇಶನ್ ಕೊಡಮಾಡುವ 2026ನೇ ಸಾಲಿನ ಪ್ರಧಾನಮಂತ್ರಿ ನರೇಂದ್ರ ಮೋದಿ ವಿಕಾಸ್ ಸೇವಾ ರತ್ನ ಪ್ರಶಸ್ತಿಗೆ ಸಕ್ಷಮ್ ಸಂಘಟನೆ ಧಾರವಾಡ ಜಿಲ್ಲಾ ಘಟಕದ ಅಧ್ಯಕ್ಷ ಕೇಶವ ಪ್ರಭಾಕರ ತೆಲಗು ಅವರಿಗೆ ಒಲಿದಿದೆ.

ಕರ್ನಾಟಕ ರಾಜ್ಯ ವಿಶಿಷ್ಟಚೇತನರ ಒಕ್ಕೂಟದ ಜಿಲ್ಲಾಧ್ಯಕ್ಷರಾಗಿ ಮತ್ತು ಸಮಾಜಮುಖಿ ಕಾರ್ಯವೈಖರಿ ಜೊತೆ ಅಂತಾರಾಷ್ಟ್ರೀಯ ಕ್ರೀಡಾ ಸಾಧನೆ ಗುರುತಿಸಿ ಫೌಂಡೇಶನ್ ಕೇಶವ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಿದೆ.

ಬೇಸಿಗೆ ಬೆಸುಗೆ ಶಿಬಿರ

ಉಪ್ಪಿನಬೆಟಗೇರಿ: ಜಿಲ್ಲಾ ಪಂಚಾಯತ್ ಧಾರವಾಡ ಇವರಿಂದ ಬೇಸಿಗೆ ರಜಾ ದಿನಗಳಲ್ಲಿ ಮಕ್ಕಳ ಸೃಜನಶೀಲ ಹಬ್ಬವನ್ನು ಗ್ರಾಮ ಪಂಚಾಯತಿ ಗ್ರಂಥಾಲಯದಲ್ಲಿ ಏ.21 ರಿಂದ ಮೇ 28 ರವರೆಗೆ ಶಾಲಾ ಮಕ್ಕಳಿಗೆ ಬೇಸಿಗೆ ಬೆಸುಗೆ ಶಿಬಿರವು ಹಮ್ಮಿಕೊಳ್ಳಲಾಗಿದೆ. ಪಾಲಕರು ತಮ್ಮ ಮಕ್ಕಳನ್ನು ಕಳುಹಿಸಿ 3 ತಾಸು ಅವಧಿಯಲ್ಲಿ ಹೆಚ್ಚಿನ ಸಾಮಾನ್ಯ ಜ್ಞಾನ ಪಡೆಯಲು ಪ್ರೋತ್ಸಾಹ ನೀಡಬೇಕು ಎಂದು ಗ್ರಂಥ ಪಾಲಕ ಶ್ರೀಧರ ದೊಡಮನಿ ತಿಳಿಸಿದ್ದಾರೆ.

ಬಸವ ಜಯಂತಿ ಮೆರವಣಿಗೆ

ಗದಗ: ಬಸವಣ್ಣನವರ 921 ನೇ ಜಯಂತಿ ಅಂಗವಾಗಿ ಏ.20 ರಂದು ಬೆಳಗ್ಗೆ 9ಕ್ಕೆ ಜ.ಡಾ.ತೋಂಟದ ಸಿದ್ಧರಾಮ ಸ್ವಾಮೀಜಿ ಮೆರವಣಿಗೆಗೆ ಚಾಲನೆ ನೀಡುವರು. ಮೆರವಣಿಗೆಯಲ್ಲಿ ಬಸವಾದಿ ಶಿವಶರಣರ ವಿವಿಧ ಸಂಘಟನೆಗಳ ಸಹಯೋಗದೊಂದಿಗೆ ಜರುಗುವುದು. ಮೆರವಣಿಗೆಯು ಶ್ರೀಮಠದಿಂದ ಪ್ರಾರಂಭವಾಗಿ ಮಹೇಂದ್ರಕರ ವೃತ್ತ, ಹುಯಿಲಗೋಳ ವೃತ್ತ, ಬಸವೇಶ್ವರ ವೃತ್ತ, ಕೆ. ಎಚ್. ಪಾಟೀಲ ವೃತ್ತ, ಮಾಳಶೆಟ್ಟಿ ವೃತ್ತ (ಹಳೆ ಬಸ್ ನಿಲ್ದಾಣ), ರೋಟರಿ ವೃತ್ತ, ಮಹಾತ್ಮಾ ಗಾಂಧಿ ವೃತ್ತದ ಮೂಲಕ ತೋಂಟದಾರ್ಯ ಮಠಕ್ಕೆ ತಲುಪುವುದು ಎಂದು ಸಂಘಟಿಕರ ಪರವಾಗಿ ಜಗದ್ಗುರು ತೋಂಟದಾರ್ಯ ಮಠದ ಜಾತ್ರಾ ಸಮಿತಿ ಅಧ್ಯಕ್ಷ ವಿನಾಯಕ ಮಾನ್ವಿ ತಿಳಿಸಿದ್ದಾರೆ.



ಲಕ್ಷ್ಮೇಶ್ವರ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಪಟ್ಟಣಕ್ಕೆ ಆಗಮಿಸುತ್ತಿದಂತೆ ಶಾಸಕ ಡಾ. ಚಂದ್ರು ಲಮಾಣಿ ಅವರು ಅವರ ಆಸ್ಪತ್ರೆ ಎದುರು ಅವರಿಗೆ ಲಿಂ ಜಗದ್ಗುರು ವೀರಗಂಗಾಧರ ಶ್ರೀಗಳ ಭಾವಚಿತ್ರ ನೀಡಿ ಸನ್ಮಾನಿಸಿದರು. ಶಿರಹಟ್ಟಿ ಮಂಡಲ ಬಿಜೆಪಿ ಅಧ್ಯಕ್ಷ ಸುನೀಲ, ಮಹಾಂತಶೆಟ್ಟರ, ಭೀಮಣ್ಣ ಯಂಗಾಡಿ, ನವೀನ ಹಿರೇಮಠ ಶಂಕರ ಬಾವಿ, ತುಕ್ಕಪ್ಪ ಪೂಜಾರ, ಗಿರೀಶ ಚೌರಡ್ಡಿ ಇದ್ದರು.

ಮಕ್ಕಳ ಪ್ರತಿಭೆಗೆ ಪ್ರೋತ್ಸಾಹ ಅಗತ್ಯ

ಧಾರವಾಡ: ಮಕ್ಕಳ ಪ್ರತಿಭೆ ಗುರುತಿಸಿ, ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ಮಕ್ಕಳು ಕೂಡ ಓದಿನ ಜೊತೆಗೆ ಸೃಜನಾತ್ಮಕ ಕಲೆಗಳ ಕಡೆಗೆ ಹೆಚ್ಚಿನ ಆಸಕ್ತಿ ವಹಿಸಬೇಕು ಎಂದು ರಂಗಸಮಾಜದ ಸದಸ್ಯ ಎಸ್.ಜಹಾಂಗೀರ್ ಸಲಹೆ ನೀಡಿದರು.

ನಗರದ ರಂಗಾಯಣದ ಸುವರ್ಣ ಸಾಂಸ್ಕೃತಿಕ ಸಮುಚ್ಚಯ ಸಭಾಂಗಣದಲ್ಲಿ ನಡೆದ ಅಭಿನಯ ಅಭಿವ್ಯಕ್ತಿ ಚಿಣ್ಣರ ಮೇಳ ಉದ್ಘಾಟಿಸಿದ ಅವರು, ಇತ್ತೀಚಿಗೆ ಮಕ್ಕಳು ಓದಿನತ್ತ ಒಲವು ಹೊಂದಿದ್ದು, ಅದರಂತ ಕಲಾಸಕ್ತಿ ಬೆಳೆಸಿಕೊಳ್ಳಲು ಹೇಳಿದರು.

ಮೇಳದ ಮೂಲಕ ಮಕ್ಕಳಲ್ಲಿ ವಿಚಾರ-ವಿನಯ, ಲಲಿತ ಕಲೆಗಳು ಮೂಲಕ ಅವರ ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ಅಗತ್ಯ ತರಬೇತಿ ನೀಡುವ ಕಾರ್ಯವು ಶ್ಲಾಘನೀಯ ಎಂದರು.

ರಂಗಸಮಾಜದ ಸದಸ್ಯ ಮಹಾಂತೇಶ ಗಜೇಂದ್ರಗಡ ಮಾತನಾಡಿ, ರಂಗಭೂಮಿ ಕಲಿಸುವ ಪಾಠ, ಶಾಲಾ-ಕಾಲೇಜಿನಲ್ಲಿ ಕಲಿಸುವುದು ಅಸಾಧ್ಯ. ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ವಾತಾವರಣ ಮನೆಯಲ್ಲಿ ಪಾಲಕರು ಮತ್ತು ಶಾಲೆಯಲ್ಲಿ ಶಿಕ್ಷಕರು ಸಹ ನಿರ್ಮಿಸಬೇಕು ಎಂದರು.

ರಂಗಾಯಣ ಆಡಳಿತಾಧಿಕಾರಿ ಶಶಿಕಲಾ ಹುಡೇದ, ಅರುಣ ಮೇದಾರ, ರಾಜು ಕವಡೆನವರ, ಸುನಂದಾ ನಿಂಬನಗೌಡರ, ವಿನೋದ ದಂಡಿನ ಇದ್ದರು. ಬಳಿಕ ಮರಳಿ ಮಹಾತ್ಮನೆಡೆಗೆ ನಾಟಕವನ್ನು ರಂಗಾಯಣ ರೆಪರ್ಟರಿ ಕಲಾವಿದರು ಪ್ರಸ್ತುತಪಡಿಸಿದರು.



ನವಲಗುಂದ : ನಗರದ ಗಾಂಧಿ ಮಾರುಕಟ್ಟೆಯಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮ ಜರುಗಿತು. ಶಾಸಕ ಎನ್. ಎಚ್. ಕೋನರಡ್ಡಿ ಕಾರ್ಯಕ್ರಮ ಉದ್ಘಾಟಿಸಿದರು. ಮಾಜಿ ಸಚಿವ ಶಂಕರ ಪಾಟೀಲ ಮಾತನಾಡಿದರು. ಸಾನ್ನಿಧ್ಯವನ್ನು ಡಾ. ತೊಂಟದ ಸಿದ್ಧರಾಮ ಸ್ವಾಮೀಜಿ ಹಾಗೂ ಗವಿಮಠದ ಮ.ನಿ.ಪ್ರ ಬಸವಲಿಂಗ ಸ್ವಾಮೀಜಿ ವಹಿಸಿ ಆಶೀರ್ವಚನ ನೀಡಿದರು. ತಹಶೀಲ್ದಾರ್ ಸುಧೀರ ಸಾವಕಾರ, ಸಿಪಿಐ ರವಿ ಕಪಪ್ಪತ್ತನವರ, ಪಿಎಸ್ಐ ಜನಾರ್ಧನ, ಕೃಷಿ ಅಧಿಕಾರಿ ರವಿಕುಮಾರ, ಕೆ ಎನ್‌ಎನ್‌ಎಲ್ ಅಧಿಕಾರಿ ರಾಘವೇಂದ್ರ ಜಾಲಗಾರ ಇತರರಿದ್ದರು.

ಮಾರುಕಟ್ಟೆಗೆ ಲಗ್ಗೆ ಇಟ್ಟ ಹಣ್ಣುಗಳ ರಾಜ

ರುದ್ರಗೌಡ ಪಾಟೀಲ

ದಿಗಂತ ವಿಶೇಷ

ಗದಗ: ಹಣ್ಣುಗಳ ರಾಜಾ ಎಂದೇ ಹೆಸರಾದ ಮಾವಿನ ಹಣ್ಣಿನ ಸುಗ್ಗಿ ಇದೀಗ ಆರಂಭವಾಗಿದೆ. ಮಾರುಕಟ್ಟೆಗೆ ಇದೀಗ ನಾನಾ ರೀತಿಯ ಮಾವಿನ ಹಣ್ಣುಗಳು ಮಾರಾಟಕ್ಕೆ ಬರಲಾರಂಭಿಸಿವೆ. ಹಣ್ಣು ಹಂಪಲು ಮಾರುವ ಬಹತೇಕ ಅಂಗಡಿಗಳಲ್ಲಿ ಬರೀ ಹಳದಿ, ಕೆಂಪು, ಹಸಿರು, ಕೇಸರಿ ಬಣ್ಣಗಳಿಂದ ನಳನಳಿಸುವ ಮಾವು ಗ್ರಾಹಕರನ್ನು ಕೈಬೀಸಿ ಕರೆಯುತ್ತಿವೆ.

ಏಪ್ರಿಲ್ ಮೊದಲನೇ ವಾರದಿಂದ ಮಾರುಕಟ್ಟೆ ಬಂದ ಮಾವಿನ ಬೆಲೆ ಆರಂಭದಲ್ಲಿ ಏರಿಕೆಯಾಗಿದೆ. ಕೆಜಿಗೆ 150 ರಿಂದ 500 ರೂ. ವರೆಗೆ ಮಾರಾಟವಾಗುತ್ತಿದೆ. ಮಾವು ಉಷ್ಣವಲಯದ ಬೆಳೆಯಾಗಿರುವುದರಿಂದ ಜಿಲ್ಲೆಯ ಮಣ್ಣಿಗೆ ಮಾವು ಕೃಷಿ ಸೂಕ್ತವಾಗಿದೆ. ಹೀಗಾಗಿ ಕೆಂಪು ಮಣ್ಣಿನ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಕೆಲವು ರೈತರು ಮಾತ್ರ ಮಳೆ ಆಶ್ರಯದಲ್ಲಿ ಮಾವು ಬೆಳೆದಿದ್ದರೆ, ಹೆಚ್ಚಿನ ರೈತರು ನೀರಾವರಿ ಆಶ್ರಯದಲ್ಲಿ ಬೆಳೆದಿದ್ದಾರೆ. ರತ್ನಗಿರಿ, ಅಪೂಸ್, ಮಲ್ಲಿಕಾ ತಳಿಗಳ ಮಾವಿನ ಹಣ್ಣುಗಳನ್ನು ಜಿಲ್ಲೆಯ ವಿವಿಧ ಕಡೆಗಳಲ್ಲೂ ಹೆಚ್ಚಿನ ಕ್ಷೇತ್ರದಲ್ಲಿ ಬೆಳೆಯುತ್ತಿದ್ದಾರೆ. ಈ ಭಾಗದಲ್ಲಿ

ಇಳುವರಿ ಕೊರತೆ

ಸೂಕ್ತ ಸಮಯದಲ್ಲಿ ಸಮರ್ಪಕ ಮಳೆ ಹಾಗೂ ತೇವಾಂಶದ ಕೊರತೆಯಿಂದಾಗಿ ಮಾವಿನ ಬೆಳೆಯ ಇಳುವರಿ ಕುಂಠಿತವಾಗಿದೆ. ಜತೆಗೆ ಜಿಲ್ಲೆಯಲ್ಲಿ ಏಕಾಏಕಿ ಅಕಾಲಿಕ ಮಳೆಯಿಂದ ಸಾಕಷ್ಟು ಪ್ರಮಾಣದಲ್ಲಿ ಹೂವು ಹಾಗೂ ಕಾಯಿ ಉದಿರಿವೆ. ಹೀಗಾಗಿ ಮಾವಿನ ಇಳುವರಿ ಕೊರತೆಯಿದೆ. ಆದರೆ ಬೆಲೆ ಏರಿದೆ.

- ಜಿಲ್ಲೆಯಲ್ಲಿ ಭೂಮಿ ಮೇಲ್ಮೆ ಸಂಪೂರ್ಣ ಒಣಗಿ ಹೋಗಿ ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳ
- ಇದು ಮಾವಿನ ಬೆಳೆಗೆ ವರದಾನ
- ಉತ್ಪಾದನೆಯಾಗುವ ಮಾವಿನ ಫಸಲನ್ನು ಕಾಯಿ, ಮಿಡಿ ಗಾತ್ರದಲ್ಲಿರುವಾಗಲೇ ಉಪ್ಪಿನಕಾಯಿಗೆ ಬಳಸಿಕೊಳ್ಳುವ ಪ್ರಮಾಣ ಕಡಿಮೆ ಇರುವುದರಿಂದ ಫಸಲಿನ ಎಲ್ಲ ಭಾಗವನ್ನು ಹಣ್ಣಿಗಾಗಿಯೇ ಮೀಸಲು



ಮಾವಿನ ಹಣ್ಣು ಕೆಜಿಗೆ 150-500 ರೂ.

ಸಾಮಾನ್ಯವಾಗಿ ಏಪ್ರಿಲ್ ಆರಂಭದಲ್ಲಿ ಮಾರುಕಟ್ಟೆಗೆ ಆವಕವಾಗುತ್ತಿದ್ದ ಮಾವು ಈ ಬಾರಿ ಮಾರ್ಚ್ ಅಂತ್ಯದಲ್ಲೇ ಪ್ರಾರಂಭದಲ್ಲೇ ಮಾರುಕಟ್ಟೆಗೆ ಬಂದಿದೆ. ಹುಲಕೋಟಿ, ರೋಣ, ಮುಂಡರಗಿ, ಡಂಬಳ, ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ಸೇರಿದಂತೆ ವಿವಿಧ ಕಡೆಗಳಲ್ಲಿ ಮಾವಿನ ತೋಟಗಳಿವೆ. ಬದಾಮಿ, ದಶೇರಿ, ತೋತಾಪುರಿ, ಮಲ್ಲಿಕಾ ತಳಿಯ ಮಾವು ಬೆಳೆಯಲಾಗಿದೆ. ಈ ಭಾಗದಲ್ಲಿ ಬಹು ಬೇಡಿಕೆ ಇರುವ ವಿವಿಧ ತಳಿಯ ಮಾವಿನ ಹಣ್ಣಿನ ಬೆಲೆ ಕೆಜಿಗೆ 150-500 ರೂ.ವರೆಗೆ ದರ ಇದೆ.

> ಬೇಸಿಗೆಯಲ್ಲಿ ಮಾವಿನ ಹಣ್ಣಿಗೆ ಬೇಡಿಕೆ ಇರುವುದು ಸಹಜ. ಈ ಬಾರಿ ಮಾವಿನ ಹಣ್ಣಿನ ಬೆಲೆ ಹೆಚ್ಚಳವಾಗಿದೆ. ಆದರೂ ಮಾವಿನ ಹಣ್ಣು ತಿನ್ನಬೇಕೆಂಬ ಆಸೆಯಿಂದ ಚೌಕಾಸಿ ಮಾಡಿ ಹಣ್ಣು ಖರೀದಿಸಿ ಸೇವಿಸಲಾಗುತ್ತಿದೆ.
> ■ ವಿನಾಯಕ, ಗ್ರಾಹಕ

> ಮಾರುಕಟ್ಟೆಗೆ ಮಾವಿನ ಹಣ್ಣು ಬರುತ್ತಿದೆ. ಗ್ರಾಹರು ಕೂಡ ಖರೀದಿ ಮಾಡುತ್ತಿದ್ದಾರೆ. ಬೆಲೆ ಏರಿಕೆ ಇದೆ. ಕಡಿಮೆ ದರದಲ್ಲಿ ಮಾವು ಮಾರಾಟ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾವು ಬರುತ್ತದೆ. ಆವಾಗ ಮಾವಿನ ಹಣ್ಣಿನ ಬೆಲೆಯಲ್ಲಿ ಇಳಿಕೆಯಾಗುತ್ತದೆ.
> ■ ರಜಾಕ್, ಮಾವಿನ ಹಣ್ಣಿನ ವ್ಯಾಪಾರಿ

ಪಟ್ಟಾಧಿಕಾರ ಮಹೋತ್ಸವ: ಆಧ್ಯಾತ್ಮಿಕ ಪ್ರವಚನ

ನವಲಗುಂದ: ನಗರದ ಪಂಚಗ್ರಹ ಹಿರೇಮಠದ 25ನೇ ಪೀಠಾಧಿಪತಿಗಳಾಗಿ ವೀರಬಸವದೇವರ ಶ್ರೀಗಳ ಪಟ್ಟಾಧಿಕಾರ ಮಹೋತ್ಸವಕ್ಕೆ ಸರ್ವ-ಧರ್ಮ ಸಮಾಜ ಬಾಂಧವರು ಹಾಗೂ ಭಕ್ತರು ಸೇರಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸ್ವಾಗತ ಸಮಿತಿಯ ಅಧ್ಯಕ್ಷರಾಧ ಶಾಸಕ ಎನ್. ಎನ್.ಕೋನರಡ್ಡಿ ವಿನಂತಿಸಿದರು.

ಅವರು ನಗರದ ಪಂಚಗ್ರಹ ಹಿರೇಮಠದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿ, ಐತಿಹಾಸಿಕ ಗುಡ್ಡದ ಪಂಚಗ್ರಹ ಹಿರೇಮಠದ ವೀರಬಸವ ದೇವರ

ಗುರು ಪಟ್ಟಾಧಿಕಾರ ಹಾಗೂ ಮಣಕವಾಡದ ಅಭಿನವ ಮೃತ್ಯುಂಜಯ ಸ್ವಾಮೀಜಿಯ ಹತ್ತು ದಿನಗಳ ಆಧ್ಯಾತ್ಮಿಕ ಪ್ರವಚನ ಜರುಗಲಿದೆ. ಆಧ್ಯಾತ್ಮಿಕ ಕಾರ್ಯಕ್ರಮಕ್ಕೆ ಪಂಚಪೀಠಾಧೀಶರು, ನಾಡಿನ ಹೆಸರಾಂತ ಮಠಗಳ ಶ್ರೀಗಳು ಸೇರಿದಂತೆ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಎಚ್. ಕೆ. ಪಾಟೀಲ, ಸಂತೋಷ ಲಾಡ್, ಶಾಸಕರಾದ ಪ್ರಸಾದ ಅಬ್ಬಯ್ಯ, ಎಫ್ ಎಚ್ ಜಕ್ಕಪ್ಪನವರ, ಅರವಿಂದ ಬೆಲ್ಲದ, ಮಹೇಶ ಟೆಂಗಿನಕಾಯಿ, ಎಂ.ಆರ್. ಪಾಟೀಲ, ಮಾಜಿ ಸಚಿವರಾದ ಕೆ.ಎನ್. ಗಡ್ಡಿ, ಶಂಕರಪಾಟೀಲ ಮುನೇನಕೊಪ್ಪ, ಮಾಜಿ ಶಾಸಕ ಡಾ ಆರ್.ಬಿ. ಶಿರಿಯಣ್ಣವರ, ಯುವ ಮುಖಂಡ ವಿನೋದ ಅಸೂಟಿ, ವಿಜಯ ಕುಲಕರ್ಣಿ, ದೇವರಾಜ ದಾಡಿಬಾಯಿ, ಬಿ.ಸಿ. ಪೂಜಾರ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ ಎಂದರು.

ಮೇ 1ರಿಂದ 11 ದಿನಗಲೂ ಸಂಜೆ ಮಣಕವಾಡ ಪೂಜ್ಯರಿಂದ ಆಧ್ಯಾತ್ಮಿಕ ಪ್ರವಚನ ನಡೆಯಕಿದೆ. ಮೇ 1ಕ್ಕೆ ಪ್ರಾರಂಭೋತ್ಸವ ಹಾಗೂ ಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ತುಲಾಭಾರ, ಮೇ 11ರಂದು ಪ್ರವಚನ ಮಂಗಲೋತ್ಸವ, 10 ಸಾವಿರ ತಾಯಂದಿರಿಗೆ ಉಡಿ ತುಂಬುವ ಕಾರ್ಯಕ್ರಮ. ಮೇ 12ರಂದು ಅಡ್ಡಪಲ್ಲಕ್ಕಿ ಮಹೋತ್ಸವ, ಸಂಜೆ ಪಂಚಪೀಠಾದೀಶ್ವರರ ಧರ್ಮಸಭೆ, ಮೇ 13 ರಂದು ನೂತನ ಶ್ರೀಗಳ ಪಟ್ಟಾಭೀಷೇಕ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ ಸಂಜೆ ಸಮಾರೋಪ ಜರುಗಲಿದೆ. ಅಂದೇ ರಾತ್ರಿ ಬಿಗ್ ಬಾಸ್ ವಿನ್ನರ್, ಖ್ಯಾತ ಹಾಡುಗಾರ ಹನುಮಂತ ಲಮಾಣಿ ಹಾಗೂ ತಂಡದಿಂದ ಸಂಗೀತ ಸಂಜೆ ಕಾರ್ಯಕ್ರಮ ಜರುಗಲಿದೆ ಎಂದರು.

ಸಿದ್ದಲಿಂಗ ಶ್ರೀಗಳು, ವೀರಬಸವದೇವರು, ತಹಶೀಲ್ದಾರ್ ಸುಧೀರ ಸಾವುಕಾರ, ಪುರಸಭೆ ಮುಖ್ಯಾಧಿಕಾರಿ ಶರಣು ಪೂಜಾರ, ಪಿಎಸ್ಐ ಜನಾರ್ಧನ ಬಿ., ಪಿ. ಜಿ. ಕೋನರಡ್ಡಿ, ಅಣ್ಣಪ್ಪ ಭಾಗಿ, ಅಶೋಕ ಮಜ್ಜಿಗುಡ್ಡ, ಬಂಗಾರೇಶ ಹಿರೇಮಠ, ವಿರೇಶ ಕೂಗುಮಠ, ಸಿದ್ದಲಿಂಗಯ್ಯ ಹಿರೇಮಠ, ಶರ್ಮಾ ಹಿರೇಮಠ, ಗಂಗಾಧರ ಹಳ್ಳದ, ಮರಿತೆಮಪ್ಪ ಹಳ್ಳದ, ಯಲ್ಲಪ್ಪ ಭೋವಿ, ಜೀವನ ಪವಾರ, ಪ್ರಕಾಶ ಶಿಗ್ಲಿ, ಬಸವರಾಜ ಕೆರಿಮಠ ಇದ್ದರು.



ನಿಷ್ಕ್ರಿಯಗೊಂಡ ಕನ್ನಡ ಸಾಹಿತ್ಯ ಪರಿಷತ್ ಚಟುವಟಿಕೆ

ಸೀತಲ ಓಲೇಕಾರ

ಗಜೇಂದ್ರಗಡ: ಕಳೆದ ಆರು ತಿಂಗಳ ಹಿಂದೆ ಅನೇಕ ಕಸಾಪ ಅಜೀವ ಸದಸ್ಯರು ಬಂಡಾಯದ ಸಭೆ ನಡೆಸಿ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು ಮತ್ತೆ ಪ್ರಾರಂಭಿಸಿ ಕ್ರೀಯಾಶೀಲವಾಗಿ ನಡೆಯುವಂತೆ ಒತ್ತಾಯಿಸಿದ್ದರು. ಆದರೆ ಇದೀಗ ಮತ್ತೆ ಕನ್ನಡ ಸಾಹಿತ್ಯ ಪರಿಷತ್‌ನ ತಾಲೂಕು ಘಟಕದ ಚಟುವಟಿಕೆಗಳು ನಿಷ್ಕ್ರಿಯಗೊಂಡಿದೆ ಎಂದು ಕನ್ನಡಾಭಿಮಾನಿಗಳು ಆರೋಪಿಸುತ್ತಿದ್ದಾರೆ.

ಇದರ ಭಾಗವಾಗಿ ನವೆಂಬರ್ ತಿಂಗಳಲ್ಲಿ ಕಾಟಾಚಾರಕ್ಕೆ ಒಂದೆರೆಡು ಕಾರ್ಯಕ್ರಮಗಳನ್ನು ಮಾಡಲಾಯಿತು. ಕಾರ್ಯಕ್ರಮಗಳಿಗೆ ಏನೋ ಚಾಲನೆ ನೀಡಲಾಯಿತು. ಆದರೆ ಅದನ್ನು ಸರಿಯಾಗಿ ನಿಭಾಯಿಸುವಲ್ಲಿ ಮತ್ತೆ ಕಸಾಪ ಸಂಪೂರ್ಣವಾಗಿ ವಿಫಲಗೊಂಡಿತ್ತು. ಇದೀಗ ವಾರದಗೋಷ್ಠಿಯಾಗಲಿ, ತಿಂಗಳ ಸಾಹಿತ್ಯಗೊಷ್ಠಿಯಾಗಲಿ, ಸಾಹಿತ್ಯದ ಚಟುವಟಿಕೆಗಳು ನಡೆಯದೇ ನಿಷ್ಕಯಗೊಂಡಿದ್ದು ಅನೇಕ ಸದಸ್ಯರ ಅಸಮಾಧಾನಕ್ಕೆ ಕಾರಣವಾಗಿದೆ.

ಈ ಹಿಂದಿನ ಅಧ್ಯಕ್ಷ ಅಖಂಡ ರೋಣ ಗಜೇಂದ್ರಗಡ ತಾಲೂಕಿನಲ್ಲಿ ವಿವಿಧ ಸಾಹಿತ್ಯ, ಚರ್ಚಾ ಕಾರ್ಯಕ್ರಮಗಳು, ಸಮ್ಮೇಳನಗಳು, ಪುಸ್ತಕ ಪ್ರಕಟಣೆಗಳ ಮೂಲಕ ಸಕ್ರಿಯವಾಗಿದ್ದ ಪರಿಷತ್ತು, ಇತ್ತೀಚೆಗೆ ಚಟುವಟಿಕೆಗಳ ಪ್ರಮಾಣ ಮತ್ತು ಪ್ರಭಾವ ಎರಡರಲ್ಲೂ ಕುಸಿತ ಕಂಡಿದೆ. ಪರಿಷತ್ತು, ಕಾಲಕ್ಕೆ ತಕ್ಕಂತೆ ತನ್ನ ಕಾರ್ಯಪದ್ಧತಿ ಪರಿಷ್ಕರಿಸಿಕೊಳ್ಳಲಿ ಎಂಬುದು ಸಾಹಿತ್ಯಾಸಕ್ತರ ಅಭಿಪ್ರಾಯವಾಗಿದೆ.

ದಿಗಂತ ವಿಶೇಷ

ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ
ಕನ್ನಡ ಸಾಹಿತ್ಯ ಪರಿಷತ್ತು

> ಗುಣಮಟ್ಟದ ಕಾರ್ಯಕ್ರಮಗಳನ್ನು ರೂಪಿಸಲು ಸಮಯ ಬೇಕಾಗುತ್ತದೆ ಮತ್ತು ಹಂತ ಹಂತವಾಗಿ ಚಟುವಟಿಕೆಗಳನ್ನು ಪುನಃಶ್ಚೇತನಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಮುಂದಿನ ದಿನಗಳಲ್ಲಿ ಹೆಚ್ಚು ಪರಿಣಾಮಕಾರಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಭರವಸೆ ನೀಡಲಾಗಿದೆ.
> ■ ಅಮರೇಶ ಗಾಣಗೇರ, ಅಧ್ಯಕ್ಷ, ಕಸಾಪ, ಗಜೇಂದ್ರಗಡ ಘಟಕ

> ಈ ಹಿಂದೆ ನಿರಂತರವಾಗಿ ಕಾರ್ಯಕ್ರಮ ಆಯೋಜಿಸುವಂತೆ ಬಂಡಾಯದ ಸಭೆ ನಡೆಸಿ ಒಂದಷ್ಟು ಸುಧಾರಣೆಗೊಳ್ಳಲಿ ಎಂದು ತಾಕೀತು ಮಾಡಿ ಹಿರಿಯರ ಮಾತಿಗೆ ಮಣಿದು ನವ್ಹಂಬರ್ ತಿಂಗಳ ಕಾರ್ಯಕ್ರಮಕ್ಕೆ ಸಾಥ್ ನೀಡಿದವು. ಆದರೂ ಆ ಕಾರ್ಯಕ್ರಮಗಳನ್ನು ಪೂರ್ಣಗೊಳಿಸುವಲ್ಲಿ ಅಧ್ಯಕ್ಷರು ಹಾಗೂ ಇಡೀ ಸಮಿತಿ ವಿಫಲಗೊಂಡಿತು. ಇಲ್ಲಿಯವರೆಗೂ ಮತ್ತೇ ಯಾವುದೇ ಚಟುವಟಿಕೆಗಳಿಲ್ಲ. ಕೆಲಸ ಮಾಡಲು ಆಗಲಿಲ್ಲವೆಂದರೆ ರಾಜೀನಾಮೆ ನೀಡಿ.
> ■ ದಾವಲಸಾಬ ತಾಳಿಕೋಟಿ, ಕಸಾಪ ಅಜೀವ ಸದಸ್ಯ

ರಾಷ್ಟ್ರೀಯ ಹಿತಾಸಕ್ತಿಗೆ ವಿದೇಶಾಂಗ ನೀತಿ ಅಗತ್ಯ: ಪ್ರೊ. ವಿ.ಎಸ್.ವಸ್ತ್ರದ

ಧಾರವಾಡ: ಉತ್ತಮ ವಿದೇಶಾಂಗದ ನೀತಿಯಿಂದ ಯುದ್ಧ ಸೇರಿ ಅನಿರಿಕ್ಷಿತ ಸನ್ನಿವೇಶಗಳನ್ನು ಎದುರಿಸಲು ಸಾಧ್ಯ ಎಂದು ಅಂಕೋಲಾದ ಗೋಖಲೆ ಕಾಲೇಜಿನ ಪ್ರಾಚಾರ್ಯ ಪ್ರೊ. ವಿ.ಎಸ್.ವಸ್ತ್ರದ ಹೇಳಿದರು.

ನಗರದ ಕರ್ನಾಟಕ ಕಲಾ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗ ಹಮ್ಮಿಕೊಂಡ ಮಧ್ಯಪ್ರಾಚ್ಯ ಯುದ್ಧ: ಭಾರತದ ವಿದೇಶಾಂಗ ನೀತಿಯ ಪಲ್ಲಟಗಳು ಮತ್ತು ರಾಷ್ಟ್ರೀಯ ಹಿತಾಸಕ್ತಿಯ ನಡುವಿನ ಬಿಕ್ಕಟ್ಟುಗಳು' ವಿಷಯದ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

ಮಧ್ಯಪ್ರಾಚ್ಯ ರಾಷ್ಟಗಳಲ್ಲಿ ನಾಗರಿಕತೆ ಕುರುಹುಗಳನ್ನು ಹೊಂದಿದ್ದು, ಅನೇಕ ಖನಿಜ ತೈಲ ಸಂಪನ್ಮೂಲಗಳನ್ನು ಹೊಂದಿವೆ. ಅನಿರೀಕ್ಷಿತ ಸನ್ನಿವೇಶದಲ್ಲಿ ರಾಷ್ಟ್ರೀಯ ಹಿತಾಸಕ್ತಿ ಕಾಪಾಡಲು ಉತ್ತಮ ವಿದೇಶಾಂಗ ನೀತಿ ಯೋಜನೆಗಳನ್ನು ರೂಪಿಸುವುದು ಅಗತ್ಯವಿದೆ ಎಂದರು.

ಕೆಸಿಡಿ ಕಾಲೇಜಿನ ಪ್ರಾಚಾರ್ಯ ಡಾ.ಐ.ಸಿ.ಮುಳಗುಂದ ಮಾತನಾಡಿ, ಮಧ್ಯಪ್ರಾಚ್ಯ ರಾಷ್ಟಗಳಿಂದ ಶೇ.50 ರಷ್ಟು ತೈಲ ಮತ್ತು ಅನಿಲ ಆಮದು ಮಾಡಿಕೊಳ್ಳಲಾಗುತ್ತಿದೆ. ಜಗತ್ತಿನಲ್ಲಿ ಜಾಗತಿಕ ಸಮಸ್ಯೆಗಳು ಆಧರಿಸಿ ಯುದ್ಧಗಳು ನಡೆದಿವೆ. ಯುದ್ಧಗಳಿಂದ ದೇಶದ ಆರ್ಥಿಕ ವ್ಯವಸ್ಥೆ ಮೇಲೆ ಪರಿಣಾಮ ಬೀರುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಕೆಸಿಡಿ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಸುರೇಶ



ಹುಲ್ಲಣ್ಣವರ ಮಾತನಾಡಿ, ಜಗತ್ತಿನಲ್ಲಿ ಯಾವುದೇ ರಾಷ್ಟಗಳ ಮಧ್ಯೆ ಯುದ್ಧಗಳು ನಡೆದಾಗ ಇತರೆ ರಾಷ್ಟಗಳ ಮೇಲೆ ಪ್ರತ್ಯೇಕ್ಷ ಮತ್ತು ಪರೋಕ್ಷವಾಗಿ ಪರಿಣಾಮ ಬಿರುತ್ತವೆ. ಆರ್ಥಿಕತೆ, ವ್ಯಾಪಾರ, ಆಮದು-ರಫ್ತುಗಳ ಮೇಲೆ ಪ್ರಭಾವ ಬೀರುತ್ತದೆ ಎಂದರು. ರಾಜ್ಯಶಾಸ್ತ್ರ ವಿಭಾಗದ ಕಾರ್ಯಾಧ್ಯಕ್ಷ ಡಾ.ಎಂ.ಬಿ. ದಳಪತಿ, ಡಾ.ವೀರೇಂದ್ರ ಯಾದವ, ಡಾ. ಚನ್ನಬಸು ಐನಳ್ಳಿ, ಡಾ. ವಿ.ಜಗದೀಶ, ಡಾ.ಜಾಕೀರ ಗುಳಗುಂಡಿ, ಡಾ.ವಿ.ಪಿ. ಸುಣಗಾರ, ಡಾ.ಎಸ್.ಎಸ್. ಶ್ರೀಗಿರಿ, ಡಾ.ಜಗದೀಶ ಮಾನೆ, ಡಾ.ಹನುಮಂತ ಬಂಟನೂರ, ವಿದ್ಯಾರ್ಥಿ ಕಾರ್ಯದರ್ಶಿಗಳಾದ ಸುರ್ಶನ, ಕಾವೇರಿ ಇದ್ದರು.

ಸರ್ವರಲ್ಲೂ ಸಮಾನತೆ, ಸಹಬಾಳ್ವೆ ಗುಣ ಬೆಳೆಸುವ ಕ್ರಿಕೆಟ್: ಐ.ಎಸ್.ಪಾಟೀಲ

ನರೇಗಲ್ಲ: ಕ್ರಿಕೆಟ್ ಕೇವಲ ಆಟವಲ್ಲ, ಅದು ನಮ್ಮಲ್ಲಿ ತಂಡದ ಮನೋಭಾವ, ಶಿಸ್ತು, ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಗುಣವನ್ನು ಬೆಳೆಸುತ್ತದೆ. ಅಬ್ಬಿಗೇರಿಯಂತಹ ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಇಂತಹ ಟೂರ್ನಾಮೆಂಟ್‌ಗಳು ವೇದಿಕೆಯಾಗಲಿವೆ ಎಂದು ಕೆ.ಸಿ.ಸಿ. ಬ್ಯಾಂಕ್ ಮಾಜಿ ಅಧ್ಯಕ್ಷ ಐ.ಎಸ್.ಪಾಟೀಲ ಹೇಳಿದರು.

ಸಮೀಪದ ಅಬ್ಬಿಗೇರಿ ಗ್ರಾಮದ ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್ ಇವರ ಆಶ್ರಯದಲ್ಲಿ ಶ್ರೀ ಅನ್ನದಾನೇಶ್ವರ ಹೈಸ್ಕೂಲ್ ಮೈದಾನದಲ್ಲಿ ನಡೆಯುತ್ತಿರುವ ಅಬ್ಬಿಗೇರಿ ಪ್ರೀಮಿಯರ್ ಲೀಗ್-3. ಉದ್ಘಾಟಿಸಿ ಮಾತನಾಡಿ, ಯುವಕರನ್ನು ಒಗ್ಗೂಡಿಸಿ ಆರೋಗ್ಯಕರ ಸ್ಪರ್ಧೆಯನ್ನು ಏರ್ಪಡಿಸಿರುವುದು ಶ್ಲಾಘನೀಯ. ಗೆಲುವು-ಸೋಲಿಗಿಂತ ಹೆಚ್ಚಾಗಿ ಇಲ್ಲಿ ಮೂಡುವ ಸ್ನೇಹ ಮತ್ತು ಒಗ್ಗಟ್ಟು ಮುಖ್ಯವಾದುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಅಂದಪ್ಪ ನೀರಲೋಟಿ ಮಾತನಾಡಿ, ಕ್ರೀಡಾಂಗಣದಲ್ಲಿ ಸೋಲು-ಗೆಲುವಿಗಿಂತ ಹೆಚ್ಚಾಗಿ ಕ್ರೀಡಾಸ್ಪೂರ್ತಿ ಮುಖ್ಯ. ಪ್ರತಿಯೊಬ್ಬ ಆಟಗಾರನು ಎದುರಾಳಿ ತಂಡವನ್ನು ಗೌರವಿಸುವ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು ಎಂದರು. ಯುವಕರನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ



ಆಯೋಜಿಸಲಾದ ಈ ಟೂರ್ನಾಮೆಂಟ್ ಸತತ ನಾಲ್ಕು ದಿನಗಳು ನಡೆಯಲಿದೆ. ಸ್ಥಳೀಯ ಎಂಟು ತಂಡಗಳು ಭಾಗವಹಿಸಿವೆ. ಬಸವರಾಜ ಪಲ್ಲೇದ, ಬಸವರಾಜ ತಳವಾರ, ಸುರೇಶ ಶಿರೋಳ, ಎಚ್.ಟಿ. ದ್ವಾಸಲ. ರಾಜು ಅವರದ್ದಿ, ಆನಂದ ಹಿರೇಮನಿ, ಸೋಮು ಶಿರೋಳ, ಕುಮಾರ ಬಸವರಡ್ಡೇರ, ಶರತ ಮಡಿವಾಳರ, ರಾಜೇಶ ಪಾಟೀಲ, ಸುನೀಲ ಸೊಲಗಿ, ಬಸವರಾಜ ತಾಳಿಕೋಟಿ,ಅಶೋಕ ತೋಟಗಂಟಿ, ಎಲ್ಲತಂಡಗಳ ಮಾಲಕರು, ನಾಯಕರು, ಕ್ರೀಡಾಪಟುಗಳು ಮತ್ತು ದಾನಿಗಳು ಉಪಸ್ಥಿತರಿದ್ದರು.

ಹೊಲಿಗೆ ಯಂತ್ರ ವಿತರಣೆ ಕಾರ್ಯಕ್ರಮ



ಹುಬ್ಬಳ್ಳಿ: ಮಜೇಥಿಯಾ ಫೌಂಡೇಶನ್, ಲೋಕಹಿತ ಟ್ರಸ್ಟ್, ಹುಬ್ಬಳ್ಳಿ ಸಹಯೋಗದಲ್ಲಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರ ಸಬಲೀಕರಣ ಮತ್ತು ಸ್ವಾವಲಂಬನೆಗಾಗಿ ಹೊಲಿಗೆ ಯಂತ್ರ ವಿತರಣೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಪ್ರಭಾ ನಿಡವಾಣಿ, ಸಂಗೀತಾ ಮಾನೆ ಹಾಗೂ ಗೋವಿಂದಗೌಡ ಗೋಳ ಮಾತನಾಡಿ, ಕೌಶಲ್ಯಾಧಾರಿತ ಸಹಾಯದ ಮಹತ್ವವನ್ನು ವಿವರಿಸಿ, ನೀಡಲಾದ ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಸ್ವಂತ ಉದ್ಯೋಗವನ್ನು ನಿರ್ಮಿಸಿಕೊಳ್ಳುವಂತೆ ಪ್ರೋತ್ಸಾಹಿಸಿದರು. ಲಾಭಾರ್ಥಿಗಳಿಗೆ ಪ್ರೇರಣೆ ನೀಡುತ್ತಾ ಆರ್ಥಿಕ ಸ್ವಾವಲಂಬನೆಯತ್ತ ಸಾಗುವಂತೆ ಸಲಹೆ ನೀಡಿದರು. ಅಮೃತಲಾಲ್ ದಯಾ ಪಟೇಲ್, ಅಮರೇಶ್ ಹಿಪ್ಪರಗಿ, ಸಿಇಒ ಸುನೀಲ್ ಕುಮಾರ್ ಕುಕನೂರ , ಸಂಗೀತಾ ಇಜರದಾ ಸಾಧನಾ ಪೂಜಾರ್, ನವೀನ್ ಮಾಲಿನ್ , ಸಂತೋಷ್ ಉಪಸ್ಥಿತರಿದ್ದರು. ಲಕ್ಷ್ಮೀ ಕಂಬಳೆ , ದೀಪಾ, ಗೌರಿ ನಿರೂಪಿಸಿದರು. ಕಾರ್ಯಕ್ರಮದ ಅಂಗವಾಗಿ ಆಯ್ಕೆಯಾದಲಾಭಾರ್ಥಿಗಳಿಗೆಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು.

ಅತಿಕ್ರಮಣ ತೆರವಿಗೆ ಆಗ್ರಹಿಸಿ ಮನವಿ

ನವಲಗುಂದ: ತಾಲೂಕಿನ ಅಳಗವಾಡಿ ಗ್ರಾಮದ ಸರ್ಕಾರಿ ಮಾದರಿ ಉನ್ನತ ಕೇಂದ್ರ ಪ್ರಾಥಮಿಕ ಶಾಲೆಯ ಕೊಠಡಿಗಳನ್ನು ಅತಿಕ್ರಮಿಸಿಕೊಂಡಿರುವ ಖಾಸಗಿ ಶಾಲೆಯ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ಸದರಿ ಕೊಠಡಿಗಳನ್ನು ಸರ್ಕಾರಿ ಶಾಲೆಗೆ ಹಸ್ತಾಂತರಿಸಬೇಕು ಎಂದು ಆಗ್ರಹಿಸಿ ಇತ್ತೀಚೆಗೆ ತಹಶೀಲ್ದಾರ್ ಸುಧೀರ್ ಸಾಹುಕಾರ್ ಮೂಲಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ಅವರ ನೇತೃತ್ವದಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪದಾಕಾರಿಗಳು ಈ ಪ್ರತಿಭಟನಾತ್ಮಕ ಮನವಿ ಸಲ್ಲಿಸಿದರು.

ಎಸ್ಡಿಎಂಸಿ ಅಧ್ಯಕ್ಷ ಎಸ್.ಎಸ್. ಕಂಬಳಿ ಮಾತನಾಡಿ, ನಮ್ಮ ಗ್ರಾಮದ ಏಕೈಕ ಸರ್ಕಾರಿ ಶಾಲೆಯ ಐದು ಕೊಠಡಿಗಳನ್ನು ಅರುಣೋದಯ ಖಾಸಗಿ ಶಾಲೆಯವರು ಕಾನೂನುಬಾಹಿರವಾಗಿ ಬಳಕೆ ಮಾಡುತ್ತಿದ್ದಾರೆ. ಈ ಪೈಕಿ ಎರಡು ಕೊಠಡಿಗಳನ್ನು ಕೆಡವಿ ಹೊಸದಾಗಿ ನಿರ್ಮಾಣ ಮಾಡಿಕೊಳ್ಳಲಾಗಿದೆ. 2011ರಲ್ಲಿ ಎಸ್.ಡಿ.ಎಂ.ಸಿ ಠರಾವಿನ ಮೂಲಕ ಈ ಕೊಠಡಿಗಳನ್ನು ನೀಡಲಾಗಿದೆ ಎಂದು ಖಾಸಗಿ ಶಾಲೆಯವರು ಹೇಳುತ್ತಿದ್ದಾರೆ. ಆದರೆ ಶಾಲೆಯ ಠರಾರು ಪುಸ್ತಕದಲ್ಲಿ ಅಂತಹ ಯಾವುದೇ ದಾಖಲೆಗಳಿಲ್ಲ ಎಂದು ದೂರಿದರು. ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ಮಾತನಾಡಿದರು. ಎಸ್.ಡಿ.ಎಂ.ಸಿ ಉಪಾಧ್ಯಕ್ಷೆ ಸುವರ್ಣ ಕೋತಿನ, ಸದಸ್ಯರಾದ ಮಂಜುನಾಥ ಕಾಲವಾಡ, ಮಹದೇವ ಮಡಿವಾಳರ, ವಿಠ್ಠಲ ಮಾದರ, ಗೋವಿಂದ ಮೇಟಿ, ಸುಮಂಗಲಾ ಗೊಣ್ಣಾಗರ, ಮಹಾದೇವಿ ಕುರಿ ಇತರರಿದ್ದರು.



ಬಾಣಂತಿಯರಿಗೆ ಉಚಿತ ವಾಹನ ಸೇವೆ



ಕುಂದಗೋಳ: ತಾಲೂಕಿನ ಗ್ರಾಮೀಣ ಭಾಗದ ಬಡ ಬಾಣಂತಿಯರು ಹೆರಿಗೆಯ ಬಳಿಕ ಸುಲಭವಾಗಿ ಮನೆಗೆ ತಲುಪಲು ಅನುಕೂಲವಾಗುವಂತೆ ಪಟ್ಟಣದ ತಾಲೂಕು ಸರ್ಕಾರಿ ಆಸ್ಪತ್ರೆಗೆ ಮಾತೋಶ್ರೀ ಫೌಂಡೇಶನ್ ವತಿಯಿಂದ ಉಚಿತ ವಾಹನ ಸೌಲಭ್ಯವನ್ನು ಆರಂಭಿಸಲಾಗಿದೆ.


ಭಾನುವಾರ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಜಿ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷೆ ಪ್ರೇಮಾ ಕೊಬ್ಬಯ್ಯ ರಿಬ್ಬನ್ ಕತ್ತರಿಸುವ ಮೂಲಕ ಸೇವೆಗೆ ಚಾಲನೆ ನೀಡಿದರು. ಮಾತೋಶ್ರೀ ಫೌಂಡೇಶನ್ ಸಂಸ್ಥಾಪಕ ಹಾಗೂ ತಾಲೂಕು ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ಸತೀಶ ಕೊಬ್ಬಯ್ಯ ಮಾತನಾಡಿ, ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಾಹನ ಲಭ್ಯವಿದ್ದು, ಹೆಚ್ಚಿನ ಮಾಹಿತಿಗೆ 7022430691 ಸಂಖ್ಯೆಗೆ ಸಂಪರ್ಕಿಸಬಹುದು ಎಂದರು.

ಆಸ್ಪತ್ರೆಯ ವೈದ್ಯ ವಿಜಯ ಮಾತನಾಡಿ, ತಾಲೂಕು ಆಸ್ಪತ್ರೆಗೆ ಹೆರಿಗೊಗಾಗಿ ಬರುವ ಮಹಿಳೆಯರು ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು. ಫೌಂಡೇಶನ್ ಅಧ್ಯಕ್ಷ ರಾಘವೇಂದ್ರ ಕಡೆಮನಿ, ಗುರುಸ್ವಾಮಿ ಬಾಳಿಹಳ್ಳಿಮಠ, ವೀರುಪಾಕ್ಷಿ ಹಂಚನಾಳ, ವೀರಯ್ಯ ಶಿರೂರ, ಚನ್ನಬಸಪ್ಪ ಕಾಳೆ, ಮಂಜುನಾಥ ಕಟಗಿ, ಗುರು ಚಲವಾದಿ, ಪಕ್ಕಿರಯ್ಯ ನಾವಳ್ಳಿಮಠ, ಮುತ್ತಪ್ಪ ಕಟಗಿ, ದೇವಪ್ಪ ಕಾಳಿ, ಮಂಜು ಪೂಜಾರ, ನಾಗರಾಜ ತಾಬ್ರಗುಂಡಿ ಸೇರಿದಂತೆ ಆಸ್ಪತ್ರೆ ಸಿಬ್ಬಂದಿ ಹಾಗೂ ಗಣ್ಯರು ಉಪಸ್ಥಿತರಿದ್ದರು.

ಅಭಿಮಾನಿ ಬಳಗದಿಂದ ಡಿಸಿಎಂಗೆ ಸ್ವಾಗತ

ಲಕ್ಷ್ಮೇಶ್ವರ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ಮೊದಲ ಬಾರಿಗೆ ಲಕ್ಷ್ಮೇಶ್ವರಕ್ಕೆ ಬರುತ್ತಿದಂತೆ ಅವರಿಗೆ ಡಿ.ಕೆ. ಶಿವಕುಮಾರ ಅಭಿಮಾನಿ ಬಳಗ ಹಾಗೂ ಯುವ ಮುಖಂಡ ಆನಂದ ಗಡ್ಡದೇವರಮಠ ಅಭಿಮಾನಿ ಬಳಗದಿಂದ ಬೃಹತ್ ಹೂವಿನ ಮಾಲೆ, ಕುರಿಯ ಮರಿ ನೀಡಿ, ಕಂಬಳಿ ಹೊದಿಸಿ ಸನ್ಮಾನಿಸಲಾಯಿತು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಆರ್. ಕೊಪ್ಪದ, ನಗರ ಅಧ್ಯಕ್ಷ ಅಮರೀಶ ತೆಂಬದಮನಿ, ಯುವ ಕಾಂಗ್ರೆಸ್ ಅಧ್ಯಕ್ಷ ರಾಹುಲ ಹೊಳಲಾಪುರ, ಗುರುನಾಥ ದಾನಪ್ಪನವರ,ಚನ್ನಪ್ಪ ಜಗಲಿ, ಲಕ್ಷ್ಮಣಗೌಡ್ರ ಪಾಟೀಲ, ನೀಲಪ್ಪ ಶೇರಸೂರಿ, ಡಿ.ಕೆ. ಹೊನ್ನಪ್ಪನವರ, ಫಕೀರೇಶ ಮ್ಯಾಟಣ್ಣವರ, ನಾಗರಾಜ ಮಡಿವಾಳರ, ವಿರೂಪಾಕ್ಷಪ್ಪ ಪಡಗೇರಿ,ವೀರಯ್ಯ ಮಠಪತಿ, ದಾದಾಪೀರ ಮುಚ್ಚಾಲೆ ಸಾಹೇಬಜಾನ ಹವಾಲ್ದಾರ, ಶಿವಯೋಗಿ ಗಡ್ಡದೇವರಮಠ ರಾಮಣ್ಣ ಲಮಾಣಿ (ಶಿಗ್ಲಿ)ಸೋಮಣ್ಣ ಬೆಟಗೇರಿ, ಪದ್ಮರಾಜ ಪಾಟೀಲ ಶಿವನಗೌಡ್ರ ಪಾಟೀಲ, ತಿಪ್ಪಣ್ಣ ಸಂಶಿ ಇತರರಿದ್ದರು.





ಮೊದಲು ರಾಷ್ಟ್ರಹಿತ, ಜೊತೆಗೆ ಸಂಸ್ಕೃತಿ ನಂಟು

ವಿದೇಶದ ಭಾರತೀಯರ ನಿಷ್ಠೆ, ಒಂದು ರಾಷ್ಟ್ರ ಒಂದು ಚುನಾವಣೆ ಬಗ್ಗೆ ಮಾತು, ಮಹಿಳಾ ಪ್ರತಿನಿಧಿತ್ವ, ಏನಾಸಂ, ಮನಸ್ಸಿನ ವಸಾಹತುಶಾಹಿ ನಿರ್ಮೂಲನೆ, ವಿಜ್ಞಾನ -ಆಧ್ಯಾತ್ಮ ಸಮನ್ವಯ, ತಂತ್ರಜ್ಞಾನಕ್ಕೆ ನೈತಿಕ ದಿಕ್ಕು, ಕುಟುಂಬ ಸಾಮಾಜಿಕ ಸಮರಸತೆ, ಪರಿಸರ ಸಮತೋಲನ ಸೇರಿದಂತೆ ಅನೇಕ ಅಂಶಗಳ ಮೇಲೆ ವಿಶದ ಅಭಿಪ್ರಾಯ.

ಆರ್‌ಎಸ್‌ಎಸ್ ಶತಮಾನೋತ್ಸವ ಹಿನ್ನೆಲೆ ದತ್ತಾತ್ರೇಯ ಹೊಸಬಾಳೆ ಸಮಗ್ರ ಸಂದೇಶ



ಸ್ಟ್ಯಾನ್‌ಫೋರ್ಡ್/ವಾಷಿಂಗ್ಟನ್: ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್ ಎಸ್‌ಎಸ್) ಶತಮಾನೋತ್ಸವದ ಹಿನ್ನೆಲೆಯಲ್ಲಿ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹಲವು ಪ್ರಮುಖ ರಾಷ್ಟ್ರೀಯ ಮತ್ತು ಜಾಗತಿಕ ಪ್ರಶ್ನೆಗಳ ಕುರಿತು ಸಮಗ್ರ ಸಂದೇಶ ನೀಡಿದ್ದಾರೆ. ವಿದೇಶಗಳಲ್ಲಿ ವಾಸಿಸುವ ಭಾರತೀಯರು ತಾವು ನೆಲೆಸಿರುವ ದೇಶದ ಹಿತಾಸಕ್ತಿ, ಕಲ್ಯಾಣ ಮತ್ತು ಪ್ರಗತಿಗೆ ಮೊದಲ ಆದ್ಯತೆ ನೀಡಬೇಕು. ಅದರ ಜತೆಯಲ್ಲೇ ಭಾರತೀಯ ಸಂಸ್ಕೃತಿಯೊಂದಿಗೆ ಜೀವಂತ ನಂಟು ಉಳಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದ್ದಾರೆ. ರಾಜಕೀಯ ಸುಧಾರಣೆಗಳ ವಿಚಾರದಲ್ಲಿ 'ಒಂದು ರಾಷ್ಟ್ರ ಒಂದು ಚುನಾವಣೆ', ಮಹಿಳೆಯರಿಗೆ ಹೆಚ್ಚಿನ ಪ್ರತಿನಿಧಿತ್ವ, ಏಕರೂಪದ ನಾಗರಿಕ ಸಂಹಿತೆ, ನಾಗರಿಕ ಕರ್ತವ್ಯ ಬೋಧೆ ಮತ್ತು ರಾಜಕೀಯ ಶಿಕ್ಷಣದ ಅಗತ್ಯವನ್ನು ಒತ್ತಿಹೇಳಿರುವ ಅವರು, ಮತ್ತೊಂದೆಡೆ ಭಾರತದ ಇತಿಹಾಸ, ಸಂಸ್ಕೃತಿ, ನಾಗರಿಕತೆಯ ಬಗ್ಗೆ ಹರಡಿರುವ 'ವಿಕೃತ ನ್ಯಾರೇಟಿವ್'ಗಳನ್ನು ಸರಿಪಡಿಸುವ ಮನಸ್ಸಿನ ವಸಾಹತುಶಾಹಿ ನಿವಾರಣೆಗೆ ಹೊಸ ಒತ್ತು ಅಗತ್ಯವಿದೆ ಎಂದೂ ಅಭಿಪ್ರಾಯಪಟ್ಟಿದ್ದಾರೆ. ವಿಜ್ಞಾನ, ತಂತ್ರಜ್ಞಾನ, ಶಿಕ್ಷಣ, ಆಧ್ಯಾತ್ಮ, ಕುಟುಂಬ ವ್ಯವಸ್ಥೆ, ಸಾಮಾಜಿಕ ಏಕತೆ, ಪರಿಸರ ಸಮತೋಲನ ಮತ್ತು ಜಾಗತಿಕ ಸವಾಲುಗಳ ಕುರಿತೂ ಅವರು ವಿಶದವಾಗಿ ಮಾತನಾಡಿದ್ದಾರೆ.

ಒಂದು ರಾಷ್ಟ್ರ ಒಂದು ಚುನಾವಣೆಗೆ ಬೆಂಬಲ

ದೇಶೀಯ ರಾಜಕೀಯದ ಪ್ರಶ್ನೆಯಲ್ಲಿ ಆರ್‌ಎಸ್‌ಎಸ್ 'ಒಂದು ರಾಷ್ಟ್ರ ಒಂದು ಚುನಾವಣೆ'ಗೆ ಬೆಂಬಲ ಸೂಚಿಸಿದೆ. ದೇಶಾದ್ಯಂತ ಒಂದೇ ಅವಧಿಯಲ್ಲಿ ಚುನಾವಣೆ ನಡೆಸುವುದರಿಂದ ಆಡಳಿತ ವ್ಯವಸ್ಥೆಯ ನಿರಂತರತೆ ಹೆಚ್ಚಿ, ರಾಜಕೀಯ ವ್ಯತ್ಯಯಗಳು ಕಡಿಮೆಯಾಗುತ್ತವೆ ಮತ್ತು ಪ್ರಜಾಪ್ರಭುತ್ವದ ಕಾರ್ಯಕ್ಷಮತೆ ಬಲಪಡುತ್ತದೆ ಎಂದು ಹೊಸಬಾಳೆ ಅಭಿಪ್ರಾಯಪಟ್ಟರು. ಇದು ಕೇವಲ ಚುನಾವಣಾ ಯಾಂತ್ರಿಕತೆ ಕುರಿತ ಚರ್ಚೆಯಲ್ಲ; ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಅಗತ್ಯವಿರುವ ಮಹತ್ವದ ಸುಧಾರಣೆ ಎಂದೂ ಅವರು ಹೇಳಿದರು.

ಮಹಿಳಾ ಮೀಸಲಾತಿ

ರಾಜಕೀಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ವಿಸ್ತರಿಸುವ ಅಗತ್ಯವನ್ನು ಉಲ್ಲೇಖಿಸಿದ ಅವರು, ಶೇ.33 ಮಹಿಳಾ ಪ್ರತಿನಿಧಿತ್ವವು ಕೇವಲ ಸಂಖ್ಯಾತ್ಮಕ ಹೆಚ್ಚಳವಾಗದೆ, ಭಾರತೀಯ ಆಡಳಿತ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಗೆ ದಾರಿ ಮಾಡಿಕೊಡಬಲ್ಲ ಕ್ರಮ ಎಂದರು. ಹೊಸಬಾಳೆ ಅವರ ಪ್ರಕಾರ ಪ್ರಜಾಪ್ರಭುತ್ವವು ಕೇವಲ ಚುನಾವಣೆಗೆ ಸೀಮಿತವಲ್ಲ; ಅದು ಜವಾಬ್ದಾರಿ, ರಾಷ್ಟ್ರ ಪ್ರಥಮ ಮನೋಭಾವ ಮತ್ತು ದೈನಂದಿನ ನಾಗರಿಕ ಜೀವನದ ಭಾಗವಾಗಬೇಕು. ಜನರಲ್ಲಿ ರಾಜಕೀಯ ಶಿಕ್ಷಣ ಮತ್ತು ಜಾಗೃತಿ ಹೆಚ್ಚಬೇಕು, ಸಮಾಜ ಮತ್ತು ರಾಷ್ಟ್ರಕ್ಕೆ ಯಾವುದು ಅಗತ್ಯ ಎಂಬ ಅರಿವು ಜನಸಾಮಾನ್ಯರಲ್ಲೂ ವೃದ್ಧಿಯಾಗಬೇಕು ಎಂದು ಅವರು ಹೇಳಿದರು. ರಾಜಕೀಯ ಪಕ್ಷಗಳು ತಮ್ಮ ಪಕ್ಷಪರ ಲಾಭಕ್ಕಿಂತ ಮೊದಲು ರಾಷ್ಟ್ರ ಹಿತವನ್ನು ಪ್ರಮುಖವಾಗಿಡಬೇಕು ಎಂಬುದನ್ನೂ ಅವರು ಸ್ಪಷ್ಟಪಡಿಸಿದರು.

ಓಲೈಕೆ ರಾಜಕೀಯ ಸಲ್ಲದು

ರಾಜಕಾರಣಿಗಳ 'ಓಲೈಕೆ ರಾಜಕೀಯ'ವನ್ನು ಟೀಕಿಸಿದ ಅವರು, ಅದು ದೇಶದ ಸಾಮಾಜಿಕ ಏಕತೆ ಮತ್ತು ದೀರ್ಘಕಾಲಿಕ ಹಿತಾಸಕ್ತಿಗೆ ಹಾನಿ ಉಂಟುಮಾಡಿದೆ ಎಂದರು. ಧರ್ಮ ಅಥವಾ ಹಿನ್ನೆಲೆಯನ್ನು ಬಿಟ್ಟು ಎಲ್ಲ ಭಾರತೀಯರೂ ಸಮಾನ ಹಕ್ಕುಗಳನ್ನು ಹೊಂದಿದ್ದು, ಯಾರೂ ದ್ವಿತೀಯ ದರ್ಜೆಯ ನಾಗರಿಕರಲ್ಲ ಎಂಬ ಮಾತನ್ನು ಅವರು ಪುನರುಚ್ಚರಿಸಿದರು. ಏಕರೂಪ ನಾಗರಿಕ ಸಂಹಿತೆ ಈ ಸಮಾನತೆಯ ತಾತ್ವಿಕ ಕಾನೂನು ಆಧಾರವನ್ನು ಬಲಪಡಿಸುವ ಹೆಜ್ಜೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಪ್ರಜಾಪ್ರಭುತ್ವ ಒಂದು ಜೀವನ ಶೈಲಿ

ಭಾರತದ ಪ್ರಜಾಸತ್ತಾತ್ಮಕ ಯಶಸ್ಸಿನ ಮೂಲಗಳ ಬಗ್ಗೆ ಮಾತನಾಡಿದ ಹೊಸಬಾಳೆ, ಭಾರತೀಯ ಪ್ರಜಾಪ್ರಭುತ್ವವು ಪಾಶ್ಚಾತ್ಯ ಮಾದರಿಗಳ ಪ್ರತಿಕೃತಿಯಲ್ಲ; ಅದು ದೇಶದ ನಾಗರಿಕತೆ, ಸಂಸ್ಕೃತಿ ಮತ್ತು ಹಿಂದೂ ತತ್ವಶಾಸ್ತ್ರದಲ್ಲಿ ನೆಲೆಯೂರಿದ ವಿಶಿಷ್ಟ ಮನೋಭಾವದ ಫಲ ಎಂದು ಹೇಳಿದರು. ವಿವಿಧ ದೇಶಗಳಲ್ಲಿ ಪ್ರಜಾಪ್ರಭುತ್ವ ವಿಭಿನ್ನ ರೂಪಗಳನ್ನು ತಾಳಿದರೂ, ಭಾರತದ ಬಲ ಅದರ ವೈವಿಧ್ಯತೆಯ ನಡುವೆ ಏಕತೆಯನ್ನು ಉಳಿಸಿಕೊಂಡಿರುವ ಸಾಂಸ್ಕೃತಿಕ ದೃಷ್ಟಿಕೋನದಲ್ಲಿದೆ ಎಂದರು. 'ಪ್ರಜಾಪ್ರಭುತ್ವ ಒಂದು ಜೀವನಶೈಲಿ' ಎಂಬುದಾಗಿ ಅವರು ಅದನ್ನು ವಿವರಿಸಿದರು. 1947ರಲ್ಲಿ ಭಾರತದಿಂದ ಬೇರ್ಪಟ್ಟ ಕೆಲವು ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವವು ಸ್ಥಿರತೆಯನ್ನು ಕಳೆದುಕೊಂಡ ಸಂದರ್ಭಗಳನ್ನು ಉಲ್ಲೇಖಿಸಿ, ಭಾರತದಲ್ಲಿ ಅದು ಸಂಕಷ್ಟಗಳ ನಡುವೆಯೂ ಉಳಿದುಕೊಂಡಿದ್ದರೆ ಇದಕ್ಕೆ ಸಮಾಜದ ಆಂತರಿಕ ಮನೋಭಾವವೇ ಕಾರಣ ಎಂದರು. ಒಮ್ಮೆ ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವ ಯತ್ನ ನಡೆದರೂ ಜನರು ಅದನ್ನು ತಿರಸ್ಕರಿಸಿದ್ದರು ಎಂಬ ಉಲ್ಲೇಖದ ಮೂಲಕ ಅವರು ಜನಮನದಲ್ಲಿ ಪ್ರಜಾತಾಂತ್ರಿಕ ಚೈತನ್ಯ ಗಾಢವಾಗಿದೆ ಎಂದು ಹೇಳಿದರು.

ವಸಾಹತುಶಾಹಿ ಮನೋಭಾವ ನಿವಾರಣೆ

ಆರ್‌ಎಸ್‌ಎಸ್ ಶತಮಾನೋತ್ಸವದ ಪ್ರಮುಖ ಬೌದ್ಧಿಕ ಸಂದೇಶವಾಗಿ ಮನಸ್ಸಿನ ವಸಾಹತುಶಾಹಿ ನಿವಾರಣೆಯ ಪ್ರಶ್ನೆಯನ್ನು ಹೊಸಬಾಳೆ ಮುಂದಿಟ್ಟಿದ್ದಾರೆ. ರಾಜಕೀಯ ಸ್ವಾತಂತ್ರ್ಯ ಭಾರತಕ್ಕೆ ದೊರೆತಿದ್ದರೂ ಬೌದ್ಧಿಕ, ಸಾಂಸ್ಕೃತಿಕ ಮತ್ತು ಮನೋವೈಚಾರಿಕ ಮಟ್ಟದಲ್ಲಿ ವಸಾಹತುಶಾಹಿ ಅವಶೇಷಗಳು ಇನ್ನೂ ಉಳಿದಿವೆ ಎಂದು ಅವರು ಹೇಳಿದರು. ಭಾರತದ ಇತಿಹಾಸ, ಸಂಸ್ಕೃತಿ ಮತ್ತು ಗುರುತಿನ ಬಗ್ಗೆ ವಕ್ರ ನರೇಟಿವ್‌ಗಳು ಇನ್ನೂ ಶಿಕ್ಷಣ, ಸಾರ್ವಜನಿಕ ಚರ್ಚೆ ಮತ್ತು ಬೌದ್ಧಿಕ ವಲಯಗಳಲ್ಲಿ ಪ್ರಭಾವ ಬೀರುತ್ತಿವೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತದ ಬಗ್ಗೆ ಸರಿಯಾದ ನರೇಟಿವ್ ನಿರ್ಮಾಣವಾದರೆ ಮನಸ್ಸಿನ ವಸಾಹತುಶಾಹಿ ಕ್ರಮೇಣ ನಿವಾರಣೆಯಾಗುತ್ತದೆ ಎಂದು ಹೊಸಬಾಳೆ ಅವರು ಹೇಳಿದ್ದಾರೆ. ಭಾರತೀಯರು ತಮ್ಮನ್ನು 'ರೂಪುಗೊಳ್ಳುತ್ತಿರುವ ಹೊಸ ರಾಷ್ಟ್ರ'ವೆಂದು ಅಲ್ಲ, ಸಾವಿರಾರು ವರ್ಷಗಳ ನಾಗರಿಕತಾಧಾರಿತ ನಿರಂತರ ರಾಷ್ಟ್ರವೆಂದು ಅರಿಯಬೇಕು ಎಂಬುದು ಅವರ ನಿಲುವಾಗಿದೆ. ಶಿಕ್ಷಣ ವ್ಯವಸ್ಥೆ ಮತ್ತು ಸಾರ್ವಜನಿಕ ಅರಿವಿನಲ್ಲಿ ದೀರ್ಘಕಾಲದಿಂದ ಇರುವ ವಕ್ರತೆಗಳನ್ನು ಅವರು ಉಲ್ಲೇಖಿಸಿದರು. ವಿಶೇಷವಾಗಿ ಆರ್ಯರ ಆಕ್ರಮಣ ಸಿದ್ಧಾಂತದ ಬೋಧನೆಯನ್ನು ಉದಾಹರಿಸಿ, 'ಇಂದಿಗೂ ಕೆಲವರು ಭಾರತದಲ್ಲಿ ಆರ್ಯರ ಆಕ್ರಮಣ ನಡೆದಿತ್ತು ಎಂದು ನಂಬುತ್ತಾರೆ; ಆದರೆ ಅದಕ್ಕೆ ಯಾವುದೇ ದೃಢವಾದ ಸಾಕ್ಷ್ಯವಿಲ್ಲ,' ಎಂದರು. ವಸಾಹತುಶಾಹಿ ಮನೋಭಾವದಿಂದಾಗಿ ಭಾರತೀಯ ನಾಗರಿಕತೆಯ ನಿಜವಾದ ಇತಿಹಾಸ ಮತ್ತು ಅನುಭವಗಳಿಗೆ ವಿರುದ್ಧವಾದ ಕಥನಗಳು ಹರಡಿವೆ ಎಂದು ಅವರು ಹೇಳಿದರು. 'ರಾಜಕೀಯ ಸ್ವಾತಂತ್ರ್ಯವು ಸಾಂಸ್ಕೃತಿಕ ಸೇರಿದಂತೆ ಇತರೆ ಸ್ವಾತಂತ್ರ್ಯಗಳಿಗೆ ದಾರಿ ತೆರೆಬೇಕು,' ಎಂದು ಅವರು ನುಡಿದರು. 'ಆರ್‌ಎಸ್‌ಎಸ್‌ನ ಪ್ರಭಾವವೆಂದರೆ ಹಿಂದೂ ರಾಷ್ಟ್ರೀಯತೆ ನಮ್ಮ ರಾಷ್ಟ್ರ, ಸಂಸ್ಕೃತಿ ಮತ್ತು ನಾಗರಿಕತೆಯ ಮೌಲ್ಯಗಳ ಬಗ್ಗೆ ಹೆಮ್ಮೆ,' ಎಂದು ಅವರು ಹೇಳಿದರು. ಇವು ಇಂದಿಗೂ ಪ್ರಸ್ತುತವಾಗಿದ್ದು, ದೇಶೀಯ ಆದ್ಯತೆಗಳು ಮತ್ತು ಜಾಗತಿಕ ಪಾತ್ರವನ್ನು ಮಾರ್ಗದರ್ಶನ ಮಾಡಬೇಕು ಎಂದು ಅವರು ಹೇಳಿದರು.

ಜ್ಞಾನದ ಪ್ರಜಾಪ್ರಭುತ್ವೀಕರಣ

ತಂತ್ರಜ್ಞಾನ ಮತ್ತು ಜ್ಞಾನ ಪ್ರಜಾಸತ್ತೀಕರಣದ ವಿಷಯದಲ್ಲಿ ಹೊಸಬಾಳೆ ಎಚ್ಚರಿಕೆಯಿಂದಿರುವ ಧ್ವನಿಯನ್ನು ಹೊರಹಾಕಿದ್ದಾರೆ. ಜ್ಞಾನದ ಪ್ರಜಾಸತ್ತೀಕರಣ ಅಗತ್ಯವಾದರೂ ಅದು ಆರ್ಥಿಕತೆ, ಸಮಾನತೆ ಮತ್ತು ನೈತಿಕತೆ ಎಂಬ ಮೂರು ಮಾನದಂಡಗಳ ಆಧಾರದ ಮೇಲೆ ನಡೆಯಬೇಕು ಎಂದು ಅವರು ಹೇಳಿದ್ದಾರೆ. ತಂತ್ರಜ್ಞಾನ ಮತ್ತು ಶಿಕ್ಷಣಕ್ಕೆ ಸಮಾನ ಪ್ರವೇಶವಿಲ್ಲದಿದ್ದರೆ ಈಗಾಗಲೇ ಸಮಾಜದಲ್ಲಿ ಇರುವ ಅಸಮಾನತೆಗಳು ಇನ್ನಷ್ಟು ಗಾಢವಾಗುತ್ತವೆ. ಆದಾಯ, ಅವಕಾಶ, ಶಿಕ್ಷಣದ ಗುಣಮಟ್ಟ ಮತ್ತು ಜೀವನಮಟ್ಟದ ಅಂತರ ವಿಸ್ತರಿಸುತ್ತದೆ ಎಂದು ಅವರು ಹೇಳಿದರು. ಹೀಗಾಗಿ ಸರ್ಕಾರಗಳು ನವೋತ್ಪಾದನೆಯನ್ನು ಕೇವಲ ಆರ್ಥಿಕ ಲಾಭದ ದೃಷ್ಟಿಯಿಂದ ಮಾತ್ರ ಅಳೆಯದೆ, ಅದರ ಸಾಮಾಜಿಕ ಪರಿಣಾಮ, ನೈತಿಕ ಅರ್ಥ ಮತ್ತು ಪರಿಸರಪರ ಪರಿಣಾಮಗಳ ದೃಷ್ಟಿಯಿಂದಲೂ ಮೌಲ್ಯಮಾಪನ ಮಾಡಬೇಕು ಎಂದರು. ಸಮಾಜದ ಸಮತೋಲನ ಹಾಳುಮಾಡುವ, ಪ್ರಕೃತಿಯನ್ನು ದುರುಪಯೋಗಪಡಿಸುವ ಅಥವಾ ನೈತಿಕತೆ ಕಳೆದುಕೊಂಡ ತಂತ್ರಜ್ಞಾನವನ್ನು ಮರುಪರಿಶೀಲಿಸಬೇಕೆಂದು ಅವರು ಸಲಹೆ ನೀಡಿದರು.

ದೀರ್ಘಕಾಲದ ವಿಕೃತತೆ

ಇದನ್ನು ವಿವರಿಸಲು ಅವರು ಶಿಕ್ಷಣ ವ್ಯವಸ್ಥೆಯಲ್ಲಿನ ದೀರ್ಘಕಾಲದ ವಿಕೃತತೆಗಳನ್ನು ಉಲ್ಲೇಖಿಸಿದರು. ವಿಶೇಷವಾಗಿ 'ಆರ್ಯರ ಆಕ್ರಮಣ ಸಿದ್ಧಾಂತ'ದ ಕುರಿತು, ಅದಕ್ಕೆ ದೃಢವಾದ ಸಾಕ್ಷ್ಯವಿಲ್ಲದಿದ್ದರೂ ಇನ್ನೂ ಅನೇಕರು ಅದನ್ನು ಸತ್ಯವೆಂದು ನಂಬುತ್ತಿರುವುದನ್ನು ಉದಾಹರಣೆಯಾಗಿ ಹೇಳಿದರು. ಭಾರತೀಯ ವೈಜ್ಞಾನಿಕ ಪರಂಪರೆ, ಪ್ರಾಚೀನ ಜ್ಞಾನಪದ್ಧತಿ ಮತ್ತು ನಾಗರಿಕತೆಯ ಕೊಡುಗೆಗಳ ಬಗ್ಗೆ ಸಮಗ್ರ ಅರಿವು ಇಲ್ಲದಿರುವುದು ರಾಷ್ಟ್ರೀಯ ಆತ್ಮವಿಶ್ವಾಸ ಕುಗ್ಗಲು ಕಾರಣವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು. ಭಾಷೆಯ ವಿಚಾರದಲ್ಲೂ ಉಪನಿವೇಶ ಮನೋಭಾವ ಮುಂದುವರಿದಿದ್ದು, ಭಾರತೀಯ ಭಾಷೆಗಳಲ್ಲಿ ಮಾತನಾಡಿದರೆ ಕಡಿಮೆ ವಿದ್ಯಾವಂತರೆಂಬ ಭ್ರಮೆ ವಿದ್ಯಾವಂತರಲ್ಲಿಯೂ ಹೀನ ಮನೋಭಾವ ಹುಟ್ಟಿಸಿದೆ ಎಂದು ಅವರು ಹೇಳಿದರು. ಹೀಗಾಗಿ ಶಿಕ್ಷಣ, ಮಾಧ್ಯಮ ಮತ್ತು ನಾಗರಿಕ ಸಮಾಜದ ಮಟ್ಟದಲ್ಲಿ ದೀರ್ಘಕಾಲಿಕ ಪ್ರಯತ್ನಗಳ ಮೂಲಕ ಇತಿಹಾಸ ಸಂಸ್ಕೃತಿ ಭಾಷಾ ಗೌರವವನ್ನು ಮರುಸ್ಥಾಪಿಸಬೇಕಾಗಿದೆ ಎಂದು ಒತ್ತಿ ಹೇಳಿದರು. ಹೊಸಬಾಳೆ ಅವರ ಅಭಿಪ್ರಾಯದಲ್ಲಿ, ಈ ಬೌದ್ಧಿಕ ಮುಕ್ತತೆ ಕೇವಲ ಭಾರತಕ್ಕೆ ಸಂಬಂಧಿಸಿದ ವಿಷಯವಲ್ಲ; ಜಾಗತಿಕ ಮಟ್ಟದಲ್ಲೂ ಗುರುತು ಸಂಘರ್ಷಗಳು, ಸಿದ್ಧಾಂತಾತ್ಮಕ ವಿಭಜನೆಗಳು ಮತ್ತು ಸಾಮಾಜಿಕ ವೈಮನಸ್ಸುಗಳನ್ನು ಎದುರಿಸಲು ಸಮತೋಲನಯುತ ಇತಿಹಾಸ ಮತ್ತು ಸಂಸ್ಕೃತಿ ಅರಿವು ಅಗತ್ಯ. ಆರ್‌ಎಸ್‌ಎಸ್‌ನ ಶತಮಾನಕಾಲದ ಕಾರ್ಯದಲ್ಲಿ ಸಾಂಸ್ಕೃತಿಕ ಜಾಗೃತಿ, ಆತ್ಮಗೌರವ ಮತ್ತು ನಾಗರಿಕತೆಯ ಮೌಲ್ಯಗಳ ಕುರಿತ ಹೆಮ್ಮೆಯನ್ನು ಬೆಳೆಸುವ ಪ್ರಯತ್ನಗಳು ಇದಕ್ಕಾಗಿ ನಡೆದಿವೆ ಎಂದು ಅವರು ಹೇಳಿದ್ದಾರೆ.

ಹಿಂದೂ ರಾಷ್ಟ್ರೀಯತೆ

'ಹಿಂದೂ ರಾಷ್ಟ್ರೀಯತೆ' ಎಂದರೆ ರಾಷ್ಟ್ರ, ಸಂಸ್ಕೃತಿ ಮತ್ತು ನಾಗರಿಕತೆಯ ಮೌಲ್ಯಗಳ ಬಗ್ಗೆ ಹೆಮ್ಮೆ ಎಂಬ ಅರ್ಥದಲ್ಲಿ ಸಂಘದ ಚಿಂತನೆ ಇದೆ ಎಂದು ಅವರು ವಿವರಿಸಿದರು. ಈ ಮೌಲ್ಯಗಳು ಇಂದಿಗೂ ಪ್ರಸ್ತುತವಾಗಿದ್ದು, ದೇಶೀಯ ಆದ್ಯತೆಗಳಿಗೂ, ಜಾಗತಿಕ ವೇದಿಕೆಯಲ್ಲಿ ಭಾರತದ ಪಾತ್ರಕ್ಕೂ ಮಾರ್ಗದರ್ಶನ ಮಾಡಬೇಕು ಎಂದರು. ಶಿಕ್ಷಣ, ವಿಜ್ಞಾನ ಮತ್ತು ಆಧ್ಯಾತ್ಮದ ಸಂಬಂಧವನ್ನು ಹೊಸಬಾಳೆ ವಿಶೇಷವಾಗಿ ಒತ್ತಿಹೇಳಿದರು. ಭಾರತೀಯ ಜ್ಞಾನ ಪರಂಪರೆಯಲ್ಲಿ ವಿಜ್ಞಾನ ಮತ್ತು ಆಧ್ಯಾತ್ಮ ಪರಸ್ಪರ ವಿರೋಧಿಗಳಲ್ಲ; ಅವು ಒಂದನ್ನೊಂದು ಪೂರೈಸುವ ಕ್ಷೇತ್ರಗಳೆಂದು ಅವರು ಹೇಳಿದರು. ಪಶ್ಚಿಮದ ಅನೇಕ ಸಮಾಜಗಳಲ್ಲಿ ಧರ್ಮ ಮತ್ತು ವಿಜ್ಞಾನ ನಡುವೆ ಇತಿಹಾಸಾತ್ಮಕ ಸಂಘರ್ಷ ಕಂಡುಬಂದಿದ್ದರೂ, ಭಾರತೀಯ ನಾಗರಿಕತೆಯಲ್ಲಿ ಜ್ಞಾನಾನ್ವೇಷಣೆ, ಯುಕ್ತಿ, ಅನುಭವ ಮತ್ತು ಆತ್ಮೀಯತೆ ಸಮನ್ವಯಗೊಂಡಿರುವ ಪರಂಪರೆ ಇದೆ ಎಂದರು. ಮಾನವ ಜ್ಞಾನದ ಮಿತಿಗಳನ್ನು ಮೀರಿದ ಅಂಶಗಳನ್ನು ಒಪ್ಪಿಕೊಳ್ಳುವ ಸಾಮರ್ಥ್ಯವೂ ಭಾರತೀಯ ಚಿಂತನೆಯ ಭಾಗವಾಗಿದೆ ಎಂದು ಅವರು ವಿವರಿಸಿದರು. ಇಂತಹ ಜ್ಞಾನಪದ್ಧತಿಯನ್ನು ಶಿಕ್ಷಣ ಮತ್ತು ಪಠ್ಯಕ್ರಮಗಳಲ್ಲಿ ಅರ್ಥಪೂರ್ಣವಾಗಿ ಒಳಗೊಳ್ಳಿಸುವುದು ಅಗತ್ಯ, ಇಲ್ಲವಾದರೆ ಹಳೆಯ ವೈಜ್ಞಾನಿಕ ಅನ್ವೇಷಣೆಗಳನ್ನೇ ಅಂಧಶ್ರದ್ಧೆ ಎಂದು ತಳ್ಳಿಹಾಕುವ ಅಪಾಯವಿದೆ ಎಂದು ಎಚ್ಚರಿಸಿದರು.

ಮತಾಂತರ

ಮತಾಂತರ ಸಂಬಂಧಗಳು ಮತ್ತು ಆಧ್ಯಾತ್ಮಿಕತೆಯ ಬಗ್ಗೆ ಮಾತನಾಡಿದ ಹೊಸಬಾಳೆ, ಧರ್ಮ ಮತ್ತು ಆಧ್ಯಾತ್ಮಿಕತೆ ಪರಸ್ಪರ ಒಂದೇ ಅರ್ಥದಲ್ಲಿಲ್ಲ ಎಂದು ಹೇಳಿದರು. ಆಧ್ಯಾತ್ಮಿಕತೆ ಧರ್ಮವ ಮೀರಿದ ವ್ಯಾಪಕ ಅರ್ಥ ಹೊಂದಿದ್ದು, ಅದನ್ನು ಸರಿಯಾಗಿ ಅರ್ಥ ಮಾಡಿಕೊಂಡರೆ ಮಾನವಕುಲದ ಏಕತೆ ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಭಾರತದ ಪರಂಪರೆಯ ಬಲವೇ ಅದೇ ಸಮನ್ವಯಶೀಲತೆ, ವೈವಿಧ್ಯತೆಯನ್ನು ಅಳವಡಿಸಿಕೊಂಡಿದ್ದರೂ ಆಂತರಿಕ ಏಕತೆಯನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಎಂದು ಅವರು ಸೂಚಿಸಿದರು. ಇದೇ ಮನೋಭಾವವನ್ನು ಸಮಾಜದಲ್ಲಿ, ಆಡಳಿತದಲ್ಲಿ ಮತ್ತು ಜಾಗತಿಕ ಸಂವಾದದಲ್ಲೂ ಪ್ರತಿಬಿಂಬಿಸಬೇಕು ಎಂದು ಅವರು ಹೇಳಿದರು.





ಸಾಮಾಜಿಕ ಜವಾಬ್ದಾರಿ

ಸಾಮಾಜಿಕ ಜವಾಬ್ದಾರಿ ಮತ್ತು ಸಂಘಟನಾ ದೃಷ್ಟಿಯಿಂದ ದೇಶ ಇನ್ನೂ ಹೆಚ್ಚು ಬೆಳೆಯಬೇಕಿದೆ ಎಂದು ಹೊಸಬಾಳೆ ಅಭಿಪ್ರಾಯಪಟ್ಟರು. ನಾಗರಿಕ ಶಿಸ್ತು, ಕರ್ತವ್ಯಬೋಧೆ ಮತ್ತು ಸಮಾಜಪರ ಹೊಣೆಗಾರಿಕೆಯ ಮನೋಭಾವವನ್ನು ಬಲಪಡಿಸುವುದು ಅಗತ್ಯ ಎಂದರು. ಸಂಘವು ಇದೀಗ ಸಾಮಾಜಿಕ ಸಮರಸತೆ, ಕುಟುಂಬ ಬಲಪಡಿಕೆ, ಪರಿಸರ ಸ್ನೇಹಿ ಜೀವನಶೈಲಿ, ಆತ್ಮನಿರ್ಭರತೆ ಹಾಗೂ ನಾಗರಿಕ ಕರ್ತವ್ಯಗಳಂತಹ ಐದು ಪ್ರಮುಖ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು. ಕಾಲಾನುಸಾರವಾಗಿ ತನ್ನ ಕಾರ್ಯಪದ್ಧತಿಯನ್ನು ಬದಲಿಸಿಕೊಂಡಿರುವ ಆರ್‌ಎಸ್‌ಎಸ್ ಸೇವೆ, ಮಾಧ್ಯಮ ಮತ್ತು ಸಂಪರ್ಕಕ್ಕೆ ಪ್ರತ್ಯೇಕ ವಿಭಾಗಗಳನ್ನು ಸ್ಥಾಪಿಸಿರುವುದನ್ನೂ ಅವರು ಉಲ್ಲೇಖಿಸಿದರು. ಒಳ್ಳೆಯ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳು ದೇಶದಲ್ಲಿ ಬೇರೆ ಬೇರೆ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವುಗಳನ್ನು ಜಾಲತಾಣದ ಮೂಲಕ ಪರಸ್ಪರ ಸಂಪರ್ಕಗೊಳಿಸಿ ಒಂದು ಬೃಹತ್ ಸಾಮಾಜಿಕ ಶಕ್ತಿಯಾಗಿ ರೂಪಿಸುವುದು ಅಗತ್ಯವೆಂದು ಹೇಳಿದರು. ಸಂಘವನ್ನು ಕೇವಲ ಒಂದು ಸಂಘಟನೆಯಷ್ಟೇ ಅಲ್ಲ, ಮೌಲ್ಯಾಧಾರಿತ ಜೀವನದ ಶೈಲಿಯಂತೆ ರೂಪುಗೊಂಡ ವ್ಯವಸ್ಥೆಯಾಗಿ ಅವರು ಚಿತ್ರಿಸಿದರು. ಒಟ್ಟಿನಲ್ಲಿ, ಆರ್ ಎಸ್‌ಎಸ್ ಶತಮಾನೋತ್ಸವದ ಹಿನ್ನಲೆಯಲ್ಲಿ ದತ್ತಾತ್ರೇಯ ಹೊಸಬಾಳೆ ನೀಡಿರುವ ಸಂದೇಶವು ಕೇವಲ ಸಂಘದ ಆತ್ಮಪರಿಚಯವಲ್ಲ; ಅದು ರಾಷ್ಟ್ರ ನಿರ್ಮಾಣ, ರಾಜಕೀಯ ಸುಧಾರಣೆ, ನಾಗರಿಕತೆ ಸಂಸ್ಕೃತಿ ಮರುಪರಿಶೀಲನೆ, ಶಿಕ್ಷಣ ಪರಿವರ್ತನೆ, ತಂತ್ರಜ್ಞಾನಕ್ಕೆ ನೈತಿಕ ದಿಕ್ಕು, ಜಾಗತಿಕ ಭಾರತೀಯರ ಪಾತ್ರ, ಕುಟುಂಬ ಮತ್ತು ಸಮಾಜದ ಪುನರ್‌ಬಲಿಕರಣ, ಸಮಾನತೆ ಮತ್ತು ಪರಿಸರ ಸಮತೋಲನದ ಕುರಿತ ಬಹುಆಯಾಮದ ದೃಷ್ಟಿಪತ್ರದಂತಿದೆ. ತಾವು ನೆಲೆಸಿರುವ ದೇಶಕ್ಕೆ ಪೂರ್ಣ ನಿಷ್ಠೆ ತೋರಬೇಕು ಎನ್ನುವ ವಿದೇಶದ ಭಾರತೀಯರಿಗೆ ನೀಡಿದ ಸಂದೇಶದಿಂದ ಹಿಡಿದು, ಭಾರತ ತನ್ನ ಸ್ವಂತ ನಾಗರಿಕತೆಯ ಚೌಕಟ್ಟಿನಲ್ಲಿ ಭವಿಷ್ಯವನ್ನು ರೂಪಿಸಬೇಕು ಎನ್ನುವ ಬೌದ್ಧಿಕ ಕರೆವರೆಗೆ, ಹೊಸಬಾಳೆ ಅಭಿಪ್ರಾಯಗಳು ಸಂಘದ ಎರಡನೇ ಶತಮಾನ ಪ್ರವೇಶದ ರಾಜಕೀಯ- ಸಾಂಸ್ಕೃತಿಕ ಸಂಕೇತಗಳಾಗಿ ಹೊರಹೊಮ್ಮಿವೆ.

ಜಾಗತಿಕ ಸವಾಲುಗಳ ಆತಂಕ

ಜಾಗತಿಕ ಸವಾಲುಗಳ ಕುರಿತು ಹೊಸಬಾಳೆ ಹಲವಾರು ಆತಂಕಗಳನ್ನು ಹೊರಹಾಕಿದರು. ಧರ್ಮದ ಹೆಸರಿನಲ್ಲಿ ನಡೆಯುವ ಹಿಂಸಾಚಾರ ಇನ್ನೂ ಮಾನವಕುಲಕ್ಕೆ ದೊಡ್ಡ ಬೆದರಿಕೆಯಾಗಿದೆ ಎಂದು ಅವರು ಹೇಳಿದರು. ಭೌಗೋಳಿಕ ರಾಜಕೀಯ ಒತ್ತಡಗಳು, ಜಾಗತಿಕ ಶಕ್ತಿ ಅಸಮತೋಲನ, ಗುರುತು ಸಂಘರ್ಷಗಳು ಮತ್ತು ಸಾಮಾಜಿಕ ಏಕತೆಯ ಕುಸಿತವು ವಿಶ್ವವನ್ನು ಸೂಕ್ಷ್ಮ ಹಾಗೂ ಅಪಾಯಕಾರಿ ಹಂತಕ್ಕೆ ತಳ್ಳಿವೆ ಎಂದರು. ಕುಟುಂಬ ವ್ಯವಸ್ಥೆಯ ಕುಸಿತವನ್ನೂ ಅವರು ಪ್ರಮುಖ ಜಾಗತಿಕ ಸಮಸ್ಯೆಯಾಗಿ ಗುರುತಿಸಿದರು. ಗ್ರಾಹಕತ್ವದ ಸಂಸ್ಕೃತಿ, ನಂಬಿಕೆಯ ಕುಸಿತ ಮತ್ತು ಸಾಮಾಜಿಕ ಬಂಧಗಳ ದುರ್ಬಲತೆಯಿಂದ ಕುಟುಂಬಗಳು ಅಸ್ವಸ್ಥವಾಗುತ್ತಿವೆ; ಆದರೆ ಕುಟುಂಬ ಆರೋಗ್ಯವಾಗಿದ್ದರೆ ಸಮಾಜವೂ ಆರೋಗ್ಯವಾಗಿರುತ್ತದೆ, ರಾಷ್ಟ್ರವೂ ಬಲವಾಗಿರುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಪರಿಸರ ಸಮತೋಲನದ ಪ್ರಶ್ನೆಯಲ್ಲಿ ವಿಜ್ಞಾನ ತಂತ್ರಜ್ಞಾನ ಅಭಿವೃದ್ಧಿ ಅನಿವಾರ್ಯವಾದರೂ ಅದು ಪ್ರಕೃತಿ ಹಾನಿಗೆ ಕಾರಣವಾಗಬಾರದು ಎಂಬ ಎಚ್ಚರಿಕೆಯನ್ನು ನೀಡಿದರು.

ವ್ಯತ್ಯಾಸ ಬಗೆಹರಿಯಲಿ

ಅಂಧಶ್ರದ್ಧೆ ಬಗ್ಗೆ ಮಾತನಾಡಿದ ಅವರು, ಶಿಕ್ಷಣ ವ್ಯವಸ್ಥೆಗಳು ನಾಗರಿಕತೆಯ ವೈಜ್ಞಾನಿಕ ಸಾಧನೆಗಳನ್ನು ಸಮರ್ಪಕವಾಗಿ ಪರಿಚಯಿಸಲು ವಿಫಲವಾದಾಗಲೇ ಮೂಢನಂಬಿಕೆಗಳಿಗೆ ಅವಕಾಶ ಸಿಗುತ್ತದೆ ಎಂದರು. ಶಿಕ್ಷಣವು ನಿಜವಾದ ವೈಜ್ಞಾನಿಕ ಅನ್ವೇಷಣೆ ಮತ್ತು ಅಂಧಶ್ರದ್ಧೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಬೇಕು. ಭಾರತೀಯ ಜ್ಞಾನಪದ್ಧತಿಯಲ್ಲಿ ಅಡಕವಾಗಿರುವ ಹಳೆಯ ವೈಜ್ಞಾನಿಕ ಸಂಶೋಧನೆಗಳು, ಅನುಭವಾಧಾರಿತ ತಿಳುವಳಿಕೆ ಮತ್ತು ಸಮಾಜಜೀವನಕ್ಕೆ ಸಂಬಂಧಿಸಿದ ಜ್ಞಾನವನ್ನು ಪುನರುಜ್ಜೀವನಗೊಳಿಸುವ ಅಗತ್ಯವಿದೆ ಎಂದು ಅವರು ಹೇಳಿದರು. ಶಿಕ್ಷಣದ ಮೂಲಕ ಪೂರ್ವಾಗ್ರಹಗಳು ಮತ್ತು ಅಜ್ಞಾನವನ್ನು ಕಡಿಮೆ ಮಾಡಿ, ವೈಜ್ಞಾನಿಕ ಮನೋಭಾವವನ್ನು ಬಲಪಡಿಸಬೇಕು; ಇಲ್ಲದಿದ್ದರೆ ವೈಜ್ಞಾನಿಕ ಪ್ರಗತಿಯಾದರೂ ಸಮಾಜದಲ್ಲಿ ಅಸಮಾನತೆ, ಗೊಂದಲ ಮತ್ತು ತಪ್ಪುಭಾವನೆಗಳು ಹೆಚ್ಚುತ್ತವೆ ಎಂದು ಅವರು ಸೂಚಿಸಿದರು.

ಮಹಿಳಾ ಮೀಸಲಾತಿಗೆ ವಿರೋಧವಿಲ್ಲ: ಸಿಎಂ

ರಾಣೇಬೆನ್ನೂರು: ಮಹಿಳಾ ಮೀಸಲಾತಿ ಮಸೂದೆ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ 2023ರಲ್ಲಿಯೇ ಅಂಗೀಕಾರವಾಗಿದೆ. ಪ್ರಸ್ತುತ ಕ್ಷೇತ್ರ ಮರುವಿಂಗಡನೆಯನ್ನು ಸೇರಿಸಿ ಮಂಡಿಸಿದ್ದಾರೆ. ನಾವು ಮಹಿಳಾ ಮೀಸಲಾತಿಗೆ ವಿರೋಧವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಅವರು ರಾಣೇಬೆನ್ನೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡುತ್ತಾ, ಮಹಿಳೆಯರಿಗೆ 33% ಮೀಸಲಾತಿ ನೀಡಬೇಕೆಂದು ಬಿಜೆಪಿ ಎಂದಿಗೂ ಒತ್ತಾಯಿಸಿಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳಾ ಮೀಸಲಾತಿ , ಸಂವಿಧಾನದ 73,74 ನೇ ತಿದ್ದುಪಡಿಗಳನ್ನು ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಯಾಗಿದ್ದಾಗ ತಂದಿದ್ದರು. ಜಿಲ್ಲಾ ಮತ್ತು ತಾಲೂಕು ಪಂಚಾಯಿತಿಗಳಲ್ಲಿ ಮಹಿಳೆಯರಿಗೆ 33% ಮೀಸಲಾತಿ ನೀಡಬೇಕೆಂದು ಬಿಜೆಪಿ ಎಂದಿಗೂ ಒತ್ತಾಯಿಸಿಲ್ಲ. ಈಗ ಮಾತ್ರ ಮಹಿಳಾ ಮೀಸಲಾತಿಗೆ ಒತ್ತಾಯಿಸಿ ರಾಜಕೀಯ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಕ್ಷೇತ್ರ ಮರುವಿಂಗಡನೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯ: ಕ್ಷೇತ್ರ ಮರುವಿಂಗಡನೆಯಿಂದ ದಕ್ಷಿಣ ಭಾರತದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ. ದಕ್ಷಿಣದಲ್ಲಿ 50% ಮಾಡಿದರೆ ಉತ್ತರ ಪ್ರದೇಶದಲ್ಲಿ 80 ಸ್ಥಾನಗಳಿವೆ. ಅಲ್ಲಿಗೆ 120 ಸ್ಥಾನಗಳಾಗುತ್ತವೆ. ಕರ್ನಾಟಕದಲ್ಲಿ 42 ಸ್ಥಾನಗಳಾಗುತ್ತವೆ. ಉತ್ತರ ಭಾರತದಲ್ಲಿ ಸ್ಥಾನಗಳು ಹೆಚ್ಚಾಗುವುದರ ಬಗ್ಗೆ ನಮ್ಮ ವಿರೋಧವೇ ಹೊರತು ಮಹಿಳಾ ಮೀಸಲಾತಿಗೆ ವಿರೋಧವಿಲ್ಲ, ಅದರ ಪರವಾಗಿದ್ದೇವೆ ಎಂದರು.

ಸಂವಿಧಾನ ತಿದ್ದುಪಡಿಗೆ ಮೂರನೇ ಎರಡರಷ್ಟು ಬಹುಮತ ಲೋಕಸಭೆಯಲ್ಲಿ ಇರಬೇಕು. 50% ರಾಜ್ಯಗಳು ಇದಕ್ಕೆ ಒಪ್ಪಿಗೆ ನೀಡಬೇಕು ಎಂದರು. ಕ್ಷೇತ್ರ ಮರು ವಿಂಗಡಣೆಗೆ ವಿರೋಧ ಮಾಡಿದ್ದೇವೆ ಹೊರತು ಮಹಿಳಾ ಮೀಸಲಾತಿಗೆ ನಮ್ಮ ವಿರೋಧವಿಲ್ಲ ಎಂದರು.



ಮೇಲ್ಮನವಿಗೆ ಅವಕಾಶ

ಜನಪ್ರತಿನಿಧಿಗಳು ಜೈಲು ಸೇರುತ್ತಿರುವುದರ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ ಎಂದರು.


ಮಟ್ಕಾ ದಂಧೆ ನಿಯಂತ್ರಣದಲ್ಲಿದೆ

ರಾಣೆಬೆನ್ನೂರು ಸುತ್ತ ಮುತ್ತ ಮಟ್ಕಾ ದಂಧೆ ವ್ಯಾಪಕವಾಗಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು ಈ ಬಗ್ಗೆ ಸ್ಥಳೀಯ ಶಾಸಕರು ಕ್ರಮ ಕೈಗೊಂಡಿದ್ದಾರೆ ಎಂದರು. ಪ್ರಸ್ತುತ ಮಟ್ಕಾ ದಂಧೆ ನಿಯಂತ್ರಣದಲ್ಲಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಪ್ರಧಾನಮಂತ್ರಿಗಳಿಂದ ರಾಜಕೀಯ

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿಗಳು ಎಂದು ಭಾಷಣ ಮಾಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ತಮಿಳುನಾಡು , ಪಶ್ಚಿಮ ಬಂಗಾಳದ ಚುನಾವಣೆ ಇರುವುದರಿಂದ ರಾಜಕೀಯ ಮಾಡುತ್ತಿದ್ದಾರೆ ಎಂದರು.

ರಾಮ ಬಾಣ



ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

- ವಿರೋಧ ಪಕ್ಷಗಳು ಮಹಿಳಾ ಮೀಸಲಾತಿ ಎಂಬ ಭ್ರೂಣವನ್ನು ಹತ್ಯೆ ಮಾಡಿವೆ
- ಮೋದಿ

- ಸಹಸ್ರಾರು ದೇಶಭಕ್ತರ, ಧಾರ್ಮಿಕ ನಾಯಕರ, ವೀರ ಸೈನಿಕರ ಹತ್ಯೆಗಳಾದಾಗ ಮರುಗದ ಮಂದಿಗೆ ಭ್ರೂಣ ಹತ್ಯೆ ಏನು ಮಹಾ?

ದಿನ ಭವಿಷ್ಯ

ಮೇಷ ಸಣ್ಣಪುಟ್ಟ ಗಾಯಗಳಾಗುವ ಸಾಧ್ಯತೆ ಬಗ್ಗೆ ಎಚ್ಚರ ವಹಿಸಿ. ಆರ್ಥಿಕ ಉನ್ನತಿ. ಕೌಟುಂಬಿಕ ಭಿನ್ನಮತ ಶಾಂತಿಯಿಂದ ಬಗೆಹರಿಸಿ.

ವೃಷಭ ಮನಬಂದಂತೆ ಖರ್ಚು ಮಾಡದಿರಿ. ಶಿಕ್ಷಣ ಕ್ಷೇತ್ರದಲ್ಲಿ ಉನ್ನತ ಸಾಧನೆ ಮಾಡುವ ಯೋಗವಿದೆ. ಸಾಂಸಾರಿಕ ಸೌಹಾರ್ದ, ಸಾಮರಸ್ಯ.

ಮಿಥುನ ಸಕಾಲದಲ್ಲಿ ಕಾರ್ಯ ಮುಗಿಸಿ. ಇತರರ ಜತೆ ವ್ಯವಹಾರದಲ್ಲಿ ವಿನಯ ಇರಲಿ. ದಾರ್ಷ್ಟ್ಯ ವರ್ತನೆ ತೋರದಿರಿ. ಹೊಸ ಸ್ನೇಹ ಮೂಡಬಹುದು.

ಕಟಕ ಪಾಸಿಟಿವ್ ಚಿಂತನೆ ಇಂದು ಅವಶ್ಯ. ಸಣ್ಣ ವಿಷಯಕ್ಕೂ ಕಳವಳ ಅನಗತ್ಯ. ಅಂತಿಮವಾಗಿ ಎಲ್ಲವೂ ನಿಮಗೆ ಪೂರಕವಾಗಿ ಸಾಗಲಿದೆ.

ಸಿಂಹ ಆತುರದ ಕ್ರಮ ಬೇಡ. ಯೋಚಿಸಿ ಕಾರ್ಯ ಎಸಗಿ. ಸಣ್ಣ ತಪ್ಪು ದೊಡ್ಡ ಪರಿಣಾಮ ಉಂಟು ಮಾಡಬಹುದು. ಸಹನೆ ಅತಿ ಮುಖ್ಯ.

ಕನ್ಯಾ ಕೌಟುಂಬಿಕ ಶಾಂತಿ, ಸೌಹಾರ್ದ. ಆದಾಯದಲ್ಲಿ ಹೆಚ್ಚಳ. ಶೇರು ವ್ಯವಹಾರದಲ್ಲಿ ಲಾಭ. ಹೊಸ ಸಂಬಂಧ ಬೆಳೆಯುವ ಸಾಧ್ಯತೆ ಕಾಣುತ್ತಿದೆ.

ತುಲಾ ಸ್ವಲ್ಪ ಮಟ್ಟಿನ ಅಶಾಂತ ಮನಸ್ಸು. ಆದರೆ ಅದು ದೀರ್ಘ ಕಾಲ ಉಳಿಯದು. ಇತರ ಹೊಣೆಗಾರಿಕೆ ನಿಮ್ಮನ್ನು ಕಾದಿರುತ್ತದೆ.

ವೃಶ್ಚಿಕ ನಿಮ್ಮ ವ್ಯವಹಾರ ವಿಸ್ತರಿಸುವ ಅವಕಾಶ. ಕಾಲ ಪ್ರಶಸ್ತವಾಗಿದೆ. ಕೌಟುಂಬಿಕ ಪರಿಸರ ಹಿತಕರ. ಯಾವುದೇ ಭಿನ್ನಮತ ಬಾಧಿಸದು.

ಧನು ನಿಮ್ಮ ಕಾರ್ಯದಿಂದ ಇತರರ ಗಮನ ಸೆಳೆಯುವಿರಿ. ನಿಮ್ಮ ಗುರಿ ತಲುಪಲು ಕಠಿಣ ಪ್ರಯತ್ನ ನಡೆಸಿರಿ. ಆರೋಗ್ಯ ಸಮಸ್ಯೆ ಕಾಡಬಹುದು.

ಮಕರ ಆಪ್ತರ ಕುರಿತಂತೆ ಅತಿಯಾದ ಪೊಸೆಸಿವ್ ಧೋರಣೆ ಬಿಡಿ. ಅದರಿಂದ ಸಂಬಂಧ ಹಾಳಾದೀತು. ಮೃದುವಾಗಿ ವರ್ತಿಸುವುದು ಒಳಿತು.

ಕುಂಭ ಕೌಟುಂಬಿಕ ಭಿನ್ನಮತ ಸ್ವಲ್ಪ ಕಾಲ ನಿಮ್ಮ ಮನಸ್ಸು ಉದ್ವಿಗ್ನ ಮಾಡಬಹುದು. ಬಳಿಕ ಅದು ಸರಿಯಾಗಲಿದೆ. ವೃತ್ತಿಯಲ್ಲಿ ಸಾಧನೆ.

ಮೀನ ಏಳುಬೀಳಿನ ಕುರಿತು ಸಮಚಿತ್ತ ಹೊಂದಿರುವುದು ಅವಶ್ಯ. ಏಕೆಂದರೆ ಇಂದು ನೀವು ಏರುಪೇರು ಎರಡನ್ನೂ ಅನುಭವಿಸುವಿರಿ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 4,9,3,0

ನಗರ ಪ್ರದೇಶಗಳ ತ್ಯಾಜ್ಯದಿಂದ ಕಾಂಪೋಸ್ಟ್ ಗೊಬ್ಬರ ಉತ್ಪಾದನೆ
ರೈತರಿಗೆ ಗೊಬ್ಬರ ವಿತರಣೆ

ವೀರಣ್ಣ ಬಳಿಗಾರ

ದಿಗಂತ ವಿಶೇಷ

ಬೆಂಗಳೂರು: ನಗರಪ್ರದೇಶಗಳಲ್ಲಿ ಉಂಟಾಗುವ ತ್ಯಾಜ್ಯವನ್ನು ಬಳಸಿಕೊಂಡು ಕಾಂಪೋಸ್ಟ್ ಗೊಬ್ಬರ ಉತ್ಪಾದಿಸಿ ರಾಜ್ಯಾದ್ಯಂತ ರೈತರಿಗೆ ಉಚಿತವಾಗಿ ವಿತರಿಸಲು ಕರ್ನಾಟಕ ಕಾಪೋಸ್ಟ್ ಅಭಿವೃದ್ಧಿ ನಿಗಮ ಹೆಜ್ಜೆ ಇಟ್ಟಿದೆ.

ಸದ್ಯಕ್ಕೆ ಈ ಉಚಿತ ಕಾಪೋಸ್ಟ್ ಗೊಬ್ಬರ ವಿತರಣೆ ಬೆಂಗಳೂರು ಗ್ರಾಮಾಂತರ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ರೈತರಿಗೆ ಸಿಗಲಿದ್ದು, ಬೆಂಗಳೂರು ನಗರದಲ್ಲಿ ಉತ್ಪಾದನೆಯಾಗುವ ಗುಣಮಟ್ಟದ ಕಾಂಪೋಸ್ಟ್ ಅನ್ನು ನಿರಂತರವಾಗಿ ಖರೀದಿಸಿ ವಿತರಿಸಲಿದೆ. ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ವಿಸ್ತರಣೆಗೆ ನಿಗಮ ಯೋಜನೆ ರೂಪಿಸಿದೆ.

ಸಿಎಸ್‌ಆರ್ ಪಾಲುದಾರಿಕೆಯೊಂದಿಗೆ ತ್ಯಾಜ್ಯವನ್ನು ಸಂಪತ್ತನ್ನಾಗಿ ಪರಿವರ್ತಿಸಲು, ಕರ್ನಾಟಕದ ಸುಸ್ಥಿರ ಕೃಷಿಗಾಗಿ ಕರ್ನಾಟಕ ವಿಷನ್ 2030ರ ಆಶಯದಂತೆ ಮಣ್ಣಿನ ಆರೋಗ್ಯ ಸುಧಾರಣೆ ಮತ್ತು ಸುಸ್ಥಿರ ಕೃಷಿಗೆ ನೆರವಾಗಲು, ರೈತರನ್ನು ಸಬಲೀಕರಣಗೊಳಿಸಲು ಮತ್ತು ಮಣ್ಣಿನ ಆರೋಗ್ಯವನ್ನು ಕಾಪಾಡಲು ಇನ್ನಷ್ಟು ಕಾರ್ಪೊರೇಟ್ ಸಂಸ್ಥೆಗಳು ಪಾಲುದಾರರಾಗಿ ನಮ್ಮೊಂದಿಗೆ ಕೈಜೋಡಿಸಲು ಆಹ್ವಾನಿಸುತ್ತೇನೆ ಎಂದು ನಿಗಮದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಕಳೆದ ಮುಂಗಾರಿನಲ್ಲಿ ಯೂರಿಯಾ ಗೊಬ್ಬರಕ್ಕೆ ಅತೀ ಹೆಚ್ಚು ಬೇಡಿಕೆ ಬಂದಿದ್ದರಿಂದ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿತ್ತು. ಯುದ್ಧದ ಪರಿಣಾಮ ಈ ಬಾರಿಯ ಮುಂಗಾರಿನಲ್ಲಿ ರಸಗೊಬ್ಬರದ ಕೊರತೆ ಉಂಟಾಗುಯವ ಸಾಧ್ಯತೆ ಇರುವುದರಿಂದ ಕಾಂಪೋಸ್ಟ್ ಗೊಬ್ಬರವು ರೈತರಿಗೆ ನೆರವಾಗಲಿದೆ. ರೈತರು ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ದೀರ್ಘಕಾಲೀನ ಇಳುವರಿ ಮತ್ತು ಪರಿಸರ ಸ್ನೇಹಿ ಸಾವಯವ ಕೃಷಿ ಪದ್ಧತಿಗಳತ್ತ ಮರಳಲು ಇದು ಸಹಾಯ ಮಾಡಲಿದೆ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.



> **ಕಾಂಪೋಟ್ಸ್ ಗೊಬ್ಬರ ವಿತರಣೆ ಕುರಿತು ಸಿಎಂ ಮತ್ತು ಡಿಸಿಎಂ ಗಮನಕ್ಕೆ ತರಲಾಗಿದ್ದು, ತ್ಯಾಜ್ಯ ನಿರ್ವಹಣೆಗೆ ಪೌರಾಡಳಿತ ಮತ್ತು ನಗರಾಭಿವೃದ್ಧಿ ಇಲಾಖೆಯ ಸಹಯೋಗಬೇಕಿದೆ. ತಾಲ್ಲೂಕುಗಳಲ್ಲಿ 400 ರಿಂದ 500 ಟನ್ ಕಸ ಉತ್ಪಾದನೆಯಾಗುತ್ತಿದೆ.**
> ■ ಎ.ಎನ್. ನಟರಾಜ್ ಗೌಡ, ಅಧ್ಯಕ್ಷರು, ಕರ್ನಾಟಕ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ

ಬೆಂಗಳೂರಿನಲ್ಲಿ ದಿನಕ್ಕೆ 250 ಟನ್ ಹಸಿ ತ್ಯಾಜ್ಯ ಸಂಸ್ಕರಣೆ

ಬೆಂಗಳೂರು ನಗರವು ದಿನಕ್ಕೆ ಸುಮಾರು 5,000 ಟನ್ ಘನತ್ಯಾಜ್ಯವನ್ನು ಉತ್ಪತ್ತಿಯಾಗುತ್ತಿದ್ದು, ಅದರಲ್ಲಿ ಸುಮಾರು 1,500 ಟನ್ ಹಸಿತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಕೆಸಿಡಿಸಿ ಸಂಸ್ಥೆಯು ಪ್ರಸ್ತುತ ದಿನಕ್ಕೆ 250 ಟನ್ ಹಸಿ ತ್ಯಾಜ್ಯವನ್ನು ಸ್ವೀಕರಿಸುತ್ತಿದ್ದು, ಇದನ್ನು ಸಂಸ್ಕರಿಸಿ ಅಪ್ಪಟ ಸಾವಯವ ಗೊಬ್ಬರವನ್ನು ತಯಾರಿಸುತ್ತಿದೆ. ಗ್ರೇಟರ್ ಬೆಂಗಳೂರು ಐಟಿ ಕಂಪನಿ ಮತ್ತು ಕೈಗಾರಿಕಾ ಅಸೋಷಿಯಯನ್ ಜೊತೆಗೆ ಕೆಸಿಡಿಸಿಎಲ್ ಒಪ್ಪಂದ ಮಾಡಿಕೊಂಡಿದ್ದು, ಈ ಸಂಸ್ಥೆಯು ಕಾಂಪೋಸ್ಟ್ ಗೊಬ್ಬರವನ್ನು ಪ್ರತಿ ಟನ್‌ಗೆ 3,300 ರಂತೆ ಖರೀದಿಸಿ, ಸರಬರಾಜು ಮಾಡುತ್ತಿದೆ. ಪ್ರತಿ ತಿಂಗಳು 100 ಟನ್ ಗೊಬ್ಬರ ಖರೀದಿಸುತ್ತಿದೆ.

ಮಹಿಳಾ ಮೀಸಲಾತಿಗೆ ಬಿಜೆಪಿ ಆದ್ಯತೆ: ಸಂಸದ

ಬೆಂಗಳೂರು: 1992 ರಿಂದ ಮಹಿಳಾ ಮೀಸಲಾತಿ ಮಸೂದೆ ಬಗ್ಗೆ ಚರ್ಚೆ ನಡೆಯುತ್ತಿದೆ. ಮೀಸಲಾತಿ ವಿಚಾರದಲ್ಲಿ ಆಗಿನಿಂದಲೂ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಆದಷ್ಟು ಬೇಗ ಕೊಡಬೇಕು ಎಂಬುದು ಬಿಜೆಪಿ ನಿಲುವು ಇದೆ. ಲೋಕಸಭೆಯಲ್ಲಿ ಈ ವಿಧೇಯಕ ಚರ್ಚೆಗೆ ಬಂದಾಗಲೆಲ್ಲಾ ಬಿಜೆಪಿ ಬೆಂಬಲಿಸಿದೆ ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಜೆ.ಪಿ.ನಗರದ ಆರ್.ವಿ.ಡೆಂಟಲ್ ಕಾಲೇಜಿನ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಬೆಂಗಳೂರು ಮಹಾನಗರ ಸಬಲ ನಾರಿ– ಸಮರ್ಥ ಭಾರತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಹಿಳಾ ಮೀಸಲಾತಿ ಮಸೂದೆಯನ್ನು ಕಾಂಗ್ರೆಸ್, 1992ರಿಂದ ಸೋಲಿಸುತ್ತಾ ಬರುತ್ತಿದೆ. ಅಂದಿನಿಂದ ಇಲ್ಲಿಯವರೆಗೆ ಮಹಿಳಾ ಮೀಸಲಾತಿ ಮಸೂದೆಯನ್ನು ಕಾಂಗ್ರೆಸ್ ಪಕ್ಷವು ಹೇಗಾದರೂ ಮಾಡಿ ಸೋಲಿಸುತ್ತಾ ಬರುತ್ತಿದೆ. ಲಾಲೂಪ್ರಸಾದ್, ಮುಲಾಯಂ ಸಿಂಗ್ ಮೂಲಕ ಸೋಲಿಸಿದ್ದರು. ಅವರೆಲ್ಲಾ ಇನ್ನೊಮ್ಮೆ ಸೇರಿ ಲೋಕಸಭೆಯಲ್ಲಿ ಪ್ರತಿ ಹರಿದುಹಾಕಿದರು. ಬಿಜೆಪಿ ಸರ್ಕಾರ 2023ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು ಅಂಗೀಕಾರಗೊಳಿಸಿತ್ತು. 40 ವರ್ಷದಿಂದ ಬಾಕಿ ಇದ್ದ ಮಸೂದೆಯನ್ನು 2023ರಲ್ಲಿ ಲೋಕಸಭೆಯಲ್ಲಿ ಜಾರಿ ಮಾಡಿದ್ದು ಬಿಜೆಪಿ. ಬಿಜೆಪಿ ವಿಪಕ್ಷ ಆಗಿದ್ದಾಗಲ್ಲ ಮಹಿಳಾ ಮೀಸಲಾತಿಗೆ ಬೆಂಬಲಿಸಿದೆ ಎಂದು ತಿಳಿಸಿದರು.



ಶಾಸಕ ಸಿ.ಕೆ.ರಾಮಮೂರ್ತಿ ಮಾತನಾಡಿ, ವಿಧಾನಸಭೆಗಳು ಹಾಗೂ ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಕಲ್ಪಿಸುವ ನಾರೀಶಕ್ತಿ ವಂದನಾ ಮಸೂದೆಯನ್ನು ಲೋಕಸಭೆಯಲ್ಲಿ ಸೋಲಿಸಿರುವ ಕಾಂಗ್ರೆಸ್ ಸರ್ಕಾರಕ್ಕೆ ನಾಚಿಕೆಯಾಗಬೇಕು. ಮಹಿಳಾ ಮೀಸಲಾತಿ ವಿಧೇಯಕವನ್ನು ಬೆಂಬಲಿಸದೆ, ಕಾಂಗ್ರೆಸ್ ಪಕ್ಷ ಮಹಿಳಾ ವಿರೋಧಿ ಎಂಬುದನ್ನು ಮಸೂದೆಗೆ ವಿರುದ್ಧ ಮತಚಲಾಯಿಸುವ ಮೂಲಕ ಸಾಬೀತುಪಡಿಸಿದೆ ಎಂದರು.

ತೃತೀಯ ಭಾಷಾ ಪರೀಕ್ಷೆಗೆ ಅಂಕ: ಹೈಗೆ ಸರ್ಕಾರ ಅರ್ಜಿ

ಪುಟ ೧ ➜ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯುಎಫ್ (ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟು)ವಿಷಯಗಳಿಗೆ ಅಂಕದ ಬದಲು ಗ್ರೇಡ್ ನೀಡುವುದಾಗಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪರೀಕ್ಷೆ ನಡೆಯುತ್ತಿದ್ದ ಸಂದರ್ಭದಲ್ಲಿ (ಮಾ.28) ಪ್ರಕಟಿಸಿದ್ದರು. ಸರ್ಕಾರದ ಕ್ರಮ ಪ್ರಶ್ನಿಸಿ ಚಿಕ್ಕಮಗಳೂರಿನ ಸಹನಾ ಆರ್.ನಾಯ್ಕ್, ಉಡುಪಿಯ ಅನುಷಾ ಮತ್ತು ಸುಧೀಕ್ಷಾ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಏ.15ರಂದು ವಿಚಾರಣೆ ನಡೆಸಿದ್ದ ನ್ಯಾ.ಇ.ಎಸ್.ಇಂದಿರೇಶ್ ಅವರ ಪೀಠವು 2025-26ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಅಧಿಸೂಚನೆ ಹೊರಡಿಸಿದ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ನಿಯಮದಂತೆ ಮೌಲ್ಯಮಾಪನ ನಡೆಸಬೇಕು. ಹಿಂದಿ ಸೇರಿ ತೃತೀಯ ಭಾಷೆಗಳ ವಿಷಯಗಳಿಗೆ ಗ್ರೇಡ್ ಬದಲಾಗಿ ಅಂಕ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ಅರ್ಜಿ ಇತ್ಯರ್ಥ ಮಾಡಿತ್ತು.

ಈ ಆದೇಶವನ್ನು ಮರು ಪರಿಶೀಲಿಸುವಂತೆ ಕೋರಿ ಹೈಕೋರ್ಟ್‌ಗೆ ಸರ್ಕಾರವು ಮರು ಪರಿಶೀಲನಾ ಅರ್ಜಿ ಸಲ್ಲಿಸಿದೆ. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಿಯಮಗಳಿಗೆ ತಿದ್ದುಪಡಿ ತರಲು ಕರಡು ಅಧಿಸೂಚನೆಯನ್ನು ಏ.10ರಂದು ರಾಜ್ಯ ಸರ್ಕಾರ ತನ್ನ ವಿಶೇಷ ಗೆಜೆಟ್‌ನಲ್ಲಿ ಪ್ರಕಟಿಸಿದೆ. ಈ ಅಂಶವನ್ನು ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತರದೆ ಆದೇಶ ಪಡೆದುಕೊಂಡಿದ್ದಾರೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್‌ನ ವಿಭಾಗೀಯ ಪೀಠ ಈಗಾಗಲೇ ವಜಾಗೊಳಿಸಿ, ಅರ್ಜಿದಾರರಿಗೆ ಒಂದು ಲಕ್ಷ ರೂ. ದಂಡ ವಿಧಿಸಿತ್ತು. ಈ ವಿಷಯವನ್ನು ಪ್ರಸ್ತುತ ಅರ್ಜಿದಾರರು ನ್ಯಾಯಾಲಯದ ಗಮನಕ್ಕೆ ತರದೆ ಸತ್ಯಾಂಶ ಮರೆಮಾಚಿದ್ದಾರೆ ಎಂದು ಸರ್ಕಾರ ತನ್ನ ಮರು ಪರಿಶೀಲನಾ ಅರ್ಜಿಯಲ್ಲಿ ಪ್ರತಿಪಾದಿಸಿದೆ.

ಮೂಲ ಅರ್ಜಿ ಸಂಬಂಧ ನ್ಯಾಯಾಲಯಕ್ಕೆ ತನ್ನ ಆಕ್ಷೇಪಣೆ ಸಲ್ಲಿಸಲು ಸರ್ಕಾರಕ್ಕೆ ಅವಕಾಶವನ್ನೇ ನೀಡಿಲ್ಲ, ಅರ್ಜಿದಾರರು ಕರಡು ಅಧಿಸೂಚನೆಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದು ಸರ್ಕಾರ ಆಕ್ಷೇಪಿಸಿದೆ. ಹಿಂದಿ ಸೇರಿ ಎಲ್ಲಾ ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯುಎಫ್ ವಿಷಯಗಳಲ್ಲಿ 80ಕ್ಕಿಂತ ಅಧಿಕ ಅಂಕ ಪಡೆದರೆ ಎ ಶ್ರೇಣಿ, 50ರಿಂದ 79 ಅಂಕ ಪಡೆದರೆ ಬಿ ಶ್ರೇಣಿ, 49 ಕ್ಕಿಂತ ಕಡಿಮೆ ಅಂಕ ಪಡೆದರೆ ಸಿ ಶ್ರೇಣಿ ಎಂದು ಗ್ರೇಡ್ ನೀಡಲಾಗುತ್ತದೆ. ಆದರೆ, ಯಾವುದೇ ವಿದ್ಯಾರ್ಥಿಯನ್ನು ಅನುತ್ತೀರ್ಣ ಮಾಡುವುದಿಲ್ಲ ಎಂದು ಅರ್ಜಿಯಲ್ಲಿ ಸರ್ಕಾರ ವಿವರಿಸಿದೆ.

ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ ನಡುವೆ ಸಮಾನ ಅವಕಾಶ ಕಲ್ಪಿಸಲು ಹಾಗೂ ಪರೀಕ್ಷಾ ಒತ್ತಡವನ್ನು ಕಡಿಮೆ ಮಾಡಲು ತೃತೀಯ ಭಾಷೆ ಮತ್ತು ಎನ್‌ಎಸ್‌ಕ್ಯುಎಫ್ ವಿಷಯಗಳಿಗೆ ಅಂಕಗಳ ಬದಲಾಗಿ ಗ್ರೇಡ್ ನೀಡಲು ಉದ್ದೇಶಿಸಲಾಗಿದೆ. ಅಂಕದ ಬದಲು ಗ್ರೇಡ್ ನೀಡುವುದು ಸುಧಾರಣಾ ಕ್ರಮವಾಗಿದೆ. ಇದು ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಗಿದೆ. ಸರ್ಕಾರದ ನಡೆಯಿಂದ ತೃತೀಯ ಭಾಷೆ ತಿರಸ್ಕಾರಕ್ಕೆ ಒಳಗಾಗುತ್ತದೆ ಎಂಬ ವಾದದಲ್ಲಿ ಹುರುಳಿಲ್ಲ, ಆದ್ದರಿಂದ ಏ.15ರಂದು ಹೊರಡಿಸಿರುವ ಆದೇಶವನ್ನು ಮರು ಪರಿಶೀಲಿಸಬೇಕು ಎಂದು ಸರ್ಕಾರ ತನ್ನ ಅರ್ಜಿಯಲ್ಲಿ ನ್ಯಾಯಾಲಯವನ್ನು ಕೋರಿದೆ.

ಮಹಿಳೆಯರಿಗೆ ಮೋಸ

ಪುಟ ೧ ➜ ಯಾವುದೇ ಶಕ್ತಿಗೂ ಇದನ್ನು ತಡೆಯಲು ಸಾಧ್ಯವಿಲ್ಲ ಎಂದ ಅವರು, ಡಿಎಂಕೆ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದರು. ಅಲ್ಲದೆ, ಚುನಾವಣೆಯಲ್ಲಿ ಅದಕ್ಕೆ ತಕ್ಕ ಪಾಠ ಕಲಿಸಲು ಮತದಾರರಿಗೆ ಮನವಿ ಮಾಡಿದರು.

ವಿಪಕ್ಷಗಳಿಂದ ಸಂಚು: ಈರೋಡ್‌ನಲ್ಲಿ ನಡೆದ ರೋಡ್‌ಶೋದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಕಾಂಗ್ರೆಸ್ ಮತ್ತು ಡಿಎಂಕೆ ವಿರುದ್ಧ ವಾಗ್ದಾಳಿ ನಡೆಸಿದರು. ಮಹಿಳೆಯರಿಗೆ ಸಂಸತ್ತು ಮತ್ತು ವಿಧಾನಸಭೆಗಳಲ್ಲಿ ಮೀಸಲಾತಿ ಸಿಗದಂತೆ ಮಾಡಲು ಈ ಪಕ್ಷಗಳು ಸಂಚು ರೂಪಿಸಿವೆ ಎಂದು ಆರೋಪಿಸಿದರು. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ಮಹಿಳೆಯರಿಗೆ ನ್ಯಾಯ ಒದಗಿಸುತ್ತದೆ.

ಈ ಸಂಚು ಯಶಸ್ವಿಯಾಗಲು ನಾವು ಅವಕಾಶ ಕೊಡುವುದಿಲ್ಲ ಎಂದು ಶಾ ಹೇಳಿದರು. ತಮಿಳುನಾಡಿನಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಎಂಬ ವಿಶ್ವಾಸವನ್ನೂ ವ್ಯಕ್ತಪಡಿಸಿದರು. ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವುದರ ಜತೆಗೆ ಲೋಕಸಭಾ ಸದಸ್ಯರ ಸಂಖ್ಯೆಯನ್ನು 816ಕ್ಕೆ ಹೆಚ್ಚಿಸುವ ಪ್ರಸ್ತಾವವಿದ್ದ ಈ ತಿದ್ದುಪಡಿ ಮಸೂದೆಗೆ ಶುಕ್ರವಾರ ಸಂಸತ್ತಿನಲ್ಲಿ ಸೋಲಾಗಿದೆ.

ರಾಜ್ಯಗಳ ಪ್ರಾತಿನಿಧ್ಯ ಹೆಚ್ಚಳ

2011ರ ಜನಗಣತಿ ಪರಿಗಣಿಸಿದರೆ ತಮಿಳುನಾಡಿನಲ್ಲಿ ಕೇವಲ 10 ಸೀಟು ಹೆಚ್ಚಾಗಬೇಕಿತ್ತು. ಆದರೆ, ಅದು 59 ಆಗಲಿದೆ. ಕರ್ನಾಟಕದಲ್ಲೂ 28 ಇದ್ದದ್ದು 42 ಆಗಲಿದೆ. ಮಹಿಳೆಯರು, ಎಸ್ಸಿ-ಎಸ್ಟಿಗಳ ಪ್ರಾತಿನಿಧ್ಯ ಹೆಚ್ಚಾಗಲಿದೆ. ರಾಜ್ಯಗಳ ಪ್ರಾತಿನಿಧ್ಯವೂ ಹೆಚ್ಚಾಗುತ್ತದೆ. ಈಗ ಕೆಲವು ಕ್ಷೇತ್ರಗಳು 39 ಲಕ್ಷದಷ್ಟು ಮತದಾರರನ್ನು ಹೊಂದಿವೆ. ಇನ್ನೂ ಕೆಲವು ಸುಮಾರು 2 ಲಕ್ಷ ಮತದಾರರನ್ನು ಹೊಂದಿವೆ ಎಂದು ಠಾಕೂರ್ ತಿಳಿಸಿದರು.

ಮೂಢನಂಬಿಕೆ ಬಿಡಿ ದೇವರಪೂಜೆ ಮಾಡಿ

ಪುಟ ೧ ➜ ನಮ್ಮ ಸರ್ಕಾರ ಸರ್ವ ಜನಾಂಗದ ಶಾಂತಿಯ ತೋಟವಾಗಿಸಬೇಕೆನ್ನುವ ಉದ್ದೇಶ ಹೊಂದಿದೆ ಎಂದರು.

ನೀರಿನ ಕೊರತೆ ನೀಗಿಸಲು ಸೂಚನೆ: ಈ ಬಾರಿ ಮಳೆ ಕೊರತೆಯಾಗಲಿದೆ ಎಂಬ ಮುನ್ಸೂಚನೆಯಿದ್ದು, ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಗಿದೆ. ರಾಣೇಬೆನ್ನೂರಿನ ವರ್ತುಲ ರಸ್ತೆ ಹಾಗೂ ಸಮುದಾಯ ಭವನಕ್ಕೆ ಅನುದಾನ ನೀಡುವ ಭರವಸೆ ನೀಡಿದರು. ಈ ವೇಳೆ ವಿಧಾನಸಭೆಯ ಉಪಸಭಾಪತಿ ರುದ್ರಪ್ಪ ಲಮಾಣಿ, ಶಾಸಕರಾದ ಬಸವರಾಜ ಶಿವಣ್ಣನವರ, ಯು.ಬಿ.ಬಣಕಾರ, ಪ್ರಕಾಶ ಕೋಳಿವಾಡ, ಯಾಸೀರಖಾನ ಪಠಾಣ, ಹೆಸ್ಕಾಂ ಅಧ್ಯಕ್ಷ ಅಜ್ಜಂಪೀರ ಖಾದ್ರಿ, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಮೊದಲಾದವರು ಉಪಸ್ಥಿತರಿದ್ದರು.

ಇಂಡಿ ಒಕ್ಕೂಟದ ಮಾನಸಿಕ ಸ್ಥಿತಿ ಅನಾವರಣ: ಸಂಸದ ಅನುರಾಗ್

ಪುಟ ೧ ➜ ಆದರೆ, ಮಸೂದೆ ಮತಕ್ಕೆ ಹಾಕಿದಾಗ ಕಾಂಗ್ರೆಸ್ಸಿನವರು ಮಹಿಳೆಯರಿಗೆ ಹಿಂದಿನಿಂದ ಬಂದು ಚೂರಿಯಿಂದ ಇರಿಯುವ ಕೆಲಸ ಮಾಡಿದ್ದಾರೆ. ಮಹಿಳೆ ಯರಿಗೆ ರಾಜಕೀಯ ಪ್ರಾತಿನಿಧ್ಯವು ಸಹಜ ಹಕ್ಕಾಗಿದೆ. ಈ ಹಕ್ಕು ನೀಡುವಲ್ಲಿ ವಿಳಂಬವಾಗಿದ್ದು, ಇದಕ್ಕೆ ಕಾಂಗ್ರೆಸ್ ಮತ್ತಿತರ ಪಕ್ಷಗಳೇ ಕಾರಣ ಎಂದು ದೂರಿದರು.

ಜಾತಿ, ಮತದ ಆಧಾರದಲ್ಲಿ ಒಡೆಯಲು ಯತ್ನಿಸುತ್ತಿದ್ದ ಕಾಂಗ್ರೆಸ್ಸಿಗರು ಇದೀಗ ಪ್ರಾದೇಶಿಕವಾಗಿ ಒಡಕು ಮೂಡಿಸಲು ಯತ್ನಿಸುತ್ತಿದ್ದಾರೆ. ಕ್ಷೇತ್ರ ಪುನರ್ ವಿಂಗಡಣೆಯೂ ಅತ್ಯಂತ ಮಹತ್ವದ್ದಾಗಿದೆ. ಮಹಿಳಾ ಮೀಸಲಾತಿಗೆ ನಿರಂತರ ಪ್ರಯತ್ನ ನಡೆದಿತ್ತು. ಅಲ್ಲದೇ ಕಾಂಗ್ರೆಸ್ ಈ ವಿಚಾರದಲ್ಲಿ ಮಹಿಳೆಯರಿಗೆ ಮೋಸ ಮಾಡುತ್ತಲೇ ಬಂದಿದೆ ಎಂದು ತಿಳಿಸಿದರು.

ವಿಧಾನಪರಿಷತ್ ಸದಸ್ಯೆ ಭಾರತಿ ಶೆಟ್ಟಿ, ಬಿಜೆಪಿ ರಾಜ್ಯ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್, ರಾಜ್ಯ ವಕ್ತಾರೆ ಕು. ಸುರಭಿ ಹೊದಿಗೆರೆ, ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷೆ ವಿಜಯಲಕ್ಷ್ಮೀ ಆನಂದ್ ಉಪಸ್ಥಿತರಿದ್ದರು.

ಇರಾನ್‌ಗೆ ಟ್ರಂಪ್ ಮತ್ತೆ ಬೆದರಿಕೆ



ಪುಟ ೧ ➜ ಲೆಬನಾನ್‌ನಲ್ಲಿ ಕದನ ವಿರಾಮದ ನಂತರ ಇರಾನ್ ಈ ಹಿಂದೆ ಜಲಸಂಧಿಯನ್ನು ಮುಕ್ತಗೊಳಿಸುವುದಾಗಿ ಘೋಷಿಸಿತ್ತಾದರೂ, ಟ್ರಂಪ್ ಬಂದರು ದಿಗ್ಬಂಧನವನ್ನು ಮುಂದು ವರಿಸಿದ ನಂತರ ಆ ನಿರ್ಧಾರವನ್ನು ಹಿಂತೆಗೆದುಕೊಂಡಿತ್ತು. ಯುಎಸ್ ತನ್ನ ದಿಗ್ಬಂಧನವನ್ನು ತೆರವುಗೊಳಿಸುವವರೆಗೆ ಜಲಸಂಧಿಯ ಸಂಚಾರ ಸೀಮಿತವಾಗಿರುತ್ತದೆ ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ತಿಳಿಸಿದ್ದಾರೆ.

ಸಂಧಾನದ ಸ್ಥಿತಿ: ಮಾತುಕತೆಯಲ್ಲಿ ಪ್ರಗತಿಯಾಗಿದ್ದರೂ ಮೂಲಭೂತ ಅಂತರಗಳು ಹಾಗೇ ಉಳಿದಿವೆ ಮತ್ತು ಅಂತಿಮ ಒಪ್ಪಂದವು ಸದ್ಯಕ್ಕೆ ಅಸಾಧ್ಯ ಎಂದು ಘಾಲಿಬಾಫ್ ದೃಢಪಡಿಸಿದರು. ಎರಡು ವಾರಗಳ ಕದನ ವಿರಾಮ ಈ ಬುಧವಾರದಂದು ಮುಕ್ತಾಯಗೊಳ್ಳಲಿದೆ. ಈ ಜಲಮಾರ್ಗ ಮುಚ್ಚಿರುವುದರಿಂದ ಇರಾನ್‌ಗೆ ಪ್ರತಿದಿನ 500 ಮಿಲಿಯನ್ ಡಾಲರ್ ನಷ್ಟವಾಗುತ್ತಿದೆ ಎಂದು ಟ್ರಂಪ್ ಅಂದಾಜಿಸಿದ್ದಾರೆ.

ಕೆ.ಆರ್.ನಗರದಲ್ಲಿ ಆರು ಮಂದಿ ಕಾವೇರಿ ಪಾಲು

ಪುಟ ೧ ➜ ಮರಣೋತ್ತರಪರೀಕ್ಷೆಬಳಿಕಮೃತದೇಹಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ತಲಾ 5 ಲಕ್ಷ ರೂ. ಪರಿಹಾರ: 6 ಮಂದಿ ಮೃತಪಟ್ಟಿರುವ ವಿವರ ಪಡೆದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೃತರ ಕುಟುಂಬಸ್ಥರಿಗೆ ತಲಾ 5ಲಕ್ಷ ರೂ. ನೀಡುವುದಾಗಿ ಘೋಷಿಸಿದ್ದಾರೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ಸಹಾಯಧನದ ಜತೆಗೆ ನಾನು ವೈಯಕ್ತಿಕವಾಗಿ ಮೃತರ ಕುಟುಂಬಸ್ಥರಿಗೆ ತಲಾ 50 ಸಾವಿರ ರೂಪಾಯಿ ನೀಡುವುದಾಗಿ ಹೇಳಿದರು.

ದೇಶ ನಿಷ್ಠೆ ಇರಲಿ: ಹೊಸಬಾಳೆ

ಪುಟ ೧ ➜ ಈ ನಿಲುವನ್ನು ಅವರು ವಸುಧೈವ ಕುಟುಂಬಕಂ ತತ್ವದೊಂದಿಗೆ ಜೋಡಿಸಿ, ಜಗತ್ತಿನ ಎಲ್ಲರೂ ಒಂದೇ ಕುಟುಂಬವೆಂಬ ಭಾರತೀಯ ಮೌಲ್ಯವನ್ನು ಕೇವಲ ಘೋಷಣೆಯಾಗಿ ಅಲ್ಲ, ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಮೌಲ್ಯವಾಗಿ ನೋಡಬೇಕು ಎಂದರು.



ಇದೇ ವೇಳೆ, ಸ್ಥಳೀಯ ಸಮಾಜದೊಂದಿಗೆ ಹೊಂದಾಣಿಕೆ ಸಾಧಿಸುವುದು ಹಾಗೂ ಭಾರತೀಯ ನಾಗರಿಕತೆಯೊಂದಿಗೆ ನಂಟು ಉಳಿಸಿಕೊಳ್ಳುವುದು ಎಂಬ ದ್ವಿಮುಖಿ ದೃಷ್ಟಿಕೋನವನ್ನು ಸಂಘ ಅನುಸರಿಸುತ್ತಿದೆ ಎಂದರು. ವಿದೇಶಗಳಲ್ಲಿ ಕಾರ್ಯನಿರ್ವಹಿಸುವ ಸ್ವಯಂಸೇವಕರು ಸ್ಥಳೀಯ ಹಿಂದು ಸಮುದಾಯವನ್ನು ಸಂಘಟಿಸುವುದರ ಜತೆಗೆ ಸಮಾಜದ ಸಮಗ್ರ ಅಭಿವೃದ್ಧಿಗೂ ಕೈಜೋಡಿಸುತ್ತಿದ್ದಾರೆ ಎಂದು ಅವರು ವಿವರಿಸಿದರು.

ಜಾಗತಿಕ ಮಟ್ಟದಲ್ಲಿ ಆರ್‌ಎಸ್‌ಎಸ್ ಪಾತ್ರ ವಿವರಿಸಿದ ಅವರು, 'ಮಾನವೀಯ ಮೌಲ್ಯಗಳು ಮತ್ತು ಸಂಘಟನಾ ಶಿಸ್ತಿನ ಮೂಲಕ ಮಾನವ ಸಂಪತ್ತು ನಿರ್ಮಿಸುವುದು ನಮ್ಮ ಉದ್ದೇಶ' ಎಂದು ಹೇಳಿದರು. ಈ ಮಾದರಿ ವಿಶ್ವದ ಎಲ್ಲ ಭಾಗಗಳಲ್ಲಿ ಅನುಸರಿಸಬಹುದಾದದ್ದು ಎಂದು ಅವರು ಅಭಿಪ್ರಾಯಪಟ್ಟರು.

ಪಟಾಕಿ ಘಟಕದಲ್ಲಿ ಭಾರೀ ಸ್ಫೋಟ: 18 ಮಂದಿ ಬಲಿ

ಪುಟ ೧ ➜ ವಿರುಧುನಗರ್ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಪಟಾಕಿ ಕಾರ್ಖಾನೆಯಲ್ಲಿ ಕಾರ್ಮಿಕರು ರಾಸಾಯನಿಕಗಳ ನಿರ್ವಹಣೆ ಮಾಡುತ್ತಿದ್ದ ಸಂದರ್ಭದಲ್ಲಿ ಕಾರ್ಖಾನೆ ಮುಂಭಾಗ ಸ್ಫೋಟ ಸಂಭವಿಸಿದೆ. ಈ ಕಾರ್ಖಾನೆ ನಾಗ್ಪುರದ ಪೆಟ್ರೋಲಿಯಂ ಮತ್ತು ಸ್ಫೋಟಕಗಳ ಸುರಕ್ಷತೆ ಸಂಸ್ಥೆ (ಪಿಇಎಸ್‌ಒ) ಯಿಂದ ಪರವಾನಗಿ ಪಡೆದಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ. ದುರಂತ ವೇಳೆ ಕಾರ್ಖಾನೆಯೊಳಗೆ 100ಕ್ಕೂ ಹೆಚ್ಚು ಕಾರ್ಮಿಕರಿದ್ದರು. ಸ್ಫೋಟದ ತೀವ್ರತೆಗೆ ಮೂರು ಕೊಠಡಿಗಳು ಸುಟ್ಟು ಕರಕಲಾಗಿವೆ. ಸಮೀಪದ ಕಟ್ಟಡವೂ ನೆಲಸಮವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂಡಿ ಒಕ್ಕೂಟಕ್ಕೆ ಜಯ

ಬೆಂಗಳೂರು: ತರಾತುರಿಯಲ್ಲಿ ಸಂವಿಧಾನ ತಿದ್ದುಪಡಿ ಮಾಡಲು ಹೋದ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಮುಖಭಂಗವಾಗಿದೆ. ಇದು ಇಂಡಿಯಾ ಒಕ್ಕೂಟದ ಜಯವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು. ಭಾನುವಾರ ತಮ್ಮ ನಿವಾಸದ ಬಳಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಅವರು ಹಾಗೂ ಕ್ಷೇತ್ರ ವಿಂಗಡಣೆ ವಿರುದ್ಧ ಪ್ರತಿಭಟಿಸಿದ ದಕ್ಷಿಣ ಭಾರತದ ಎಲ್ಲಾ ಮುಖ್ಯಮಂತ್ರಿಗಳ ಹೋರಾಟಕ್ಕೆ, ಪ್ರಜಾಪ್ರಭುತ್ವಕ್ಕೆ ಸಿಕ್ಕಂತಹ ದೊಡ್ಡ ಜಯ. ಮಹಿಳೆಯರ ಪರವಾಗಿ ಕಾಂಗ್ರೆಸ್ ಪಕ್ಷ ಹಾಗೂ ಇಂಡಿಯಾ ಒಕ್ಕೂಟ ನಿಂತಿದೆ. ಇಲ್ಲಿ ಯಾರಿಗೂ ಅವಮಾನವಾಗಿಲ್ಲ ಎಂದರು. ಬಿಲ್ ಸೋಲುತ್ತದೆ ಎಂದು ಗೊತ್ತಿದ್ದರೂ ತಂದವರು, ಬಿಜೆಪಿಗರೆ ಮಹಿಳಾ ವಿರೋಧಿಗಳು. ಸಂವಿಧಾನ ತಿದ್ದುಪಡಿ ಮಾಡುವಾಗ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿತ್ತು ಎಂದರು.

ಕರೆದು ಚರ್ಚೆ ಮಾಡಬೇಕಿತ್ತು

ಈ ಹಿಂದೆ ರಾಜೀವ್ ಗಾಂಧಿಯವರು ಶೇ.50 ರಷ್ಟು ಮೀಸಲಾತಿ ತಂದಿದ್ದರು. ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ರಾಜ್ಯಸಭೆಯಲ್ಲಿ ಮಹಿಳಾ ಮೀಸಲಾತಿ ಬಿಲ್ ಪಾಸ್ ಆಗಿತ್ತು. ಈ ಬಿಲ್ ಅಡಿಯಲ್ಲಿ ದಕ್ಷಿಣ ಭಾರತದ ಕ್ಷೇತ್ರಗಳನ್ನು ಕತ್ತರಿಸಿ ಉತ್ತರ ಭಾರತದ ಕ್ಷೇತ್ರಗಳನ್ನು ಹೆಚ್ಚು ಮಾಡಲು ಹೊರಟಿರುವುದು ಸರಿಯಲ್ಲ, ಇದನ್ನು ಸಹಿಸಲು ಸಾಧ್ಯವಿಲ್ಲ, ನಮ್ಮನ್ನೆಲ್ಲಾ ಕರೆದು ಚರ್ಚೆ ಮಾಡಬೇಕಿತ್ತು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳ ಜೊತೆ ಚರ್ಚೆ ನಡೆಸಬೇಕಿತ್ತು. ಚುನಾವಣೆ ನಡೆಯುತ್ತಿರುವ ಹೊತ್ತಿನಲ್ಲೇ ತರುವ ಪ್ರಮೇಯವೇನಿತ್ತು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಆಕ್ಷೇಪಿಸಿದರು.

ರಾಜ್ಯದ ಹಲವೆಡೆ ಇಂದು ಮಳೆ

ಬೆಂಗಳೂರು: ದಕ್ಷಿಣ ಕನ್ನಡ, ಬೆಳಗಾವಿ, ಶಿವಮೊಗ್ಗ ಸೇರಿದಂತೆ ರಾಜ್ಯದ 14 ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಏ.20 ರಂದು ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಹಾಗೂ ಹಾಸನ ಜಿಲ್ಲೆಗಳ ಒಂದೆರಡು ಕಡೆ ಗುಡುಗು ಸಹಿತ ಮಳೆ ಹಾಗೂ ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಬೀದರ್, ಧಾರವಾಡ, ಗದಗ, ವಿಜಯಪುರ ಮತ್ತು ಕಲಬುರಗಿ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಗುಡುಗು ಸಹಿತ ಮಳೆಯಾಗಲಿದ್ದು, ಬಿರುಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ 14 ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಘೋಷಣೆ ಮಾಡಿದೆ. ಕರಾವಳಿ ಭಾಗದ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಒಂದೆರಡು ಕಡೆಗಳಲ್ಲಿ ಹಗುರ ಮಳೆಯಾಗಬಹುದು ಎಂದು ವರದಿಯಲ್ಲಿ ತಿಳಿಸಲಾಗಿದೆ.

ಕಲಬುರಗಿಯಲ್ಲಿ ಭಾನುವಾರ ಅತ್ಯಧಿಕ 42 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ರಾಯಚೂರಿನಲ್ಲಿ 41.4 ಡಿಗ್ರಿ ಸೆಲ್ಸಿಯಸ್, ಬೀದರ್‌ನಲ್ಲಿ 41.2 ಡಿಗ್ರಿ, ಕೊಪ್ಪಳದಲ್ಲಿ 39.9 ಡಿಗ್ರಿ, ವಿಜಯಪುರದಲ್ಲಿ 39.6 ಡಿಗ್ರಿ, ಬಾಗಲಕೋಟೆ ಹಾಗೂ ಗದಗದಲ್ಲಿ 39.2 ಡಿಗ್ರಿ, ಬೆಂಗಳೂರು ನಗರದಲ್ಲಿ 37 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಜತೆಗೆ ಬಿಸಿಲಿನ ನಡುವೆಯೂ ಅಲ್ಲಲ್ಲಿ ತಂಪಾದ ಗಾಳಿಯ ಅನುಭವವಾಗಬಹುದು. ಹಗಲಿನಲ್ಲಿ ಶೇ.10ರಷ್ಟು ಮತ್ತು ರಾತ್ರಿಯ ವೇಳೆಗೆ ಶೇ.15ರಷ್ಟು ಮಳೆಯಾಗುವ ಅತ್ಯಲ್ಪ ಸಂಭವವಿದ್ದು, ರಾತ್ರಿಯ ಸಮಯದಲ್ಲಿ ಭಾಗಶಃ ಮೋಡ ಕವಿದ ವಾತಾವರಣವಿರಲಿದೆ. ಗಾಳಿಯು ದಕ್ಷಿಣ ದಿಕ್ಕಿನಿಂದ ಗಂಟೆಗೆ 7 ಮೈಲಿ ವೇಗದಲ್ಲಿ ಬೀಸಲಿದೆ ಎಂದು ತಿಳಿಸಿದೆ.

3 ದಿನ ಮಳೆ ಮುನ್ಸೂಚನೆ
ಕರ್ನಾಟಕದ ಕರಾವಳಿ ಭಾಗದ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆಯಿದ್ದು, ಕರಾವಳಿಯಲ್ಲಿ ಏ.20 ರಿಂದ 3 ದಿನ ಮಳೆಯಾಗುವ ಮುನ್ಸೂಚನೆ ಇದೆ. ಟ್ರಫ್ ಹಿನ್ನೆಲೆ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಆಲಿಕಲ್ಲು ಮಳೆಯಾಗಬಹುದು ಎಂದು ವರದಿ ತಿಳಿಸಿದೆ.

ತಂಪೆರೆದ ಮಳೆ



ಬಿಸಿಲಿನಿಂದ ಬಸವಳಿದಿದ್ದ ಧಾರವಾಡ ನಗರದ ಜನತೆಗೆ ಭಾನುವಾರ ಸುರಿದ ಮಳೆ ತಂಪೆರೆದಿದ್ದು, ರಸ್ತೆಯೊಂದರಲ್ಲಿ ವಾಹನ ಸವಾರರು ನೀರಿನ ಮಧ್ಯೆ ಸಂಚರಿಸಿದ ಪರಿ ಗಮನ ಸೆಳೆಯಿತು.

ಸದ್ಯದಲ್ಲೇ ಮದ್ಯದ ದರ ಹೆಚ್ಚಳ?

ಬೆಂಗಳೂರು: ಮದ್ಯಪ್ರಿಯರಿಗೆ ರಾಜ್ಯ ಸರ್ಕಾರ ಶಾಕ್ ನೀಡಿದ್ದು, ಮದ್ಯದಲ್ಲಿರುವ ಆಲ್ಕೋಹಾಲ್ ಪ್ರಮಾಣವನ್ನು ಆಧರಿಸಿ ತೆರಿಗೆ ವಿಧಿಸುವ ಹೊಸ ವ್ಯವಸ್ಥೆ ಜಾರಿಗಾಗಿ ಸರ್ಕಾರವು ಕರಡು ಅಧಿಸೂಚನೆಯನ್ನು ಪ್ರಕಟಿಸಿದೆ.

ವಿಸ್ಕಿ, ರಮ್, ಜಿನ್ ಹಾಗೂ ಬ್ರಾಂದಿಗಳ ಎಂಆರ್‌ಪಿ ಬೆಲೆಯು ಕನಿಷ್ಠ ಶೇ.20ರಷ್ಟು ಹೆಚ್ಚಾಗಲಿದೆ. ಪ್ರಸ್ತುತ ಮದ್ಯದ ಬಾಟಲಿಯ ಬೆಲೆ ಅಥವಾ ಸ್ಲ್ಯಾಬ್‌ಗಳ ಆಧಾರದ ಮೇಲೆ ತೆರಿಗೆ ವಿಧಿಸಲಾಗುತ್ತಿದೆ. ಆದರೆ, ಹೊಸ ಅಬಕಾರಿ ನೀತಿಗೆ ತಂದಿರುವ ತಿದ್ದುಪಡಿ ಯಲ್ಲಿ ಆಲ್ಕೋಹಾಲ್-ಇನ್-ಬ್ರೇವರೇಜ್ (ಎಐಬಿ) ಆಧಾರಿತ ತೆರಿಗೆ ವಿಧಿಸಲು ನಿರ್ಧರಿಸ ಲಾಗಿದೆ.

ಹೊಸ ನೀತಿಯಲ್ಲಿ ಸ್ಲ್ಯಾಬ್‌ಗಳ ಸಂಖ್ಯೆಯನ್ನು 16 ರಿಂದ 8ಕ್ಕೆ ಇಳಿಸಲಾಗಿದೆ. ಬಡ ಹಾಗೂ ಮಧ್ಯಮ ವರ್ಗದವರು ಆಲ್ಕೋಹಾಲ್ ಪ್ರಮಾಣ ಶೇ. 42.8ರಷ್ಟು ಇರುವ ಮೊದಲ 4 ಸ್ಲ್ಯಾಬ್‌ಗಳ ಮದ್ಯವನ್ನೇ ಹೆಚ್ಚಾಗಿ ಖರೀದಿಸುತ್ತಾರೆ. ಈ ಸ್ಲ್ಯಾಬ್‌ಗಳಲ್ಲಿ ಲಭ್ಯವಿರುವ 180 ಮಿಲಿ ಮದ್ಯದ ಬೆಲೆಯು 105 ರಿಂದ 110 ರೂ. ವರೆಗೆ ಹೆಚ್ಚಾಗುವ ಸಾಧ್ಯತೆಯಿದೆ. ಕಳೆದ ವರ್ಷವಷ್ಟೇ ಮೊದಲ ನಾಲ್ಕು ಸ್ಲ್ಯಾಬ್‌ಗಳ (180 ಮಿಲಿ) ಬೆಲೆಯನ್ನು 80 ರಿಂದ 95 ರೂ. ಗಳಿಗೆ ಏರಿಕೆ ಮಾಡಲಾಗಿತ್ತು. ಈಗ ಮತ್ತೆ ಬೆಲೆ ಏರಿಕೆಯಾದರೆ ಬಡ ಮತ್ತು ಮಧ್ಯಮ ವರ್ಗದವರ ಜೇಬಿಗೆ ಕತ್ತರಿ ಬೀಳಲಿದೆ.

ಪ್ರೀಮಿಯಂ ಮದ್ಯ ಮಾರಾಟ ಹೆಚ್ಚಳಕ್ಕೆ ಒತ್ತು
ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಯ ಮದ್ಯದ ಮಾರಾಟ ಪ್ರಮಾಣ ಶೇ.90ರಷ್ಟಿದ್ದರೆ, ದುಬಾರಿ ಬೆಲೆಯ ಪ್ರೀಮಿಯಂ ಬ್ರಾಂಡ್ ಲಿಕ್ಕರ್ ಪ್ರಮಾಣ ಕೇವಲ ಶೇ.10ರಷ್ಟಿದೆ. ಮದ್ಯ ಮಾರಾಟ ತೆರಿಗೆ ಹಾಗೂ ಹೆಚ್ಚುವರಿ ತೆರಿಗೆಗಳನ್ನು ಈಗಾಗಲೇ ಗರಿಷ್ಠ ಮಟ್ಟದಲ್ಲಿ ವಿಧಿಸಲಾಗಿದೆ. ಇನ್ನು ಮುಂದೆ ತೆರಿಗೆ ಏರಿಸುವುದು ಕಷ್ಟಕರ ಎಂದು ತಿಳಿದ ಸರ್ಕಾರ, ಎಐಬಿ ಮೂಲಕ ಗ್ರಾಹಕರನ್ನು ಪ್ರೀಮಿಯಂ ಬ್ರಾಂಡ್ ಮದ್ಯ ಸೇವನೆಯತ್ತ ಪ್ರೋತ್ಸಾಹಿಸಲು ತೀರ್ಮಾನಿಸಿದೆ. ಶೇ.10ರಷ್ಟಿರುವ ಪ್ರೀಮಿಯಂ ಲಿಕ್ಕರ್ ಮಾರಾಟವನ್ನು ಶೇ.90ಕ್ಕೆ ಹೆಚ್ಚಿಸಿ, ಆ ಮೂಲಕ ಹೆಚ್ಚಿನ ಆದಾಯ ಗಳಿಸುವುದು ಸರ್ಕಾರದ ಗುರಿಯಾಗಿದೆ.

ಕಿರುಸುದ್ದಿ

105ನೇ ವರ್ಷದ ಸಂಭ್ರಮಕ್ಕೆ ಪಾರಂಪರಿಕ ಪ್ರದರ್ಶನ

ಮಂಗಳೂರು: ದಕ್ಷಿಣ ಭಾರತದ ಜವಳಿ ಪರಂಪರೆಯಲ್ಲಿ ಅಚ್ಚಳಿಯದ ಹೆಸರು ಹಾಗೂ ಅತ್ಯುತ್ತಮ ರೇಷ್ಮೆ ನೇಯ್ಗೆಗೆ ಹೆಸರುವಾಸಿಯಾದ ವಿಜಯಲಕ್ಷ್ಮಿ ಸಿಲ್ಕ್ಸ್ ಈಗ 105 ವರ್ಷಗಳ ಅದ್ಭುತ ಮೈಲಿಗಲ್ಲನ್ನು ತಲುಪಿದೆ. ಈ ಸಂಭ್ರಮದ ಅಂಗವಾಗಿ 'ಲೂಮ್, ಲೆಗಸಿ ಮತ್ತು ಲ್ಯಾಂಡ್‌ಮಾರ್ಕ್' ಎಂಬ ಐತಿಹಾಸಿಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ದಕ್ಷಿಣ ಭಾರತದ ಜನರು ತಲೆಮಾರುಗಳಿಂದ ರೇಷ್ಮೆಯನ್ನು ಹೇಗೆ ಖರೀದಿಸಿದರು, ಧರಿಸಿದರು ಮತ್ತು ಸಂರಕ್ಷಿಸಿದರು ಎಂಬುದನ್ನು ಬಿಂಬಿಸುವ ಒಂದು ಅಪರೂಪದ ಹಿನ್ನೋಟವಾದ ಈ ಪ್ರದರ್ಶನ ಬೆಂಗಳೂರಿನ 'ಸಭಾ'ದಲ್ಲಿ ಏಪ್ರಿಲ್ 23 ಮತ್ತು 24 ರಂದು ನಡೆಯುತ್ತದೆ. ಇದು ಕೇವಲ ಕೇವಲ ಸೀರೆಗಳ ಪ್ರದರ್ಶನವಲ್ಲ; ಬದಲಾಗಿ ಇದು ಸಾಂಸ್ಕೃತಿಕ, ಸಾಮಾಜಿಕ ಮತ್ತು ವಾಣಿಜ್ಯ ಇತಿಹಾಸದ ಜೀವಂತ ದಾಖಲೆಯಾಗಿದೆ ಎಂದು ಪ್ರಕಟಣೆ ಹೇಳಿದೆ. ಮಹಾರಾಜಕುಮಾರಿ ಕಾಮಾಕ್ಷಿ ದೇವಿ ಒಡೆಯರ್ ಮತ್ತು ರಾಜಕುಮಾರಿ ದರ್ಶಿಕಾ ಕುಮಾರಿ ಅವರ ವಿಶೇಷ ಸಂಗ್ರಹಗಳು ಈ ಪ್ರದರ್ಶನದ ಪ್ರಮುಖ ಆಕರ್ಷಣೆಯಾಗಿರಲಿವೆ. ರೇಷ್ಮೆಯ ವೈವಿಧ್ಯತೆ: ಕರ್ನಾಟಕದ ರೇಷ್ಮೆ ಕೃಷಿ ಸಂಪ್ರದಾಯಗಳು, ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ರಾಜಮನೆತನದ ನೇಯ್ಗೆ ಪರಂಪರೆ ಮತ್ತು ಕಾಂಚೀಪುರದ ದೇವಾಲಯಗಳ ಕಲೆ – ಇವೆಲ್ಲವೂ ಸೇರಿ ಹೇಗೆ 'ಹೆರಿಟೇಜ್ ಸಿಲ್ಕ್' (ಪರಂಪರೆಯ ರೇಷ್ಮೆ) ಎಂಬ ಹೆಸರನ್ನು ಪಡೆದವು ಎಂಬುದನ್ನು ಇಲ್ಲಿ ವಿವರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎಚ್‌ಡಿಡಿ ಪ್ರಯಾಣಕ್ಕೆ ಕಾರು ಖರೀದಿಗೆ ಒಪ್ಪಿಗೆ

ಬೆಂಗಳೂರು: ಮಾಜಿ ಪ್ರಧಾನಿ, ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಅವರಿಗೆ ಪ್ರಯಾಣಕ್ಕಾಗಿ ವೋಲ್ವೋ ಕಂಪನಿಯ ಐಷಾರಾಮಿ ಕಾರು ಖರೀದಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ. 1.25.ಕೋಟಿ ರೂ. ವೆಚ್ಚದಲ್ಲಿ ವೋಲ್ವೋ ಕಂಪನಿಗೆ ಸೇರಿದ ವೋಲ್ವೋ-ಎಕ್ಸ್‌ಸಿ 90 ಹೆಸರಿನ ಕಾರನ್ನು ಮೇ. ಮಾರ್ಷಲ್ ಮೋಟರ್ಸ್ ಪ್ರೈ.ಲಿ. ಅವರಿಂದ ಖರೀದಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ 4(ಜಿ) ಅಡಿ ವಿನಾಯಿತಿ ನೀಡಿ ಸರ್ಕಾರ ಆದೇಶ ಮಾಡಿದೆ.

ಮುಸ್ಲಿಂ ಯುವಕನಿಗೆ ಥಳಿತ

ಹುಬ್ಬಳ್ಳಿ: ಮಹಿಳೆಯೊಬ್ಬರಿಗೆ ಅನ್ಯ ಸಮುದಾಯ ಯುವಕ ಹಿಂಬಾಲಿಸಿ ಅವಳೊಂದಿಗೆ ಅಸಭ್ಯವಾಗಿ ವರ್ತಿಸಿದ ಹಿನ್ನೆಲೆ ಆತನಿಗೆ ಯುವತಿ ಸೇರಿದಂತೆ ಸ್ಥಳೀಯರು ಥಳಿಸಿದ ಘಟನೆ ವಿದ್ಯಾನಗರ ಶಿಂಗ್ರಾವ ಪಾರ್ಕ್ ಹತ್ತಿರ ನಡೆದಿದೆ. ಉತ್ತರ ಪ್ರದೇಶದ ಫಾರೂಕ್ ಎಂಬಾತನ ವಿರುದ್ಧ ಮಹಿಳೆ ರೂಪಾಲಿ ಮಿಸ್ಕಿನ್ ದೂರು ನೀಡಿದ್ದಾಳೆ. ಆರೋಪಿ ಫಾರೂಕ್ ವೇರಿ ಬಿಗ್ ಬಾಸ್ ಸಲೂನ್ ಅಂಗಡಿ ನಡೆಸುತ್ತಿದ್ದು, ಅಲ್ಲೇ ಹತ್ತಿರ ಮನೆಯಲ್ಲಿದ್ದ ಮಹಿಳೆಯನ್ನು ಹಿಂಬಾಲಿಸುವುದು, ಗುರಾಯಿಸುವುದು, ಅವರ ಮನೆಯ ಮುಂದೆ ಬೈಕ್ ಪಾರ್ಕಿಂಗ್ ಮಾಡಿ ಮನೆಯ ಇಣುಕಿ ನೋಡುವುದು ಮಾಡಿದ್ದಾನೆ. ಅದೇ ರೀತಿ ಶನಿವಾರ ಸಂಜೆ 7.30ರ ಸುಮಾರಿಗೆ ಮಹಿಳೆ ಕರಾಟೆ ಕ್ಲಾಸ್ ಹೋಗುವಾಗ ಅವಳನ್ನು ಹಿಂಬಾಲಿಸಿ ಅವಾಚ್ಯವಾಗಿ ನಿಂದಿಸಿದ್ದಾನೆ. ಈ ಹಿನ್ನೆಲೆ ಮಹಿಳೆ ಚಪ್ಪಲಿಯಿಂದ ಹೊಡೆದಿದ್ದಾಳೆ. ಸ್ಥಳೀಯರು ಆತನನ್ನು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪದಲ್ಲಿ ಜಾರ್ಜ್ ಹೇಳಿಕೆ

ಇಂಧನ ಪರಿವರ್ತನೆಗೆ ಕ್ರಮ

ಬೆಂಗಳೂರು: ಇಂಧನ ಪರಿವರ್ತನೆಗೆ ನೀತಿ, ನಿಯಂತ್ರಣದ ಜತೆಗೆ ಸಂಘಟಿತ ಪ್ರಯತ್ನಗಳು ಅನಿವಾರ್ಯ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಕಾಮನ್‌ವೆಲ್ತ್ ಲೀಗಲ್ ಎಜುಕೇಷನ್ ಅಸೋಸಿಯೇಷನ್ ಮತ್ತು ಇಂಧನ ಇಲಾಖೆ ಜಂಟಿಯಾಗಿ ನಗರದಲ್ಲಿ ಆಯೋಜಿಸಿದ್ದ ಸುಸ್ಥಿರ ಇಂಧನ, ಭಾರತದ ಕಾರ್ಯಸೂಚಿ 2047-ಇಂಧನ ಭದ್ರತೆಗಾಗಿ ಕಾನೂನು, ನೀತಿ ಹಾಗೂ ಆವಿಷ್ಕಾರಗಳ ಹೊಸ ಚಿಂತನೆ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ನ್ಯಾಯಾಂಗ, ನೀತಿ ನಿರೂಪಕರು, ನಿಯಂತ್ರಕರು ಮತ್ತು ಉದ್ಯಮದ ನಡುವಿನ ಅರ್ಥಪೂರ್ಣ ಚರ್ಚೆಗಳಿಗೆ ಈ ಸಮ್ಮೇಳನ ವೇದಿಕೆಯಾಯಿತು. ಸುಸ್ಥಿರ ಇಂಧನ ಭವಿಷ್ಯವನ್ನು ರೂಪಿಸುವಲ್ಲಿ ಸಮ್ಮೇಳನದ ನಿರ್ಣಯಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದು ಹೇಳಿದರು.

ನವೀಕರಿಸಬಹುದಾದ ಇಂಧನ ವಿಸ್ತರಣೆ, ಸಂಗ್ರಹಣೆಗೆ ಸೂಕ್ತ ವ್ಯವಸ್ಥೆ ಮತ್ತು ಮೂಲಸೌಕರ್ಯ ಬಲವರ್ಧನೆಯ ಮೂಲಕ ಕರ್ನಾಟಕ ತನ್ನ ಮುಂದಾಳತ್ವವನ್ನು ಮುಂದುವರಿಸಲಿದೆ. ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ನಾವೀನ್ಯತೆಯನ್ನು ಬೆಂಬಲಿಸಲು ಮತ್ತು ಸುಸ್ಥಿರ ಭವಿಷ್ಯವನ್ನು ಸಾಧಿಸಲು ಸಹಯೋಗದೊಂದಿಗೆ ಕೆಲಸ ಮಾಡುತ್ತೇವೆ. ಮುಖ್ಯವಾಗಿ ಕೈಗೆಟುಕುವ ದರದಲ್ಲಿ ಎಲ್ಲರಿಗೂ ಗುಣಮಟ್ಟದ ವಿದ್ಯುತ್ ಪೂರೈಸಲು ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು. ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ಸಮ್ಮೇಳನದ ನಿರ್ಣಯಗಳು ನವೀಕರಿಸಬಹುದಾದ ಇಂಧನ ವಲಯದಲ್ಲಿ ಮಹತ್ವದ ಬದಲಾವಣೆಗೆಕಾರಣವಾಗಲಿವೆ.ಇಂಧನನೀತಿಯನ್ನು ರೂಪಿಸುವಲ್ಲಿ ನ್ಯಾಯಾಂಗದ ಪಾತ್ರ ನಿರ್ಣಾಯಕವಾಗಿದ್ದು, ಈ ಸಮ್ಮೇಳನವು ಅದಕ್ಕೆ ವೇದಿಕೆಯನ್ನು ಒದಗಿಸಿದೆ. ನವೀಕರಿಸಬಹುದಾದ ಇಂಧನ ವಲಯದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ವಿಕ್ರಮ್ ನಾಥ್, ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಡಾ. ರಾಮ್ ಪ್ರಸಾತ್ ಮನೋಹರ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಡಾ. ಎನ್.ಶಿವಶಂಕರ್ ಮತ್ತು ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಇದ್ದರು.



ನವೀಕರಿಸಬಹುದಾದ ಇಂಧನದ ಬಳಕೆಗೆ ಒತ್ತು
2047ರ ವೇಳೆಗೆ ಭಾರತದ ಇಂಧನ ಬೇಡಿಕೆ ಸುಮಾರು 4 ಪಟ್ಟು ಹೆಚ್ಚಾಗುವ ಸಾಧ್ಯತೆ ಇದ್ದು, ನವೀಕರಿಸಬಹುದಾದ ಇಂಧನದ ಬಳಕೆಗೆ ಒತ್ತು ನೀಡುವುದೇ ಇದಕ್ಕೆ ಇರುವ ಪ್ರಮುಖ ಪರಿಹಾರ. ಇಂಧನ ಭದ್ರತೆಗಾಗಿ ಇಂಧನ ಸಂಗ್ರಹಣಾ ವ್ಯವಸ್ಥೆಗಳು ಮತ್ತು ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದು ಅನಿವಾರ್ಯ. ನ್ಯಾಯಾಂಗ, ಸರ್ಕಾರ ಮತ್ತು ಉದ್ಯಮಗಳ ನಡುವಿನ ಸಹಕಾರ ಈ ನಿಟ್ಟಿನಲ್ಲಿ ನಿರ್ಣಾಯಕವಾಗುತ್ತದೆ ಎಂದು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಹೇಳಿದರು.

> **ಈ ಸಮ್ಮೇಳನವು ನ್ಯಾಯಾಂಗ ಮತ್ತು ಕಾರ್ಯಾಂಗದ ನಡುವೆ ಅರ್ಥಪೂರ್ಣ ಸಂವಾದಕ್ಕೆ ವೇದಿಕೆ ಕಲ್ಪಿಸಿತು.ಭಾರತದ ಇಂಧನ ಪರಿವರ್ತನೆಗೆ ಸಾಂಸ್ಥಿಕ ಸಹಯೋಗವು ನಿರ್ಣಾಯಕವಾಗಿರುತ್ತದೆ.**
> ■ ಡಾ. ಶಾಲಿನಿ ರಜನೀಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ

ಸಮಯ ಬರಲಿ, ಉತ್ತರ ಸಿಗಲಿದೆ: ಡಿಸಿಎಂ ಡಿಕೆಶಿ

> **ಡಿ.ಕೆ.ಶಿವಕುಮಾರ್ ಅವರು ಮುಕ್ತಿಮಂದಿರ ಕ್ಷೇತ್ರದ ಬಗ್ಗೆ ಅಪಾರ ಭಕ್ತಿಯನ್ನು ಹೊಂದಿದ್ದು, ರಾಜ್ಯದ ಉನ್ನತ ಹುದ್ದೆಯ ಇಚ್ಛೆ ಈಡೇರಿಸುವಂತೆ ಲಿಂ.ಶ್ರೀಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಅವರ ಇಚ್ಛೆ ಶೀಘ್ರ ಈಡೇರುವ ಕಾಲ ಸನ್ನಿಹಿತವಾಗಿದೆ.**
> ■ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿ



ಮುಕ್ತಿಮಂದಿರಕ್ಕೆ ಭೇಟಿ, ಗದ್ದುಗೆ ದರ್ಶನ

ಲಕ್ಷ್ಮೇಶ್ವರ: ತಾಲೂಕಿನ ಭೂಕೈಲಾಸ ಎಂದೇ ಪ್ರಸಿದ್ಧಿ ಪಡೆದಿರುವ ಮುಕ್ತಿಮಂದಿರದ ತ್ರಿಕೋಟಿ ಲಿಂಗಗಳ ಸ್ಥಾಪನೆ ಆಗುವ ಸ್ಥಳಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಭಾನುವಾರ ಭೇಟಿ ನೀಡಿದರು.

ಲಿಂ.ಜಗದ್ಗುರು ವೀರಗಂಗಾಧರ ಶ್ರೀಗಳ ಕರ್ತೃ ಗದ್ದುಗೆಯ ದರ್ಶನಾಶೀರ್ವಾದ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಡೆದಾಡುವ ದೇವರಾಗಿದ್ದ ಲಿಂ.ಜಗದ್ಗುರು ವೀರಗಂಗಾಧರ ಅಜ್ಜನವರ ಪವಿತ್ರ ಕ್ಷೇತ್ರವಾಗಿರುವ ಮುಕ್ತಿಮಂದಿರದಲ್ಲಿ ಒಂದು ವಿಶೇಷ ಶಕ್ತಿ ನೆಲೆ ನಿಂತಿದೆ. ಇಲ್ಲಿ ರಾಜಕೀಯ ಮಾತನಾಡುವುದಿಲ್ಲ, ಸಮಯ ಬರಲಿ, ಕಾಲ ಎಲ್ಲದಕ್ಕೂ ಉತ್ತರ ಕೊಡಲಿದೆ .ಅಜ್ಜನ ಮಹಿಮೆ ಅಪಾರವಾಗಿದ್ದು, ಅಜ್ಜನ ಗದ್ದುಗೆಗೆ ಮೊರೆ ಹೋಗಿದ್ದೇನೆ. ಒಳ್ಳೆಯದಾಗುತ್ತದೆ ಎಂದು ನಂಬಿಕೆಯಿದೆ ಎಂದು ಮಾರ್ಮಿಕವಾಗಿ ಪ್ರತಿಕ್ರಿಯೆ ನೀಡಿದರು. ಇಲ್ಲಿ ತ್ರಿಕೋಟಿ ಲಿಂಗ ಸ್ಥಾಪನೆ ಆಗಬೇಕು ಎಂಬುದು ಗಂಗಾಧರ ಅಜ್ಜನ ಕನಸಾಗಿತ್ತು. ಇದು ನನಸಾಗುವ ಕಾಲ ಕೂಡಿ ಬಂದಿದೆ. ನಾನು ಅದರ ಜವಾಬ್ದಾರಿ ತೆಗೆದುಕೊಂಡಿದ್ದೇನೆ. ಸರ್ಕಾರದಿಂದ ಹಣ ಬಿಡುಗಡೆ ಮಾಡಿಸಿದ್ದೇನೆ ಎಂದರು.

ಮುಕ್ತಿಮಂದಿರ ಪಟ್ಟಾಧ್ಯಕ್ಷರಾದ ವಿಮಲ ರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಶ್ರೀಗಳು, ಡಿ.ಕೆ.ಶಿವಕುಮಾರ ಸುಪುತ್ರ ಆಕಾಶ ಕೆಂಪೇಗೌಡ, ಶಾಸಕ ಶ್ರೀನಿವಾಸ ಮಾನೆ, ಮಾಜಿ ಎಂಎಲ್‌ಸಿ ಕೆ.ಪಿ.ನಂಜುಡಿ, ಮಾಜಿ ಶಾಸಕ ಆನಂದ ಗಡ್ಡದೇವರಮಠ, ರಜತ ಉಳ್ಳಾಗಡ್ಡಿಮಠ, ಷಣ್ಮುಖಪ್ಪ ಶಿವಳ್ಳಿ, ಸುಜಾತಾ ದೊಡ್ಡಮನಿ ಇದ್ದರು.

ಅಪಘಾತ: 4 ಸಾವು, 19 ಜನರಿಗೆ ಗಾಯ

ವಿಜಯನಗರ: ಲಾರಿ ಚಾಲಕನ ನಿರ್ಲಕ್ಷ್ಯದಿಂದ ಹೊಸಪೇಟೆ ತಾಲೂಕಿನ ಡಣಪುರ ಬಳಿ ರಾಷ್ಟ್ರೀಯ ಹೆದ್ದಾರಿ-50ರಲ್ಲಿ ಸರಣಿ ಅಪಘಾತ ಸಂಭವಿಸಿದೆ. ಒಂದೇ ಕುಟುಂಬದ ಮೂವರು ಸೇರಿ ನಾಲ್ವರು ಮೃತಪಟ್ಟಿದ್ದು, 19 ಜನರು ಗಾಯಗೊಂಡಿರುವ ಘಟನೆ ಭಾನುವಾರ ನಡೆದಿದೆ.

ಮೃತರನ್ನು ಹಗರಿಬೊಮ್ಮನಹಳ್ಳಿ ತಾಲೂಕಿನ ಕಿತ್ತನೂರು ಗ್ರಾಮದ ಅತಿಥಿ ಶಿಕ್ಷಕಿ ಸುಜಾತಾ(35), ಅವರ ತಂದೆ ನಾಗಪ್ಪ(80), ಸಹೋದರ ಕೊಟ್ರೇಶ್ (22) ಹಾಗೂ ಹೊಸಪೇಟೆ ತಾಲೂಕಿನ ತಿಮ್ಮಲಾಪುರದ ದುರುಗಪ್ಪ(55) ಎಂದು ಗುರುತಿಸಲಾಗಿದೆ. ಮೃತರೆಲ್ಲರೂ ದ್ವಿಚಕ್ರ ವಾಹನದಲ್ಲಿ ಸಂಚರಿಸುತ್ತಿದ್ದರು. ಸುಜಾತಾ ಮತ್ತು ದುರುಗಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಿಸಲಾಗಿದ್ದ ನಾಗಪ್ಪ ಅವರು ಕೊಪ್ಪಳ ಜಿಲ್ಲಾ ಆಸ್ಪತ್ರೆ ಹಾಗೂ ಕೊಟ್ರೇಶ್ ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಇನ್ನುಳಿದಂತೆ 19 ಜನರು ಕಾರು ಮತ್ತು ಸಾರಿಗೆ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು. ಅವರನ್ನು ಹೊಸಪೇಟೆ, ಕೊಪ್ಪಳ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ.

ಸರಣಿ ಅಪಘಾತದ ವಿವರ: ಬೆಳ್ಳುಳ್ಳಿ ತುಂಬಿದ್ದ ಬೃಹತ್ ಲಾರಿ ದೆಹಲಿಯಿಂದ ಹೊಸಪೇಟೆ ಮಾರ್ಗವಾಗಿ ಬೆಂಗಳೂರಿಗೆ ಸಾಗುತ್ತಿತ್ತು. ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಹೊಸಪೇಟೆಯ ಸುರಂಗ ಮಾರ್ಗ ದಾಟುತ್ತಿದ್ದಂತೆ ಲಾರಿ ಚಾಲಕನ ನಿಯಂತ್ರಣ ತಪ್ಪಿದ್ದು, ಅಡ್ಡಾದಿಡ್ಡಿ ಹಾಗೂ ಅತಿವೇಗವಾಗಿ ಚಲಿಸಲು ಆರಂಭಿಸಿದೆ.

ಡಣಪುರ ಸಮೀಪಿಸುತ್ತಿದ್ದಂತೆ ಬಿಎಂಎಂ ಫ್ಯಾಕ್ಟರಿ ಮುಂಭಾಗದಲ್ಲಿ ಮೂರು ಬೈಕ್, ಒಂದು ಕಾರು ಹಾಗೂ ಚಿತ್ರದುರ್ಗದಿಂದ ಹೊಸಪೇಟೆಗೆ ಆಗಮಿಸುತ್ತಿದ್ದ ಬಿಎಂಟಿಸಿ ಬಸ್‌ಗೆ ಒಂದಾದ ಬಳಿಕ ಒಂದರಂತೆ ವಾಹನಗಳಿಗೆ ಡಿಕ್ಕಿ ಹೊಡೆದಿದೆ.



3 ಕಿಮೀವರೆಗೆ ಟ್ರಾಫಿಕ್
ಮರಿಯಮ್ಮನಹಳ್ಳಿ ಬಳಿ ಸಂಭವಿಸಿ ಭೀಕರ ಅಪಘಾತದಿಂದಾಗಿ ಬೆಳಗ್ಗೆ 9ರಿಂದ 11ಗಂಟೆವರೆಗೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರೀ ಟ್ರಾಫಿಕ್ ಜಾಮ್ ಉಂಟಾಯಿತು. ಅಪಘಾತದ ಸ್ಥಳದಿಂದ ಎರಡೂ ಬದಿಗೆ ಸುಮಾರು 3 ಕಿ.ಮೀ. ವರೆಗೆ ನೂರಾರು ವಾಹನಗಳು ಸಾಲುಗಟ್ಟಿ ನಿಂತಿದ್ದವು. ಗಾಯಾಳುಗಳನ್ನು ಆಂಬುಲೆನ್ಸ್‌ಗಳಲ್ಲಿ ಆಸ್ಪತ್ರೆಗೆ ಸಾಗಿಸುವುದೂ ಸವಾಲಿನ ಕೆಲಸವಾಗಿತ್ತು.

ಜೆಡಿಎಸ್‌ಗೆ ಜಮೀರ್ ಗಾಳಿಸುದ್ದಿ!

ಹೊಸದಿಲ್ಲಿ: ಸಚಿವ ಜಮೀರ್ ಅಹಮದ್ ಮರಳಿ ಜೆಡಿಎಸ್ ಪಕ್ಷಕ್ಕೆ ಸೇರುತ್ತಾರೆ ಎಂಬ ಸುದ್ದಿಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟನೆ ನೀಡಿದ್ದು, ಕಾಂಗ್ರೆಸ್ ಪಕ್ಷದ ಯಾರೊಬ್ಬರೂ ನನ್ನ ಸಂಪರ್ಕದಲ್ಲಿ ಇಲ್ಲ, ಹಾಗಿದ್ದ ಮೇಲೆ ಜಮೀರ್ ಅವರು ಪಕ್ಷ ಸೇರುವ ಮಾತೆಲ್ಲಿಂದ ಬರಬೇಕು, ಇದೆಲ್ಲವೂ ಗಾಳಿಸುದ್ದಿಯಷ್ಟೇ ಎಂದು ಹೇಳಿದರು. ದಿಲ್ಲಿಯಲ್ಲಿ ಭಾನುವಾರ ತಮ್ಮ ಗೃಹ ಕಚೇರಿಯಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಪಕ್ಷಕ್ಕೆ ಯಾರನ್ನು ಸೇರಿಸಿಕೊಳ್ಳಬೇಕು ಎಂಬ ಬಗ್ಗೆ ನಾನೇ ನಿರ್ಧಾರ ಕೈಗೊಳ್ಳಬೇಕು. ನನ್ನ ಸಂಪರ್ಕಕ್ಕೇ ಯಾರೂ ಬಂದಿಲ್ಲ ಎಂದ ಮೇಲೆ ಪಕ್ಷಕ್ಕೆ ಸೇರಿಸಿಕೊಳ್ಳುವ ಮಾತೇಕೆ ಬರುತ್ತದೆ ಎಂದು ಹೇಳಿದರು. ನನಗೂ ಸಚಿವ ಜಮೀರ್‌ಗೂ ಸಂಪರ್ಕ ಇಲ್ಲ, ಜೆಡಿಎಸ್ ಜತೆಗೆ ಯಾರೂ ಸಂಪರ್ಕ ಸಾಧಿಸಿಲ್ಲ ಎಂದರು.



ಡಿಎಂಕೆಯಿಂದಲೇ ದಕ್ಷಿಣಕ್ಕೆ ಅನ್ಯಾಯ
ದಕ್ಷಿಣದ ರಾಜ್ಯಗಳಿಗೆ ಈ ತಿದ್ದುಪಡಿ ಮಸೂದೆಗಳಿಂದ ಅನ್ಯಾಯವಾಗುತ್ತಿದೆ ಎಂದು ಡಿಎಂಕೆ ಹೇಳುತ್ತಿರುವುದರಲ್ಲಿ ಎಳ್ಳಷ್ಟೂ ಸತ್ಯಾಂಶವಿಲ್ಲ. ಹಾಗೆ ನೋಡಿದರೆ ಡಿಎಂಕೆಯಿಂದಲೇ ದಕ್ಷಿಣಕ್ಕೆ ಅನ್ಯಾಯವಾಗುತ್ತಿದೆ. ಒಂದು ವೇಳೆ ಅನ್ಯಾಯ ಆಗುವುದೇ ಆಗಿದ್ದರೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ, ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಹಾಗೂ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಆಕ್ಷೇಪ ಎತ್ತಲಿಲ್ಲವೇಕೆ, ನಾಯ್ಡು ಅವರಂತೂ ಮಸೂದೆಗಳಿಗೆ ಮುಕ್ತ ಬೆಂಬಲ ನೀಡಿದರು ಎಂದು ಉಲ್ಲೇಖಿಸಿದರು.

ದಕ್ಷಿಣಾ ರಾಜ್ಯಗಳಿಗೆ ಅನ್ಯಾಯ ಆಗುತ್ತಿರಲಿಲ್ಲ
ಸ್ವತಃ ನಾನು ದಕ್ಷಿಣ ರಾಜ್ಯಗಳಿಂದ ಬಂದ ಜನಪ್ರತಿನಿಧಿಯಾಗಿ ಹೇಳುತ್ತಿದ್ದೇನೆ. ದಕ್ಷಿಣದ 5 ರಾಜ್ಯಗಳಿಗೆ ಸಿಗಲಿದ್ದ ಸುವರ್ಣಾವಕಾಶವನ್ನು ಡಿಎಂಕೆ ಹಾಳು ಮಾಡಿದೆ. ನಮಗೆ ಸಿಗಲಿದ್ದ ಉತ್ತಮ ಪಾಲು ಸಿಗದಂತೆ ಆ ಪಕ್ಷ ಮಾಡಿ ಅನ್ಯಾಯವೆಸಗಿದೆ. ಕರ್ನಾಟಕದ ಲೋಕಸಭೆ ಕ್ಷೇತ್ರಗಳ ಸಂಖ್ಯೆ 28ರಿಂದ 42ಕ್ಕೆ ಹೆಚ್ಚುತ್ತಿತ್ತು. ಈ ಅವಕಾಶ ತಪ್ಪಿಹೋಗಿದೆ. ಇದನ್ನು ಡಿಎಂಕೆ ಅಥವಾ ಕಾಂಗ್ರೆಸ್ ಪಕ್ಷಗಳಿಂದ ಸರಿಪಡಿಸಲು ಸಾಧ್ಯವೇ ಈ ಬಗ್ಗೆ ರಾಹುಲ್ ಗಾಂಧಿ ಉತ್ತರಿಸಬೇಕಿದೆ ಎಂದು ಎಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದರು.

ಸಿಲಿಂಡರ್ ಸ್ಫೋಟ: ನಗದು, ಚಿನ್ನಾಭರಣ ಬೆಂಕಿಗಾಹುತಿ

ಬೆಂಕಿ ನಂದಿಸಿದ ಅಗ್ನಿಶಾಮಕ ದಳ

ಚಿತ್ರದುರ್ಗ: ಅಡುಗೆ ಅನಿಲ ಸಿಲಿಂಡರ್ ಸ್ಫೋಟಗೊಂಡ ಕಾರಣ ಮನೆಯಲ್ಲಿಟ್ಟಿದ್ದ 3 ಲಕ್ಷ ರೂ. ನಗದು ಹಣ, ಚಿನ್ನಾಭರಣ ಹಾಗೂ ದವಸ ಧಾನ್ಯ ಬೆಂಕಿಗೆ ಆಹುತಿಯಾಗಿರುವ ಘಟನೆ ಚಳ್ಳಕೆರೆ ತಾಲೂಕಿನ ರೇಣುಕಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಪ್ಪಗೊಂಡನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಚಿತ್ರಲಿಂಗಪ್ಪ ಎಂಬುವರು ಮನೆಯಲ್ಲಿ ಶುಕ್ರವಾರ ರಾತ್ರಿ ಸುಮಾರು 8 ಗಂಟೆ ವೇಳೆಗೆ ಗ್ಯಾಸ್ ಸ್ಫೋಟ ಸಂಭವಿಸಿದೆ. ಗುಡಿಸಲು ಮನೆಯಲ್ಲಿದ್ದ ಮನೆ ಕಟ್ಟಲು ಇಟ್ಟುಕೊಂಡಿದ್ದ ಮೂರು ಲಕ್ಷ ಹಣ, ಚಿನ್ನಾಭರಣ, ಮತ್ತು ದವಸ ಧಾನ್ಯಗಳು ಬೆಂಕಿಗೆ ಆಹುತಿಯಾದ ಘಟನೆ ನಡೆದಿದೆ. ಘಟನೆ ನಡೆದ ವೇಳೆ ಮನೆಯವರು ಹೊರಗಡೆ ಇದ್ದ ಕಾರಣ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಸುದ್ದಿ ತಿಳಿದ ತಕ್ಷಣ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಬೆಂಕಿಯನ್ನು ಘಟನಾ ಸ್ಥಳಕ್ಕೆ ತಹಸೀಲ್ದಾರ್ ರೇಹಾನ್ ಪಾಷಾ ಹಾಗೂ ಇತರೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟೀಕೆ

ಅಲ್ಪಸಂಖ್ಯಾತರನ್ನು ಕಾಂಗ್ರೆಸ್ ಪಕ್ಷ ಬೆಳೆಸಿಲ್ಲ

ಚಿಕ್ಕಮಗಳೂರು: ಅಲ್ಪಸಂಖ್ಯಾತರನ್ನು ಕಾಂಗ್ರೆಸ್ ಯಾವತ್ತೂ ಓಟ್ ಬ್ಯಾಂಕ್ ಆಗಿಯೇ ಆಲೋಚನೆ ಮಾಡಿದೆ. ಅವರನ್ನು ಬೆಳೆಸುವ ಕೆಲಸ ಮಾಡಿಲ್ಲ, ಈ ಕಾರಣಕ್ಕೆ ಅಲ್ಲಿಂದ ಹೊರಬಂದು ಯಾರು ಅವರನ್ನು ಗೌರವಿಸುತ್ತಾರೆ ಅವರ ಜೊತೆಯಲ್ಲಿ ಹೋಗಬೇಕು ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕರೆ ನೀಡಿದರು.

ಭಾನುವಾರ ನಗರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಅಲ್ಪಸಂಖ್ಯಾತರು ಹೆಚ್ಚಿರುವ ದಾವಣಗೆರೆ ಕ್ಷೇತ್ರದಲ್ಲಿ ಕಾಂಗ್ರೆಸ್ಸಿಗರು ಅವರನ್ನು ಹೇಗೆ ಮುಗಿಸುತ್ತಿದ್ದಾರೆ ಎನ್ನುವುದು ಸ್ಪಷ್ಟ. ಒಂದೆಡೆ ಒಬಿಸಿ ವರ್ಗಕ್ಕೆ ಪ್ರಾತಿನಿಧ್ಯ ಕೊಡಬೇಕು ಎನ್ನುತ್ತಾರೆ. ಮತ್ತೊಂದು ಕಡೆ ಅಲ್ಪಸಂಖ್ಯಾತರನ್ನು ರಾಜಕೀಯವಾಗಿ ಮುಗಿಸುತ್ತಿದ್ದಾರೆ. ಒಟ್ಟಾರೆ ಬೆಳವಣಿಗೆ ನೋಡಿದರೆ ಮುಂದೆ ನಮ್ಮ ಅಹಿಂದ ನಾಯಕರ ಭವಿಷ್ಯ ಎಲ್ಲಿಗೆ ಹೋಗಿ ನಿಲ್ಲುತ್ತದೆಯೋ ಎನ್ನುವ ಯಕ್ಷ ಪ್ರಶ್ನೆ ಕಾಂಗ್ರೆಸ್ ಕಾರ್ಯಕರ್ತರಿಗೆ ಕಾಡುತ್ತಿದೆ ಎಂದು ಸಿದ್ದರಾಮಯ್ಯ ಅವರನ್ನು ಪರೋಕ್ಷವಾಗಿ ಕೆಣಕಿದ ಅವರು, ಇನ್ನು ಮುಂದಾದರೂ ಅಲ್ಪಸಂಖ್ಯಾತರು ಎಚ್ಚೆತ್ತುಕೊಳ್ಳಬೇಕಿದೆ. ಕಾಂಗ್ರೆಸ್ ಹೇಗೆ ತಮ್ಮನ್ನು ಉಪಯೋಗಿಸಿಕೊಳ್ಳುತ್ತಿದೆ ಎನ್ನುವುದನ್ನು ಗಮನಿಸಬೇಕಿದೆ ಎಂದರು.

ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ಬೆಳವಣಿಗೆಗಳಿಂದ ಬೇಸತ್ತಿರುವ ಸಚಿವ ಜಮೀರ್ ಅಹಮದ್ ಅವರು ಮತ್ತೆ ಜೆಡಿಎಸ್‌ನತ್ತ ಮುಖ ಮಾಡಿದ್ದಾರೆ ಎನ್ನುವ ಸುದ್ದಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಇದು ಕೇವಲ ಊಹಾಪೋಹದ ಚರ್ಚೆಗಳು. ಇದು ವಾಸ್ತವಿಕಕ್ಕೆ ಹತ್ತಿರವಿದ್ದರೆ ವರಿಷ್ಠರು ತೀರ್ಮಾನಿಸುತ್ತಾರೆ ಎಂದು ಹೇಳಿದರು. ಜಾತ್ಯತೀತ ಜನತಾದಳ ಅನ್ನುವುದು ಅದರ ಘೋಷವಾಕ್ಯದಲ್ಲೇ ಇದೆ. ನಮ್ಮ ಸಿದ್ಧಾಂತದಲ್ಲಿ ಯಾವುದೇ ಬದಲಾವಣೆ ಇಲ್ಲ, ನಾವು ಯಾವತ್ತಿದ್ದರೂ ಜಾತ್ಯತೀತರಾನೇ ಜಾತ್ಯಾತೀತವಾಗಿ ಉಳಿಯುತ್ತೇವೆ ಎಂದರು.



ಪ್ರಜಾಪ್ರಭುತ್ವ ವ್ಯವಸ್ಥೆಗೆ ಆದ ಸೋಲು
ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆಗೆ ಆದ ಸೋಲು ಬಿಜೆಪಿ ಅಥವಾ ಕೇಂದ್ರ ಸರ್ಕಾರಕ್ಕಾದ ಸೋಲಲ್ಲ, ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಆದ ಸೋಲು. ಕಾಂಗ್ರೆಸ್ ಪಕ್ಷಕ್ಕೆ ಆದ ಸೋಲಾಗಿದೆ ಎಂದು ನಿಖಿಲ್ ಕುಮಾರ ಸ್ವಾಮಿ ಹೇಳಿದರು. ಈ ಮಸೂದೆಗೆ ಅನುಮೋದನೆ ನೀಡಿದರೆ ಉತ್ತರದ ರಾಜ್ಯಗಳಿಗೆ ಅನುಕೂಲವಾಗುತ್ತದೆ ಎಂದು ಕಾಂಗ್ರೆಸ್ಸಿಗರು ಹುಯಿಲೆಬ್ಬಿಸುತ್ತಿದ್ದಾರೆ. ಆದರೆ ಅದರಲ್ಲಿ ಹುರುಳಿಲ್ಲ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಆರೋಪ

ಜಲವಿವಾದ ಬಗೆಹರಿಸಲು ಸ್ಪಂದಿಸದ ಕೇಂದ್ರ

ಹುಬ್ಬಳ್ಳಿ: ಮಹದಾಯಿ ಸೇರಿದಂತೆ ರಾಜ್ಯ ಜಲವಿವಾದ ಬಗೆಹರಿಸಲು ಕೇಂದ್ರ ಸರ್ಕಾರ ಸ್ಪಂದಿಸುತ್ತಿಲ್ಲ, ಈ ಹಿನ್ನೆಲೆ ಏಪ್ರಿಲ್ ಮುಗಿದ ನಂತರ ಒಂದು ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರದಿಂದ ಮಹದಾಯಿ ಯೋಜನೆ ಸಂಬಂಧಿಸಿದಂತೆ ಪದೇ ಪದೆ ಅನ್ಯಾಯವಾಗುತ್ತಿದೆ. ಸರ್ಕಾರ ಅನುಮತಿ ಕೊಡಿಸುತ್ತಿಲ್ಲ, ರಾಜ್ಯದಲ್ಲಿ ಇಷ್ಟೊಂದು ಜನ ಸಂಸದರಿದ್ದರೂ ಯೋಜನೆಗಳ ಪರವಾಗಿ ಧ್ವನಿ ಎತ್ತುತ್ತಿಲ್ಲ, ಬಿಜೆಪಿ ಅವರು ಕೇವಲ ರಾಜಕೀಯ ಲಾಭಕ್ಕೆ ನೀರಾವರಿ ಯೋಜನೆ ಬಳಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಬೇಕಿದ್ದರೆ ಅವರೇ ಇದರ ಪ್ರಯೋಜನ ತೆಗೆದುಕೊಳ್ಳಲಿ. ರಾಜ್ಯದ ನೀರಾವರಿ ಯೋಜನೆ ಜಾರಿ ಮಾಡಲು ಕ್ರಮ ವಹಿಸಲಿ. ನಮ್ಮ ಕರ್ತವ್ಯ ನಾವು ಮಾಡಿದ್ದೇವೆ. ಬಿಜೆಪಿಯವರು ಈ ವಿಚಾರದಲ್ಲಿ ಫೇಲ್ ಆಗಿದ್ದಾರೆ. ಪ್ರಧಾನಿ ಭೇಟಿ ಮಾಡಿ ಮಾತನಾಡುವಷ್ಟು ಶಕ್ತಿ ಅವರಿಗಿಲ್ಲ ಎಂದು ಕುಟುಕಿದರು.

ಸಚಿವ ಎಚ್.ಕೆ.ಪಾಟೀಲ ಅವರು ಪರಿಷತ್‌ನಲ್ಲಿ ನಿರ್ಣಯವೊಂದನ್ನು ಮಂಡಿಸಿದ್ದಾರೆ. ಮುಂದಿನ ತಿಂಗಳಿನಿಂದ ಮತ್ತೊಂದು ಹಾದಿಯಲ್ಲಿ ನೀರಾವರಿ ಯೋಜನೆಗಳ ಜಾರಿಗೆ ಪ್ರಯತ್ನ ಮಾಡಲಾಗುವುದು. ರಾಜ್ಯದಲ್ಲಿನ ನೀರಾವರಿ ಯೋಜನೆಗಳ ಅನುಷ್ಠಾನದ ನಿಟ್ಟಿನಲ್ಲಿ ಶೀಘ್ರವೇ ಕೇಂದ್ರಕ್ಕೆ ನಿಯೋಗ ಕೊಂಡೊಯ್ಯಲಾಗುವುದು ಎಂದರು.

ಮಹದಾಯಿ ಯೋಜನೆ ಜಾರಿಯಲ್ಲಿ ವಿಳಂಬ ವಿಚಾರವಾಗಿ ಸಾಕಷ್ಟು ಪ್ರಯತ್ನ ಮಾಡುತ್ತಾ ಇದ್ದೇವೆ. ಗೋವಾ ಸರ್ಕಾರಕ್ಕೆ ಕೇಂದ್ರ ಸರ್ಕಾರ ಹೆದರಿಕೊಂಡಿದೆ. ನಾನು ಮಹದಾಯಿ ವಿಚಾರವಾಗಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಜೊತೆಗೆ ನಾಲ್ಕೈದು ಸಲ ಮಾತನಾಡಿದ್ದೇನೆ. ಆದರೆ, ಸರಿಯಾಗಿ ಸ್ಪಂದನೆ ಸಿಕ್ಕಿಲ್ಲ ಎಂದು ಹೇಳಿದರು.



ಸೀಟ್ ಕಡಿಮೆ ಮಾಡುವ ಹುನ್ನಾರ
ಮಹಿಳಾ ಮೀಸಲಾತಿ ಮುಂದಿಟ್ಟುಕೊಂಡು ದಕ್ಷಿಣ ಭಾರತದ ಸೀಟ್ ಕಡಿಮೆ ಮಾಡುವ ಹುನ್ನಾರ ನಡೆಸಿದ್ದರು. ಆ ಪ್ರಯತ್ನಕ್ಕೆ ಸೋಲಾಗಿದೆ. ಇದು ಆರಂಭ ಮಾತ್ರ. ಈ ಹಿಂದೆಯೇ ಮಹಿಳಾ ಮೀಸಲಾತಿ ಬಿಲ್ ಪಾಸ್ ಆಗಿದೆ. ಅದರ ಪ್ರಕಾರ ಸೀಟು ಹಂಚಿಕೆಗೆ ಯಾರದೂ ತಕರಾರಿಲ್ಲ. ಆದರೆ, ಅದನ್ನು ಅಡ್ಡ ಇಟ್ಟುಕೊಂಡು ಕೇಂದ್ರ ಸರ್ಕಾರವು ದಕ್ಷಿಣ ಭಾರತಕ್ಕೆ ಅನ್ಯಾಯ ಮಾಡಲು, ಸೀಟ್ ಕಡಿಮೆ ಮಾಡುವ ಷಡ್ಯಂತ್ರಕ್ಕೆ ಮುಂದಾಗಿದೆ. ಈ ಬಗ್ಗೆ ಒಬ್ಬನೇ ಒಬ್ಬ ಬಿಜೆಪಿಯವರು ಮಾತನಾಡುತ್ತಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ ಕಿಡಿಕಾರಿದರು.

ಸಂಪಾದಕೀಯ

ದೇಶದ ಅಗ್ರಹವಾಗಲಿದೆ ಮಹಿಳಾ ಮೀಸಲು

ಸುಧಾರಣೆಯ ಮಾತುಗಳನ್ನು ಎಲ್ಲಾ ರಾಜಕೀಯ ಪಕ್ಷಗಳು ಆಡುತ್ತವೆ. ಸಾಮಾನ್ಯ ನಾಗರಿಕ ರಾಜಕಾರಣದ ಬಗೆಗೆ ಆಡುವ ಮೊದಲ ಮಾತೇ ಅದು. ಭಾರತ ಪ್ರಜಾಪ್ರಭುತ್ವ ಭದ್ರವಾಗಿದೆ. ಇಲ್ಲಿರುವಷ್ಟು ರಾಜಕೀಯ ಪಕ್ಷಗಳು ಬೇರಾವ ದೇಶದಲ್ಲೂ ಇಲ್ಲ.ಎನ್ನುವುದೇ ಇಲ್ಲಿನ ಅಭಿಪ್ರಾಯಸ್ವಾತಂತ್ರ್ಯಕ್ಕೆ ಸಾಕ್ಷಿ. ಹೀಗಿರುವಲ್ಲಿ ಏನು ಬದಲಾಗಬೇಕು? ಯಾವ ವ್ಯವಸ್ಥೆ ಬಲಿಷ್ಠವಾಗಬೇಕು? ಭಾರತದ ಎಲ್ಲಾ ಹಿರಿಮೆಗೆ ಇಲ್ಲಿನ ಸಾಂಸ್ಕೃತಿಕ ಮೌಲ್ಯಗಳೇ ಸಾಂವಿಧಾನದ ಮೌಲ್ಯಗಳೂ ಕಾರಣ. ಇಲ್ಲಿನ ಸಾಂವಿಧಾನಿಕ ಸ್ವರೂಪ ಕೂಡ ಹಾಗಿದೆ. ಅದು ಎಷ್ಟು ದಿಟ್ಟತನದಿಂದ ಹಕ್ಕುಗಳನ್ನು ನೀಡಿದೆಯೋ ಅಷ್ಟು ಬದಲಾವಣೆಯನ್ನು ಕೂಡ ಸಂವಿಧಾನ ಪ್ರತಿಪಾದಿಸುತ್ತದೆ.



ಸಂವಿಧಾನ ನಿರ್ಮಾಣ ಕಾಲದಲ್ಲಿದ್ದಂತೆ ಇಂದು ಯಾವ ಸಂಗತಿಗಳೂ ಇಲ್ಲ. ಶಾಸನ ಸಭೆಗಳ ಸಂಖ್ಯೆಯನ್ನು ಅವಲೋಕಿಸಿದರೆ ಅದು ಯಾವ ಲೆಕ್ಕಾಚಾರದಲ್ಲೂ ಇಂದಿನ ಪರಿಸ್ಥಿತಿಗೆ ಅನುಗುಣವಾಗಿಲ್ಲ. ಜೊತೆಗೆ ಸಂವಿಧಾನ ನಿರ್ಮಾಣದ ಕಾಲದಲ್ಲಿದ್ದಂತೆ ಇಂದು ಮಹಿಳಾ ಸ್ಥಿತಿಗತಿಗಳಿಲ್ಲ. ಹಲವು ದಶಕಗಳ ಹಿಂದಿನಿಂದಲೇ ಇವೆರಡು ಸಂಗತಿಗಳ ಬದಲಾವಣೆಗೆ ತಜ್ಞರು ಅಭಿಪ್ರಾಯವನ್ನು ಮಂಡಿಸಿದರೂ ಪಟ್ಟಭದ್ರರು ಅದಕ್ಕೆ ಮನಸ್ಸು ಮಾಡಿರಲಿಲ್ಲ. ನರೇಂದ್ರ ಮೋದಿಯವರ ಸರ್ಕಾರ ಅದಕ್ಕೆ ಮುಂದಡಿಯಿಟ್ಟಾಗ ಇಡೀ ದೇಶ ಅದರತ್ತ ಭರವಸೆಯಿಂದ ಕಾಯುತ್ತಿತ್ತು. ಶಾಸನ ಸಭೆಗಳಲ್ಲಿ ಮಹಿಳೆಯರ ಭಾಗಿದಾರಿಕೆಯನ್ನು ಉತ್ತೇಜಿಸುವ ಶೇ.33ರ ಮೀಸಲಾತಿಯನ್ನು ಕಲ್ಪಿಸುವ ಚರ್ಚೆಯನ್ನು ದೇಶದ ನಾಗರಿಕ ಉತ್ಸಾಹದಿಂದ ಕಾಯುತ್ತಿದ್ದರೆ ವಿರೋಧಪಕ್ಷಗಳಿಗೆ ಅದರತ್ತ ಯಾವ ಆಸಕ್ತಿಯೂ ಇರಲಿಲ್ಲ. ಅಂತಿಮವಾಗಿ ಸಂವಿಧಾನ ತಿದ್ದುಪಡಿಗೆ ಬೇಕಾದ ಬಹುಮತದ ಕೊರತೆಯಿಂದ ವಿಫಲವಾಯಿತು. ಇದನ್ನು ಬ್ರಹ್ಮಹತ್ಯೆಗೆ ಹೋಲಿಸಿದ ನರೇಂದ್ರ ಮೋದಿಯವರ ಪದಗಳಲ್ಲೇ ಎಲ್ಲವೂ ಅಡಗಿದೆ. ಈ ತಿದ್ದುಪಡಿ ಅಂಗೀಕಾರವಾಗಿದ್ದರೆ ದೇಶದ ಚಿತ್ರಣ ಆಮೂಲಾಗ್ರವಾಗಿ ಬದಲಾಗುವ ಎಲ್ಲಾ ಸಾಧ್ಯತೆಗಳಿದ್ದವು. ಮುಖ್ಯವಾಗಿ ಮಹಿಳೆಯರ ಶಕ್ತಿ ದೇಶಕ್ಕೆ ಬಳಕೆಯಾಗುತ್ತಿತ್ತು. ವಿಶ್ವದ ಎಲ್ಲಾ ರಾಷ್ಟ್ರಗಳು ನಾರಿಶಕ್ತಿ ದೇಶದಲ್ಲಿ ವಿಜೃಂಭಿಸುತ್ತಿತ್ತು. ಆದರೆ ದಿನನಿತ್ಯ ಮಹಿಳಾ ಸಶಕ್ತೀಕರಣದ ಬಗ್ಗೆ ಮಾತನಾಡುವ ಪ್ರಮುಖ ವಿರೋಧ ಪಕ್ಷಗಳಿಗೆ ಇದರಿಂದ ಏನೂ ಅನಿಸಲಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಇತಿಹಾಸದುದ್ದಕ್ಕೂ ಮಹಿಳಾ ಶಕ್ತಿಯ ಸಮರ್ಥ ಸದ್ಬಳಕೆಯ ಉದಾಹರಣೆಗಳನ್ನು ನೋಡುತ್ತೇವೆ. ಆದರೆ ರಾಜಕೀಯ ಪಕ್ಷಗಳು ಮಹಿಳಾ ಸಶಕ್ತೀಕರಣವನ್ನು ಪಾಶ್ಚಾತ್ಯ ಚಿಂತನೆಗಳ ಆಧಾರದಲ್ಲಿ ಮಾತ್ರ ನೋಡುತ್ತವೆ. ಆದರೆ ಭಾರತದಲ್ಲಿ ನಿಜವಾಗಿ ಮಹಿಳಾ ಶಕ್ತಿ ಸಮಾಜಕ್ಕಾಗಿ ಮಾತ್ರ ಬೆಳಗಿದೆ. ಹಾಗಾದರೆ ಮಹಿಳೆಯರ ಸಬಲೀಕರಣದ ಬಗೆಗೆ ಮಾತನಾಡುವ ಪಕ್ಷಗಳ ಅಸಲಿ ಉದ್ದೇಶ ಯಾವುದು ಎಂಬ ಸಂದೇಹ ಬರುತ್ತದೆ. ಕಲ್ಯಾಣದ ಕ್ರಾಂತಿಯ ಕಾಲದಲ್ಲೇ ಮಹಿಳೆ ಚಿಂತನೆಗಳ ಚರ್ಚೆಗೆ ನಿಲ್ಲುತ್ತಿದ್ದಳು ಎಂಬುದನ್ನು ಚುನಾವಣಾ ಪ್ರಚಾರಗಳಲ್ಲಿ ಹೇಳುವವರಿಗೆ ಈ ತಿದ್ದುಪಡಿ ಕೂಡ ಕ್ರಾಂತಿಕಾರಿಯಾಗಲಿದೆ ಎಂದು ಏಕೆ ಅನಿಸಲಿಲ್ಲ? ಇಲ್ಲಿ ಎಲ್ಲಾ ಪ್ರಶ್ನೆಗಳಿಗೆ ಒಂದೇ ಉತ್ತರ, ರಾಜಕಾರಣ ಕೇವಲ ಕುಟುಂಬಗಳ ಪಾಳೆಗಾರಿಕೆಯಿಂದ ಮುಕ್ತವಾಗಬಾರದು ಎಂದು ಮಾತ್ರ. ಮುಂದಿನ ದಿನಗಳಲ್ಲಿ ಮಹಿಳಾ ಮೀಸಲಾತಿ ದೇಶದ ಅಗ್ರಹವಾಗಲಿದೆ.

ಬಯಲಿಗೆ ಬಂತು 'ಕಾರ್ಪೊರೇಟ್ ಜಿಹಾದ್'

ನೇರ ನೋಟ
• ದು.ಗು. ಲಕ್ಷ್ಮಣ
dugulakshman@yahoo.com



ಲವ್ ಜಿಹಾದ್, ಲ್ಯಾಂಡ್ ಜಿಹಾದ್ ಶಬ್ದಗಳ ಸಾಲಿಗೆ ಈಗ ಹೊಸತೊಂದು ಸೇರ್ಪಡೆ– ಕಾರ್ಪೊರೇಟ್ ಜಿಹಾದ್. ಇದೆಲ್ಲಾ ಸುಳ್ಳು, ಬರಿದೇ ಕೆಲವರ ಆರೋಪ ಎನ್ನುವವರು ಈಚೆಗೆ ನಾಸಿಕದ ಟಿಸಿಎಸ್ ಬಿಪಿಓ ಕಚೇರಿಯಲ್ಲಿ ನಡೆದ ವಿದ್ಯಮಾನವನ್ನು ಕೂಲಂಕಷವಾಗಿ ವಿಶ್ಲೇಷಿಸುವ ಅಗತ್ಯವಿದೆ. ಏಕೆಂದರೆ ಅಲ್ಲಿ ನಡೆದ ಕಾನೂನುಬಾಹಿರ, ಸಂವಿಧಾನ ಬಾಹಿರ ವಿದ್ಯಮಾನಗಳ ವಿರುದ್ಧ ಮಹಾರಾಷ್ಟ್ರ ಪೊಲೀಸರೇ ಎಫ್‌ಐಆರ್ ಹಾಕಿ ಏಳಕ್ಕೂ ಹೆಚ್ಚು ಟಿಸಿಎಸ್ ಸಿಬ್ಬಂದಿಗಳನ್ನು ಬಂಧಿಸಿದ್ದಾರೆ. ವಿದ್ಯಮಾನಕ್ಕೆ ಸಂಬಂಧಿಸಿದ ಮಹತ್ವದ ಹಲವು ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

ವೈಟ್ ಕಾಲರ್ ಉದ್ಯೋಗ, ಪ್ರತಿಷ್ಠಿತ ಕಂಪನಿ, ಕೈತುಂಬಾ ವೇತನ –ಇದು ಇಂದು ಐಟಿ–ಬಿಟಿ ಪದವೀಧರ – ಪದವೀಧರೆಯರ ಕನಸು. ಒಮ್ಮೆ ಇಂತಹದೊಂದು ಉದ್ಯೋಗ ದೊರೆಯಿತೆಂದರೆ ಜೀವನ ಸುಖಮಯ, ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಅಂತ ಅಂದುಕೊಳ್ಳುವವರೇ ಹೆಚ್ಚು. ಆದರೆ ಟಾಟಾ ಸಮೂಹದ ಅಂಗ ಸಂಸ್ಥೆಯಾದ ಟಿಸಿಎಸ್ (ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್) ನಾಸಿಕ್ ಕಚೇರಿಯಿಂದ ಹೊರ ಬಿದ್ದಿರುವ ಕರಾಳ ಸುದ್ದಿಗಳು ಐಟಿ ಉದ್ಯೋಗಿಗಳ ಹಾಗೂ ಅವರ ಪೋಷಕರ ಜಂಘಾಬಲವನ್ನೇ ಉಡುಗಿಸಿವೆ. ಕಚೇರಿಯೊಳಗೇ ಮಹಿಳಾ ಉದ್ಯೋಗಿಗಳಿಗೆ ಲೈಂಗಿಕ ಕಿರುಕುಳ, ಮಾನಸಿಕ ಹಿಂಸೆ, ಗೋಮಾಂಸ ತಿನ್ನುವಂತೆ ಒತ್ತಡ, ಜೊತೆಗೆ ಬಲವಂತದ ಮತಾಂತರಕ್ಕೆ ಆಗ್ರಹ ಮುಂತಾದ ಅಪಸವ್ಯಗಳು ಈಗಷ್ಟೇ ಆರಂಭವಾದದ್ದಲ್ಲ. 2022 ರಿಂದಲೇ ಈ ಅಪಸವ್ಯಗಳನ್ನು ಸಹಿಸಿಕೊಂಡು ಮಹಿಳಾ ಉದ್ಯೋಗಿಗಳು ಕಾರ್ಯನಿರ್ವಹಿಸಬೇಕಾಗಿತ್ತು. ತಮ್ಮ ಸಹೋದ್ಯೋಗಿಗಳು ಮತ್ತು ಟೀಮ್ ಲೀಡರ್‌ಗಳಿಂದ ಇಂತಹ ಕಿರುಕುಳಕ್ಕೊಳಗಾದವರು ಕಚೇರಿಯ ಎಚ್ ಆರ್ (ಮಾನವ ಸಂಪನ್ಮೂಲ) ವಿಭಾಗಕ್ಕೆ ದೂರು ನೀಡಿದರೆ, ಅದಕ್ಕೆ ಕ್ಯಾರೇ ಅನ್ನುವವರೇ ಇರಲಿಲ್ಲ. ನಿಮಗೆ ಉದ್ಯೋಗ ಖಾತ್ರಿ, ವೇತನ ಹೆಚ್ಚಳ ಬೇಕಿದ್ದರೆ ಇವೆಲ್ಲವನ್ನೂ ಸಹಿಸಿಕೊಂಡು ಹೋಗಬೇಕು ಎಂಬ ಬೇಜವಾಬ್ದಾರಿ ಉತ್ತರ. ಈ ಅಪಸವ್ಯಗಳಿಗೆ ಎಚ್ ಆರ್ ವಿಭಾಗದ ಕುಮ್ಮಕ್ಕು ಇತ್ತು ಎನ್ನುವುದಕ್ಕೆ ಇದೇ ಸಾಕ್ಷಿ.

ಟಿಸಿಎಸ್ ಕಂಪನಿಯಲ್ಲಿ ಸಿಬ್ಬಂದಿ, ಎಚ್ ಆರ್ ಜತೆಗೂಡಿ ಕಂಪನಿಗೆ ಹೊಸದಾಗಿ ಸೇರುವ ಮಹಿಳಾ ಉದ್ಯೋಗಿಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದರು. ಆ ಪೈಕಿ ಆರ್ಥಿಕವಾಗಿ ದುರ್ಬಲರಾಗಿರುವ, ಹಣದ ಅವಶ್ಯಕತೆ ತೀವ್ರವಾಗಿರುವವರ, ಜತೆಗೆ ಕೌಟುಂಬಿಕ ಸಮಸ್ಯೆಗಳನ್ನು ಎದುರಿಸುತ್ತಿರುವವರನ್ನು ಆಯ್ಕೆ ಮಾಡಿಕೊಂಡು ನಿಧಾನವಾಗಿ ಅವರನ್ನು ಬಿಡಿಸಿಕೊಳ್ಳಲಾರದ ಮಾನಸಿಕ ಬಲೆಯಲ್ಲಿ ಕೆಡವಲಾಗುತ್ತಿತ್ತು. ನಮಾಜ್ ಮಾಡುವಂತೆ, ಗೋಮಾಂಸ ತಿನ್ನುವಂತೆ ಬಲವಂತ; ಹಿಂದು ಯುವತಿಯರ ಬಳಿ ಈಶ್ವರ ಲಿಂಗವನ್ನು ಜನನಾಂಗಕ್ಕೆ ಹೋಲಿಸಿ, ಕೃಷ್ಣನನ್ನು ಸ್ತ್ರೀ ಲೋಲ, ದ್ರೌಪದಿ ವೇಶ್ಯೆ ಎಂದೆಲ್ಲ ಮುಸ್ಲಿಂ ಮ್ಯಾನೇಜರ್‌ಗಳಿಂದ ನಿಂದನೆ. ಅದರಿಂದ ಒಬ್ಬ ಹಿಂದು ಯುವತಿ ಎಷ್ಟರಮಟ್ಟಿಗೆ ಪ್ರಭಾವಿತಳಾಗಿದ್ದಳೆಂದರೆ ಮನೆಯವರ ಜೊತೆ ಜಗಳವಾಡಿ, ಮನೆಯಲ್ಲಿದ್ದ ಹಿಂದು ದೇವತೆ ಫೋಟೋ ಹೊರ ಹಾಕಿದ್ದಳು. ರಂಜಾನ್ ಮಾಸದಲ್ಲಿ ಈ ಯುವತಿ ಉಪವಾಸ ಮಾಡುತ್ತಿದ್ದುದನ್ನು ಮನೆಯವರೆ ಗಮನಿಸಿದ್ದರು.

ಬಿಪಿಓದಲ್ಲಿ ನಡೆಯುತ್ತಿದ್ದ ಘಟನೆಗಳ ಬಗ್ಗೆ ಅಲ್ಲಿನವರ್ಯಾರೂ ನೇರವಾಗಿ ದೂರು ನೀಡಿರದ ಕಾರಣ, ನಾಲ್ವರು ಪೊಲೀಸ್ ಪೇದೆಗಳು ಮಾರುವೇಷದಲ್ಲಿ ಆ ಕಚೇರಿಗೆ ಕೆಲಸದವರಾಗಿ ಸೇರಿಕೊಂಡು ಎರಡು ವಾರಗಳ ಕಾಲ ಅಲ್ಲಿ ನಡೆಯುತ್ತಿದ್ದ ಚಟುವಟಿಕೆ ಗಮನಿಸಿ ಮಾಹಿತಿ ಸಂಗ್ರಹಿಸಿದ್ದರು. ಈ ಮಾಹಿತಿಗಳ ಆಧಾರದಲ್ಲಿ ಎಸ್‌ಐಟಿ ರಚನೆಯಾಗಿ ಇದುವರೆಗೆ ಒಟ್ಟು ಏಳು ಮಂದಿ ಆರೋಪಿಗಳ ಬಂಧನವಾಗಿದೆ. ಎಚ್.ಆರ್ ವಿಭಾಗದ ಮಾಸ್ಟರ್ ಮೈಂಡ್ ನಿಧಾ ಖಾನ್ ಪರಾರಿಯಾಗಿದ್ದು, ಆಕೆಗಾಗಿ ಬಲೆ ಬೀಸಲಾಗಿದೆ. ಆಸಿಫ್ ಅನ್ಸಾರಿ, ಶಫಿ ಶೇಖ್, ಶಾರುಖ್ ಖುರೇಶಿ, ರಜಾ ಮೆಮನ್, ತೌಸಿಫ್ ಅಖ್ತರ್, ದಾನಿಶ್ ಶೇಖ್ ಮತ್ತು ಒಬ್ಬ ಮಹಿಳಾ ಎಚ್ ಆರ್ ಮ್ಯಾನೇಜರ್ ಬಂಧನಕ್ಕೊಳಗಾದವರು.



ಈ ಪ್ರಕರಣ ಬೆಳಕಿಗೆ ಬಂದ ನಂತರ ಟಿಸಿಎಸ್ ಬಾಸ್‌ಗಳು ಆರೋಪಿಗಳನ್ನು ಕೆಲಸದಿಂದ ವಜಾ ಮಾಡಿ, ತನಿಖೆಗೆ ಕಮಿಟಿ ರಚಿಸಲಾಗಿದೆ ಎನ್ನುತ್ತಿದ್ದಾರೆ. ಆರೋಪಿಗಳ ವಿರುದ್ಧ ನಮ್ಮದು ಶೂನ್ಯ ಸಹಿಷ್ಣುತೆ ಎಂದೂ ಬಡಾಯಿ ಬಿಟ್ಟಿದ್ದಾರೆ. ಇದೆಲ್ಲ ಕಂಪನಿಯ ಇಮೇಜ್ ಉಳಿಸಿಕೊಳ್ಳುವ ತಂತ್ರಗಾರಿಕೆ ಎಂಬುದು ಯಾರಿಗಾದರೂ ಅರ್ಥವಾಗುವ ಸಂಗತಿ. ನೂರಾರು ಉದ್ಯೋಗಿಗಳಿರುವ ಪ್ರತಿಷ್ಠಿತ ಕಂಪನಿಯ ಕಚೇರಿಯಲ್ಲಿ ಇಂತಹ ಬಲು ದೊಡ್ಡ ಹೇಯ ಅಪರಾಧಗಳು ನಡೆಯುತ್ತಿದ್ದರೂ ಆಡಳಿತ ಮಂಡಳಿಗೆ ಈ ವಿಷಯ ತಿಳಿಯಲೇ ಇಲ್ಲವೆ? ಆಡಳಿತ ಮಂಡಳಿಗೆ ಗೊತ್ತಿದ್ದೂ ಮೌನವಾಗಿದ್ದರೆ ಅದು ಕಂಪನಿಯ ವೈಫಲ್ಯ. ಒಂದು ವೇಳೆ ಗೊತ್ತೇ ಇರಲಿಲ್ಲವೆಂದರೆ ಆಡಳಿತ ವ್ಯವಸ್ಥೆ ಅದೆಷ್ಟು ಹದಗೆಟ್ಟು ಹೋಗಿದೆ ಎಂಬುದಕ್ಕೆ ನಿದರ್ಶನ. ದುಡಿಯುವ ಮಹಿಳೆಯರಿಗೆ ನೆಮ್ಮದಿಯ ವಾತಾವರಣ ಕಲ್ಪಿಸಲಾಗದ ಕಾರ್ಪೊರೇಟ್ ಕಂಪನಿಯಿಂದ ದೇಶಕ್ಕೆ ಏನು ಪ್ರಯೋಜನ? ಮತಾಂಧರ , ಕಾಮ ಪಿಪಾಸುಗಳ ಆಡೊಂಬಲವಾಗಿ ಕಾರ್ಪೊರೇಟ್ ಕಂಪನಿಗಳು ಬದಲಾಗುತ್ತಿವೆಯೆ? ಇದು ಇಡೀ ದೇಶದ ಮಾನವ ಸಂಪನ್ಮೂಲ ಮತ್ತು ನೈತಿಕತೆಗೆ ಬಿದ್ದ ಬಲವಾದ ಹೊಡೆತ.

ನಾಸಿಕ್‌ನ ಟಿಸಿಎಸ್ ಕರ್ಮಕಾಂಡ ಬೆಳಕಿಗೆ ಬರುತ್ತಿದ್ದಂತೆ ಇತರೆ ಎಂಎನ್‌ಸಿ ಕಂಪನಿಗಳಲ್ಲೂ ಇಂತಹುದೇ ಅಪಸವ್ಯಗಳು ನಡೆದಿರುವುದು ಒಂದೊಂದಾಗಿ ಬಯಲಿಗೆ ಬರುತ್ತಿವೆ. ಜಿಹಾದಿ ಜಾಲವೊಂದು ವ್ಯವಸ್ಥಿತವಾಗಿ, ಯೋಜನಾಬದ್ಧವಾಗಿ ದೇಶದೆಲ್ಲೆಡೆ ಇದನ್ನು ಕಾನೂನಿನ ಕಣ್ಣಿಗೆ ಮಣ್ಣೆರಚಿ ನಡೆಸುತ್ತಿದೆ ಎಂಬುದು ಸ್ಪಷ್ಟ. ನಾಸಿಕ್‌ನ ಟಿಸಿಎಸ್ ಕಂಪನಿಯ 300 ಮಂದಿ ಉದ್ಯೋಗಿಗಳಲ್ಲಿ 40 ಮಂದಿ ಮುಸ್ಲಿಮರೇ ಆಗಿದ್ದರಿಂದ ಹಿಂದೂ ಉದ್ಯೋಗಿಗಳ ಮೇಲೆ ಲೈಂಗಿಕ ಕಿರುಕುಳ, ಬಲವಂತದ ಮತಾಂತರ, ಗೋಮಾಂಸ ಸೇವನೆಗೆ ಒತ್ತಡ ಹೇರಲು ಸಾಧ್ಯವಾಗಿದೆ. ಮಹಿಳಾ ಉದ್ಯೋಗಿಗಳಿಗಷ್ಟೇ ಅಲ್ಲದೆ ಪುರುಷ ಉದ್ಯೋಗಿಗಳಿಗೂ ಜಿಹಾದಿಗಳು ಕಿರುಕುಳ ನೀಡಿದ್ದಾರೆ. ಮದುವೆಯಾಗಿ ಹಲವು ವರ್ಷಗಳಾದರೂ ಮಕ್ಕಳಿಲ್ಲದ ಹಿಂದು ಉದ್ಯೋಗಿಯೊಬ್ಬರಿಗೆ "ನಿನಗೆ ಮಗು ಬೇಕಿದ್ದರೆ ನಿನ್ನ ಹೆಂಡತಿಯನ್ನು ನಮ್ಮ ಬಳಿ ಕಳಿಸು'' ಎಂದು ಅತ್ಯಂತ ಅಸಭ್ಯವಾಗಿ ಮಾತಾಡಿದ್ದಾರೆ. ಜತೆಗೆ ಬಲವಂತವಾಗಿ ನಮಾಜ್ ಮಾಡಿಸಿ, ಕಲ್ಮ ಓದಿಸಿ, ತಲೆಗೆ ತುರುಕರ ಟೋಪಿ ಧರಿಸುವಂತೆ ಮಾಡಿದ್ದಾರೆ. ಈ ಸಂಗತಿಯನ್ನು ಇಂಡಿಯಾ ಟುಡೇಗೆ ನೀಡಿದ ಸಂದರ್ಶನದಲ್ಲಿ ಆ ಉದ್ಯೋಗಿ ಬಹಿರಂಗಗೊಳಿಸಿದ್ದಾರೆ. ಈ ಉದ್ಯೋಗಿಗೆ ಹೀಗೆ ಕಿರುಕುಳ ನೀಡಿದವರು ಟೀಮ್ ಲೀಡರ್ ಅಖ್ತರ್ ಮತ್ತು ಸಹೋದ್ಯೋಗಿ ಡ್ಯಾನಿಶ್ ಶೇಖ್.

ನಾಸಿಕ್ ಪ್ರಕರಣದ ಬೆನ್ನಲ್ಲೇ ಮಹಾರಾಷ್ಟ್ರದ ಅಮರಾವತಿಯಲ್ಲಿ 180ಕ್ಕೂ ಹೆಚ್ಚು ಅಪ್ರಾಪ್ತ ಹೆಣ್ಣುಮಕ್ಕಳ ಅಶ್ಲೀಲ ಚಿತ್ರ ಬಳಸಿಕೊಂಡು ಬ್ಲ್ಯಾಕ್ ಮೇಲ್ ಮಾಡುತ್ತಿದ್ದ 19ರ ಹರೆಯದ ಅಯಾನ್ ಅಹ್ಮದ್ ತನ್ವೀರ್ ಎಂಬ ಮರಿ ಜಿಹಾದಿಯನ್ನು ಪೊಲೀಸರು ಬಂಧಿಸಿದ್ದಾರೆ. ಆತನ ಮೊಬೈಲ್ ಹಾಗೂ ಲ್ಯಾಪ್‌ಟಾಪ್‌ಗಳಲ್ಲಿ 180 ಅಪ್ರಾಪ್ತೆಯರ 350ಕ್ಕೂ ಹೆಚ್ಚು ಅಶ್ಲೀಲ ಚಿತ್ರ ಪತ್ತೆಯಾಗಿವೆ. 2025ರ ಮಾರ್ಚ್‌ನಲ್ಲಿ ಕೇರಳದ ಕೊಟ್ಟಾಯಂ ಜಿಲ್ಲೆಯ ಮೀನಾಚಿಲ್ ತಾಲೂಕಿನಲ್ಲಿ ಕ್ರೈಸ್ತ ಸಮುದಾಯದ 400ಕ್ಕೂ ಹೆಚ್ಚು ಯುವತಿಯರು ಲವ್ ಜಿಹಾದ್ ಬಲೆಗೆ ಬಿದ್ದಿದ್ದು 41 ಯುವತಿಯರು ಮಾತ್ರ ಸುರಕ್ಷಿತವಾಗಿ ಮರಳಿ ಮನೆಗೆ ಸೇರಿದ್ದರು. ಇದನ್ನು ಕ್ರೈಸ್ತ ಮುಖಂಡ ಪಿ.ಸಿ. ಜಾರ್ಜ್ ಅವರೇ ಸಭೆಯೊಂದರಲ್ಲಿ ತಿಳಿಸಿದ್ದರು. ಬಿಜೆಪಿ ಆಡಳಿತದ ಮಧ್ಯಪ್ರದೇಶದಲ್ಲಿ 2020 ರಿಂದ ಇದುವರೆಗೆ ಇಂತಹ 283 ಲವ್ ಜಿಹಾದ್ ಪ್ರಕರಣಗಳು ನಡೆದಿವೆ. ಬೆಳಕಿಗೆ ಬಾರದ ಪ್ರಕರಣಗಳು ಅದೆಷ್ಟೋ ಇವೆ.


ಲವ್ ಜಿಹಾದ್ ಎನ್ನುವುದು ಒಂದು ವ್ಯವಸ್ಥಿತ ಜಾಲ. ಯಾವ ಹೆಣ್ಣು ಮಕ್ಕಳನ್ನು ಯಾವ ತಂತ್ರದ ಮೂಲಕ ಬಲೆಗೆ ಬೀಳಿಸಬೇಕು ಎಂಬ ಬಗ್ಗೆ ಜಿಹಾದ್ ಹುಡುಗರಿಗೆ ಸಾಕಷ್ಟು ತರಬೇತಿ ಹಾಗೂ ಪೂರ್ವ ಸಿದ್ಧತೆ ಒದಗಿಸಲಾಗಿರುತ್ತದೆ. ಬಹಳಷ್ಟು ಮಂದಿ ನಮ್ಮ ಮುಗ್ಧ ಹೆಣ್ಣು ಮಕ್ಕಳು ಇದ್ಯಾವುದರ ಅರಿವೇ ಇಲ್ಲದೆ ಜಿಹಾದಿಗಳ ಬಲೆಗೆ ಬಿದ್ದು ಒದ್ದಾಡುತ್ತಾರೆ. ಕೆಲವರು ವಯೋಸಹಜ ದೈಹಿಕ ಆಕರ್ಷಣೆಗೆ ಮರುಳಾದರೆ, ಇನ್ನು ಕೆಲವರು ಐಷಾರಾಮಿ ಜೀವನದ ಆಮಿಷಕ್ಕೆ ಮರುಳಾಗಿ ಜಿಹಾದಿಗಳ ಕಪಿಮುಷ್ಟಿಗೆ ಸಿಲುಕಿ ಹೊರಬರಲಾರದೆ ಪರಿತಪಿಸುತ್ತಾರೆ. ಸಂತ್ರಸ್ತರಲ್ಲಿ ಧೈರ್ಯವಾಗಿ ಮುಂದೆಬಂದು ದೂರು ನೀಡುವವರ ಸಂಖ್ಯೆ ತುಂಬಾ ಕಡಿಮೆ. ಜಿಹಾದಿಗಳಿಗೆ ಪ್ಲಸ್ ಪಾಯಿಂಟ್ ಆಗಿರುವುದು ಇದೇ ಅಂಶ. ಹಿಂದು ಹೆಣ್ಣು ಮಕ್ಕಳನ್ನು ಲೈಂಗಿಕ ಶೋಷಣೆಗೊಳಪಡಿಸಿ ಮತಾಂತರಿಸುವಲ್ಲಿ ಮುಸ್ಲಿಂ ಹೆಣ್ಣು ಮಕ್ಕಳ 'ಶಾಹೀನ್ ಗ್ಯಾಂಗ್'ನ ಕರಾಮತ್ತು ಸಾಕಷ್ಟಿದೆ. ಈಗ ತಲೆಮರೆಸಿಕೊಂಡಿರುವ ನಿಧಾ ಖಾನ್ ಈ 'ಶಾಹೀನ್ ಗ್ಯಾಂಗ್'ನ ಒಬ್ಬ ತಲೆ ತಿರುಕ ನಾಯಕಿ.

ಹಿಂದು ಯುವತಿಯರಿಗೆ ಆಸೆ ಆಮಿಷ ತೋರಿಸಿ, ಮತಾಂತರಿಸಿ, ಅವರನ್ನು ಹೆರಿಗೆ ಯಂತ್ರವನ್ನಾಗಿ ಮಾರ್ಪಡಿಸಿ, ಮುಸ್ಲಿಂ ಜನಸಂಖ್ಯೆಯನ್ನು ಬೆಳೆಸುವುದೇ ಇವೆಲ್ಲದರ ಹಿಂದಿನ ಹುನ್ನಾರ. 'ಘಜ್ವ–ಎ–ಹಿಂದ್' (conquest of India) ಗುರಿ ಸಾಧನೆಗೆ ಲವ್ ಜಿಹಾದ್‌ರ, ಕಾರ್ಪೊರೇಟ್ ಜಿಹಾದ್ ಇವೆಲ್ಲ ಪ್ರಮುಖ ಅಸ್ತ್ರಗಳು. ನಾಸಿಕದ ಟಿಸಿಎಸ್ ಪ್ರಕರಣ ಒಂದು ಆರಂಭ ಅಷ್ಟೇ. ಇಂತಹ ಲವ್ ಜಿಹಾದ್ ಪ್ರಕರಣಗಳು ಇನ್ನು ಮುಂದೆ ಕೋಚಿಂಗ್ ಸೆಂಟರ್‌ಗಳು, ಡ್ಯಾನ್ಸ್ ಕೇಂದ್ರಗಳು, ಜಿಮ್, ಯೋಗ, ಫಿಟ್ನೆಸ್ ತರಬೇತಿ ಕೇಂದ್ರ, ಕಾಲೇಜುಗಳು, ಶಾಲೆಗಳು, ವಿಶ್ವವಿದ್ಯಾಲಯಗಳು, ಬಿಪಿಓ/ಕೆಪಿಓ ಮುಂತಾದ ಕಡೆ ನಡೆಯುವುದರಲ್ಲಿ ಅನುಮಾನವೇ ಇಲ್ಲ.

ನಾವೇನೋ ನಮ್ಮ ಮನೆಯ ಹೆಣ್ಣು ಮಕ್ಕಳು ವಿದ್ಯಾವಂತರಾಗಿ, ಒಳ್ಳೆಯ ಉದ್ಯೋಗ ಹಿಡಿಯಲಿ. ಅವರ ಕಾಲ ಮೇಲೆ ಅವರೇ ನಿಲ್ಲುವಂತಾಗಲೆಂದು ಇಂತಹ ಕಡೆಗಳಿಗೆಲ್ಲ ಅವರನ್ನು ಕಳಿಸುತ್ತೇವೆ. ಆದರೆ ಅವರನ್ನು ಹೇಗೆ ಬಳಸಿಕೊಳ್ಳಬೇಕು, ಅವರ ಬದುಕನ್ನು ಹೇಗೆ ಹಿಂಡಿ ಹೊಸಕಿ ಹಾಕಬೇಕು ಎಂದು ಹೊಂಚು ಹಾಕಿ ಕಾದಿರುವ ವಿಕೃತ ಮನಸ್ಸುಗಳು ಎಲ್ಲೆಡೆಯಲ್ಲೂ ಇರುತ್ತವೆ. ಆದ್ದರಿಂದ ಜಾಗೃತರಾಗಿ. ಆಗಬಹುದಾದ ಅನಾಹುತವನ್ನು ಆಗದಂತೆ ತಡೆಗಟ್ಟಿರಿ. ಈಗಲೂ ನಾವು ಜಾಗೃತರಾಗದಿದ್ದರೆ ನಮ್ಮನ್ನು ಯಾವ ದೇವರು ಕೂಡ ಕಾಪಾಡಲಾರ.

ಸಾಮಾನ್ಯ ಮಾನಸಿಕ ಕಾಯಿಲೆಗಳು–2


ತಾರುಣ್ಯ ತಲ್ಲಣ
• ಡಾ.ಕೆ,ಆರ್, ಶ್ರೀಧರ್
drkrsridhar208@gmail.com



ಹರೆಯದವರ ಪ್ರತಿಭಟನಾ ನಡವಳಿಕೆ
(Opposition difiant disorder (ODD)

ಹದಿನಾಲ್ಕು ವರ್ಷ ವಯಸ್ಸಿನ ರಾಹುಲ್ ಒಂಭತ್ತನೇ ತರಗತಿಯ ವಿದ್ಯಾರ್ಥಿ. ತಾಯಿ ಸುಮಾ ಮಗನನ್ನು ಸಲಹೆಗಾಗಿ ಕರೆತಂದಿದ್ದರು. ರಾಹುಲ್ ತೊಂದರೆ ಏನೆಂದು ಕೇಳಿದೆ. ತಾಯಿ ಸುಮ, ನೋಡಿ ಸಾರ್ ಇವನನ್ನು ಹೇಗೆ ಸಂಭಾಳಿಸಬೇಕೆಂತಲೇ ಗೊತ್ತಾಗುತ್ತಿಲ್ಲ, ಒಬ್ಬನೇ ಮಗ ಎಂದು ಮುದ್ದಿನಿಂದ ಸಾಕಿದೆವು. ಅವನು ಕೇಳಿಕೇಳಿದ್ದನ್ನೆಲ್ಲ ಕೊಡಿಸುತ್ತಿದ್ದೆವು. ಚಿಕ್ಕವನಿದ್ದಾಗ ಬಹಳ ಚುರುಕಾಗಿದ್ದರಿಂದ ಎಲ್ಲರೂ ಹೊಗಳುತ್ತಿದ್ದರು. ಆಗಲೇ ಇವನ ಹಟ, ಸಿಟ್ಟು, ಅಬ್ಬರಾಟ ಜೋರಾಗಿತ್ತು. ಎಲ್ಲವೂ ತನಗೇ ಬೇಕು ಎಂದು ಹಟ ಮಾಡುತ್ತಿದ್ದ. ಒಂದೊಂದು ದಿನ ಶಾಲೆಗೆ ಹೋಗುವುದಿಲ್ಲ ಎಂದು ಹಟ ಹಿಡಿದು ಕೂರುತ್ತಿದ್ದ. ಒತ್ತಾಯಿಸಿದರೆ ಕೋಪಗೊಂಡು ನೆಲದ ಮೇಲೆ ಹೊರಳಾಡುತ್ತಿದ್ದ. ಇನ್ನೂ ಚಿಕ್ಕವನು ಇದೆಲ್ಲ ಮಕ್ಕಳಲ್ಲಿ ಸಹಜ, ದೊಡ್ಡವನಾದ ಮೇಲೆ ಸರಿ ಹೋಗ್ತಾನೆ ಎಂದು ಭಾವಿಸಿ ಇವನ ನಡವಳಿಕೆಗಳನ್ನು ಸಹಿಸಿಕೊಂಡೆವು. ಈಗ ಒಂದು ವರ್ಷ ಆಯ್ತು. ಕಂಡ ಕಂಡದ್ದಕ್ಕೆ ಸಿಡಿಮಿಡಿಗೊಳ್ತಾನೆ. ಇವನು ಹೇಳಿದ ಹಾಗೆ ನಾವು ಕೇಳ್ಬೇಕು. ಇಲ್ಲದಿದ್ದರೆ ಕೈಲಿರುವುದನ್ನು ಬಿಸಾಕಿ ರೂಮು ಬಾಗಿಲು ಹಾಕಿಕೊಳ್ತಾನೆ. ನೀವು ನನ್ನನ್ನು ಬೈತೀರಿ. ಅದಕ್ಕಾಗಿ ಈ ದಿನ ನಾನು ಸ್ಕೂಲಿಗೆ ಹೋಗಲ್ಲ ಎಂದು ಹಟ ಹಿಡಿಯುತ್ತಾನೆ. ಇವನ ಸ್ನೇಹಿತರನ್ನು ಹೊಗಳಿದರೆ ಸಹಿಸಿಕೊಳ್ಳುವುದಿಲ್ಲ. ನೋಡು ನಿನ್ನ ಸ್ನೇಹಿತ ಎಷ್ಟು ಸಮಾಧಾನದಿಂದ ಇರ್ತಾನೆ. ಹಾಗೆ ನೀನು ಸಮಾಧಾನದಿಂದ ಇರುವುದನ್ನು ಕಲಿಯಬೇಕು ಎಂದು ಬುದ್ಧಿವಾದ ಹೇಳುತ್ತೇನೆ. ಅದಕ್ಕೆ ನೀನೇನೂ ನನಗೆ ಹೇಳುವುದು ಬೇಡ. ನಿಮಗೆ ಅವನನ್ನು ಕಂಡರೆ ಪ್ರೀತಿ. ನನ್ನ ಕಂಡ್ರೆ ಆಗೋಲ್ಲ ಎಂದು ಕೋಪ ಮಾಡುತ್ತಾನೆ. ಯಾವಾಗ ಯಾರೊಂದಿಗೆ ಕೋಪಗೊಳ್ಳುತ್ತಾನೆ ಎಂದು ಹೇಳುವುದು ಕಷ್ಟ. ಹಾಗಾಗಿ ಈತನ ಸ್ನೇಹಿತರು ದೂರವಾಗಿದಾರೆ. ಇನ್ನೂ ಹೇಳುವುದು ಬೇಕಷ್ಟಿದೆ. ಇವನು ಸರಿಯಾಗೋದಕ್ಕೆ ಏನು ಮಾಡಬೇಕು ಅಂತ ಹೇಳಿ ಎಂದು ತಮ್ಮ ಮಾತು ಮುಗಿಸಿದರು.

ನನಗೆ ಅವಶ್ಯವಾದ ಮಾಹಿತಿಗಳನ್ನು ತಿಳಿದುಕೊಂಡೆ. ರಾಹುಲ್‌ನ ಮನಪರೀಕ್ಷೆ ಮಾಡಿದೆ. ಮನಪರೀಕ್ಷೆಯಲ್ಲಿ ದೊರೆತ ಮಾಹಿತಿಯನ್ನು ಸಂಕ್ಷಿಪ್ತವಾಗಿ ತಿಳಿಸಬೇಕೆಂದರೆ ರಾಹುಲ್ ಸರಾಸರಿ ಬುದ್ಧಿವಂತ ಹುಡುಗನಾಗಿದ್ದ. ಆದರೆ ಎಲ್ಲದರಲ್ಲೂ ತಾನೇ ಮೇಲು ಎಂಬ ಭಾವನೆ. ಯಾರಾದರೂ ಇಲ್ಲವೆಂದರೆ ಅವರ ಮೇಲೆ ರೇಗುತ್ತಿದ್ದ. ತನ್ನದೇ ಸರಿ, ಬೇರೆಯವರೆಲ್ಲರೂ ತಪ್ಪು ಎಂಬ ಭಾವನೆ ಅವನ ಮನದಾಳದಲ್ಲಿ ಬೇರೂರಿತ್ತು. ಭಾವನೆಗಳ ಮೇಲೆ ಹಿಡಿತವಿರಲಿಲ್ಲ. ಬೇರೆಯವರ ಕುರಿತು ಮೆಚ್ಚುಗೆಯ ಮಾತುಗಳನ್ನಾಡಿದರೆ ಸಹಿಸುತ್ತಿರಲಿಲ್ಲ.



ರಾಹುಲ್ ಹರೆಯದ ಪ್ರತಿಭಟನಾ ಕಾಯಿಲೆಯಿಂದ ನರಳುತ್ತಿದ್ದನೆಂಬುದು ಖಚಿತವಾಯಿತು. ರಾಹುಲ್ ತಾಯಿಯವರನ್ನು ಒಳಗೆ ಕರೆದು ರಾಹುಲ್ ಕಾಯಿಲೆ ಕುರಿತು ವಿವರಿಸಿದೆ. ಚಿಕಿತ್ಸೆ ಅವಶ್ಯಕವೆಂದು ಹೇಳಿದೆ.

ಹರೆಯದ ಪ್ರತಿಭಟನಾ ಕಾಯಿಲೆಯಲ್ಲಿ (Opposition difiant disorder (ODD) ಕೋಪ, ಕಿರಿಕಿರಿ ಸಾಮಾನ್ಯ. ಹಿರಿಯರು ಏನು ಹೇಳಿದರೂ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ. ಪ್ರತಿಯೊಂದು ವಿಷಯಕ್ಕೂ ಚರ್ಚೆ ಮಾಡುತ್ತಾರೆ. ಇವರು ಚರ್ಚಿಸುವುದನ್ನು ನೋಡಿದರೆ, ಬಹಳಬುದ್ಧಿವಂತರು ಎಂದು ಇತರರು ಭಾವಿಸುತ್ತಾರೆ. ತಮ್ಮದು ತಪ್ಪಿದ್ದರೂ ತಾವೇ ಸರಿ ಎಂದು ಸಮರ್ಥಿಸಿಕೊಳ್ಳುತ್ತಾರೆ.ಚಿಕ್ಕಪುಟ್ಟದ್ದಕ್ಕೂ ಸಿಡಿಮಿಡಿಗೊಳ್ಳುತ್ತಾರೆ ಎಲ್ಲ ಸಂದರ್ಭಗಳಲ್ಲೂ ತಾವೇ ಬುದ್ಧಿವಂತರೆಂದು ಭಾವಿಸುತ್ತಾರೆ. ಇತರರ ಕುರಿತು ಟೀಕೆ ಟಿಪ್ಪಣಿ ಮಾಡುವುದು ಇವರ ಅಭ್ಯಾಸ. ಆದರೆ ಯಾರಾದರೂ ತಮ್ಮ ಕುರಿತು ಟೀಕೆ ಮಾಡಿದರೆ ಅದನ್ನು ಸಹಿಸುವುದಿಲ್ಲ. ಇವರದ್ದು ಸೇಡಿನ ಮನೋಭಾವ. ಬೇರೆಯವರು ಏನಾದರೂ ಟೀಕೆ ಟಿಪ್ಪಣಿ ಮಾಡಿದರೆ ಅದನ್ನು ವರ್ಷಗಟ್ಟಲೇ ನೆನಪಿಟ್ಟು ಹಗೆ ತೀರಿಸಿಕೊಳ್ಳುತ್ತಾರೆ.

ಮೇಲಿನ ಲಕ್ಷಣಗಳು ಮೂರು ವರ್ಷದಿಂದ ಹತ್ತು ಹನ್ನೆರಡು ವರ್ಷ ವಯಸ್ಸಿನ ಅವಧಿಯಲ್ಲಿ ಆಗಿಂದಾಗ್ಗೆ ಕಾಣಿಸಿಕೊಳ್ಳುವುದು ಸಾಮಾನ್ಯ. ಇಂತಹವರ್ತನೆಗಳು ನಿರಂತರವಾಗಿ ಆರು ತಿಂಗಳಿಗೂ ಹೆಚ್ಚಿನ ಅವಧಿಗೆ ಕಾಣಿಸಿಕೊಂಡರೆ ಅದು ಕಾಯಿಲೆ ಎನಿಸಿಕೊಳ್ಳುತ್ತದೆ.

ಹರೆಯದವರ ಪ್ರತಿಭಟನಾ ಕಾಯಿಲೆಯನ್ನು ಗುರುತಿಸಿ, ಅದಕ್ಕೆ ಸರಿಯಾದ ಚಿಕಿತ್ಸೆ ದೊರೆಯದಿದ್ದರೆ ಅದು ದೊಡ್ಡವರಾದ ಮೇಲೂ ಹಾಗೇ ಉಳಿಯುತ್ತದೆ. ಇದರಿಂದ ಶಾಲಾ ಕಾಲೇಜುಗಳಲ್ಲಿ ಇವರು ತೊಂದರೆ ಅನುಭವಿಸಬೇಕಾಗುತ್ತದೆ. ಸಾಮಾಜಿಕವಾಗಿ ಸ್ನೇಹಿತರನ್ನು ಗಳಿಸಿಕೊಳ್ಳುವುದಿಲ್ಲ. ಕೆಲವು ಸಂದರ್ಭಗಳಲ್ಲಿ ದಾಂಪತ್ಯ ಸಮಸ್ಯೆ ಉಂಟಾಗಿ ವಿವಾಹ ವಿಚ್ಛೇದನ ಆದ ಉದಾಹರಣೆಗಳು ಸಾಕಷ್ಟಿವೆ.

ಹರೆಯದವರ ಪ್ರತಿಭಟನಾ ಕಾಯಿಲೆಗೆ ಕಾರಣಗಳು ಹಲವಾರು. ಮುಖ್ಯವಾಗಿ ವಂಶಾವಳಿ, ಕೌಟುಂಬಿಕ ವಾತಾವರಣ, ಮತ್ತು ಮಿದುಳಿನ ನರಕೋಶಗಳ ಸಮೂಹಗಳಲ್ಲಿ ಆಗುವ ವ್ಯತ್ಯಾಸಗಳು. ಪ್ರತಿಭಟನಾ ಕಾಯಿಲೆಗೆ ತುತ್ತಾದವರ ಕುಟುಂಬದಲ್ಲಿ, ಕೆಲವು ಮಾನಸಿಕ ಕಾಯಿಲೆಗಳಿಂದ ನರಳುವವರ ಸಂಖ್ಯೆ ಹೆಚ್ಚು ಎಂದು ಅಧ್ಯಯನಗಳು ತಿಳಿಸುತ್ತವೆ. ಪ್ರತಿಭಟನಾ ಕಾಯಿಲೆಯಿಂದ ನರಳುವ ಕೆಲವರು ಅತಿ ಚೇಷ್ಟೆ, ವ್ಯಕ್ತಿತ್ವ ದೋಷ, ಖಿನ್ನತೆ ಇವುಗಳಿಂದಲೂ ನರಳುತ್ತಾರೆ. ಇಂಥವರಲ್ಲಿ ಆತಂಕದ ಲಕ್ಷಣಗಳೂ ಕಂಡುಬರಬಹುದು. ಈ ಕಾಯಿಲೆಯಿಂದ ಬಳಲುವವರಲ್ಲಿ ಮಿದುಳಿನ ನರಕೋಶಗಳ ಕ್ರಿಯೆಗಳಲ್ಲಿ ವ್ಯತ್ಯಾಸಗಳಿರುತ್ತವೆ ಮತ್ತು ನರವಾಹಕಗಳ ವ್ಯತ್ಯಾಸವೂ ಕಾರಣ ಎಂದು ತಜ್ಞರ ಅಭಿಪ್ರಾಯ.

ಕೌಟುಂಬಿಕ ಪರಿಸರವೂ ಒಂದು ಪ್ರಮುಖವಾದ ಕಾರಣ. ಬಾಲ್ಯದಲ್ಲಿ ಅತಿ ಮುದ್ದು, ಮಕ್ಕಳ ಚೇಷ್ಟೆಗಳನ್ನು ವೈಭವೀಕರಿಸಿ ಪ್ರೋತ್ಸಾಹಿಸುವುದು ಒಂದೆಡೆಯಾದರೆ, ಅತಿಯಾದ ಶಿಕ್ಷೆ, ತಿರಸ್ಕಾರ ಮನೋಭಾವ ಇವೂ ಪ್ರತಿಭಟನಾ ವರ್ತನೆಗೆ ಕಾರಣಗಳು. ಕೆಲವು ವೇಳೆ ಪೋಷಕರ ವರ್ತನೆಯೂ ಹರೆಯದವರ ಪ್ರತಿಭಟನಾ ವರ್ತನೆಗೆ ಕಾರಣವಾಗಹುದು. ಹರೆಯದವರ ಪ್ರತಿಭಟನಾ ವರ್ತನೆಗೆ ಇನ್ನೊಂದು ಮುಖ್ಯವಾದ ಕಾರಣ ನಕಾರಾತ್ಮಕ ಮತ್ತು ವ್ಯಸನ ನಿರತ ಗೆಳೆಯರ ಸಹವಾಸ. ನಕಾರಾತ್ಮಕ ವರ್ತನೆಗಳನ್ನು ಪ್ರೋತ್ಸಾಹಿಸುವ ಗೆಳೆಯರು ಇವು ಪ್ರತಿಭಟನಾ ವರ್ತನೆಯನ್ನು ಪೋಷಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ.

ಚಿಕಿತ್ಸೆ: ಈ ಕಾಯಿಲೆಯ ಚಿಕಿತ್ಸೆಗೆ ಮುಖ್ಯವಾದುದು ಆಪ್ತ ಸಲಹೆಯಲ್ಲಿ ರೋಗಿಯೊಂದಿಗೆ, ಕುಟುಂಬಕ್ಕೂ ಆಪ್ತ ಸಲಹೆ ನೀಡಬೇಕು. ಪೋಷಕರು ಮಕ್ಕಳೊಂದಿಗೆ ಪ್ರೀತಿಯಿಂದ, ಮಧುರವಾದ ಮಾತುಗಳಿಂದ ಅವರೊಂದಿಗೆ ಆತ್ಮೀಯತೆಯಿಂದ ವರ್ತಿಸಬೇಕು. ಅವರ ಅಹವಾಲುಗಳನ್ನು ಸಹನೆಯಿಂದ ಆಲಿಸಬೇಕು. ಒಳ್ಳೆಯ ಮಾತುಗಳಿಂದ ಯಾವುದು ಸರಿ, ಯಾವುದು ತಪ್ಪು, ಯಾವುದರಿಂದ ಭವಿಷ್ಯಕ್ಕೆ ಒಳ್ಳೆಯದಾಗುತ್ತದೆ, ಯಾವುದರಿಂದ ಒಳ್ಳೆಯದಾಗುವುದಿಲ್ಲ ಎಂಬುದನ್ನು ಮೃದು ಮಾತುಗಳಿಂದ ತಿಳಿಸಿ ಹೇಳಬೇಕು. ಇದಕ್ಕೆ ಪೋಷಕರ ಚಿಕಿತ್ಸೆ ಎಂದು ಕರೆಯುತ್ತಾರೆ. ಪೋಷಕರು ಮಕ್ಕಳನ್ನು ಬಾಲ್ಯದಿಂದಲೂ ಸರಿಯಾದ ಪ್ರೀತಿ ಪ್ರೇಮಗಳೊಂದಿಗೆ ಆತ್ಮೀಯತೆಯಿಂದ ನಡೆಸಿಕೊಳ್ಳಬೇಕು. ಮಕ್ಕಳಿಗೆ ಜೀವನ ಕೌಶಲಗಳನ್ನು ರೂಢಿಗೊಳಿಸಿದಾಗ,ಆದರಿಂದ ಹರೆಯದ ಪ್ರತಿಭಟನಾ ವರ್ತನೆಯನ್ನು ಸಂಪೂರ್ಣವಲ್ಲದಿದ್ದರೂ ಬಹುಪಾಲು ಒಳ್ಳೆಯ ವರ್ತನೆಯಾಗಿ ಪರಿವರ್ತಿಸಬಹುದು.

ಹರೆಯದ ಪ್ರತಿಭಟನಾ ವರ್ತನೆ ಚಿಕಿತ್ಸೆಯಲ್ಲಿ ಶಾಲೆಯ ಪಾತ್ರವೂ ಮಹತ್ವದ ಪಾತ್ರ ವಹಿಸುತ್ತದೆ. ಇಂತಹ ವಿದ್ಯಾರ್ಥಿಗಳು ತರಗತಿಗೆ ಸರಿಯಾಗಿ ಹೋಗುವುದಿಲ್ಲ. ಪಾಠ ಓದಲು, ಏಕಾಗ್ರತೆಯ ಕೊರತೆ ಕಾಣಬಹುದು. ಕೆಲವು ಸಂದರ್ಭಗಳಲ್ಲಿ ಸಹಪಾಠಿಗಳೊಂದಿಗೆ ಜಗಳ, ಉಪಾಧ್ಯಾಯರೊಂದಿಗೆ ಅನುಚಿತ ವರ್ತನೆಯನ್ನು ಇಂಥವರಲ್ಲಿ ಕಾಣಬಹುದು. ಆದರಿಂದ ಇವರು ಕಲಿಕೆಯಲ್ಲಿ ಹಿಂದುಳಿಯುತ್ತಾರೆ. ಇದನ್ನು ಗುರುತಿಸಿ ಅಂಥವರಿಗೆ ಸಕಾರಾತ್ಮಕ ಮಾರ್ಗದರ್ಶನ ಮಾಡಬೇಕು. ಇಂಥಹ ವಿದ್ಯಾರ್ಥಿಗಳೊಂದಿಗೆ ಆಪ್ತ ಸಮಾಲೋಚನೆ ಮಾಡಬೇಕು.ಇವುಗಳನ್ನು ಶಿಕ್ಷಕರು ಅನುಸರಿಸಿದಾಗ ಪ್ರತಿಭಟನೆಯ ತೀವ್ರತೆ ಕಡಿಮೆಯಾಗಿ ಅಂಥವರು ಕಲಿಕೆಯಲ್ಲಿ ಉತ್ತಮ ಸಾಧನೆ ಮಾಡುತ್ತಾರೆ. ಹರೆಯದವರ ಪ್ರತಿಭಟನಾ ಕಾಯಿಲೆಯ ಚಿಕಿತ್ಸೆಯಲ್ಲಿ ಗೆಳೆಯರ ಪಾತ್ರವು ಮುಖ್ಯ. ಹರೆಯದವರು ಪೋಷಕರಿಗಿಂತ ಗೆಳೆಯರ ಸಲಹೆಗಳನ್ನು ಪಾಲಿಸುತ್ತಾರೆ. ಆತ್ಮೀಯ ಗೆಳೆಯರು ರೋಗಿಯ ಪೋಷಕರೊಂದಿಗೆ ಕೂಡಿಕೊಂಡು ಸಕಾರಾತ್ಮಕ ಸಲಹೆಗಳನ್ನು ನೀಡಿದರೆ ಆದರಿಂದಲೂ ಕಾಯಿಲೆಯಿಂದ ಹೊರಬರಲು ಸಾಧ್ಯ.

ಕೆಲವರಿಗೆ ಈ ಕಾಯಿಲೆಯೊಂದಿಗೆ, ಖಿನ್ನತೆ, ಅತಿಯಾದ ಆತಂಕದ ಕಾಯಿಲೆ ಮತ್ತು ಬುದ್ಧಿಭ್ರಮಣೆ ಇದ್ದಾಗ ಅಂಥವರಿಗೆ ಅವಶ್ಯವಾದ ಔಷಧೋಪಚಾರಗಳು ಅವಶ್ಯ.

'ಬೆಕ್ಕ'ಸ ಬೆರಗಾಗಿಸಿದ ಬೆಕ್ಕಿನ ಪ್ರಕರಣ!

ವಾರದ ವರಸೆ
• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



'ಪೆಟ್ ಆ್ಯನಿಮಲ್'ಗಳ ಪೈಕಿ ಜನಪ್ರಿಯ ಪ್ರಾಣಿ ಯಾವುದು ಎಂದು ಯಾರಾದರೂ ಕೇಳಿದರೆ, 'ಬೆಕ್ಕು' ಎಂದು ಹಿಂದೆ ಮುಂದೆ ನೋಡದೇ ಹೇಳಬಹುದು. ಆದರೆ ನೀವಿದನ್ನು ಎಲ್ಲೇ, ಯಾರದೇ ಮನೆಯಲ್ಲಿ ನಿಂತು ಹೇಳಿದರೂ ಕೂಡಾ, ಇದನ್ನು ಹೇಳಿ ಮುಗಿಸುವುದರೊಳಗೆ ಒಂದಿಲ್ಲೊಂದು ಬೆಕ್ಕು ನಿಮ್ಮ ಹಿಂದೆ ಹಿಂದೆಯೇ ಬಂದು, ನಿಮ್ಮ ಕಾಲಿಗೆ ದೇಹವನ್ನು ಉಜ್ಜುತ್ತಾ, ಕಾಲು ಕಾಲಿಗೆ ಅಡ್ಡ ಬರುತ್ತಾ, ಹೇಗೋ ನಿಮ್ಮ ಗಮನವನ್ನು ಸೆಳೆಯಲು, ನಿಮಗೆ ಹತ್ತಿರವಾಗಲು ಇನ್ನಿಲ್ಲದಂತೆ ಪ್ರಯತ್ನಿಸುತ್ತದೆ. ಕೆಲವು ಮನೆಗಳಲ್ಲಂತೂ ಲಿವಿಂಗ್ ರೂಮ್‌ನಲ್ಲಿ ಒಂದು, ಬೆಡ್ ರೂಮ್‌ನಲ್ಲಿ ಇನ್ನೊಂದು, ಕಿಚನ್‌ನಲ್ಲಿ ಮತ್ತೆರಡು, ಮನೆಯ ಹೊರ ಆವರಣದಲ್ಲಿ ಮೂರ್ನಾಲ್ಕು ಎಲ್ಲವೂ ಒಟ್ಟಾಗಿ ಇದೇನು ಮನೆಯೋ ಅಥವಾ ಬೆಕ್ಕುಗಳ 'ಬಿಗ್‌ಬಾಸ್' ಮನೆಯೋ ಎಂಬ ಪ್ರಶ್ನೆ ಮೂಡದೇ ಇರಲಾರದು. ಏನೇ ಆದರೂ ಅದೆಷ್ಟೋ ಜನರಿಗೆ ಬೆಕ್ಕು ಎಂದರೆ ಮುದ್ದು ಹಾಗೂ ಅದನ್ನು ತಮ್ಮ ಮನೆಯ ಪಟ್ಟದ ಅರಸಿಯೋ ಎಂಬಂತೆ ಅತೀವ ಜತನ ಮತ್ತು ಕಾಳಜಿಯಿಂದ ನೋಡಿಕೊಳ್ಳುತ್ತಾರೆ. ಈ ಕಾರಣದಿಂದಲೇ ಮಿಕ್ಕೆಲ್ಲಾ ಪ್ರಾಣಿಗಳಿಗಿಂತಲೂ ಬೆಕ್ಕಿಗೇ ಹೆಚ್ಚಿನ ಪ್ರಾಶಸ್ತ್ಯ.

ಇಂತಿಪ್ಪ ಸರ್ವರ ನೆಚ್ಚಿನ ಪೆಟ್ ಆ್ಯನಿಮಲ್ ಎನಿಸಿಕೊಂಡ ಬೆಕ್ಕು ಎರಡು ಮನೆಯವರ ನಡುವೆ ಇನ್ನೇನು ಭಾರೀ ಪೆಟ್ಟು ಏರ್ಪಟ್ಟಿತೇನೋ ಎಂಬಂಥ ಸನ್ನಿವೇಶವೊಂದು ನಿರ್ಮಾಣವಾಗಲು ಕಾರಣವಾಯಿತು. ಈ ಪ್ರಕರಣದ ಹಿನ್ನೆಲೆಯಲ್ಲಿ ಆ ಎರಡೂ ಮನೆಯವರು ಹಿಡಿದ ಪಟ್ಟು, ಘಟಾಘಟ್ ಎಂದು ಅದು ಸುಖಾಂತ್ಯ ಕಾಣದೇ ಕೊನೆಗೆ ಅದು ಠಾಣೆಯ ಮೆಟ್ಟಿಲು ಏರಿದ್ದು, ನಂತರ ಅದು ಮಾಧ್ಯಮಗಳಲ್ಲಿ ವರದಿ ಆಗಿದ್ದು ಎಲ್ಲವನ್ನೂ ಗಮನಿಸುತ್ತಿದ್ದರೆ 'ಅಯ್ಯೋ ಬೆಕ್ಕೇ ಇದೇನು ನಿನ್ನ ಸೊಕ್ಕೇ?' ಎಂದು ಕೇಳದೇ ಇರಲಾಗದು. ಪೆಟ್ ಆ್ಯನಿಮಲ್ ಆಗಿದ್ದಾಗ ಇಷ್ಟೆಲ್ಲಾ ಜನಪ್ರಿಯತೆ, ಸುದ್ದಿ, ಮೀಡಿಯಾ ಕವರೇಜ್ ಗಳಿಸಲು ಎಂದೂ ಶಕ್ತವಾಗದ ಬೆಕ್ಕು, ಈ 'ಪೆಟ್ಟು–ಪಟ್ಟು' ಪ್ರಕರಣದಿಂದಾಗಿ ದಿನಬೆಳಗಾಗುವುದರೊಳಗೆ ಎಲ್ಲಾ ಮಾಧ್ಯಮಗಳಲ್ಲೂ ಮೆಲ್ಲಗೆ ತನ್ನ ಮೀಸೆಯನ್ನು ತುರುಕಿ, ಒಂದು ಅಭಿಮಾನದ(ಅಥವಾ ಅಭಿಮಾನ ಭಂಗದ?) ನಗುವನ್ನು ಬೀರುತ್ತಿರುವುದರಲ್ಲಿ ಯಾವುದೇ ಅನುಮಾನವಿಲ್ಲ. ಹೀಗೆ ಬೆಕ್ಕುಗಳ ಸಮಾಚಾರವನ್ನು ಮಾಧ್ಯಮಗಳಲ್ಲಿ ಓದಿದ ಅದೆಷ್ಟೋ ಜನರು ಈ ಪ್ರಕರಣ, ಅದರ ಸ್ವರೂಪ, ಪರಿಣಾಮಗಳನ್ನು ಗಮನಿಸಿ ಒಮ್ಮೆ ಬೆಕ್ಕಸಬೆರಗಾಗಿದ್ದಂತೂ ಸುಳ್ಳಲ್ಲ. ಮೇಲಾಗಿ ಇದು ಬೆಕ್ಕಿಗೆ ಸಂಬಂಧಿಸಿದ ವಿರಳಾತಿವಿರಳ ಪ್ರಕರಣವೂ ಆಗಿರುವುದರಿಂದ ಯಾರೇ ಆದರೂ 'ಬೆಕ್ಕ'ಸಬೆರಗಾಗಲೇಬೇಕಲ್ಲವೇ?



ಅಷ್ಟಕ್ಕೂ ಆ ಪ್ರಕರಣ ಏನದು ಎಂದು ಕೇಳುತ್ತಿರುವಿರಾ? ಬೆಕ್ಕು ಒಂದು ಮನೆಯಲ್ಲಿ ಮರಿ ಹಾಕಿದೆ. ಆದರೆ ಆ ಮನೆಯವರು ಮರಿಗಳನ್ನು ಆದರಿಸಿ, ಲಾಲನೆ–ಪಾಲನೆ ಮಾಡಿ ಇವುಗಳೆಲ್ಲ ನಮ್ಮವು, ನಮ್ಮವು ಎಂದು ವಿಶಾಲ ಮನೋಭಾವ ತೋರುವ ಬದಲಿಗೆ, ಆ ಮರಿಗಳ ತಂದೆಯ ತಲಾಶ್‌ಗೆ ಇಳಿದಿದ್ದಾರೆ. ಅಂವ(ಬೆಕ್ಕಿನ ತಂದೆ) ಯಾರವ ಯಾರವ ಎಂದು ಹುಡುಕಿ, ಎಲ್ಲಾ ನೆಲೆಯಲ್ಲೂ ಅವಲೋಕಿಸಿ ಕೊನೆಗೆ ಪಕ್ಕದ ಮನೆಯ ಬೆಕ್ಕೇ ಈ ಮರಿಗಳ ಜನ್ಮದಾತ ಎಂಬ ನಿಲುವಿಗೆ ಬಂದಿದ್ದಾರೆ. ಅಷ್ಟೇ ಅಲ್ಲದೇ ಈ ಮರಿಗಳ ಹುಟ್ಟಿಗೆ ಕಾರಣವಾದ ಬೆಕ್ಕು ನಿಮ್ಮ ಮನೆಯಲ್ಲೇ ಇರುವ ಕಾರಣದಿಂದ ಈ ಮರಿಗಳು ನಿಮ್ಮ ಮನೆಗೇ ಸೇರಿದ್ದು, ನೀವೇ ನೋಡಿಕೊಳ್ಳಬೇಕು, ಇಲ್ಲವಾದರೆ ನಿಮ್ಮ ಹುಟ್ಟಡಗಿಸಿಬಿಡುವೆ ಎಂದು ಬೆದರಿಕೆ ಹಾಕಿ, ಮರಿಗಳನ್ನು ಗೃಹಾಂತರ ಮಾಡಿಸಿದ್ದಾರೆ. ಅಷ್ಟಕ್ಕೇ ಸುಮ್ಮನಾಗದ ಆ ಮನೆಯವರು, 'ಮರಿಗಳ ಜನ್ಮದಾತ ನಮ್ಮ ಮನೆಯ ಬೆಕ್ಕೇ ಎನ್ನುವುದಕ್ಕೆ ನಿಮ್ಮಲ್ಲೇನಿದೆ ಸಾಕ್ಷಿ?' ಎಂದು ಅವರು ತಿರುಗಿಬಿದ್ದಿದ್ದಾರೆ. ಬೆಕ್ಕುಗಳು ಅಲ್ಲೆಲ್ಲೋ ಆಡಿಕೊಂಡು ಆರಾಮಾಗಿ ಇದ್ದರೆ ಈ ಎರಡೂ ಮನೆಯವರು ಮಾತಿಗೆ ಮಾತು ಬೆಳೆಸಿ, ಜಗಳದ ಜಳದಲ್ಲಿ ಬೆಂದು, ಹೊಡೆದಾಡಿಕೊಳ್ಳುವ ಮಟ್ಟಕ್ಕೆ ತಲುಪಿ ಕೊನೆಗೆ ಠಾಣೆಯ ಮೆಟ್ಟಿಲೇರಿದ್ದಾರೆ. ಪೊಲೀಸ್ ಮಧ್ಯಸ್ಥಿಕೆಯಲ್ಲಿ ನಾಲ್ಕು ಮರಿಗಳ ಪೈಕಿ ಎರಡನ್ನು ತಾಯಿ ಬೆಕ್ಕಿನ ಮನೆಯ ಕಡೆಯವರಿಗೂ, ಇನ್ನೆರಡನ್ನು ತಂದೆ ಬೆಕ್ಕಿನ ಮನೆಯ ಕಡೆಯವರಿಗೂ ಹಂಚುವ ಮೂಲಕ ಬೆಕ್ಕು ಮರಿ ಹಾಕಿದ ಪ್ರಕರಣ ಸುಖಾಂತ್ಯ ಕಂಡಿತಷ್ಟೇ!

ಇನ್ನು ಪ್ರಾಣಿ–ಪಕ್ಷಿಗಳ ಕುರಿತಂತೆ ತೋರ್ಪಡಿಕೆಯ ಕಾಳಜಿ ತೋರುವ, ಅದಕ್ಕೆಂದೇ ಸಂಘಟನೆಗಳನ್ನು ಕಟ್ಟಿಕೊಂಡು ಹೋರಾಡುವವರ ಗಮನಕ್ಕೇನಾದರೂ ಈ ಪ್ರಕರಣ ಬಂದು, ಇವರೂ ಇದರಲ್ಲಿ ಒಂದು ಸ್ಟ್ಯಾಂಡ್ ತೆಗೆದುಕೊಳ್ಳುವುದು ಎಂದೇನಾದರೂ ನಿರ್ಧಾರ ಮಾಡಿ ಮುಂದೆ ಬಂದರೆ, ಆಗ 'ಇಲ್ಲ ಮರಿ ಯಾರಿಗೆ ಸೇರಬೇಕು ಎನ್ನುವುದನ್ನು, ಖುದ್ದು ಆ ಮರಿಗಳನ್ನೇ ಕೇಳಿ ನಿರ್ಧಾರಕ್ಕೆ ಬರಬೇಕಿತ್ತು' ಎಂದು ಹೊಸತೊಂದು ಹಕ್ಕೊತ್ತಾಯ ಮಾಡುತ್ತಿದ್ದರೋ ಏನೋ. ಆದರೆ ಇದಾವುದರ ಪರಿವೆಯೇ ಇಲ್ಲದ ಸಹೋದರ/ಸಹೋದರಿಯರಂತಿರುವ ಆ ಪುಟ್ಟ ಪುಟ್ಟ ಮರಿಗಳು ಎರಡೂ ಮನೆಗಳ ನಡುವೆ ಹಂಚಿ ಹೋದರೂ, ಒಂದೇ ಮನೆಯವರಂತೆ ಎರಡೂ ಕಡೆಗಳಲ್ಲೂ ಆಡಿಕೊಂಡು ನೆಮ್ಮದಿಯಾಗಿ ಇರಬಹುದು.

ಈ ಪ್ರಕರಣ ಬಟಾಬಯಲಾಗಿ, ''ಅಲ್ಲಾ ಯಾರಾದರೂ ಇಂಥ ಸಣ್ಣ ಪುಟ್ಟ ವಿಷಯಕ್ಕೆಲ್ಲಾ ಹೀಗೆ ಕೈಕೈ ಮಿಲಾಯಿಸುವ ಮಟ್ಟಕ್ಕೆ ಇಳಿಯುತ್ತಾರೆಯೇ?'' ಎಂದು ಎಲ್ಲರೂ ಹೇಳುವಾಗ, ಅದನ್ನು ಕೇಳಿಸಿಕೊಂಡು ಆ ಮನೆಯವರು ಕೈ ಕೈ ಹಿಸುಕಿಕೊಳ್ಳಬೇಕಷ್ಟೇ. ಏನೋ ಕಹಿ ಗಳಿಗೆಯಲ್ಲಿ ಹೀಗೆಲ್ಲ ಆಯಿತು ಎಂದು ಅದೆಷ್ಟೇ ಹೇಳಿ ತಣ್ಣಗಾಗಿಸುವ ಪ್ರಯತ್ನ ಮಾಡಿದರೂ ಕೂಡಾ ಆ ಮನೆಯವರ ನೆಮ್ಮದಿಯಂತೂ ಒಂದು ಮಟ್ಟಿಗೆ ಹಾಳು ಎನ್ನುವುದರಲ್ಲಿ ಎರಡು ಮಾತಿಲ್ಲ.

ಈ ಸಾಕು ಪ್ರಾಣಿ ಮರಿಹಾಕಿದ ಪ್ರಕರಣದ ವಿಷಯದಲ್ಲಿ ಮಧ್ಯ ಪ್ರವೇಶ ಮಾಡಿದ ಪೊಲೀಸರ ಪರಿಸ್ಥಿತಿ, 'ಅಯ್ಯಯ್ಯೋ.. ಸಾಕಪ್ಪಾ ಸಾಕು ಈ ಸಹವಾಸ...' ಎನ್ನದೇ ಬೇರೆ ವಿಧಿಯಿಲ್ಲ. ಒಂದಂತೂ ನಿಜ ಇದೂ ಕೂಡಾ ಮರೆಯಲಾರದ ಅಲ್ಲಲ್ಲ 'ಮರಿ'ಯಲಾರದ ಪ್ರಸಂಗವೇ ಸರಿ. ಕೊನೆಗೂ ಆ ಎರಡೂ ಮನೆಯವರು ರಾಜಿ ಪಂಚಾಯಿತಿಕೆಗೆ ಒಪ್ಪಿದ್ದಕ್ಕೆ ಬಚಾವ್ ಇಲ್ಲದೇ ಹೋದರೆ, ಬೆಕ್ಕಿನ ಮರಿಗಳು ಹಾಗೂ ಬೆಕ್ಕುಗಳ ಡಿಎನ್ಎ ಪರೀಕ್ಷೆ ನಡೆಸಿಯೇ ನಿರ್ಧಾರ ಮಾಡಬೇಕಾಗಿತ್ತೇನೋ. ತನ್ಮೂಲಕ ಇದೊಂದು ಇನ್ನೂ ಅತೀ ವಿಶೇಷ ಪ್ರಸಂಗ ಎನಿಸಿ, ಇತಿಹಾಸದ ಪುಟಗಳಲ್ಲಿ ದಾಖಲಾಗುವ ಸಾಧ್ಯತೆ ಖಂಡಿತ ಇತ್ತು. ಸದ್ಯ ಹಾಗಾಗಲಿಲ್ಲ! ಇದು ಮಾದರಿ ಪ್ರಕರಣವಾಗಿ ಬೇರೆಡೆಗಳಲ್ಲೂ ಮರುಕಳಿಸಿದರೆ, ಹಾದಿ–ಬೀದಿಗಳಲ್ಲಿ ಪುಟ್ಟ ಪುಟ್ಟ ಬೆಕ್ಕಿನ ಮರಿಗಳನ್ನು ಬೇಕಾಬಿಟ್ಟಿ ಬಿಟ್ಟು ಹೋಗುವವರು, 'ಬೆಕ್ಕಿನ ಮರಿ ಯಾರಿಗೆ ಸೇರಿದ್ದು?' ಎಂಬ ಸಮಸ್ಯೆಯ ಇತ್ಯರ್ಥಕ್ಕೆ ನಿಲ್ಲಬೇಕಾದ ಪರಿಸ್ಥಿತಿ ಉದ್ಭವಿಸುವುದು ಜೋಕೆ!

ಇನ್ನು ಪ್ರತಿನಿತ್ಯ ರಾತ್ರಿಯಾಗುತ್ತಿದ್ದಂತೆ ಎಲ್ಲಾ ಅಕ್ಕಪಕ್ಕದ ಬೆಕ್ಕುಗಳೂ ಒಂದೆಡೆ ಸೇರಿ ತಮ್ಮ ನಿತ್ಯದ ಮೀಟಿಂಗ್ ನಡೆಯುತ್ತಿದೆಯೋ ಎಂಬಂತೆ ತರಹೇವಾರಿ ಶಬ್ದಗಳನ್ನು ಹೊರಡಿಸಲು ಶುರುವಿಟ್ಟುಕೊಳ್ಳುತ್ತವೆ. ಇನ್ನು ತಮ್ಮ ತಮ್ಮ ಬೆಕ್ಕಿನ ಮಾಲಕರುಗಳು ಈ ವಿಷಯದಲ್ಲಿ ಕೊಂಚ ಜಾಗ್ರತೆ ವಹಿಸದೇ ಹೋದರೆ ಈ ಪ್ರಕರಣದಂಥದ್ದೇ ಅಪವಾದ ಬೆಕ್ಕಿನ ಕಾರಣಕ್ಕೆ ಆ ಮನೆಯವರ ಮೇಲೆಯೂ ಬರಬಹುದೆನಿಸುತ್ತದೆ. ಇದೆಲ್ಲ ತಲೆಬಿಸಿಯೇ ಬೇಡವೆಂದು, ಖುದ್ದು ಸರ್ಕಾರವೇ ಈಗಾಗಲೇ ಅಲ್ಲಲ್ಲಿ ಹೇಳುತ್ತಿರುವಂತೆ ಪ್ರಾಣಿಗಳ ಸಂತಾನಹರಣ ಚಿಕಿತ್ಸೆ ಬೆಕ್ಕುಗಳ ಮೇಲೂ ಪ್ರಯೋಗಿಸಲು ಮುಂದಾಗುವುದೇ ಲೇಸು ಎಂದು ಕೆಲವರು ಅಂದುಕೊಳ್ಳಬಹುದು. ಅಯ್ಯೋ ನಮ್ಮಷ್ಟಕ್ಕೆ ನಾವು ಪರಮ ನಿಶ್ಚಿಂತೆಯಿಂದ ನಮ್ಮ ಸಂತಾನವನ್ನು ಬೆಳೆಸುತ್ತಿದ್ದರೆ, ಈ ಮಾನವರು ಅದಕ್ಕೂ ಕಲ್ಲು ಹಾಕುತ್ತಿದ್ದಾರಲ್ಲ ಎಂದು ಆ ಬೆಕ್ಕುಗಳೇ ಹಿಡಿಶಾಪ ಹಾಕಿ ಗುರ್ರೆಂದು ಗುಟುರು ಹಾಕಲಿಕ್ಕೂ ಸಾಕು.

ಬೆಕ್ಕುಗಳ ಕುರಿತಾದ ಈ ಪ್ರಕರಣವು, ಮನುಷ್ಯರು ಪರಸ್ಪರ ಮಾರಾಮಾರಿಗೆ ಇಳಿಯುವಷ್ಟು ಗಂಭೀರಸ್ವರೂಪವನ್ನು ಪಡೆದುಕೊಂಡಿದೆ ಎಂದರೆ ಬೆಕ್ಕುಗಳನ್ನು 'ಮಾರ್–ಜಾಲ' ಎಂದು ಕರೆಯುವುದು ಈ ಕಾರಣಕ್ಕೂ ಅತ್ಯಂತ ಸೂಕ್ತವಾಗಿದೆ ಎಂದು ಹೇಳಬಹುದು. ಇನ್ನು ಇಲ್ಲಿ ನಡೆದ ನ್ಯಾಯ ಪಂಚಾಯಿತಿಕೆ, ಅದರ ಪ್ರಕ್ರಿಯೆ ಇತ್ಯಾದಿಗಳನ್ನು ಒಟ್ಟಾರೆಯಾಗಿ 'ಮಾರ್ಜಾಲ ನ್ಯಾಯ' ಎಂದೂ ಹೇಳಬಹುದು. 'ಬೆಕ್ಕಿಗೆ ಚೆಲ್ಲಾಟ, ಇಲಿಗೆ ಪ್ರಾಣ ಸಂಕಟ' ಎಂದಿರುವುದು ಈ ಪ್ರಕರಣವನ್ನು ನೋಡಿದ ಮೇಲೆ 'ಬೆಕ್ಕಿಗೆ ಚೆಲ್ಲಾಟ, ಮನುಷ್ಯರಿಗೆ ಪ್ರಾಣ ಸಂಕಟ' ಎಂದು ಬದಲಾಯಿಸಬಹುದು. ಬೆಕ್ಕು ಸನ್ಯಾಸಿಯಾದ ಕತೆ ಬಹಳ ಹಿಂದಿನಿಂದಲೂ ತುಂಬಾ ಜನಪ್ರಿಯವಾಗಿತ್ತು, ಆದರೆ ಈ ಪ್ರಕರಣದಿಂದ ಬೆಕ್ಕು ಸಂಸಾರಿಯಾದ ಕತೆಯೂ ಹಾಗೆಯೇ ಜನಪ್ರಿಯವಾದಂತಾಯಿತು. ಏನಂತೀರಿ?!

ಓವರ್‌ಡೋಸ್: 'ಬೆಕ್ಕಿಗೆ ಗಂಟೆ ಕಟ್ಟುವರಾರು?' ಎಂದು ಕೇಳಿದ್ದಕ್ಕೆ ಅದ್ಯಾರೋ 'ಪೊಲೀಸರು!' ಅಂದರಂತೆ.

ಏ.22ಕ್ಕೆ ಕದನ ವಿರಾಮ ಅಂತ್ಯ

ಶಾಂತಿ ಮಾತುಕತೆಗೆ ಪಾಕ್ ಸಕಲ ಸಿದ್ಧತೆ

•ಇಸ್ಲಾಮಾಬಾದ್: ಅಮೆರಿಕ-ಇರಾನ್ ನಡುವಿನ ಎರಡನೇ ಹಂತದ ಕದನ ವಿರಾಮ ಮಾತುಕತೆ ಪಾಕಿಸ್ತಾನದಲ್ಲಿ ಸೋಮವಾರ ನಡೆಯಲಿದ್ದು, ವಿದೇಶಿ ಪ್ರತಿನಿಧಿಗಳ ಆಗಮನದ ಹಿನ್ನೆಲೆಯಲ್ಲಿ ಪಾಕಿಸ್ತಾನ ಕಠಿಣ ಭದ್ರತಾ ಕ್ರಮಗಳನ್ನು ಜಾರಿಗೊಳಿಸಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಅಮೆರಿಕ ಮತ್ತು ಇರಾನ್ ನಿಯೋಗಗಳು 45 ವರ್ಷಗಳ ಬಳಿಕ ಮೊದಲ ಬಾರಿಗೆ ನೇರ ಮಾತುಕತೆಗಳನ್ನು ನಡೆಸಿದ್ದು, ತಮ್ಮ ನಡುವಿನ ಸಂಘರ್ಷ ಅಂತ್ಯಗೊಳಿಸುವ ಉದ್ದೇಶ ಹೊಂದಿದ್ದವು. ಆದರೆ ಏ.11 ಮತ್ತು 12ರಂದು ಇಸ್ಲಾಮಾಬಾದ್‌ನಲ್ಲಿ ನಡೆದಿದ್ದ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಮುಕ್ತಾಯಗೊಂಡವು. ಯುದ್ಧ ಅಂತ್ಯಗೊಳಿಸುವ ಒಪ್ಪಂದವಾಗಿ ದ್ವಿತೀಯ ಹಂತದ ಮಾತುಕತೆಗಳನ್ನು ಇಲ್ಲಿ ನಡೆಸಲು ಪಾಕ್ ತನ್ನ ರಾಜತಾಂತ್ರಿಕ ಪ್ರಯತ್ನಗಳನ್ನು ಪುನರಾರಂಭಿಸಿದೆ. ದ್ವಿತೀಯ ಹಂತದ ಚರ್ಚೆ ನಡೆಸಲು ಎರಡೂ ರಾಷ್ಟ್ರಗಳ ನಿಯೋಗಗಳ ಮನವೊಲಿಸುವಲ್ಲಿ ಪಾಕ್ ಯಶಸ್ವಿಯಾಗಿದೆ.

ರಾವಲ್ಪಿಂಡಿ ಸಂಪೂರ್ಣ ಬಂದೋಬಸ್ತ್!: ಪೊಲೀಸ್ ವಕ್ತಾರರ ಪ್ರಕಾರ, ವಿದೇಶಿ ಪ್ರತಿನಿಧಿಗಳ ಆಗಮನದ ಹಿನ್ನೆಲೆ ಅಸಾಮಾನ್ಯ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾವಲ್ಪಿಂಡಿಯಲ್ಲಿ 10,000ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, 600ಕ್ಕೂ ಹೆಚ್ಚು ತಪಾಸಣಾ ಕಂದಕಗಳನ್ನು ಸ್ಥಾಪಿಸಲಾಗಿದೆ. ಇಸ್ಲಾಮಾಬಾದ್‌ನಲ್ಲೂ ಇದೇ ರೀತಿಯ ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇರಾನ್ ಜೊತೆಗೆ ಒಪ್ಪಂದಕ್ಕೆ ಸಹಿ ಮಾಡಲು ಪಾಕಿಸ್ತಾನಕ್ಕೆ ಭೇಟಿ ನೀಡುವ ಸಾಧ್ಯತೆ ಹಿನ್ನೆಲೆ, ಅಧಿಕಾರಿಗಳು ಭದ್ರತಾ ಕ್ರಮಗಳನ್ನು ಇನ್ನಷ್ಟು ಹೆಚ್ಚಿಸಿದ್ದಾರೆ. ಅಮೆರಿಕ ಮತ್ತು ಇರಾನ್ ನಡುವಿನ ಯುದ್ಧ ವಿರಾಮ ಏ.22ರಂದು ಮುಕ್ತಾಯಗೊಳ್ಳಲಿದೆ.

ಅಮೆರಿಕದ ಅಧಿಕಾರ ಪ್ರಶ್ನಿಸಿದ ಇರಾನ್

•ಟೆಹ್ರಾನ್: ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ನಿಯಂತ್ರಿಸುವ ಅಮೆರಿಕದ ಅಧಿಕಾರವನ್ನು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯನ್ ಭಾನುವಾರ ಸಾರ್ವಜನಿಕ ಭಾಷಣವೊಂದರಲ್ಲಿ ಪ್ರಶ್ನಿಸಿದ್ದಾರೆ. ಯಾವುದೇ ಅಪರಾಧದ ದಾಖಲೆಯಿಲ್ಲದೆ ಇರಾನ್ ತನ್ನ ಪರಮಾಣು ಹಕ್ಕುಗಳನ್ನು ಬಳಸಿಕೊಳ್ಳಲು ಸಾಧ್ಯವಿಲ್ಲ ಎಂಬ ಡೊನಾಲ್ಡ್ ಟ್ರಂಪ್ ಹೇಳಿಕೆಯನ್ನು ಟೀಕಿಸಿದ ಅವರು, ಇರಾನ್ ತನ್ನ ಸ್ವಂತ ತಂತ್ರಜ್ಞಾನ ಪಡೆಯುವುದನ್ನು ನಿರಾಕರಿಸಲು ಯುಎಸ್‌ಗೆ ಯಾವುದೇ ಅಧಿಕಾರವಿಲ್ಲ ಎಂದರು.ಪರಮಾಣು ವಿಷಯಗಳ ಬಗ್ಗೆ ಭಿನ್ನಾಭಿಪ್ರಾಯಗಳ ಹೊರತಾಗಿಯೂ ವಾಷಿಂಗ್ಟನ್ ಮತ್ತು ಟೆಹ್ರಾನ್ ನಡುವೆ ಮಾತುಕತೆಗಳು ಮುಂದುವರಿಯುತ್ತಿರುವಾಗ ಈ ಹೇಳಿಕೆಗಳು ಬಂದಿವೆ. ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಘೇರ್ ಘಾಲಿಬಾಫ್ ಶನಿವಾರ ತಡರಾತ್ರಿ ಮಾತುಕತೆಯಲ್ಲಿ ಕೆಲವು ಪ್ರಗತಿಯಾಗಿದೆ ಎಂದಿದ್ದಾರೆ. ಆದರೆ ಪ್ರಮುಖ ಭಿನ್ನಾಭಿಪ್ರಾಯಗಳು ಮತ್ತು ಮೂಲಭೂತ ಅಂತರಗಳು ಉಳಿದಿವೆ ಎಂದಿದ್ದಾರೆ. ಯುಎಸ್ ಮತ್ತು ಇಸ್ರೇಲಿ ದಾಳಿಗಳು ವಿಶ್ವಸಂಸ್ಥೆಯ ಚಾರ್ಟರ್ ಮತ್ತು ಪರಮಾಣು ಪ್ರಸರಣ ರಹಿತ ಒಪ್ಪಂದವನ್ನು ಉಲ್ಲಂಘಿಸುತ್ತವೆ ಎಂದು ಇರಾನ್ ಪ್ರತಿಪಾದಿಸುತ್ತಿದೆ.

ಹತ್ಯೆಗೀಡಾಗಿ ತಿಂಗಳಾದರೂ ನಡೆದಿಲ್ಲ ಖಮೇನಿ ದಫನ್!

•ಟೆಹ್ರಾನ್: ಅಮೆರಿಕ-ಇಸ್ರೇಲ್ ನಡೆಸಿದ್ದ ಜಂಟಿ ವೈಮಾನಿಕ ದಾಳಿಗೆ ಇರಾನ್ ಸರ್ವೋಚ್ಚ ನಾಯಕ ಆಯತ್ತೊಲ್ಲಾ ಅಲಿ ಖಮೇನಿ ಹತ್ಯೆಗೀಡಾಗಿ ತಿಂಗಳಾದರೂ ಅಂತ್ಯಕ್ರಿಯೆ ನಡೆದಿಲ್ಲ. ಬೃಹತ್ ಸಾರ್ವಜನಿಕ ಅಂತ್ಯಸಂಸ್ಕಾರ ನಡೆಸಲು ಭದ್ರತಾ ಅಪಾಯ ಎದುರಾಗುವ ಸಾಧ್ಯತೆ ಇರುವ ಕಾರಣ ಖಮೇನಿ ಅಂತ್ಯಕ್ರಿಯೆಗಾಗಿ ಅಧಿಕಾರಿಗಳು ಇನ್ನೂ ಪರಿಶೀಲನೆ ನಡೆಸುತ್ತಿದ್ದಾರೆ. ಫೆ.28ರಂದು ಟೆಹ್ರಾನ್‌ನಲ್ಲಿರುವ ಖಮೇನಿ ನಿವಾಸವನ್ನೇ ಗುರಿಯಾಗಿಸಿ ಅಮೆರಿಕಾ ಮತ್ತು ಇಸ್ರೇಲ್ ನಡೆಸಿದ ಜಂಟಿ ವೈಮಾನಿಕ ದಾಳಿಗೆ ಬಲಿಯಾಗಿದ್ದರು. ಖಮೇನಿ ಸಾವು ಇನ್ನಷ್ಟು ದೊಡ್ಡ ಮಟ್ಟದ ಸಂಘರ್ಷಕ್ಕೆ ಕಾರಣವಾಯಿತು. ಆದರೆ ರೂಢಿಯಂತೆ ಅಂತ್ಯಕ್ರಿಯೆ ನಡೆದಿಲ್ಲ; ಅವರ ದೇಹವನ್ನು ಇನ್ನೂ ಸಮಾಧಿ ಮಾಡಲಾಗಿಲ್ಲ.ಮಾ.4ರಿಂದ ಮೂರು ದಿನಗಳ ರಾಜ್ಯ ಅಂತ್ಯಕ್ರಿಯೆ ನಡೆಸಲು ಇರಾನ್ ಯೋಜನೆ ಹಾಕಿಕೊಂಡಿತ್ತು. ಆದರೆ ಅಮೆರಿಕಾ-ಇಸ್ರೇಲ್‌ನ ಭಾರೀ ಬಾಂಬ್ ದಾಳಿಗಳ ನಡುವೆ ಆ ಯೋಜನೆ ಕೈಬಿಡಲಾಯಿತು. ಬಳಿಕ ಅಧಿಕಾರಿಗಳು ಅಭೂತಪೂರ್ವ ಜನಸಾಗರ ನಿರೀಕ್ಷೆಯೇ ವಿಳಂಬಕ್ಕೆ ಕಾರಣವೆಂದು ಹೇಳಿದರು. ಖಮೇನಿ ಹುಟ್ಟೂರು, 50 ಲಕ್ಷ ಜನಸಂಖ್ಯೆ ಮತ್ತು ಶಿಯಾ ಇಸ್ಲಾಂನ ಅತ್ಯಂತ ಪವಿತ್ರ ಇಮಾಮ್ ರೆಜಾ ಮಸೀದಿ ಇರುವ ಮಶದ್ ನಗರವನ್ನು ಖಮೇನಿ ಅಂತ್ಯಕ್ರಿಯೆಗೆ ಪರಿಗಣಿಸುವ ಸಾಧ್ಯತೆಯಿದೆ.

2026ರಲ್ಲಿ ಮಂಡಿಸಲಾದ ಮಹಿಳಾ ಮೀಸಲಾತಿ ಸಂಬಂಧಿತ ಮಸೂದೆಗಳು ಲೋಕಸಭೆಯಲ್ಲಿ ಶೇ.33 ಮಹಿಳಾ ಪ್ರಾತಿನಿಧ್ಯವನ್ನು ಖಚಿತಪಡಿಸುವ ಮಹದುದ್ದೇಶ ಹೊಂದಿದ್ದವು. ಕ್ಷೇತ್ರ ಮರುವಿಂಗಡಣೆ ಆವಶ್ಯಕತೆಯನ್ನು ಸರಳಗೊಳಿಸಿ, 2029ರ ಸಾರ್ವತ್ರಿಕ ಚುನಾವಣೆಯಿಂದಲೇ ಪ್ರಯೋಜನ ಪಡೆಯುವಂತೆ ರೂಪಿಸಲಾಗಿದೆ. ಸ್ಥಾನಗಳ ಹೆಚ್ಚಳ ಮತ್ತು ಸಮಾನ ಪ್ರಾತಿನಿಧ್ಯಕ್ಕೆ ಒತ್ತು ನೀಡಲಾಗಿತ್ತು.

ಮಹಿಳಾ ಮೀಸಲಾತಿ ಮಸೂದೆ ಅವಶ್ಯಕತೆ

ಕ್ರ.ಸಂ.	ರಾಜ್ಯ	ಒಟ್ಟು ಸ್ಥಾನಗಳು 543	ಪ್ರಸ್ತುತ ಸ್ಥಿತಿ (543ರ ಶೇಕಡಾವಾರು) 50% ಹೆಚ್ಚಳ (ಅಂದಾಜು)	ಪರಿಷ್ಕೃತ ಸ್ಥಿತಿ (816ರ %)
ಕರ್ನಾಟಕ	28	5.15%	42	5.14%
ಆಂಧ್ರಪ್ರದೇಶ	25	4.60%	38	4.65%
ತೆಲಂಗಾಣ	17	3.13%	26	3.18%
ತಮಿಳುನಾಡು	39	7.18%	59	7.23%
ಕೇರಳ	20	3.68%	30	3.67%
ಒಟ್ಟು	129	23.76%	195	23.87%

•(543 ಸ್ಥಾನಗಳಿಂದ 816 ಸ್ಥಾನಗಳಿಗೆ - ಶೇ.50 ಹೆಚ್ಚಳದ ಮಾದರಿ)



1 2026ರ ಏ.16ರಂದು ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಯಾವ ಮಸೂದೆಗಳನ್ನು ಮಂಡಿಸಿತು?

2026ರ ಏ.16ರಂದು, ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮೂರು ಪ್ರಮುಖ ಮಸೂದೆಗಳನ್ನು ಮಂಡಿಸಿತು:

- **ಸಂವಿಧಾನ (131ನೇ ತಿದ್ದುಪಡಿ) ಮಸೂದೆ, 2026**
- **ಕ್ಷೇತ್ರ ಮರುವಿಂಗಡಣೆ (Delimitation) ಮಸೂದೆ, 2026**
- **ಕೇಂದ್ರಾಡಳಿತ ಪ್ರದೇಶಗಳ ಕಾಯ್ದೆಗಳ (ತಿದ್ದುಪಡಿ) ಮಸೂದೆ, 2026**

2 ಈ ಮೂರು ಮಸೂದೆಗಳನ್ನು ಇದೇ ಸಮಯದಲ್ಲಿ ಪರಿಚಯಿಸಲು ಕಾರಣ?

ನಾರಿ ಶಕ್ತಿ ವಂದನಾ ಅಧಿನಿಯಮದ ಪ್ರಕಾರ, ಮಹಿಳಾ ಮೀಸಲಾತಿಯನ್ನು 2026ರ ನಂತರ ನಡೆಯುವ ಜನಗಣತಿಯ ನಂತರದ ಕ್ಷೇತ್ರ ಮರುವಿಂಗಡಣೆಯ ಆಧಾರದ ಮೇಲೆ ಜಾರಿಗೆ ತರಬೇಕಾಗುತ್ತದೆ. ಒಂದು ವೇಳೆ ಸರ್ಕಾರವು ಜನಗಣತಿ ಮತ್ತು ಕ್ಷೇತ್ರ ಮರುವಿಂಗಡಣೆಗಾಗಿ ಕಾಯುತ್ತಿದ್ದರೆ, ಈ ಪ್ರಕ್ರಿಯೆ ಹೆಚ್ಚು ಸಮಯ ತೆಗೆದುಕೊಳ್ಳುವುದರಿಂದ 2029ರ ಸಾರ್ವತ್ರಿಕ ಚುನಾವಣೆಯಲ್ಲಿಯೂ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿಯ ಪ್ರಯೋಜನ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ, ಅರ್ಧದಷ್ಟು ಜನಸಂಖ್ಯೆಗೆ ಸಕಾಲದಲ್ಲಿ ಪ್ರಯೋಜನಗಳನ್ನು ಖಚಿತಪಡಿಸಿಕೊಳ್ಳಲು, ಕಾಯ್ದೆಯ ಅನುಷ್ಠಾನವನ್ನು ಈ ಷರತ್ತಿನಿಂದ ಮುಕ್ತಗೊಳಿಸುವುದು ಅಗತ್ಯವೆಂದು ಪರಿಗಣಿಸಲಾಯಿತು.

3 ಈ ಮಸೂದೆಗಳು ಅಂಗೀಕಾರವಾಗಿದ್ದರೆ ಆಗುತ್ತಿದ್ದ ಪ್ರಯೋಜನಗಳೇನು?

ಈ ಮಸೂದೆಗಳು ಅನುಮೋದನೆ ಪಡೆದಿದ್ದರೆ, ಮಹಿಳೆಯರು 2029ರ ಸಾರ್ವತ್ರಿಕ ಚುನಾವಣೆಯಲ್ಲೇ ಲೋಕಸಭೆಯಲ್ಲಿ ಶೇ.33ರಷ್ಟು ಮೀಸಲಾತಿಯನ್ನು ಪಡೆಯಲು ಸಾಧ್ಯವಾಗುತ್ತಿತ್ತು.

4 ಕ್ಷೇತ್ರ ಮರುವಿಂಗಡಣೆಯನ್ನು ನಾರಿ ಶಕ್ತಿ ವಂದನಾ ಅಧಿನಿಯಮದೊಂದಿಗೆ ಯಾಕೆ ಜೋಡಿಸಲಾಯಿತು ಮತ್ತು ಸ್ಥಾನಗಳನ್ನು ಹೆಚ್ಚಿಸುವ ಪ್ರಸ್ತಾವನೆ ಯಾಕಿತ್ತು?

ಕ್ಷೇತ್ರ ಮರುವಿಂಗಡಣೆ ಎಂದರೆ ಒಂದು ಕ್ಷೇತ್ರದ ಗಡಿಯನ್ನು ಅಂತಿಮಗೊಳಿಸುವುದು. ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಇದು ಅತ್ಯಗತ್ಯ. ಲೋಕಸಭೆಯ ಸ್ಥಾನಗಳ ಮಿತಿಯನ್ನು 1976ರಲ್ಲಿ 550ಕ್ಕೆ ನಿಗದಿಪಡಿಸಲಾಗಿತ್ತು. 1971ರಲ್ಲಿ ಭಾರತದ ಜನಸಂಖ್ಯೆ 54 ಕೋಟಿ ಇತ್ತು. ಇಂದು ಅದು 140 ಕೋಟಿ ಆಗಿದೆ. ಆದ್ದರಿಂದ, ಲೋಕಸಭೆಯಲ್ಲಿ ಸ್ಥಾನಗಳನ್ನು 850ಕ್ಕೆ ಹೆಚ್ಚಿಸುವ ಅಗತ್ಯವಿದೆ. ಇದು ಸಂಸತ್ತಿನಲ್ಲಿ ಜನರ ನ್ಯಾಯಯುತ ಪ್ರಾತಿನಿಧ್ಯವನ್ನು ಸಕ್ರಿಯಗೊಳಿಸುತ್ತದೆ.

5 ರಾಜಕೀಯ ಲಾಭಕ್ಕಾಗಿ ಕ್ಷೇತ್ರ ಮರುವಿಂಗಡಣಾ ಆಯೋಗದ ಕಾಯ್ದೆಯನ್ನು ಮಾರ್ಪಡಿಸುವ ಪ್ರಯತ್ನ ನಡೆದಿದೆಯೇ? ಇದರಿಂದ ನಡೆಯುತ್ತಿರುವ ರಾಜ್ಯ ಚುನಾವಣೆಗಳ ಮೇಲೆ ಪರಿಣಾಮ ಬೀರಲಿದೆಯೇ?

ಕ್ಷೇತ್ರ ಮರುವಿಂಗಡಣಾ ಆಯೋಗದ ಕಾಯ್ದೆಗೆ ಯಾವುದೇ ಬದಲಾವಣೆ ಪ್ರಸ್ತಾಪಿಸಿಲ್ಲ, ಅಸ್ತಿತ್ವದಲ್ಲಿರುವ ಕಾನೂನು ಚೌಕಟ್ಟು ಹಾಗೆಯೇ ಇರುತ್ತದೆ ಮತ್ತು ಆಯೋಗದ ಯಾವುದೇ ಶಿಫಾರಸುಗಳಿಗೆ ಸಂಸತ್ತಿನ ಅನುಮೋದನೆ ಮತ್ತು ರಾಷ್ಟ್ರಪತಿಗಳ ಒಪ್ಪಿಗೆ ಅಗತ್ಯವಿರುತ್ತದೆ. ತಮಿಳುನಾಡು ಅಥವಾ ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿ ನಡೆಯುವ ಚುನಾವಣೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ, ಏಕೆಂದರೆ 2029ರವರೆಗಿನ ಚುನಾವಣೆಗಳು ಪ್ರಸ್ತುತ ವ್ಯವಸ್ಥೆಯಡಿಯಲ್ಲೇ ನಡೆಯಲಿವೆ.

6 ಲೋಕಸಭೆಯ ಸ್ಥಾನಗಳನ್ನು 850ಕ್ಕೆ ಹೆಚ್ಚಿಸುವುದರ ಹಿಂದಿರುವ ತರ್ಕವೇನು?

ಈ ಪ್ರಸ್ತಾವನೆಯು ಅನುಪಾತದ ವಿಸ್ತರಣೆಯ ವಿಧಾನವನ್ನು ಆಧರಿಸಿದೆ. ಸ್ಥಾನಗಳಲ್ಲಿ ಏಕರೂಪದ ಶೇ.50ರಷ್ಟು ಹೆಚ್ಚಳವು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಅನುಪಾತವನ್ನು ಸ್ಥಿರವಾಗಿರಿಸುತ್ತದೆ. ಪ್ರಸ್ತುತ ಇರುವ 543 ಸ್ಥಾನಗಳಿಗೆ ಈ ತತ್ವವನ್ನು ಅನ್ವಯಿಸಿದರೆ ಸುಮಾರು 815 ಸ್ಥಾನಗಳಾಗುತ್ತವೆ. ಆದ್ದರಿಂದ, ಲೋಕಸಭೆಯ ಸ್ಥಾನಗಳ ಗರಿಷ್ಠ ಮಿತಿಯನ್ನು ಪ್ರಸ್ತುತ ಇರುವ 550ರಿಂದ 850ಕ್ಕೆ ಹೆಚ್ಚಿಸಲಾಯಿತು.

7 ಹೊಸ ಕ್ಷೇತ್ರ ಮರುವಿಂಗಡಣಾ ಪ್ರಸ್ತಾವನೆಯಿಂದ ದಕ್ಷಿಣದ ಅಥವಾ ಸಣ್ಣ ರಾಜ್ಯಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆಯೇ?

ಇಲ್ಲ, ಎಲ್ಲಾ ರಾಜ್ಯಗಳು ಸ್ಥಾನಗಳಲ್ಲಿ ಏಕರೂಪದ ಶೇ.50ರಷ್ಟು ಹೆಚ್ಚಳವನ್ನು ಕಾಣುತ್ತವೆ. ದಕ್ಷಿಣದ ರಾಜ್ಯಗಳ ಪ್ರಾತಿನಿಧ್ಯದಲ್ಲಿ ಯಾವುದೇ ಕಡಿತವಾಗುವುದಿಲ್ಲ; ಬದಲಾಗಿ, ಅವುಗಳ ಒಟ್ಟಾರೆ ಪಾಲು ಸ್ಥಿರವಾಗಿರುತ್ತದೆ. ಉದಾಹರಣೆಗೆ, ತಮಿಳುನಾಡಿನ ಸ್ಥಾನಗಳು ಅನುಪಾತಕ್ಕೆ ಅನುಗುಣವಾಗಿ ಹೆಚ್ಚಾಗುತ್ತವೆ, ಇದರಿಂದ ಯಾವುದೇ ಅನಾನುಕೂಲವಾಗುವುದಿಲ್ಲ. ಕೆಳಗಿನ ಕೋಷ್ಟಕವು ತೋರಿಸುವಂತೆ, ದಕ್ಷಿಣದ ರಾಜ್ಯಗಳು ಪ್ರಸ್ತುತ ಲೋಕಸಭೆಯಲ್ಲಿ ಶೇ.23.76ರಷ್ಟು ಸ್ಥಾನಗಳನ್ನು ಹೊಂದಿವೆ. ಈ ಮಸೂದೆಗಳ ಅಂಗೀಕಾರದ ಬಳಿಕ ಇದು ಶೇ.23.87ಕ್ಕೆ ಏರುತ್ತಿತ್ತು.

8 ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಿದ ರಾಜ್ಯಗಳು ಯಾವುದೇ ಅನಾನುಕೂಲತೆಯನ್ನು ಎದುರಿಸಲಿವೆಯೇ?

ಇಲ್ಲ, ಸ್ಥಾನಗಳ ಹೆಚ್ಚಳವನ್ನು ಎಲ್ಲಾ ರಾಜ್ಯಗಳಲ್ಲಿ ಏಕರೂಪವಾಗಿ ಪ್ರಸ್ತಾಪಿಸಿರುವುದರಿಂದ, ಅವುಗಳ ಪ್ರಮಾಣಾನುಗುಣ ಪ್ರಾತಿನಿಧ್ಯವು ಬದಲಾಗದೆ ಉಳಿಯುತ್ತದೆ ಅಥವಾ ಸ್ವಲ್ಪಮಟ್ಟಿಗೆ ಸುಧಾರಿಸುತ್ತದೆ.

9 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರಾತಿನಿಧ್ಯದ ಮೇಲೆ ಪರಿಣಾಮ ಬೀರಲಿದೆಯೇ?

ಇಲ್ಲ, ಕ್ಷೇತ್ರ ಮರುವಿಂಗಡಣೆಯ ಪ್ರಕ್ರಿಯೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಅನುಪಾತದ ಮೀಸಲಾತಿಯನ್ನು ಖಚಿತಪಡಿಸುತ್ತದೆ. ಸದನದ ಸದಸ್ಯ ಬಲ ಹೆಚ್ಚಾದಂತೆ, ಮೀಸಲು ಸ್ಥಾನಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗುತ್ತದೆ, ಆ ಮೂಲಕ ಅವರ ಪ್ರಾತಿನಿಧ್ಯವು ಬಲಗೊಳ್ಳುತ್ತದೆ.



10 ಈ ಸಾಂವಿಧಾನಿಕ ತಿದ್ದುಪಡಿ ಮಸೂದೆಯನ್ನು ಜಾತಿ ಗಣತಿಯನ್ನು ವಿಳಂಬಗೊಳಿಸಲು ತರಲಾಗಿದೆಯೇ?

ಇಲ್ಲ, ಸರ್ಕಾರವು ಈಗಾಗಲೇ ಜಾತಿ ಗಣತಿಗಾಗಿ ಕಾಲಮಿತಿಯ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಈ ಪ್ರಕ್ರಿಯೆಯು ವಿವರವಾದ ಎಣಿಕೆಯನ್ನು ಒಳಗೊಂಡಿರುತ್ತದೆ ಮತ್ತು ಜನಸಂಖ್ಯಾ ಎಣಿಕೆಯ ಹಂತದಲ್ಲಿ ಜಾತಿ-ಸಂಬಂಧಿತ ದತ್ತಾಂಶವನ್ನು ದಾಖಲಿಸಲಾಗುತ್ತದೆ.

11 ಮೀಸಲಾತಿ ಚೌಕಟ್ಟಿನೊಳಗೆ ಮುಸ್ಲಿಂ ಮಹಿಳೆಯರಿಗೆ ಪ್ರತ್ಯೇಕ ಕೋಟಾ ಏಕೆ ಇಲ್ಲ?

ಭಾರತದ ಸಂವಿಧಾನವು ಧರ್ಮದ ಆಧಾರದ ಮೇಲೆ ಮೀಸಲಾತಿಗೆ ಅವಕಾಶ ನೀಡುವುದಿಲ್ಲ. ಮೀಸಲಾತಿ ನೀತಿಗಳು ಸಂವಿಧಾನದಲ್ಲಿ ವಿವರಿಸಿರುವಂತೆ ಸಾಮಾಜಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯನ್ನು ಆಧಾರಿಸಿವೆ.

ಸುದ್ದಿ ಸಮಗ್ರ

12 2024ರ ಸಾರ್ವತ್ರಿಕ ಚುನಾವಣೆಯಲ್ಲೇ ಮಹಿಳಾ ಮೀಸಲಾತಿಯನ್ನು ಏಕೆ ಜಾರಿಗೆ ತರಲಿಲ್ಲ?

ಮೀಸಲಾತಿಯನ್ನು ಜಾರಿಗೆ ತರಲು ಕ್ಷೇತ್ರಗಳ ಮರುವಿಂಗಡಣೆ ಅಗತ್ಯ. ಕ್ಷೇತ್ರ ಮರುವಿಂಗಡಣೆಯು ಸುದೀರ್ಘವಾದ ಸಮಾಲೋಚನಾ ಪ್ರಕ್ರಿಯೆಯಾಗಿದೆ. ಇದನ್ನು ಪೂರ್ಣಗೊಳಿಸಲು ಸುಮಾರು ಎರಡು ವರ್ಷಗಳು ಬೇಕಾಗುತ್ತವೆ. ಆದ್ದರಿಂದ, ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ಈ ಮಸೂದೆಗಳನ್ನು (ಕ್ಷೇತ್ರ ಮರುವಿಂಗಡಣಾ ಮಸೂದೆ ಸೇರಿದಂತೆ) ಸಂಸತ್ತಿನಲ್ಲಿ ತರಲಾಯಿತು.

13 ತಕ್ಷಣವೇ ಜಾರಿಗೆ ತರಲು ಸಾಧ್ಯವಿಲ್ಲದಿದ್ದರೆ 2023ರಲ್ಲೇ ಮಹಿಳಾ ಮೀಸಲಾತಿ ಮಸೂದೆಯನ್ನು ಏಕೆ ಮಂಡಿಸಲಾಯಿತು?

ಮಹಿಳಾ ಮೀಸಲಾತಿಗಾಗಿ ಕಾನೂನು ಮತ್ತು ಸಾಂವಿಧಾನಿಕ ಚೌಕಟ್ಟನ್ನು ಸ್ಥಾಪಿಸಲು 2023ರಲ್ಲಿ ಮಸೂದೆಯನ್ನು ಮಂಡಿಸಿ ಅಂಗೀಕರಿಸಲಾಯಿತು. ಅದರ ಸರ್ವಾನುಮತದ ಅಂಗೀಕಾರವು ಆ ಸಮಯದಲ್ಲಿ ಇದ್ದ ವ್ಯಾಪಕ ರಾಜಕೀಯ ಬೆಂಬಲವನ್ನು ಪ್ರತಿಬಿಂಬಿಸಿತು, ಇದು ನಾರಿ ಶಕ್ತಿ ವಂದನಾ ಅಧಿನಿಯಮದ ಜಾರಿಗೆ ದಾರಿ ಮಾಡಿಕೊಟ್ಟಿತು.

14 ಕೇಂದ್ರಾಡಳಿತ ಪ್ರದೇಶಗಳಿಗಾಗಿ ಪ್ರತ್ಯೇಕ ಮಸೂದೆಯ ಅಗತ್ಯವೇನಿತ್ತು?

ಜಮ್ಮು ಮತ್ತು ಕಾಶ್ಮೀರ, ದಿಲ್ಲಿ ಮತ್ತು ಪುದುಚೇರಿಯಂತಹ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳು ಪ್ರತ್ಯೇಕ ಕಾನೂನು ನಿಬಂಧನೆಗಳಿಂದ ನಿಯಂತ್ರಿಸಲ್ಪಡುತ್ತವೆ. ಆದ್ದರಿಂದ, ಈ ಪ್ರದೇಶಗಳಲ್ಲಿ ಮಹಿಳಾ ಮೀಸಲಾತಿಯನ್ನು ಜಾರಿಗೆ ತರಲು ನಿರ್ದಿಷ್ಟ ತಿದ್ದುಪಡಿಗಳ ಅಗತ್ಯವಿತ್ತು, ಈ ಕಾರಣಕ್ಕಾಗಿ ಪ್ರತ್ಯೇಕ ಮಸೂದೆಯನ್ನು ತರಬೇಕಾಯಿತು.

ಕಿರುಸುದ್ದಿ

ಪವನ್ ಕಲ್ಯಾಣ್ ಅಸ್ವಸ್ಥ, ಶಸ್ತ್ರಚಿಕಿತ್ಸೆ ಬಳಿಕ ಚೇತರಿಕೆ

•ಅಮರಾವತಿ: ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿ ಮತ್ತು ನಟ ಪವನ್ ಕಲ್ಯಾಣ್ ಆರೋಗ್ಯ ಸಮಸ್ಯೆಯಿಂದಾಗಿ ತೀವ್ರ ಅಸ್ವಸ್ಥರಾದ ಹಿನ್ನೆಲೆ ಶನಿವಾರ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದು, ಹತ್ತು ದಿನ ವಿಶ್ರಾಂತಿ ತೆಗೆದುಕೊಳ್ಳಲು ವೈದ್ಯರು ಸೂಚಿಸಿದ್ದಾರೆ. ಪವನ್ ಆರೋಗ್ಯ ಸ್ಥಿತಿಯ ಮಾಹಿತಿ ನೀಡಿದ ಪತ್ನಿ ಅನ್ನಾ ಲೆಝ್ನೇವಾ ಕೊನಿಡೆಲಾ, ಅವರು ಚೇತರಿಸಿಕೊಳ್ಳುತ್ತಿದ್ದಾರೆ. ಯಾವುದೇ ಸಮಸ್ಯೆಯಿಲ್ಲ, ಕೃತಜ್ಞತೆಗಳು ಎಂದು ಲಕ್ಷಾಂತರ ಪವರ್ ಸ್ಟಾರ್ ಅಭಿಮಾನಿಗಳಿಗೆ ಭರವಸೆ ನೀಡಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಪವನ್ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಶುಕ್ರವಾರ ಬೆಳಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸುತ್ತಿದ್ದ ವೇಳೆ ಪವನ್ ತೀವ್ರ ಅಸ್ವಸ್ಥತೆಗೆ ಒಳಗಾಗಿದ್ದು, ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಡಿಸಿಎಂ ಪವನ್ ಕಲ್ಯಾಣ್ ಆರೋಗ್ಯ ವಿಚಾರಿಸಿದ್ದೇನೆ. ಅವರು ಅತ್ಯಂತ ಧೈರ್ಯಶಾಲಿ. ಶೀಘ್ರ ಚೇತರಿಸಿಕೊಳ್ಳುತ್ತಾರೆಂಬ ವಿಶ್ವಾಸವಿದೆ ಎಂದು ಪ್ರಧಾನಿ ಮೋದಿ ಎಕ್ಸ್‌ನಲ್ಲಿ ಬರೆದಿದ್ದಾರೆ. ಮೋದಿಗೆ ಪವನ್ ಕೃತಜ್ಞತೆ ಸಲ್ಲಿಸಿದ್ದಾರೆ. ಇನ್ನು ತೆಲುಗು ಚಿತ್ರರಂಗ ಮತ್ತು ಸಿನಿಮಾ ಉದ್ಯಮದ ಗಣ್ಯರು ಪವನ್ ಶೀಘ್ರ ಗುಣಮುಖರಾಗಲೆಂದು ಹಾರೈಸಿದ್ದಾರೆ.

ಅಮೆರಿಕದಲ್ಲಿ ಗುಂಡಿನ ದಾಳಿ: 8 ಮಕ್ಕಳ ಸಾವು

•ಶ್ರೇವ್‌ಪೋರ್ಟ್(ಅಮೆರಿಕ): ಲೂಯಿಸಿಯಾನಾ ರಾಜ್ಯದ ಶ್ರೇವ್‌ಪೋರ್ಟ್ ನಗರದಲ್ಲಿ ಭಾನುವಾರ ನಡೆದ ಭೀಕರ ಗುಂಡಿನ ದಾಳಿಯಲ್ಲಿ 1ರಿಂದ 14 ವರ್ಷದೊಳಗಿನ ಎಂಟು ಮಕ್ಕಳು ಮೃತಪಟ್ಟಿದ್ದಾರೆ. ಕುಟುಂಬದೊಳಗಿನ ಗಲಾಟೆಯ ಹಿನ್ನೆಲೆಯಲ್ಲಿಯೇ ಈ ದಾಳಿ ನಡೆದಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಒಟ್ಟು 10 ಮಂದಿಗೆ ಗುಂಡೇಟು ತಗುಲಿದ್ದು, ಗಾಯಗೊಂಡ ಇಬ್ಬರು ವಯಸ್ಕರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆ ಬಳಿಕ ಆರೋಪಿಯು ಪರಾರಿಯಾಗಲು ಯತ್ನಿಸಿದರೂ, ಪೊಲೀಸರೊಂದಿಗೆ ನಡೆದ ಚಕಮಕಿಯಲ್ಲಿ ಆತ ಸಾವನ್ನಪ್ಪಿದ್ದಾನೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಟಲಿಯಲ್ಲಿ ಭಾರತದ ಇಬ್ಬರಿಗೆ ಗುಂಡಿಕ್ಕಿ ಹತ್ಯೆ

•ಕೋವೊ (ಇಟಲಿ): ಇಬ್ಬರು ಭಾರತೀಯರನ್ನು ಗುಂಡಿಟ್ಟು ಹತ್ಯೆಗೈದಿರುವ ಘಟನೆ ಇಟಲಿಯ ಕೊವೊ ನಗರದ ಕೈಗಾರಿಕಾ ಪ್ರದೇಶದಲ್ಲಿರುವ ಮಾತಾ ಸಾಹಿಬ್ ಕೌರ್ ಜೀ ಗುರುದ್ವಾರದ ಬಳಿ ನಡೆದಿದೆ. ಮೃತರನ್ನು ರಾಗಿಂದರ್ ಸಿಂಗ್(48) ಹಾಗೂ ಗುರ್ಮೀತ್ ಸಿಂಗ್(48) ಎಂದು ಗುರುತಿಸಲಾಗಿದೆ. ಕೃತ್ಯದ ಬಳಿಕ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ ಎಂದು ವರದಿಯಾಗಿದೆ. ಶುಕ್ರವಾರ ವೈಶಾಖಿ ಹಬ್ಬದ ಅಂಗವಾಗಿ ಗುರುದ್ವಾರದಲ್ಲಿ ಪ್ರಾರ್ಥನೆ ಸಲ್ಲಿಸಿ ಹೊರ ಬರುವಾಗ ಅವರ ಮೇಲೆ ದಾಳಿ ನಡೆದಿದೆ ಎಂದು ಹೇಳಲಾಗಿದೆ.

ಶ್ರೀನಗರದಲ್ಲಿ ಅಮೆರಿಕದ ಇಬ್ಬರು ಪ್ರಜೆಗಳ ಬಂಧನ

•ಶ್ರೀನಗರ: ಜಮ್ಮು-ಕಾಶ್ಮೀರದ ಶ್ರೀನಗರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಮೆರಿಕದ ಇಬ್ಬರು ನಾಗರಿಕರನ್ನು ಭದ್ರತಾ ಸಿಬ್ಬಂದಿ ಬಂಧಿಸಿದ ಘಟನೆ ಭಾನುವಾರ ಬೆಳಕಿಗೆ ಬಂದಿದೆ.ಸಾಮಾನ್ಯ ಭದ್ರತಾ ತಪಾಸಣೆ ವೇಳೆ ಅವರ ಸಾಮಗ್ರಿಗಳನ್ನು ಸ್ಯಾಟಲೈಟ್ ಫೋನ್ ಪತ್ತೆಯಾದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭದ್ರತಾ ಸಿಬ್ಬಂದಿ ಮೊದಲು ಅವರನ್ನು ವಿಚಾರಣೆ ನಡೆಸಿ, ಬಳಿಕ ಹೆಚ್ಚಿನ ತನಿಖೆಗಾಗಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಪತ್ತೆಯಾದ ಸಾಧನವು ನಿಯಮಾವಳಿ ಪ್ರಕಾರ ನಿಷೇಧಿತ ವಸ್ತುವಾಗಿರುವುದರಿಂದ ಪ್ರಕರಣಕ್ಕೆ ಗಂಭೀರತೆ ಹೆಚ್ಚಿದೆ. ಬಂಧಿತರಲ್ಲಿ ಒಬ್ಬರನ್ನು ಅಮೆರಿಕದ ಮೊಂಟಾನಾ ರಾಜ್ಯದ ಜೆಫ್ರಿ ಸ್ಕಾಟ್ ಎಂದು ಗುರುತಿಸಲಾಗಿದ್ದು, ಅವರ ಬ್ಯಾಗೇಜ್‌ನಲ್ಲಿ ಗಾರ್ಮಿನ್ ಕಂಪನಿಯ ಸ್ಯಾಟಲೈಟ್ ಫೋನ್ ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಭಾರತದಲ್ಲಿ ಸ್ಯಾಟಲೈಟ್ ಫೋನ್ ಬಳಕೆ ಕಟ್ಟುನಿಟ್ಟಿನ ನಿಯಂತ್ರಣಕ್ಕೆ ಒಳಪಟ್ಟಿದ್ದು, ದೂರಸಂಪರ್ಕ ಇಲಾಖೆಯಿಂದ ಪೂರ್ವಾನುಮತಿ ಪಡೆಯದೇ ಇಂತಹ ಸಾಧನಗಳನ್ನು ಹೊಂದಿರುವುದು ಕಾನೂನುಬಾಹಿರವಾಗಿದೆ.ವಿಶೇಷವಾಗಿ ಜಮ್ಮು-ಕಾಶ್ಮೀರ ಪ್ರದೇಶದ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇಂತಹ ಸಾಧನಗಳ ಮೇಲೆ ಕಠಿಣ ನಿಗಾವಹಿಸಲಾಗಿದೆ. ಇದರಿಂದಾಗಿ ದೇಶಕ್ಕೆ ಆಗಮಿಸುವ ಪ್ರಯಾಣಿಕರು ತಮ್ಮ ಬಳಿ ಇರುವ ಸ್ಯಾಟಲೈಟ್ ಸಂವಹನ ಸಾಧನಗಳನ್ನು ಮುಂಚಿತವಾಗಿ ಘೋಷಣೆ ಮಾಡುವುದು ಕಡ್ಡಾಯವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಸಂಬಂಧ ಪೊಲೀಸರು ಹೆಚ್ಚಿನ ತನಿಖೆ ಮುಂದುವರಿಸಿದ್ದು, ಬಂಧಿತರ ಉದ್ದೇಶ ಹಾಗೂ ಸಾಧನದ ಬಳಕೆಯ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ಭಾರತ ನಂಟಿಗಿದೆ 5,000 ವರ್ಷದ ಬಂಧ: ಇರಾನ್

•ಟೆಹರಾನ್: ಭಾರತ ಮತ್ತು ಇರಾನ್ ನಡುವಿನ ಸಂಬಂಧವು ಕೇವಲ ರಾಜತಾಂತ್ರಿಕವಲ್ಲ, ಬದಲಾಗಿ 5,000 ವರ್ಷಗಳ ಹಳೆಯದಾದ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಆಧ್ಯಾತ್ಮಿಕ ನಾಗರಿಕ ಸಂಬಂಧವಾಗಿದೆ. ಈ ಸಂಬಂಧವು ಎಷ್ಟು ಗಾಢವಾಗಿದೆ ಎಂದರೆ ಯಾವುದೇ ಅಲ್ಪಕಾಲಿಕ ಘಟನೆಗಳು ಇದನ್ನು ಹಾನಿಗೊಳಿಸಲು ಸಾಧ್ಯವಿಲ್ಲ. ಬದಲಾಗಿ ಈ ಬಾಂಧವ್ಯ ಇನ್ನಷ್ಟು ಗಟ್ಟಿಯಾಗುತ್ತಲೇ ಹೋಗುತ್ತದೆ ಎಂಬುದಾಗಿ ಇರಾನ್ ಸ್ಪಷ್ಟಪಡಿಸಿದೆ.

ಹಾರ್ಮುಜ್ ಜಲಸಂಧಿಯಲ್ಲಿ ಎರಡು ಭಾರತೀಯ ಧ್ವಜದ ಹಡಗು ಮೇಲೆ ನಡೆದ ಗುಂಡಿನ ದಾಳಿಯ ಘಟನೆ ಬಗ್ಗೆ ಚರ್ಚೆಗಳು ನಡೆಯುತ್ತಿರುವಾಗಲೇ ಭಾರತದ ಜತೆಗಿನ ಸಂಬಂಧಗಳು ಅತ್ಯಂತ ಬಲಿಷ್ಠವಾಗಿವೆ . ಈ ಪ್ರದೇಶದಲ್ಲಿ ಶಾಂತಿ ಕಾಪಾಡಬೇಕು ಎಂದು ಇರಾನ್ ರಾಷ್ಟ್ರದ ಪರಮೋಚ್ಚ ನಾಯಕನ ಭಾರತದ ಪ್ರತಿನಿಧಿ ಡಾ.ಅಬ್ದುಲ್ ಮಜೀದ್ ಹಕೀಮ್ ಇಲಾಹಿ ಹೇಳಿದ್ದಾರೆ.

ಪ್ರಧಾನಿ ಮೋದಿಯವರು ಮತ್ತು ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ನಡುವೆ ಯಶಸ್ವಿ ಮಾತುಕತೆಗಳು ನಡೆದಿದ್ದು, ವಿದೇಶಾಂಗ ಸಚಿವರ ಮಟ್ಟದಲ್ಲಿಯೂ ನಿರಂತರ ಮಾತುಕತೆಗಳು ನಡೆದಿವೆ ಎಂದರು.

ಭಾರತೀಯ ಹಡಗುಗಳ ಮೇಲೆ ನಡೆದ ಗುಂಡಿನ ದಾಳಿ ಕುರಿತು ಮಾತನಾಡಿರುವ ಅವರು, ಗುಂಡಿನ ದಾಳಿ ಕುರಿತು ನನಗೆ ವಿವರಗಳು ಸ್ಪಷ್ಟವಾಗಿ ತಿಳಿದಿಲ್ಲ. ಈ ಘಟನೆ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ. ಆದರೆ, ಇದು ಶೀಘ್ರದಲ್ಲೇ ಪರಿಹಾರವಾಗಲಿ ಎಂಬ ವಿಶ್ವಾಸವಿದೆ ಎಂದಿದ್ದಾರೆ.

ಬಾಂಗ್ಲಾ ಹೈಕಮಿಷನರ್ ಆಗಿ ದಿನೇಶ್ ತ್ರಿವೇದಿ?

•ಹೊಸದಿಲ್ಲಿ: ಭಾರತವು ಬಾಂಗ್ಲಾದೇಶದೊಂದಿಗೆ ತನ್ನ ರಾಜತಾಂತ್ರಿಕ ಸಂಬಂಧಗಳನ್ನು ಪುನರ್‌ವ್ಯವಸ್ಥೆಗೊಳಿಸುವ ಮಹತ್ವದ ಹೆಜ್ಜೆಯಾಗಿ ಕೇಂದ್ರ ಮಾಜಿ ಸಚಿವ ದಿನೇಶ್ ತ್ರಿವೇದಿಯನ್ನು ಬಾಂಗ್ಲಾದೇಶದ ಹೈಕಮಿಷನರ್ ಆಗಿ ನೇಮಕ ಮಾಡಲಿದೆ ಎಂದು ಮೂಲಗಳು ತಿಳಿಸಿವೆ. ಪಶ್ಚಿಮ ಬಂಗಾಳದ ಅನುಭವಸ್ಥ ರಾಜಕಾರಣಿಯಾಗಿರುವ ತ್ರಿವೇದಿ, ಕೇಂದ್ರದಲ್ಲಿ ರೈಲ್ವೆ ಸಚಿವರಾಗಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಅವರ ನೇಮಕವು ಸಾಮಾನ್ಯವಾಗಿ ಭಾರತೀಯ ವಿದೇಶಾಂಗ ಸೇವೆಯ ಅಧಿಕಾರಿಗಳಿಗೆ ನೀಡಲಾಗುವ ಹುದ್ದೆಗೆ ರಾಜಕೀಯ ನಾಯಕನನ್ನು ಆಯ್ಕೆ ಮಾಡಿದ ಅಪರೂಪದ ಉದಾಹರಣೆಯಾಗುವ ಸಾಧ್ಯತೆ ಇದೆ. ಇದಕ್ಕೂ ಮೊದಲು ಢಾಕಾದಲ್ಲಿ ಭಾರತದ ಹೈಕಮಿಷನರ್ ಆಗಿದ್ದ ಪ್ರಣಯ್ ವರ್ಮಾ ಅವರನ್ನು ಐರೋಪ್ಯ ಒಕ್ಕೂಟ ಮತ್ತು ಬೆಲ್ಜಿಯಂಗೆ ಭಾರತದ ರಾಯಭಾರಿಯಾಗಿ ನೇಮಕ ಮಾಡಲಾಗಿದೆ. ಬಾಂಗ್ಲಾದೇಶದಲ್ಲಿ ಇತ್ತೀಚಿನ ರಾಜಕೀಯ ಬದಲಾವಣೆಗಳು ಮತ್ತು ಹೊಸ ಸರ್ಕಾರದ ಸ್ಥಾಪನೆಯ ನಂತರ ಭಾರತ-ಬಾಂಗ್ಲಾದೇಶ ಸಂಬಂಧಗಳಲ್ಲಿ ಉಂಟಾದ ಸವಾಲುಗಳನ್ನು ಮನಗಂಡು, ದ್ವಿಪಕ್ಷೀಯ ಸಂಬಂಧಗಳನ್ನು ಮರುಸ್ಥಾಪಿಸುವ ಉದ್ದೇಶದಿಂದ ಈ ನೇಮಕ ನಡೆದಿದೆ ಎಂದು ಮೂಲಗಳು ಸೂಚಿಸುತ್ತಿವೆ. ತ್ರಿವೇದಿ ಅವರ ಪಶ್ಚಿಮ ಬಂಗಾಳ ಮೂಲ ಹಾಗೂ ಗಡಿ ರಾಜ್ಯದ ರಾಜಕೀಯ ಅರಿವು, ಭದ್ರತೆ, ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳ ಬಲಪಡಿಸುವಲ್ಲಿ ನೆರವಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.

ಸೋನಿಯಾ, ರಾಗಾ ವಿರುದ್ಧ ಇಡಿ ಅರ್ಜಿ ವಿಚಾರಣೆ ಇಂದು

•ಹೊಸದಿಲ್ಲಿ: ನ್ಯಾಷನಲ್ ಹೆರಾಲ್ಡ್‌ಗೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ(ಇಡಿ) ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ದಿಲ್ಲಿ ಹೈಕೋರ್ಟ್ ಸೋಮವಾರ ನಡೆಸಲಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧದ ಇಡಿ ದೋಷಾರೋಪ ಪಟ್ಟಿಯನ್ನು ಪರಿಗಣಿಸಲು ನಿರಾಕರಿಸಿದ ಡಿ.16, 2025ರ ಆದೇಶವನ್ನು ಈ ಅರ್ಜಿ ಪ್ರಶ್ನಿಸಿದೆ. ನ್ಯಾಯಮೂರ್ತಿ ಸ್ವರ್ಣ ಕಾಂತ ಶರ್ಮಾ ಅವರ ಮುಂದೆ ಈ ವಿಷಯ ವಿಚಾರಣೆಗೆ ಬರಲಿದೆ. ಡಿ.22ರಂದು ಗಾಂಧಿ ಕುಟುಂಬ, ಸುಮನ್ ದುಬೆ, ಸ್ಯಾಮ್ ಪಿತ್ರೋಡಾ ಮೊದಲಾದವರಿಗೆ ನೋಟಿಸ್ ನೀಡಲಾಗಿತ್ತು. ಅಸೋಸಿಯೇಟೆಡ್ ಜರ್ನಲ್ ಲಿಮಿಟೆಡ್‌ನ ಸುಮಾರು 2,000 ಕೋಟಿ ರೂ. ಮೌಲ್ಯದ ಆಸ್ತಿಗಳಿಗೆ ಸಂಬಂಧಿಸಿದ ಪಿತೂರಿ ಮತ್ತು ಅಕ್ರಮ ಹಣ ವರ್ಗಾವಣೆಯಾಗಿದೆ ಎಂದು ಇಡಿ ಆರೋಪಿಸಿದೆ. ಗಾಂಧಿ ಕುಟುಂಬ ಶೇ.76 ಷೇರುಗಳನ್ನು ಹೊಂದಿರುವ ಯಂಗ್ ಇಂಡಿಯನ್ ಸಂಸ್ಥೆ, 90 ಕೋಟಿ ರೂ. ಸಾಲದ ಬದಲಾಗಿ ಈ ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿದೆ ಎಂದು ಅದು ಹೇಳಿದೆ.

ರಸ್ತೆ ಸುರಕ್ಷತೆಗೆ ಸುಪ್ರೀಂ ಮಾರ್ಗಸೂಚಿ | ಅಕ್ರಮ ಪಾರ್ಕಿಂಗ್‌ಗೆ ನಿಷೇಧ | 60 ದಿನಗಳಲ್ಲಿ ಅನುಷ್ಠಾನ | ಜೀವ ರಕ್ಷಣೆ ರಾಜ್ಯದ ಹೊಣೆ

ಎಕ್ಸ್‌ಪ್ರೆಸ್‌ವೇಗಳು ಅಪಾಯದ ಮಾರ್ಗಗಳಾಗಬಾರದು

•ಹೊಸದಿಲ್ಲಿ: ಎಕ್ಸ್‌ಪ್ರೆಸ್‌ವೇಗಳು ಆಡಳಿತಾತ್ಮಕ ನಿರ್ಲಕ್ಷ್ಯ ಅಥವಾ ಮೂಲಸೌಕರ್ಯ ದೌರ್ಬಲ್ಯದಿಂದ ಅಪಾಯದ ಮಾರ್ಗಗಳಾಗಿ ಮಾರ್ಪಡಬಾರದು ಎಂದು ಎಚ್ಚರಿಸಿದ ಸುಪ್ರೀಂ ಕೋರ್ಟ್, ದೇಶಾದ್ಯಂತ ರಸ್ತೆ ಸುರಕ್ಷತೆ ಹೆಚ್ಚಿಸಲು ಕಠಿಣ ಮಾರ್ಗಸೂಚಿಗಳನ್ನು ಹೊರಡಿಸಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಭಾರೀ ವಾಹನಗಳ ಪಾರ್ಕಿಂಗ್ ಅನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಹೇಶ್ವರಿ ಮತ್ತು ಎ.ಎಸ್. ಚಂದುರ್ಕರ್ ಅವರ ಪೀಠ, ದೇಶದ ಒಟ್ಟು ರಸ್ತೆ ಉದ್ದದಲ್ಲಿ ಕೇವಲ ಶೇ.2 ಇರುವ ರಾಷ್ಟ್ರೀಯ ಹೆದ್ದಾರಿಗಳು, ರಸ್ತೆ ಅಪಘಾತಗಳಿಂದ ಉಂಟಾಗುವ ಸಾವುಗಳಲ್ಲಿ ಸುಮಾರು ಶೇ.30 ಪಾಲು ಹೊಂದಿವೆ ಎಂದು ಗಮನಸೆಳೆದಿದೆ.

ಒಬ್ಬ ವ್ಯಕ್ತಿಯ ಜೀವವೂ ತಪ್ಪಿಸಬಹುದಾದ ಕಾರಣಗಳಿಂದ ಕಳೆದುಹೋಗುವುದು ರಾಜ್ಯದ ರಕ್ಷಣಾತ್ಮಕ ಹೊಣೆಗಾರಿಕೆಯ ವಿಫಲತೆಯೇ ಆಗಿದೆ ಎಂದು ನ್ಯಾಯಾಲಯ ಕಠಿಣವಾಗಿ ಅಭಿಪ್ರಾಯಪಟ್ಟಿದೆ. ಸಂವಿಧಾನದ ವಿಧಿ 21ರಡಿ ಜೀವನ ಹಕ್ಕು ಕೇವಲ ಜೀವ ಹರಣದ ವಿರುದ್ಧದ ಭದ್ರತೆ ಮಾತ್ರವಲ್ಲ, ಸುರಕ್ಷಿತ ಪರಿಸರ ಒದಗಿಸುವ ರಾಜ್ಯದ ಸಕಾರಾತ್ಮಕ ಕರ್ತವ್ಯವೂ ಆಗಿದೆ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.



ರಾಜಸ್ಥಾನದ ಫಲೋಡಿ ಮತ್ತು ತೆಲಂಗಾಣದ ರಂಗಾರೆಡ್ಡಿ ಜಿಲ್ಲೆಗಳಲ್ಲಿ 2025ರ ನವೆಂಬರ್‌ನಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತಗಳಲ್ಲಿ 34 ಮಂದಿ ಸಾವಿಗೀಡಾದ ಹಿನ್ನೆಲೆಯಲ್ಲಿ ಸ್ವಯಂಪ್ರೇರಿತವಾಗಿ ದಾಖಲಿಸಿದ ಪ್ರಕರಣದ ವಿಚಾರಣೆಯಲ್ಲಿ ಈ ಆದೇಶ ಹೊರಬಂದಿದೆ.

ಕಠಿಣ ನಿರ್ದೇಶನಗಳು: ರಾಷ್ಟ್ರೀಯ ಹೆದ್ದಾರಿಗಳಲ್ಲಿ ಯಾವುದೇ ಭಾರೀ ಅಥವಾ ವಾಣಿಜ್ಯ ವಾಹನಗಳು ನಿರ್ದಿಷ್ಟ ಪಾರ್ಕಿಂಗ್ ಸ್ಥಳಗಳನ್ನು ಹೊರತುಪಡಿಸಿ ರಸ್ತೆ ಅಥವಾ ಶೋಲ್ಡರ್ ಮೇಲೆ ನಿಲ್ಲಬಾರದು ಎಂದು ಕೋರ್ಟ್ ಸ್ಪಷ್ಟ ಸೂಚನೆ ನೀಡಿದೆ. ಈ ನಿಯಮದ ಅನುಷ್ಠಾನಕ್ಕಾಗಿ ಎಟಿಎಂಎಸ್, ಜಿಪಿಎಸ್ ಆಧಾರಿತ ಫೋಟೋ ಸಾಕ್ಷ್ಯ ಮತ್ತು ಇ-ಚಲನ್ ವ್ಯವಸ್ಥೆ ಬಳಸುವಂತೆ ಸೂಚಿಸಲಾಗಿದೆ.

ಈ ಎಲ್ಲಾ ನಿರ್ದೇಶನಗಳನ್ನು 60 ದಿನಗಳೊಳಗೆ ಜಾರಿಗೆ ತರಬೇಕು ಎಂದು ಕೋರ್ಟ್ ಕಟ್ಟುನಿಟ್ಟಾಗಿ ಹೇಳಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ರಾಜ್ಯ ಪೊಲೀಸ್, ಸಾರಿಗೆ ಇಲಾಖೆ ಹಾಗೂ ಜಿಲ್ಲಾಧಿಕಾರಿಗಳು ಸಂಯುಕ್ತವಾಗಿ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ.

ಅಕ್ರಮ ಕಟ್ಟಡಗಳಿಗೆ ಕಡಿವಾಣ: ರಾಷ್ಟ್ರೀಯ ಹೆದ್ದಾರಿಗಳ ವ್ಯಾಪ್ತಿಯಲ್ಲಿ ಯಾವುದೇ ಹೊಸ ಡಾಬಾ, ಹೋಟೆಲ್ ಅಥವಾ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ ತಕ್ಷಣದಿಂದಲೇ ನಿಷೇಧ ವಿಧಿಸಲಾಗಿದೆ. ಈಗಾಗಲೇ ನಿರ್ಮಾಣವಾಗಿರುವ ಅಕ್ರಮ ಕಟ್ಟಡಗಳನ್ನು 60 ದಿನಗಳಲ್ಲಿ ತೆರವುಗೊಳಿಸಲು ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ.

ಹೆದ್ದಾರಿ ಸುರಕ್ಷತಾ ವಲಯಗಳಲ್ಲಿ ಯಾವುದೇ ಅನುಮತಿ, ಲೈಸೆನ್ಸ್ ಅಥವಾ ಎನ್‌ಒಸಿ ನೀಡುವ ಮೊದಲು ಎನ್‌ಎಚ್‌ಎಐ ಅಥವಾ ಪಿಡಬ್ಲ್ಯುಡಿ ಅನುಮತಿ ಕಡ್ಡಾಯವಾಗಿದ್ದು, ಈಗಿರುವ ಅನುಮತಿಗಳನ್ನು 30 ದಿನಗಳಲ್ಲಿ ಮರುಪರಿಶೀಲಿಸಬೇಕು ಎಂದು ಸೂಚಿಸಲಾಗಿದೆ.

ಜಿಲ್ಲಾ ಮಟ್ಟದ ಟಾಸ್ಕ್‌ಫೋರ್ಸ್: ಪ್ರತಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಹಾದುಹೋಗುವ ಪ್ರದೇಶಗಳಲ್ಲಿ 15 ದಿನಗಳೊಳಗೆ ಜಿಲ್ಲಾ ಹೆದ್ದಾರಿ ಸುರಕ್ಷತಾ ಟಾಸ್ಕ್‌ಫೋರ್ಸ್ ರಚಿಸಲು ಸೂಚಿಸಲಾಗಿದೆ. ಇದರಲ್ಲಿ ಆಡಳಿತ, ಪೊಲೀಸ್, ಎನ್‌ಎಚ್‌ಎಐ, ಪಿಡಬ್ಲ್ಯುಡಿ ಮತ್ತು ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಸೇರಿರಬೇಕು.

ಇದರ ಜೊತೆಗೆ, ನಿರಂತರ ಪಹರೆ, ಅಕ್ರಮ ಪಾರ್ಕಿಂಗ್ ನಿಯಂತ್ರಣ, ಬ್ಲ್ಯಾಕ್‌ಸ್ಪಾಟ್‌ಗಳ ಗುರುತು, ರಸ್ತೆ ಬೆಳಕು ವ್ಯವಸ್ಥೆ ಮತ್ತು ತುರ್ತು ಸೇವೆಗಳ ಬಲಪಡಿಸುವತ್ತ ವಿಶೇಷ ಗಮನ ಹರಿಸಲು ಕೋರ್ಟ್ ಸೂಚಿಸಿದೆ.

ವರದಿ ಸಲ್ಲಿಕೆ ಕಡ್ಡಾಯ: ಈ ನಿರ್ದೇಶನಗಳ ಅನುಷ್ಠಾನದ ಕುರಿತು 75 ದಿನಗಳೊಳಗೆ ಕೇಂದ್ರ ರಸ್ತೆ ಸಾರಿಗೆ ಸಚಿವಾಲಯವು ವರದಿ ಸಲ್ಲಿಸಬೇಕು ಎಂದು ಕೋರ್ಟ್ ಆದೇಶಿಸಿದೆ. ಯಾವುದೇ ಅನುಷ್ಠಾನ ಸಮಸ್ಯೆಗಳಿದ್ದರೆ ಸಂಬಂಧಪಟ್ಟವರು ನ್ಯಾಯಾಲಯವನ್ನು ಸಂಪರ್ಕಿಸಬಹುದು ಎಂದು ತಿಳಿಸಿದೆ.

ಮಾನವ ಜೀವಕ್ಕಿಂತ ಮೇಲಾದ ಯಾವುದೇ ಆಡಳಿತಾತ್ಮಕ ಅಥವಾ ಆರ್ಥಿಕ ಅಡಚಣೆಗಳಿಲ್ಲ ಎಂದು ಸ್ಪಷ್ಟಪಡಿಸಿರುವ ಸುಪ್ರೀಂ ಕೋರ್ಟ್, ರಸ್ತೆ ಸುರಕ್ಷತೆಯಲ್ಲಿ ಶೂನ್ಯ ಸಹಿಷ್ಣುತೆ ನೀತಿಯನ್ನು ಅನುಸರಿಸಲು ಸರ್ಕಾರಗಳಿಗೆ ಕಟ್ಟುನಿಟ್ಟಿನ ಸಂದೇಶ ನೀಡಿದೆ.

ಕಿರುಸುದ್ದಿ

ಇಂದಿನಿಂದ ಕಾಂಚಿಕಾ ಪರಮೇಶ್ವರಿ ವರ್ಧಂತಿ ಉತ್ಸವ

ಕುಮಟಾ: ಪ್ರಸಿದ್ಧ ಬಾಡ ಗುಡೇಅಂಗಡಿಯ ಕಾಂಚಿಕಾ ಪರಮೇಶ್ವರಿ ದೇವರ ವಾರ್ಷಿಕ ವರ್ಧಂತಿ ಉತ್ಸವ ಹಾಗೂ ನವಚಂಡಿ ಹವನ ಏ.20 ಮತ್ತು 21ರಂದು ನಡೆಯಲಿದೆ. ಏ.20 ರಿಂದ 21ರ ವರೆಗೆ ದೇವಿಯ ಆಲಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮ ಜರುಗಲಿದೆ. ಏ.20ರಂದು ಸಂಜೆ 4 ಘಂಟೆಗೆ ದೇವಿಯ ಪಲ್ಲಕ್ಕಿ ಉತ್ಸವವು ತೆಪ್ಪದ ಮಠಕ್ಕೆ ಬರುವುದು. ಏ.21ರಂದು ಕಾಗಲ, ಮೊಸಳೆಸಾಲ ವರೆಗೆ ಹೋಗಿ ಬರಲಿದೆ. 12.30 ಗಂಟೆಗೆ ನವಚಂಡಿ ಹವನದ ಪೂರ್ಣಾಹುತಿ, ಮಹಾಪೂಜೆ, ಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆಗೆ ಸಮಸ್ತ ಮೂರೂ ಗ್ರಾಮ ಭಕ್ತಾದಿಗಳು ಈ ಧಾರ್ಮಿಕ ಕೈಂಕರ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ಅಧ್ಯಕ್ಷರು ಹಾಗೂ ಸದಸ್ಯರು ವ್ಯವಸ್ಥಾಪನ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕಲಿಸಿ

ಬನವಾಸಿ: ಮಕ್ಕಳಿಗೆ ಆರಂಭದಲ್ಲಿಯೇ ಒಳ್ಳೆಯ ಸಂಸ್ಕಾರ ಕಲಿಸಿ. ಒಳ್ಳೆಯ ವಿದ್ಯೆ ನೀಡಬೇಕು. ಮಕ್ಕಳಲ್ಲಿ ಒಳ್ಳೆಯ ಗುಣ ತುಂಬಿಕೊಳ್ಳಲು ಪರ ಶಿವನ ಆರಾಧನೆ ಮಾಡಬೇಕು ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಬಿ. ಕೆ. ವೀಣಾಜಿ ಅವರು ಹೇಳಿದರು. ಅವರು ಬನವಾಸಿಯಲ್ಲಿ ನಡೆದ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿ, ಪಾಲಕರು ಹಿರಿಯರು ಸಹ ಸ್ವತಃ ಧ್ಯಾನ ಜಪ ಭಕ್ತಿ ಭಾವದಿಂದ ಮಾಡಬೇಕು ಎಂದರು.

ಬನವಾಸಿ ಬಸವೇಶ್ವರ ದೇವಸ್ಥಾನದಲಿ ನಡೆದ ಕಾರ್ಯಕ್ರಮದಲ್ಲಿ ಮಕ್ಕಳು ತಾವು ಕಲಿತ ಶ್ಲೋಕ, ವಚನ, ಹಾಡು, ನೃತ್ಯ, ಯೋಗಾಸನ ಪ್ರಸ್ತುತ ಪಡಿಸಿದರು.ಪಾಲ್ಗೊಂಡ ಉಮಾ ಮಧುಕೇಶ್ವರ ಸಂಗೀತಗಾರ ಅವರು ಮಾತನಾಡಿ, ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಇಂತಹ ಶಿಬಿರದ ಅವಶ್ಯಕತೆ ಇದೆ ಎಂದು ಹೇಳಿದರು. ಬಸವೇಶ್ವರ ದೇವಸ್ಥಾನದ ಹಿರೇಮಠ, ಬ್ರಹ್ಮ ಕುಮಾರಿ ಅರುಣಾ, ಶ್ಯಾಮಲಾ ಹೆಗಡೆ, ಅಶೋಕ ಚಂದ್ರಗುತ್ತಿ ಇವರೆಲ್ಲ ದಿನವೂ ಮಕ್ಕಳಿಗೆ ದೀಪ ಧ್ಯಾನ, ಶ್ಲೋಕ, ವಚನ, ಹಾಡು, ವ್ಯಾಯಾಮ, ಕಲೆ ಜ್ಞಾನ ನೀಡಿದರು.

ಸಿಬಿಎಸ್ಇ ಫಲಿತಾಂಶ: ವಿದ್ಯಾರ್ಥಿಗಳ ಸಾಧನೆ



ಬ್ಯಾಡಗಿ: ಪ್ರಸಕ್ತ ವರ್ಷದ ಎಸ್ಎಸ್ಎಲ್‌ಸಿ (ಸಿಬಿಎಸ್ಇ)ಪರೀಕ್ಷೆಯಲ್ಲಿ ಆದರ್ಶ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಸಾಧನೆ ಮಾಡಿದ್ದಾರೆ.

ರಕ್ಷಾ ಜಗದೀಶ್ ಲಿಂಬಿಕಾಯಿ 457 ಅಂಕ ಪಡೆದು (ಶೇ 91.40) ರಷ್ಟು ಅಂಕ ಪಡದು ಶಾಲೆಗೆ ಪ್ರಥಮ, ವೈಭವಿ ಬಸವರಾಜ ಗಡಗಿ 456 ಅಂಕ ಪಡೆದು(ಶೇ 91.20) ರಷ್ಟು ಅಂಕ ಪಡೆದು ದ್ವಿತೀಯ, ಭರತ್ ಸುರೇಶ ಗುತ್ತಲ 450 ಅಂಕ ಪಡೆದು (ಶೇ 90) ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

ಲಾರಿ ಪಲ್ಟಿ: ಅಪಾಯದಿಂದ ಪಾರು



ಬನವಾಸಿ: ಶಿವಮೊಗ್ಗದಿಂದ ಶಿರಸಿ ಕಡೆಗೆ ಸರಕು ಸಾಗಿಸುತ್ತಿದ್ದ ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿ ಸಮೀಪದ ರಾಮತೀರ್ಥ ಕೆರೆಯ ಬಳಿ ಶಿರಸಿ-ಹೊಸನಗರ ರಾಜ್ಯ ಹೆದ್ದಾರಿ ತಿರುವಿನಲ್ಲಿ ಪಲ್ಟಿಯಾಗಿದೆ.ಶನಿವಾರ ರಾತ್ರಿ 10 ಗಂಟೆಗೆ ಹೆದ್ದಾರಿ ಪಕ್ಕದಲ್ಲಿದ್ದ ಕೆರೆಯ ಬಳಿ ಗದ್ದೆಗೆ ಪಲ್ಟಿಯಾಗಿದೆ. ಅಪಘಾತದ ತೀವ್ರತೆಗೆ ಲಾರಿ ಸಂಪೂರ್ಣ ಹಾನಿಯಾಗಿದ್ದು, ಲಾರಿಯೊಳಗೆ ಸಿಲುಕಿಕೊಂಡಿದ್ದ ಚಾಲಕನನ್ನು ಸ್ಥಳೀಯರು ಹೊರ ತೆಗೆದಿದ್ದಾರೆ. ಅದೃಷ್ಟವಶಾತ್ ಚಾಲಕನಿಗೆ ಸಣ್ಣಪುಟ್ಟ ಗಾಯವಾಗಿದ್ದು, ಅಪಾಯದಿಂದ ಪಾರಾಗಿದ್ದಾನೆ.



ರಾಣೆಬೆನ್ನೂರ : ನಗರದ ದೊಡ್ಡಕೆರೆ ಆವರಣದಲ್ಲಿ ಭಾನುವಾರ ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆಗೆ ಸಿಎಂ ಸಿದ್ದರಾಮಯ್ಯ ಆಗಮಿಸಿದ ವೇಳೆ ಶಾಸಕ ಪ್ರಕಾಶ ಕೋಳಿವಾಡ ರೋಬೋಟ್ ಟೀಚರ್ ಕುರಿತು ಸಿಎಂಗೆ ಮಾಹಿತಿ ನೀಡಿದರು.

ಮಾನವ ಹಕ್ಕು ಉಲ್ಲಂಘನೆ ದೂರು ಸ್ವೀಕಾರ ಸಭೆ

ಕಾರವಾರ: ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಲ್ಲಿ ನೊಂದವರಿಗೆ ಸೂಕ್ತ ನೆರವನ್ನು ಒದಗಿಸುವ ನಿಟ್ಟಿನಲ್ಲಿ 1993ರ ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾಗಿರುವ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗವು ಏ.28 ಮತ್ತು ಏ.29 ರಂದು ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿಟ್ಟಿಂಗ್ಸ್ ನಡೆಸಲು ಉದ್ದೇಶಿಸಿರುತ್ತದೆ.

ಆ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಆಯೋಗದಲ್ಲಿ ನೊಂದಣಿಯಾಗಿರುವ ಪ್ರಕರಣಗಳನ್ನು ಇರ್ತಥ್ಯಪಡಿಸಿ, ವಿಲೇ ಮಾಡಿ ಕ್ರಮ ಜರುಗಿಸಲು ಉದ್ದೇಶಿಸಲಾಗಿದೆ. ದೂರುದಾರರು ಹಾಗೂ ಪ್ರತಿವಾದಿ ಪ್ರಾಧಿಕಾರಿಗಳು ಈ ಸೌಲಭ್ಯದ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಲಾಗಿದೆ.

ಮುಂದುವರೆದು, ಮಾನವ ಹಕ್ಕು ಉಲ್ಲಂಘನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಉತ್ತರ ಕನ್ನಡ ಜಿಲ್ಲೆಯಲ್ಲಿನ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಿಂದ ಏ.28 ಮತ್ತು 29ರಂದು ಸಾರ್ವಜನಿಕರಿಂದ ದೂರುಗಳು, ಅಹವಾಲುಗಳನ್ನು ಸಹ ಸ್ವೀಕರಿಸಲಾಗುವುದು. ಸಾರ್ವಜನಿಕರು ನಿಗದಿತ ದಿನಾಂಕದಂದು ಆಯೋಗದ ಅಧ್ಯಕ್ಷ ಹಾಗೂ ಸದಸ್ಯರನ್ನು ಸಂಪರ್ಕಿಸಿ,ದೂರುಗಳನ್ನು ಸಲ್ಲಿಸಬಹುದೆಂದು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಕಾರ್ಯದರ್ಶಿ ಎ. ದಿನೇಶ್ ಸಂಪತ್‌ರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗೋಕರ್ಣ: ಗ್ರಾಮ ದೇವತೆ ಭದ್ರಕಾಳಿ ಹಾಗೂ ಪರಿವಾರ ದೇವರ ಬಂಡಿಹಬ್ಬ ಭಾನುವಾರ ಆರಂಭಗೊಂಡಿದೆ. ಬೆಳಗ್ಗೆ ತೇಸೆ ಹಾಕುವುದು ಮತ್ತಿತರ ಕೈಂಕರ್ಯ ನೆರವೇರಿತು.ಸಂಜೆ ದೇವಿಯ ಕಳಸ ಕಳಸದ ಮನೆಯಲ್ಲಿ ಪೂಜೆ ಕೈಂಕರ್ಯ ನೆರವೇರಿದ ಬಳಿಕ ಕಳಸದ ಮನೆಯಿಂದ ಭದ್ರಕಾಳಿ ಮಂದಿರಕ್ಕೆ ಕಳಸ ತೆರಳಿತು ಇದರೊಂದಿಗೆ ಕಳಶೋತ್ಸವ ಪ್ರಾರಂಭಗೊಂಡಿತು.

ದೇವಸ್ಥಾನದ ಜೀರ್ಣೋದ್ಧಾರಕ್ಕೆ ಮೀನು ಶಿಕಾರಿ
ಹಳ್ಳಿಕೊಪ್ಪದಲ್ಲಿ ಅದ್ದೂರಿಯ ಕೆರೆ ಬೇಟೆ

ಮುಂಡಗೋಡ: ತಾಲೂಕಿನ ಮಳಗಿ ಗ್ರಾಪಂ ವ್ಯಾಪ್ತಿಯ ಸಿದ್ದಾಪುರ ಗ್ರಾಮದ ಹಳ್ಳಿಕೊಪ್ಪದಲ್ಲಿ ಕೆರೆ ಬೇಟೆ ಅದ್ದೂರಿಯಾಗಿ ನಡೆದಿದ್ದು, ದೂರದ ಊರುಗಳಿಂದ 300ಕ್ಕೂ ಹೆಚ್ಚು ಜನ ಬಿದಿರಿನ ಕಡ್ಡಿಗಳಿಂದ ತಯಾರಿಸಿದ ಕುಣಿಗಳನ್ನು ತೆಗೆದುಕೊಂಡು ಮೀನು ಶಿಕಾರಿಗೆ ಇಳಿದಿದ್ದರು. ಮಲೆನಾಡಿನ ಜನರ ಕೆರೆ ಬೇಟೆ ಒಂದು ಸಾಂಪ್ರದಾಯಿಕ ಜೀವನಶೈಲಿ ಈ ಪ್ರದೇಶದ ಜನರ ಜೀವನದ ಒಂದು ಭಾಗವಾಗಿದ್ದು, ಪ್ರಕೃತಿಯೊಂದಿಗೆ ಹತ್ತಿರವಾಗಿ ಬೆಸೆದುಕೊಂಡಿದೆ. ಅದರಲ್ಲಿ 'ಕೆರೆ ಬೇಟೆ' ಎಂಬುದು ಒಂದು ವಿಶೇಷವಾದ ಮತ್ತು ಸಾಂಪ್ರದಾಯಿಕ ಚಟುವಟಿಕೆಯಾಗಿದೆ.

ಒಂದು ರೀತಿಯ ಸಮೂಹ ಚಟುವಟಿಕೆ ಹಾಗೂ ಸಂಸ್ಕೃತಿಯ ಭಾಗವಾಗಿದೆ.

ಮಲೆನಾಡಿನ ಜನರ ಬದುಕಿನಲ್ಲಿ ಕೆರೆ ಬೇಟೆಯ ಪಾತ್ರ ಬಹು ಮುಖ್ಯವಾಗಿದೆ.

ಗ್ರಾಮದ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯದ ನಿಮಿತ್ತ ಈ ಕೆರೆ ಬೇಟೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಪ್ರತಿ ಕುಣಿಗೆ 500 ರೂಪಾಯಿ ಶುಲ್ಕ ನಿಗದಿಪಡಿಸಲಾಗಿತ್ತು. ಮೀನು ಹಿಡಿಯಲು ಭಾಗವಹಿಸಿದ ಮೀನುಗಾರರಲ್ಲಿ ಕೆಲವರಿಗೆ ಉತ್ತಮ ಪ್ರಮಾಣದಲ್ಲಿ ಮೀನು ಸಿಕ್ಕಿದ್ದು, ಇನ್ನೂ ಕೆಲವರಿಗೆ ಕಡಿಮೆ ಪ್ರಮಾಣದಲ್ಲಿ ಸಿಕ್ಕಿರುವುದು ಕಂಡುಬಂತು. ಕೆಲವರಿಗೆ ಮೀನು ಸಿಗದೇ ಹಿಂತಿರುಗಬೇಕಾದ ಪರಿಸ್ಥಿತಿಯೂ ಎದುರಾಯಿತು. ಆದರೂ ಮೀನುಗಾರರು ಯಾವುದೇ ಅಸಮಾಧಾನ ವ್ಯಕ್ತಪಡಿಸದೆ,



» 300ಕ್ಕೂ ಹೆಚ್ಚು ಜನ ಶಿಕಾರಿಗೆ ಇಳಿದು ಬೇಟೆ

» ಪ್ರತಿ ಕುಣಿಗೆ 500 ರೂಪಾಯಿ ಶುಲ್ಕ ನಿಗದಿ

ದೇವಸ್ಥಾನದ ಜೀರ್ಣೋದ್ಧಾರಕ್ಕೆ ತಮ್ಮ ಸಹಾಯವಾಗಿದೆ ಎಂದು ಸಂತೋಷದೊಂದಿಗೆ ತೆರಳಿದರು.

ಕಳೆದ ವರ್ಷ ಇದೇ ಕೆರೆ ಬೇಟೆಯಲ್ಲಿ ಹೆಚ್ಚಿನ ಪ್ರಮಾಣದ ಮೀನು ಸಿಕ್ಕಿದ್ದನ್ನು ಜನ ಸ್ಮರಿಸಿದರು. ಈ ಕಾರ್ಯಕ್ರಮವನ್ನು ಊರಿನ ಮುಖಂಡರು ಹಾಗೂ ಸಾರ್ವಜನಿಕರು ಅತ್ಯಂತ ಅಚ್ಚುಕಟ್ಟಾಗಿ ಆಯೋಜಿಸಿದ್ದು, ಯಾವುದೇ ಅಹಿತಕರ ಘಟನೆಗಳಿಲ್ಲದೇ ಶಾಂತಯುತವಾಗಿ ಮುಕ್ತಾಯಗೊಂಡಿತು. ಒಟ್ಟಾರೆ ಬಿಳೂರಿನ ಕೆರೆ ಬೇಟೆ ಸಂಭ್ರಮವು ಸಂಪ್ರದಾಯ, ಸಹಕಾರ ಮತ್ತು ಭಕ್ತಿಯ ಸಂಕೇತವಾಗಿ ಮತ್ತೊಮ್ಮೆ



ಯಶಸ್ವಿಯಾಗಿ ನೆರವೇರಿತು. ಮಲೆನಾಡಿನ ಕೆರೆ ಬೇಟೆ ಒಂದು ಸಾಂಪ್ರದಾಯಿಕ ಕಲೆ ಮಾತ್ರವಲ್ಲ, ಅದು ಜನರ ಜೀವನದ ಒಂದು ಭಾಗವಾಗಿದೆ. ಇದು ಸಹಕಾರ, ಸಂಸ್ಕೃತಿ ಮತ್ತು ಪ್ರಕೃತಿಯ ನಡುವಿನ ಸುಂದರ ಸಂಬಂಧವನ್ನು ತೋರಿಸುತ್ತದೆ. ಇಂತಹ ಪರಂಪರೆಗಳನ್ನು ಉಳಿಸಿ ಬೆಳೆಸುವುದು ನಮ್ಮ ಕರ್ತವ್ಯ ಎಂದು ಸ್ಥಳೀಯರೊಬ್ಬರು ತಿಳಿಸಿದರು.

ಕಾಸರಕೋಡ ಕಡಲತೀರಕ್ಕೆ 6ನೇ ಬಾರಿ ಬ್ಲೂ ಫ್ಲಾಗ್ ಮಾನ್ಯತೆ

ಕಾರವಾರ: ಹೊನ್ನಾವರ ತಾಲೂಕಿನ ಕಾಸರಕೋಡ ಕಡಲತೀರಕ್ಕೆ ಸತತ 6ನೇ ಬಾರಿ ಬ್ಲೂ ಫ್ಲಾಗ್ ಮಾನ್ಯತೆ ದೊರೆತಿದ್ದು, ಇದರ ಅಂಗವಾಗಿ ಕಾಸರಕೋಡ ಕಡಲತೀರದಲ್ಲಿ ಭಾನುವಾರ ಬ್ಲೂ ಫ್ಲಾಗ್‌ನ ಧ್ವಜಾರೋಹಣವನ್ನು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕಿ ಮಂಗಳ ಗೌರಿ ಭಟ್ ನೆರವೇರಿಸಿದರು.

ನಂತರ ಮಾತನಾಡಿದ ಅವರು, ದೇಶಾದ್ಯಂತ ಈ ವರ್ಷ 14 ಕಡಲತೀರಗಳಿಗೆ ಬ್ಲೂ ಫ್ಲಾಗ್ ಮಾನ್ಯತೆ ದೊರೆತಿದ್ದು, ಕರ್ನಾಟಕದಲ್ಲಿ ಮೂರು ಕಡಲತೀರಗಳು ಈ ಪಟ್ಟಿಗೆ ಸೇರಿವೆ. ಅವುಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಾಸರಕೋಡ ಕಡಲತೀರವೂ ಒಂದಾಗಿದ್ದು, ಕಾಸರಕೋಡ ಕಡಲತೀರಕ್ಕೆ ಇದು ಆರನೇ ಬಾರಿ ಬ್ಲೂ ಫ್ಲಾಗ್ ಮಾನ್ಯತೆ ದೊರೆತಿದೆ. ಇಲ್ಲಿನ ಕಡಲತೀರದ ಸ್ವಚ್ಛತೆ, ಪ್ರವಾಸಿಗರ ಸುರಕ್ಷತೆ, ಉತ್ತಮ ಮೂಲಸೌಕರ್ಯಗಳ ವ್ಯವಸ್ಥೆ ಹಾಗೂ ನೈಸರ್ಗಿಕ ವಸ್ತುಗಳ ಬಳಕೆಯ ಮೂಲಕ ಅಭಿವೃದ್ಧಿಪಡಿಸಿರುವುದನ್ನು ಪರಿಗಣಿಸಿ ಈ ಗೌರವ ನೀಡಲಾಗಿದೆ ಎಂದರು.

ಕಾಸರಕೋಡು ಕಡಲತೀರದಲ್ಲಿ ಸ್ವಚ್ಛತೆಯನ್ನು ಕಾಪಾಡಲು ಭಾರತ ಸರ್ಕಾರದಿಂದ ಸ್ವಚ್ಛತಾ ಯಂತ್ರಗಳನ್ನು ಒದಗಿಸಲಾಗಿದ್ದು, ಈ ಯಂತ್ರದ ಮೂಲಕ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದ್ದು ಇವರಿಂದ ಸ್ವಚ್ಛತೆ, ಪ್ರವಾಸಿಗರ ಸುರಕ್ಷತೆ ಹಾಗೂ ಮೂಲಸೌಕರ್ಯ ನಿರ್ವಹಣೆ ಮಾಡಲಾಗುತ್ತಿದ್ದು, ಬೀಚ್ ನಲ್ಲಿ ಜೀವ ರಕ್ಷಕರನ್ನು ಕೂಡಾ ನಿಯೋಜಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ಕಾರವಾರದ ರವೀಂದ್ರ ಕಡಲತೀರ ಹಾಗೂ ಅಪ್ಸರಕೊಂಡ ಕಡಲತೀರಗಳನ್ನು ಸಹ ಮುಂದಿನ ದಿನಗಳಲ್ಲಿ ಬ್ಲೂ ಫ್ಲಾಗ್ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಯೋಜನೆ ಇದೆ ಎಂದು ತಿಳಿಸಿದರು.



ಪ್ರವಾಸಿಗರ ಅಭಿವೃದ್ಧಿಗೆ ಸಹಕಾರ ಅಗತ್ಯ

ಹೊನ್ನಾವರ: ದೇವಾಲಯಗಳು ಆಧ್ಯಾತ್ಮಿಕ ಶಕ್ತಿಯೊಂದಿಗೆ ಆತ್ಮಶಕ್ತಿಯನ್ನು ಜಾಗೃತಗೊಳಿಸಿ ಸಮಾಜ ಶಕ್ತಿಯುತಗೊಳಿಸಲು ಕಾರಣವಾಗಿದೆ ಎಂದು ಕೆನರಾ ಲೋಕಸಭಾ ಕ್ಷೇತ್ರದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ತಾಲೂಕಿನ ಗುಣವಂತೆಯ ಶಂಭುಲಿಂಗೇಶ್ವರ ದೇವರ ಶಿಲಾಮಯ ದೇವಾಲಯ ಲೋಕಾರ್ಪಣೆ, ಅಷ್ಟಬಂಧ ಮತ್ತು ಬ್ರಹ್ಮಕಲಶೋತ್ಸವದ ಅಂಗವಾಗಿ ನಡೆದ ಹತ್ತು ದಿನಗಳ ಸಭಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ವೈಭವದ ಸಮಾರೋಪ ಸಮಾರಂಭ ಡಾ ಆರ್.ಎನ್. ಶೆಟ್ಟಿ ವೇದಿಕೆಯಲ್ಲಿ ಮಾತನಾಡಿದರು. ನನ್ನ ಲೋಕಸಭಾಕ್ಷೇತ್ರದಲ್ಲಿರುವಪಂಚಕ್ಷೇತ್ರಗಳು ಪ್ರವಾಸಿ ಕ್ಷೇತ್ರವಾಗಿ ಅಭಿವೃದ್ಧಿಪಡಿಸುವ ಇಂಗಿತವನ್ನು ವ್ಯಕ್ತಪಡಿಸಿದರು. ಕ್ಷೇತ್ರಕ್ಕೆ ಬರುವ ಪ್ರವಾಸಿಗರ ಅನುಕೂಲಕ್ಕೆ ಇನ್ನಷ್ಟು ಅಭಿವೃದ್ಧಿ ಎಲ್ಲರ ಸಹಕಾರ ಅಗತ್ಯ ಎಂದರು. ಮಾಜಿ ಶಾಸಕ ಸುನಿಲ್ ನಾಯ್ಕ ಮಾತನಾಡಿ, ನನ್ನ ವಿಧಾನಸಭಾ ಕ್ಷೇತ್ರದ ಈ ದೇವಾಲಯ ಅಭಿವೃದ್ಧಿಪಡಿಸಲು ನನ್ನ ವೈಯಕ್ತಿಕ ಮತ್ತು ಸಾಮೂಹಿಕ ಕೊಡುಗೆಗೆ ಭರವಸೆ ನೀಡಿ ಈಗಾಗಲೇ ದೇವಾಲಯಕ್ಕೆ ಆಗಮಿಸುವ ಸಭಾದ್ವಾರ ಮಂಟಪ ನಿರ್ಮಿಸಲು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಊರಿನವರಿಗೆ ವಂದಿಸಿದರು. ಸಮಿತಿಯ ಸದಸ್ಯ ಎಸ್. ಹೆಚ್. ಗೌಡ ಹತ್ತು ದಿನಗಳ ಕಾರ್ಯಕ್ರಮದ ಅವಲೋಕನವನ್ನು ಮಾಡಿದರು.

ಅಧ್ಯಕ್ಷತೆಯನ್ನ ವಹಿಸಿದ ಆಡಳಿತ ಸಮಿತಿಯ ಅಧ್ಯಕ್ಷ ಡಾ. ನರಸಿಂಹಮೂರ್ತಿ



ಪಂಡಿತ್ ವಹಿಸಿ ಮಾತನಾಡಿ, ಈ ಅಪೂರ್ವವಾದ ಸಂಭ್ರಮದ ಕ್ಷಣದ ಯಶಸ್ಸಿಗೆ ಸಹಕರಿಸಿದ ಸರ್ವರನ್ನು ನೆನಪಿಸಿಕೊಂಡರು. ಊರಿನ ಏಳಿಗೆ ದೇವಾಲಯಗಳ ಪುನರುತ್ಥಾನದಿಂದ ಆಗುತ್ತದೆ. ಊರಿನ ಎಲ್ಲ ಕ್ಷೇತ್ರಗಳ ಅಭಿವೃದ್ಧಿಗೆ ಸರ್ವರೂ ಕೈಜೋಡಿಸಬೇಕೆಂದು ಮನವಿ ಮಾಡಿದರು.

ನಿವೃತ್ತ ಪ್ರಾದೇಶಿಕ ಪರಿಸರ ಅಧಿಕಾರಿ ವಿಜಯ ಪಂಡಿತ್ ರವರು ನರಸಿಂಹಮೂರ್ತಿ ಪಂಡಿತ್ ಬರೆದ ಭೂಕೈಲಾಸ ಸಂಬಂಧಿಸಿದ ಪ್ರಾರ್ಥನೆಯನ್ನು ಸುಶ್ರಾವ್ಯವಾಗಿ ಹಾಡಿದರು. ಅನಂತಮೂರ್ತಿ ತಬಲಾ ಸಾಥ್ ಹಾಗೂ ಸೂರ್ಯನಾರಾಯಣ ಭಟ್ಟ ಸೂರಿ ಹಾರ್ಮೋನಿಯಂ ಸಾಥ್ ನೀಡಿದರು. ಸಮಿತಿಯ ಪ್ರಧಾನ ಕಾರ್ಯದರ್ಶಿ ಎಸ್. ಎಮ್. ಹೆಗಡೆ ಸ್ವಾಗತಿಸಿದರು. ಎಲ್.ಎಮ್ ಹೆಗಡೆ ಕಾರ್ಯಕ್ರಮ ನಿರೂಪಿಸಿದರು ಸಮಿತಿ ಉಪಾಧ್ಯಕ್ಷ ಶಿವಾನಂದ ಗೌಡ ವಂದಿಸಿದರು. ಸಾಂಸ್ಕೃತಿಕ ವೈಭವದ ಭಾಗವಾಗಿ ಊರಿನ ಆಸಕ್ತ ರಂಗಕರ್ಮಿಗಳಿಂದ ನಾಟಕ ಪ್ರದರ್ಶನ ಪ್ರದರ್ಶಿಸಲ್ಪಟ್ಟಿತು. ನಂತರ ಊರಿನ ಯಕ್ಷಗಾನ ಕಲಾವಿದರಿಂದ ಯಕ್ಷಗಾನ ಜನರ ಮನಸೂರೆಗೊಂಡಿತು.

ರಾಸು ವಿಮೆ ಆರ್ಥಿಕ ಭದ್ರತೆ ಒದಗಿಸುವ ಯೋಜನೆ

ಬ್ಯಾಡಗಿ: ರಾಸು ವಿಮೆ ರೈತರಿಗೆ ಬಲವಾದ ಆರ್ಥಿಕ ಭದ್ರತೆಯನ್ನು ಒದಗಿಸುವ ಮಹತ್ವದ ಯೋಜನೆಯಾಗಿದೆ ಎಂದು ಹಾವೇಮೂಲ ನಿರ್ದೇಶಕ ಪ್ರಕಾಶ್ ಬನ್ನಿಹಟ್ಟಿ ಹೇಳಿದರು.

ತಾಲೂಕಿನ ಮುತ್ತೂರು ಹಾಲು ಉತ್ಪಾದಕ ಸಹಕಾರ ಸಂಘದಲ್ಲಿ ಹೈನುಗಾರರ ಹಿತದೃಷ್ಟಿಯಿಂದ 'ರಾಸು ವಿಮೆ' ಯೋಜನೆಗೆ ಚಾಲನೆ ನೀಡಿ ಮಾತನಾಡಿ,

ಹಸು ಅಥವಾ ಎಮ್ಮೆ ಆಕಸ್ಮಿಕವಾಗಿ ಮರಣ ಹೊಂದಿದಾಗ, ರೈತ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದು ಸಾಮಾನ್ಯ.ಈ ಸಂದರ್ಭದಲ್ಲಿ ಈ ಯೋಜನೆಯ ಸುಪಯೋಗ



ಪಡಿಸಿಕೊಳ್ಳಲು ರೈತರು ಮತ್ತೆ ಹೊಸ ರಾಸು ಖರೀದಿಸಿ ಹೈನುಗಾರಿಕೆಯನ್ನು ನಿರಂತರವಾಗಿ ಮುಂದುವರಿಸಲು ಸಹಾಯವಾಗುತ್ತದೆ. ರೈತರ ಬದುಕನ್ನು ಬಲಪಡಿಸುವ ದಿಟ್ಟ ಸಂಕಲ್ಪದೊಂದಿಗೆ ನಾವು ಕೆಲಸ ಮಾಡುತ್ತಿದ್ದು, ಸದಸ್ಯರ ಹಿತಾಸಕ್ತಿಯೇ ನಮ್ಮ ಸಂಘದ ಪ್ರಧಾನ ಧ್ಯೇಯವಾಗಿದೆ ಎಂದರು.ಈ ಹಿನ್ನಲೆಯಲ್ಲಿ, ಮರಣ ಹೊಂದಿದ ಸದಸ್ಯರ ಕುಟುಂಬಗಳಿಗೆ ಕಲ್ಯಾಣ ನಿಧಿಯ ಚೆಕ್‌ಗಳನ್ನು ವಿತರಿಸಲಾಯಿತು ಹಾಗೂ ಹೈನುಗಾರರಿಗೆ ರಾಸು ವಿಮೆಯ ಸೌಲಭ್ಯವನ್ನು ಒದಗಿಸಲಾಯಿತು. ಸಂಘದ ಅಧ್ಯಕ್ಷರಾದ ನಾಗೇಂದ್ರಪ್ಪ ಜಿಗಳಿಕೊಪ್ಪದವರು, ಆಡಳಿತ ಮಂಡಳಿಯ ಸದಸ್ಯರು, ಒಕ್ಕೂಟದ ಅಧಿಕಾರಿಗಳಾದ ಡಾ. ಶರಣಪ್ಪ ಹಾಗೂ ವಿಸ್ತರಣಾ ಅಧಿಕಾರಿಗಳಾದ ಅಜಯಕುಮಾರ್ ರಿತ್ತಿ ಹಾಗೂ ವ್ಯಾಪಾರಸ್ಥರಾದ ರಮೇಶ್ ಮೋಟೆಬೆನ್ನೂರು ಅವರು ಉಪಸ್ಥಿತರಿದ್ದರು.

ಇಂದು ಶಂಕರ ಜಯಂತಿ ಆಚರಣೆ

ಶಿರಸಿ: ಸೋಂದಾ ಸ್ವರ್ಣವಲ್ಲೀ ಮಹಾ ಸಂಸ್ಥಾನದಿಂದ ನಗರದ ಯೋಗಮಂದಿರದಲ್ಲಿ ಏ.20ರಂದು, ಸ್ವರ್ಣವಲ್ಲೀಯಲ್ಲಿ ಏ.21ರಂದು ಶಂಕರ ಜಯಂತಿ ಆಚರಣೆಯನ್ನು ಹಮ್ಮಿಕೊಂಡಿದೆ. ಎರಡೂ ದಿನ ಬೆಳಗ್ಗೆ ವಿವಿಧ ಧಾರ್ಮಿಕ ಹಾಗೂ ಸಂಜೆ ಧರ್ಮಸಭೆ, ಪ್ರಶಸ್ತಿ ಪ್ರದಾನ ಸಮಾರಂಭ ಭಕ್ತಿ ಭಾವದಿಂದ ಜರುಗಲಿವೆ.

ಏ.20ರ ಬೆಳಗ್ಗೆ 9.30ರಿಂದ ಶಂಕರ ಸ್ತೋತ್ರ ಪಾರಾಯಣದೊಂದಿಗೆ ಆರಂಭವಾಗಲಿದೆ. ಭಕ್ತರು ವೇದಘೋಷಗಳ ನಡುವೆ ಪಾರಾಯಣದಲ್ಲಿ ಭಾಗವಹಿಸಿ ಜಗದ್ಗುರು ಆದಿ ಶಂಕರಾಚಾರ್ಯರ ಸ್ಮರಣೆಯಲ್ಲಿ ತೊಡಗಿಸಿಕೊಳ್ಳಲಿದ್ದಾರೆ.ಸಂಜೆ 4.ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದ್ದು, ಪರಮಪೂಜ್ಯ ಮಜ್ಜಗದ್ಗುರು ಶಂಕರಾಚಾರ್ಯ ಗಂಗಾಧರೇಂದ್ರ ಸರಸ್ವತಿ ಶ್ರೀಗಳು ಹಾಗೂ ಶ್ರೀಮದ್ ಆನಂದಬೋಧೇಂದ್ರ ಸರಸ್ವತಿ ಶ್ರೀಗಳು ಆಶೀರ್ವಚನ ನೀಡಲಿದ್ದಾರೆ.ಶಿರಳಗಿಯ ಚೈತನ್ಯ ರಾಜಾರಾಮಶ್ರಾಮದ ಬ್ರಹ್ಮಾನಂದಭಾರತೀ ಶ್ರೀಗಳ ಉಪಸ್ಥಿತರಿದ್ದು, ಧಾರ್ಮಿಕ ಸಂದೇಶಗಳನ್ನು ನೀಡಲಿದ್ದಾರೆ.'ಸಾಧನಾಶಂಕರ' ಪ್ರಶಸ್ತಿ, ಡಾ. ಶಂಕರ ಭಟ್, ಉಂಚಳ್ಳಿ ಅವರಿಗೆ ಪ್ರದಾನ ಮಾಡಲಾಗುತ್ತದೆ. ಕೇಶವ ಹೆಗಡೆ ಗಡಿಕೈ ದಂಪತಿಗಗಳಿಗೆ ಸಮ್ಮಾನ ನಡೆಯುತ್ತದೆ. ಏ.21ರ ಬೆಳಗ್ಗೆ 9.30 ರಿಂದ ಸ್ವರ್ಣವಲ್ಲೀ ಮಠದಲ್ಲಿ ಧಾರ್ಮಿಕ ಕಾರ್ಯಕ್ರಮ ಆರಂಭವಾಗಲಿವೆ. ಗಣಪತಿ ಪೂಜೆ, ಸಂಕಲ್ಪ, ಋತ್ವಿಕ್ ವರಣ ಹಾಗೂ ವೇದ ಪಾರಾಯಣ ನಡೆಯಲಿದೆ. ಅಲ್ಲದೆ ಶಂಕರ ದಿಗ್ವಿಜಯ, ಜ್ಞಾನದೀಪಿಕಾ ಮತ್ತು ಭಾಷ್ಯತ್ರಯ ಪಾರಾಯಣ, ಗಾಯತ್ರೀ ಜಪ ಹಾಗೂ ಪುರುಷಸೂಕ್ತ ಜಪದೊಂದಿಗೆ ಶಂಕರಾಚಾರ್ಯ ಕಲ್ಪೋಕ್ತ ಮಹಾಪೂಜೆ ನೆರವೇರಲಿದೆ. ವಿಶೇಷವಾಗಿ ಮಾತೆಯರಿಂದ ಶಂಕರರ ಸಮಗ್ರ ಸ್ತೋತ್ರಗಳ ಪಾರಾಯಣ, ಸಂಜೆ 4.30 ರಿಂದ ಸಭಾ ಕಾರ್ಯಕ್ರಮ, ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಪೀಠಾಧೀಶ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಶ್ರೀಗಳು ಹಾಗೂ ಶ್ರೀ ಆನಂದಬೋಧೇಂದ್ರ ಸರಸ್ವತೀ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಜರುಗಲಿದೆ. ಶಿವಮೊಗ್ಗದ ರಾಮಕೃಷ್ಣಾಶ್ರಮದ ಪರಮಪೂಜ್ಯ ಶ್ರೀ ವಿನಯಾನಂದ ಸರಸ್ವತೀ ಶ್ರೀಗಳು ಪಾಲ್ಗೊಳ್ಳಲಿದ್ದಾರೆ.ಸಾಧನಾ ಶಂಕರ ಪ್ರಶಸ್ತಿಯನ್ನು ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ವಿಶ್ರಾಂತ ಉಪಕುಲಪತಿಗಳಾದ ಡಾ. ಪರಮೇಶ್ವರ ಶಾಸ್ತ್ರಿ ಅವರಿಗೆ ಪ್ರದಾನ ಮಾಡಲಿದ್ದಾರೆ. ವೆಂಕಟರಮಣ ನರಸಿಂಹ ಗೇರಗದ್ದೆ ದಂಪತಿಗಳಿಗೆ ಸಮ್ಮಾನ ನಡೆಯಲಿದೆ ಎಂದು ಶ್ರೀಮಠದ ಪ್ರಕಟನೆ ತಿಳಿಸಿದೆ.

ಸಾಧಕರಿಗೆ ಗೌರವ

ಸಂಸ್ಕೃತ ಕ್ಷೇತ್ರದಲ್ಲಿ ಅನವರತ ಕಾರ್ಯ ಮಾಡಿದ ಇಬ್ಬರು ಸಾಧಕರಾದ ವಿ.ಶಂಕರ ಭಟ್ಟ ಉಂಚಳ್ಳಿ ಹಾಗೂ ವಿಶ್ರಾಂತ ಕುಲಪತಿ ಡಾ. ಪರಮೇಶ್ವರ ಶಾಸ್ತ್ರಿಗಳಿಗೆ ಸಾಧನಾ ಶಂಕರ ಪ್ರಶಸ್ತಿ ಪ್ರದಾನ ಹಾಗೂ ಧಾರ್ಮಿಕ ಶ್ರದ್ಧೆಯ ಕುಟುಂಬಗಳಾದ ಗಡಿಕೈನ ಕೇಶವ ಹೆಗಡೆ, ನರಸಿಂಹ ಗೇರಗದ್ದೆ ಕುಟುಂಬಕ್ಕೆ ಸಮ್ಮಾನ ಮಾಡಲಾಗುತ್ತಿದೆ.

ಬೀದಿ ನಾಯಿಗಳ ಸಂತಾನ ಹರಣಕ್ಕೆ ಒತ್ತು ನೀಡಿ: ಡಿಸಿ

ಹಾವೇರಿ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ ಮಾರ್ಗಸೂಚಿ ಅನುಸಾರ ಅಧಿಕಾರಿಗಳು ತಮಗೆ ನಿಗಧಿಪಡಿಸಿದ ಕರ್ತವ್ಯಗಳನ್ನು ಕಡ್ಡಾಯವಾಗಿ ಪಾಲಿಸಿ ಬೀದಿ ನಾಯಿಗಳ ಸಂತಾನ ಹರಣ ಕಾರ್ಯಕ್ರಮದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ವಿಜಯ ಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೀದಿ ನಾಯಿಗಳ ಸಂತಾನ ಹರಣ ಶಸ್ತ್ರ ಚಿಕಿತ್ಸೆ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆ, ಜಿಲ್ಲಾ ಎಸ್.ಪಿ.ಸಿ.ಎ ಸಭೆ, ಜಿಲ್ಲಾಮಟ್ಟದ ಮೇವು ಅಭಿವೃದ್ಧಿ ಕಾರ್ಯಪಡೆ ಸಮಿತಿ ಸಭೆ, ಸಂಚಾರಿ ಪಶುಸಂಜೀವಿನಿ ವಾಹನಗಳ 3 ಮತ್ತು 4ನೇ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಇನ್ನೂ ಅಲ್ಲಲ್ಲಿ ಬೀದಿ ನಾಯಿಗಳ ಹಾವಳಿಯ ಬಗ್ಗೆ ವರದಿಗಳಾಗುತ್ತಿವೆ. ನಗರ ಸ್ಥಳೀಯ ಸಂಸ್ಥೆಯವರು ತಮ್ಮ ವ್ಯಾಪ್ತಿಯಲ್ಲಿ



ಬರುವ ಬೀದಿನಾಯಿಗಳ ಹಾವಳಿ ತಪ್ಪಿಸಲು ಅಗತ್ಯ ಕ್ರಮಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 9 ಪಶು ಸಂಜೀವಿನಿ ವಾಹನಗಳು ಕಾರ್ಯ ನಿರ್ವಹಿಸುತ್ತಿದ್ದು,ರೈತರಮನೆಬಾಗಿಲಿಗೆ ಚಿಕಿತ್ಸೆ ಕಾರ್ಯಕೈಗೊಳ್ಳುವುದು ಒಂದು ಉತ್ತಮ ಕಾರ್ಯಕ್ರಮ. ಪ್ರಸ್ತುತ ಜಿಲ್ಲೆಯಲ್ಲಿನ 4 ಪಶು ಸಂಜೀವಿನಿ ವಾಹನಗಳಿಗೆ ಪಶುವೈದ್ಯರ ಹುದ್ದೆ ಖಾಲಿ ಇದ್ದು, ಹಾವೇರಿ ಜಿಲ್ಲೆಯವರೇ ಆದ ಪಶುವೈದ್ಯಕೀಯ ಪದವಿ ಪಡೆದ ಅಭ್ಯರ್ಥಿಗಳನ್ನು ಗುರುತಿಸಿ ಈ ಖಾಲಿ ಹುದ್ದೆಗಳಿಗೆ ಕೂಡಲೇ ನೇಮಕ ಮಾಡಿಕೊಳ್ಳಲು ಏಜನ್ಸಿಯ ಪ್ರತಿನಿಧಿಗಳಿಗೆ ಸೂಚಿಸಿದರು. ಜಿಲ್ಲೆಯಲ್ಲಿರುವ ಸರ್ಕಾರಿ ಗೋಶಾಲೆ ಮತ್ತು ಖಾಸಗಿ ಗೋಶಾಲೆಗಳ ಬಗ್ಗೆ ಮಾಹಿತಿ ಪಡೆದು ಪ್ರಗತಿ ಪರಿಶೀಲನೆ ನಡೆಸಿದರು.ಗ್ರಾಮೀಣ ಸ್ಥಳೀಯ ಸಂಸ್ಥೆಯವರು ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಸಂಸ್ಥೆಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಿ, ಬೀದಿ ನಾಯಿಗಳ ಮಾಹಿತಿ ನೀಡಲು ತಿಳಿಸಲಾಗಿತ್ತು. ಎಲ್ಲ ತಾಲೂಕಿನವರು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿ ಮಾಹಿತಿ ನೀಡಿದ್ದಾರೆ ಎಂದು ಉಪನಿರ್ದೇಶಕಡಾ.ಶಿವಯೋಗಿಯಲಿ ಮಾಹಿತಿ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಪೋಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ, ಯೋಜನಾ ನಿರ್ದೇಶಕ ಚಂದ್ರಪ್ಪ, ಜಂಟಿಕೃಷಿ ನಿರ್ದೇಶಕರು, ತೋಟಗಾರಿಕೆ ಉಪನಿರ್ದೇಶಕರು, ಡಾ.ಕಿರಣಕೊಪ್ಪದ ಮುಖ್ಯ ಪಶುವೈದ್ಯಾಧಿಕಾರಿಗಳು, ಎಲ್ಲಾ ತಾಲ್ಲೂಕಿನ ಪಶು ಆಸ್ಪತ್ರೆಯ ಮುಖ್ಯ ಪಶುವೈದ್ಯಾಧಿಕಾರಿಗಳು, ಜಿಲ್ಲೆಯ ಎಲ್ಲ ಸ್ಥಳೀಯಸಂಸ್ಥೆಗಳಮುಖ್ಯಾಧಿಕಾರಿಗಳು, ಎಲ್ಲ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಾಲಿಕ್ಲಿನಿಕ್‌ನ, ಖಾಸಗಿ ಗೋಶಾಲೆಯ ಮಾಲೀಕರು, ಜಿಲ್ಲಾ ಪ್ರಾಣಿ ದಯಾ ಸಂಘದ ಸದಸ್ಯರುಗಳು ಹಾಗೂ ಪಶುಸಂಜೀವಿನಿ ಕಾರ್ಯಕ್ರಮದ ಪ್ರತಿನಿಧಿಗಳು ಉಪಸ್ಥಿತರಿದ್ದರು.

> ಪಶು ಇಲಾಖೆಯಿಂದ ಪಶು ಸಂಜೀವಿನಿ ಕಾರ್ಯಕ್ರಮ ನಡೆಯುತ್ತಿದ್ದು, ಉತ್ತಮವಾಗಿ ನಡೆಯುತ್ತಿದೆ. ಅಲ್ಲದೇ ಈ ಕಾರ್ಯಕ್ರಮದಿಂದ ರೈತರಿಗೆ ಬಹಳ ಅನುಕೂಲವಾಗಿದೆ. ಇದರ ಸದುಪಯೋಗ ಪಡೆದುಕೊಳ್ಳುವಂತೆ ರೈತರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಿ ಮತ್ತು ಮನೆ ಬಾಗಿಲಿಸಿ ಸೌಲಭ್ಯ ಕಲ್ಪಿಸಿ.
>
> ■ ರುಚಿ ಬಿಂದಲ್, ಸಿಇಒ,ಜಿಪಂ

ಮಾನಸಿಕ ಸದೃಢತೆಗೆ ಚೆಸ್ ಸಹಕಾರಿ

ದಾಂಡೇಲಿ : ನಗರದ ರೋಟರಿ ಕ್ಲಬ್ ಆಶ್ರಯದಡಿ ರೋಟರಿ ಶಾಲೆಯ ಸಭಾಭವನದಲ್ಲಿ ಅಂತರ ಜಿಲ್ಲಾ ಚೆಸ್ ಪಂದ್ಯಾವಳಿಗೆ ಭಾನುವಾರ ಚಾಲನೆಯನ್ನು ನೀಡಲಾಯಿತು.

ಪಂದ್ಯಾವಳಿಗೆ ಚಾಲನೆಯನ್ನು ನೀಡಿ ಮಾತನಾಡಿದ ಶಿರಸಿಯ ಭಟ್ ಚೆಸ್ ಶಾಲೆಯ ಮುಖ್ಯಸ್ಥ ರಾಮಚಂದ್ರ ಹೆಗಡೆ ಅವರು ಚೆಸ್ ಒಂದು ಮೆದುಳಿನ ಆಟವಾಗಿದೆ. ಶುದ್ಧವಾಗಿ ಆಟಗಾರರ ಆಲೋಚನೆ, ಯೋಜನಾ ಸಾಮರ್ಥ್ಯ ಮತ್ತು ಮುಂದಾಲೋಚನೆಗಳನ್ನು ಅವಲಂಬಿಸಿದ ಆಟವಾಗಿದ್ದು, ಮಕ್ಕಳ ಮಾನಸಿಕ ಸದೃಢತೆಗೆ ಅತ್ಯಂತ ಪರಿಣಾಮಕಾರಿಯಾದ ಆಟವಾಗಿದೆ ಎಂದರು.

ರೋಟರಿ ಕ್ಲಬ್ಬಿನ ಅಧ್ಯಕ್ಷ ಆಶುತೋಷ್ ಕುಮಾರ್ ರಾಯ್ ಅವರು ರೋಟರಿ ಕ್ಲಬ್ ಪ್ರತಿವರ್ಷವೂ ಅಂತರ ಜಿಲ್ಲಾ ಚೆಸ್ ಪಂದ್ಯಾವಳಿಯನ್ನು ಆಯೋಜಿಸುತ್ತಾ ಬಂದಿದ್ದು, ಈ ಬಾರಿಯೂ ಈ ಪಂದ್ಯಾವಳಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಚೆಸ್ ಒಂದು ಜನಪ್ರಿಯ ಕ್ರೀಡೆಯಾಗಿದ್ದು, ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಅತಿ ಉಪಯುಕ್ತವಾದ ಆಟವಾಗಿದೆ ಎಂದರು.

ಭಟ್ ಚೆಸ್ ಶಾಲೆಯ ಆನಂದಸ್ವಾಮಿ ಮಾತನಾಡಿ, ಸ್ಪರ್ಧೆಗೆ ಶುಭವನ್ನು ಕೋರಿದರು.ರೋಟರಿ ಕ್ಲಬಿನ ಇವೆಂಟ್ ಚೇರ್ಮನ್ ನವೀನ್ ಕಾಮತ್, ರೋಟರಿ ಕ್ಲಬ್ ಪ್ರಮುಖರಾದ ಎಸ್.ಜಿ.ಬಿರದಾರ, ಪ್ರಕಾಶ ಕಣ್ವೆಹಳ್ಳಿ ಮತ್ತು ಅಭಿಷೇಕ್ ಕನ್ಯಾಡಿ ಉಪಸ್ಥಿತರಿದ್ದರು.ಆಶುತೋಷ್ ಕುಮಾರ್ ರಾಯ್ ಸ್ವಾಗತಿಸಿದ ಕಾರ್ಯಕ್ರಮಕ್ಕೆ ಅಭಿಷೇಕ್ ಕನ್ಯಾಡಿ ವಂದಿಸಿದರು. ಜೋಸೆಫ್ ಗೋನ್ಸಾಲಿಸ್ ಕಾರ್ಯಕ್ರಮವನ್ನು ನಿರೂಪಿಸಿದರು.ರೋಟರಿ ಕ್ಲಬ್ ಪದಾಧಿಕಾರಿಗಳು ಮತ್ತು ಸದಸ್ಯರು, ಚೆಸ್ ಸ್ಪರ್ಧಿಗಳು ಹಾಗೂ ಪಾಲಕರು ಉಪಸ್ಥಿತರಿದ್ದರು. ಐದು ವಿಭಾಗಗಳಲ್ಲಿ ನಡೆದ ಈ ಸ್ಪರ್ಧೆಯಲ್ಲಿ 70 ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದರು.

ಮುಖಂಡರು ಕಾಂಗ್ರೆಸ್‌ಗೆ ಸೇರ್ಪಡೆ




ಹಾನಗಲ್ಲ: ತಾಲೂಕಿನ ಗಡಿಯಂಕನಹಳ್ಳಿ ಗ್ರಾಮದಲ್ಲಿ ಅನೇಕ ಮುಖಂಡರು, ಕಾರ್ಯಕರ್ತರು ಬಿಜೆಪಿ ತೊರೆದು ಶಾಸಕ ಶ್ರೀನಿವಾಸ ಮಾನೆ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಮುಖಂಡರಾದ ಶಿವನಗೌಡ ಹಳೆಗೌಡ್ರ, ಚನ್ನಬಸಪ್ಪ ಕಳಲಿ, ಈರಪ್ಪ ಯತ್ನಳ್ಳಿ, ಶಾಂತಯ್ಯ ಚಿಕ್ಕಮಠ, ನಿಂಗಪ್ಪ ಮಣ್ಣೂರ, ಶಂಭು ಯತ್ನಳ್ಳಿ, ಕೃಷ್ಣ ಹರಿಜನ, ಬಸವನಗೌಡ ಅಗಸನಹಳ್ಳಿ, ಚಂದ್ರಪ್ಪ ಯಲ್ಲಾಪುರ, ಬಸವರಾಜ ಯಲ್ಲಾಪುರ, ತಿಪ್ಪಣ್ಣ ಕಳಲಿ, ಈರಯ್ಯ ಚಿಕ್ಕಮಠ, ತಿಪ್ಪಣ್ಣ ಮಣ್ಣೂರ, ಚನ್ನಬಸಪ್ಪ ಮಿರ್ಜಿ ಸೇರಿದಂತೆ ಇನ್ನೂ ಅನೇಕರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಗ್ರಾಮದ ಮುಖಂಡರಾದ ಸಿದ್ದಣ್ಣ ಯಲ್ಲಾಪುರ, ಭರಮಗೌಡ ಅಗಸಹಳ್ಳಿ, ಈರಣ್ಣ ಬೈಲವಾಳ, ಆದರ್ಶ ಶೆಟ್ಟಿ, ಶಾಂತನಗೌಡ ಹಲಗೌಡ್ರ, ಗದಿಗೆಪ್ಪ ಹನುಮಗೌಡ್ರ, ಸೋಮಣ್ಣ ಹಳೆಗೌಡ್ರ, ಶಂಕ್ರಪ್ಪ ಬಾರ್ಕಿ, ಮುಟ್ಟಪ್ಪ ಬಾರ್ಕಿ, ಶಂಭು ಯಲ್ಲಾಪುರ, ಶಂಭು ಬಾರ್ಕಿ, ಮಹಲಿಂಗಪ್ಪ ಬಾರ್ಕಿ, ಪರಸಪ್ಪ ಮಡಿವಾಳರ, ಸತೀಶ ಸಾಗರವಳ್ಳಿ ಸೇರಿದಂತೆ ಇತರರು ಇದ್ದರು.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸೋಮವಾರ, 20 ಏಪ್ರಿಲ್ 2026
ಹುಬ್ಬಳ್ಳಿ



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	5	4	0	1	9	+1.067
ಆರ್‌ಸಿಬಿ	6	4	2	0	8	+1.171
ರಾಜಸ್ಥಾನ	6	4	2	0	8	+0.599
ಹೈದರಾಬಾದ್	6	3	3	0	6	+0.566
ದಿಲ್ಲಿ	5	3	2	0	6	+0.310
ಗುಜರಾತ್	5	3	2	0	6	+0.018
ಚೆನ್ನೈ	6	2	4	0	4	-0.780
ಲಖನೌ	5	2	3	0	4	-0.804
ಕೆಕೆಆರ್	7	1	5	1	3	-0.879
ಮುಂಬೈ	5	1	4	0	2	-1.076

ರಿಂಕು ಸಿಂಗ್ ಆಟಕ್ಕೆ ರಾಜಸ್ಥಾನ ತತ್ತರ | ಕಾರ್ತಿಕ್, ವರುಣ್ ಅಬ್ಬರ | ಮಿಂಚಿದ ಅನುಕುಲ್

ಕೊನೆಗೂ ಗೆದ್ದ ಕೋಲ್ಕತ್ತಾ ರೈಡರ್ಸ್

ಕೋಲ್ಕತ್ತಾ: ಬಲಿಷ್ಠ ರಾಜಸ್ಥಾನ ರಾಯಲ್ಸ್ ತಂಡವನ್ನು ಸೋಲಿಸಿರುವ ಕೋಲ್ಕತ್ತಾ ನೈಟ್ ರೈಡರ್ಸ್ ಪಂದ್ಯಾವಳಿಯಲ್ಲಿ ಗೆಲುವಿನ ಖಾತೆ ತೆರದಿದೆ. ರಿಂಕು ಸಿಂಗ್ ಹಾಗೂ ಅನುಕುಲ್ ರಾಯ್ ಅವರ ಬ್ಯಾಟಿಂಗ್ ಮತ್ತು ಕಾರ್ತಿಕ್ ತ್ಯಾಗಿ ಅವರ ಮಾರಕ ಬೌಲಿಂಗ್ ದಾಳಿಯ ನೆರವಿನಿಂದ ಕೆಕೆಆರ್ 4 ವಿಕೆಟ್‌ಗಳ ಗೆಲುವು ಸಾಧಿಸಿತು. ಆ ಮೂಲಕ ಐದು ಸೋಲುಗಳ ಸರಪಳಿ ಮುರಿದಿರುವ ರಹಾನೆ ಪಡೆ ರಾಜಸ್ಥಾನಕ್ಕೆ ಎರಡನೇ ಸೋಲಿನಾಘಾತ ನೀಡಿತು.

ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ರಾಜಸ್ಥಾನ ರಾಯಲ್ಸ್ ಈ ಬಾರಿಯ ಐಪಿಎಲ್‌ನಲ್ಲಿ ತನ್ನ ಅತ್ಯಂತ ಕಳಪೆ ಬ್ಯಾಟಿಂಗ್ ಮಾಡಿತು. 20 ಓವರ್ ಗಳಲ್ಲಿ 9 ವಿಕೆಟ್ ನಷ್ಟಕ್ಕೆ 155 ರನ್ ಗಳಿಸಿತು. ವೈಭವ್ ಸೂರ್ಯವಂಶಿ (46, 28ಎ, 6ಬೌ, 2ಸಿ) ಮಿಂಚಿದರು. ಕೆಕೆಆರ್ ಪರ ಕಾರ್ತಿಕ್ ತ್ಯಾಗಿ(4-0-22-3), ವರುಣ್ (4-0-14-3) ಕಡಿವಾಣ ಹಾಕಿದರು. ಗುರಿ ಬೆನ್ನತ್ತಿದ ಕೆಕೆಆರ್ 19.4 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 161 ರನ್ ಗಳಿಸಿತು. ರಿಂಕು ಸಿಂಗ್(53★, 34ಎ, 5ಬೌ, 2ಸಿ), ರಾಯ್(29, 16ಎ, 1 ಬೌ, 2ಸಿ) ಗಳಿಸಿದರು. ರಾಜಸ್ಥಾನ ಪರ ಜಡೇಜಾ(3-0-8-2) ಪಡೆದರು.

ಕಳೆದ ಪಂದ್ಯದಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದ ರಿಂಕು ಸಿಂಗ್ ಈ ಪಂದ್ಯದಲ್ಲಿ ಕೆಕೆಆರ್ ತಂಡವನ್ನು ಗೆಲ್ಲಿಸಿದರು. ಅನುಕುಲ್ ರಾಯ್ ಕೂಡ ಸಾಥ್ ಕೊಟ್ಟ ವಿನ್ನರ್ ಅನ್ನಿಸಿಕೊಂಡರು. ಇದಕ್ಕೂ ಮುನ್ನ ವರುಣ್ ಚಕ್ರವರ್ತಿ ತಮ್ಮ ಅಸಲು ಆಟದೊಂದಿಗೆ ಪಂದ್ಯಶ್ರೇಷ್ಠ ಗೆದ್ದುಕೊಂಡರು. ಇತ್ತ ಕೆಕೆಆರ್ ಭಾರೀ ನಿರಾಶಾದಾಯಕ ಆರಂಭ ಪಡೆಯಿತು. ಸೈಫರ್ಟ್ ಮೊದಲ ಬಾಲ್‌ನಲ್ಲೇ ಶೂನ್ಯ ಸುತ್ತಿದರು. ಅಜಿಂಕ್ಯಾ ರಹಾನೆ ಕೂಡ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಅಂಗ್ರಿಶ್ ರಘುವಂಶಿ ಇಂಪ್ಯಾಕ್ಟ್ ಮಾಡದೆ 10 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಕ್ಯಾಮರೊನ್ ಗ್ರೀನ್ ಈ ಬಾರಿ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾದರು. ಮೊದಲನೇ ಎಸೆತದಿಂದಲೂ ಸ್ಫೋಟಕ ಬ್ಯಾಟಿಂಗ್ ಮಾಡಿದ ಅವರು, ಮೂವ್‌ಮೆಂಟಮ್ ಬದಲಾಯಿಸಿದರು. ಅಲ್ಲಿಗೆ ಪವರ್‌ಪ್ಲೇ ಮುಕ್ತಾಯಗೊಂಡಿತು. ಕೆಕೆಆರ್ 3 ವಿಕೆಟ್‌ಗೆ 53 ರನ್ ಗಳಿಸಿತು.

ಮಧ್ಯಮ ಓವರ್ಸ್: ರಾಜಸ್ಥಾನ ಮಧ್ಯಮ ಓವರ್ ಗಳಲ್ಲಿ ಹಿನ್ನಡೆ ಅನುಭವಿಸಿತು. 46 ರನ್‌ಗಳಿಸಿದ್ದ ವೈಭವ್ ಸೂರ್ಯವಂಶಿ ವರುಣ್ ಚಕ್ರವರ್ತಿಗೆ ಕ್ಯಾಚ್ ಆದರು. ಮೂರನೇ ಕ್ರಮಾಂಕಿತ ಜುರೇಲ್ 5 ರನ್‌ಗೆ, ಪರಾಗ್ 12 ರನ್‌ಗೆ ವಿಕೆಟ್ ಒಪ್ಪಿಸಿದರು. ಹೆಟ್ಮೇರ್ ಮತ್ತೊಮ್ಮೆ ನಿರಾಸೆ ಮೂಡಿಸಿ 15 ರನ್‌ಗೆ ಔಟಾದರು. ಫೆರಾರಿಯಾ 7 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಓವರ್‌ಗಳಲ್ಲಿ ರಾಜಸ್ಥಾನದ ಮಧ್ಯಮ ಕ್ರಮಾಂಕ ತತ್ತರಿಸಿತು. ಜೈಸ್ವಾಲ್ ಮತ್ತು ವೈಭವ್ ಜೋಡಿಸಿದ್ದ ರನ್ ನೆರವಿನಿಂದ ಈ ಓವರ್‌ಗಳಲ್ಲಿ ಆರ್‌ಆರ್ 61 ರನ್ ಮಾತ್ರ ಗಳಿಸಿತು. 5 ವಿಕೆಟ್ ಉರುಳಿದವು.

ಇತ್ತ ಕೆಕೆಆರ್ ಮಧ್ಯಮ ಓವರ್‌ಗಳಲ್ಲಿ ಅಲ್ಪ ಸ್ಥಿರ ಪ್ರದರ್ಶನ ನೀಡಿತು. ಗ್ರೀನ್ 27 ರನ್‌ಗೆ ವಿಕೆಟ್ ಒಪ್ಪಿಸಿದರೂ, ಪೋವೆಲ್ ಮತ್ತು ರಿಂಕು ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ಪೋವೆಲ್ 23 ರನ್‌ಗೆ ವಿಕೆಟ್ ಒಪ್ಪಿಸಿದರು. ರಿಂಕು ಸೆಟ್ ಆಗುವತ್ತ ಸಾಗಿದರು. ಪಂದ್ಯ ರೋಚಕ ಹಂತಕ್ಕೆ ತಲುಪಿತು. ಮಧ್ಯಮ ಓವರ್ ಗಳು ಮುಕ್ತಾಯಗೊಂಡವು ಕೆಕೆಆರ್ 65/3 ಗಳಿಸಿತು.



ಸಂಕ್ಷಿಪ್ತ ಸ್ಕೋರ್

ರಾಜಸ್ಥಾನ: 20 ಓವರ್‌ಗಳಲ್ಲಿ 155/9: ವೈಭವ್ 46, ಜೈಸ್ವಾಲ್ 39; ವರುಣ್ 14/3, ಕಾರ್ತಿಕ್ 22/3
ಕೆಕೆಆರ್: 19.4 ಓವರ್‌ಗಳಲ್ಲಿ 161/6: ರಿಂಕು 53★, ಅಂಕುಲ್ 29★; ಜಡೇಜಾ 8/2

ಡೆತ್ ಓವರ್

ಡೆತ್ ಓವರ್‌ನಲ್ಲಿ ರಾಜಸ್ಥಾನ ತೀರಾ ಹಿನ್ನಡೆ ಅನುಭವಿಸಿತು. ಯಾರೊಬ್ಬರೂ ನಿಲ್ಲಲಿಲ್ಲ. ಇದೇ ಸಮಯದಲ್ಲಿ ಸುನಿಲ್ ನರೈನ್ 1, ಕಾರ್ತಿಕ್ 3 ವಿಕೆಟ್ ಪಡೆದರು. ಡೆತ್ ಓವರ್ ಮುಕ್ತಾಯಕ್ಕೆ ರಾಜಸ್ಥಾನ 31 ರನ್ ಗಳಿಸಿ 4 ವಿಕೆಟ್ ಕಳೆದುಕೊಂಡಿತು. ಇತ್ತ ಕೆಕೆಆರ್ ಗೆಲುವಿನಾಟವಾಡಿತು. ಕೊನೆಯ ನಾಲ್ಕು ಓವರ್‌ಗಳಲ್ಲಿ 40 ರನ್ ಬೇಕಿದ್ದವು. ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ ರಿಂಕು ಸಿಂಗ್ ಪಂದ್ಯ ಗೆಲ್ಲಿಸುತ್ತಾ ಬಂದರು. ಅದೇಲ್ಲಾ 18ನೇ ಓವರ್‌ನಲ್ಲಿ 7 ರನ್ ಬಿಟ್ಟುಕೊಟ್ಟ ಬ್ರಿಜೇಶ್ ಪ್ರಯತ್ನ ಪಟ್ಟರು. ಆದರೆ ರಿಂಕು ಸಿಂಗ್ ಬೌಂಡರಿ ಸಿಕ್ಸರ್‌ಗಳ ಸುರಿಮಳೆಗೈದರು. ಅತ್ತ ಅನುಕುಲ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದರು. ಕೊನೆ ಓವರ್‌ನಲ್ಲಿ 9 ರನ್ ಬೇಕಿತ್ತು 2 ಬೌಂಡರಿ, 1 ಸಿಕ್ಸರ್ ಬಾರಿಸಿದ ರಿಂಕು ಪಂದ್ಯ ಗೆಲ್ಲಿಸಿದರು. ಡೆತ್ ಓವರ್‌ನಲ್ಲಿ ಕೆಕೆಆರ್ 65 ರನ್‌ಗಳಿಸಿತು.

ಕುಸಿದ ರಾಜಸ್ಥಾನ

ಬ್ಯಾಟಿಂಗ್ ಆಹ್ವಾನ ಪಡೆದ ರಾಜಸ್ಥಾನ ನಿಧಾನ ಆರಂಭ ಪಡೆದರು. ಜೈಸ್ವಾಲ್ ಸೆಟ್ ಆಗುವತ್ತ ಸಾಗಿದರು. ಮತ್ತೊಂದು ಬದಿಯಲ್ಲಿ ವೈಭವ್ ಸೂರ್ಯವಂಶಿ ಯಥಾಪ್ರಕಾರ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಇಬ್ಬರ ಆಟಕ್ಕೆ ತಡೆಯೊಡ್ಡಲು ಕೆಕೆಆರ್ ಬೌಲರ್‌ಗಳು ಹರಸಾಹಸ ಪಟ್ಟರು. ವೈಭವ್ ಬೌಂಡರಿ ಸಿಕ್ಸರ್‌ಗಳೊಂದಿಗೆ ಅರ್ಧಶತಕದತ್ತ ಸಾಗಿದರು. ಜೈಸ್ವಾಲ್ ಕೂಡ ರೋಮಾಂಚನಕಾರಿ ಹೊಡೆತದೊಂದಿಗೆ ಅಬ್ಬರಿಸಿದರು. ಅಲ್ಲಿಗೆ ಪವರ್‌ಪ್ಲೇ ಮುಕ್ತಾಯಗೊಂಡಿತು. ರಾಜಸ್ಥಾನ 63 ರನ್ ಗಳಿಸಿತ್ತು.

ಕಿರುಸುದ್ದಿ

ಎಟಿಪಿ ಚಾಲೆಂಜರ್: ಬಾಲಾಜಿಗೆ ಪದಕ



ಹೊಸದಿಲ್ಲಿ: ಪೋರ್ಚುಗಲ್‌ನ ಒಯಿರಾಸ್ನಲ್ಲಿ ನಡೆದ ಎಟಿಪಿ ಚಾಲೆಂಜರ್ ಟೂರ್ನಿಯಲ್ಲಿ ಭಾರತದ ಎನ್ ಶ್ರೀರಾಮ್ ಬಾಲಾಜಿ ಮತ್ತು ಆಸ್ಟ್ರಿಯಾದ ನೀಲ್ ಒಬರ್‌ಲೈಟ್ನರ್ ಜೋಡಿ ಡಬಲ್ಸ್ ಪ್ರಶಸ್ತಿ ಗೆದ್ದಿದೆ. ಮೂರನೇ ಸೀಡ್ ಆಗಿದ್ದ ಈ ಜೋಡಿ ಕೊಲಂಬಿಯಾದ ನಿಕೋಲಾಸ್ ಬರಿಯೆಂಟೋಸ್ ಮತ್ತು ಉರುಗ್ವೆಯ ಆರಿಯೆಲ್ ಬೆಹಾರ್ ವಿರುದ್ಧ ನಡೆದ ಫೈನಲ್‌ನಲ್ಲಿ 6-7(7), 6-4, 11-9 ಅಂತರದಲ್ಲಿ ಗೆಲುವು ಸಾಧಿಸಿತು. ಸೂಪರ್ ಟೈಬ್ರೇಕ್‌ನಲ್ಲಿ ಮ್ಯಾಚ್ ಪಾಯಿಂಟ್ ಉಳಿಸಿಕೊಂಡು ಜಯ ಸಾಧಿಸಿದ್ದು ವಿಶೇಷವಾಗಿದೆ. ಈ ಜಯದಿಂದ ಅವರಿಗೆ 125 ರ್‍ಯಾಂಕಿಂಗ್ ಅಂಕಗಳು ಲಭಿಸಿವೆ. ಇದು ಬಾಲಾಜಿಯವರ ಚಾಲೆಂಜರ್ ಟೂರ್ನಿಯಲ್ಲಿ 18ನೇ ವೃತ್ತಿಜೀವನದ ಪ್ರಶಸ್ತಿಯಾಗಿದ್ದು, 2026ರಲ್ಲಿ ಒಬರ್‌ಲೈಟ್ನರ್ ಜೊತೆಗೆ ನಾಲ್ಕನೇ ಪ್ರಶಸ್ತಿ ಆಗಿದೆ. ಮಹಿಳಾ ವಿಭಾಗದಲ್ಲಿ, ಬುರುಂಡಿಯ ಬುಜುಂಬು ರಾನಲ್ಲಿ ನಡೆದ ಐಟಿಎಫ್ 40,000 ಡಾಲರ್ ಟೂರ್ನಿಯಲ್ಲಿ ಭಾರತದ ವೈದೇಹಿ ಚೌಧರಿ ಮತ್ತು ನೆದರ್‌ಲ್ಯಾಂಡ್ಸ್‌ನ ಜಾಸ್ಮಿನ್ ಗಿಂಪ್ರೆರೆ ರನ್ನರ್ ಅಪ್ ಸ್ಥಾನ ಪಡೆದರು. ಅವರು ಅಮೆರಿಕದ ಜೂಲಿಯಾ ಆಡಮ್ಸ್ ಮತ್ತು ನೆದರ್‌ಲ್ಯಾಂಡ್ಸ್‌ನ ಮೆರಲ್ ಹೋಯ್ಡ್ಸ್ ವಿರುದ್ಧ 4-6, 7-5, 10-5 ಅಂತರದಲ್ಲಿ ಸೋತರು. ಜೂನಿಯರ್ ವಿಭಾಗದಲ್ಲಿ, ಭಾರತದ ಯುವ ಪ್ರತಿಭೆ ಮಾಯಾ ರಾಜೇಶ್ವರನ್ ಫ್ರಾನ್ಸ್‌ನ ಬೋಲಿಯು-ಸೂರ್-ಮೇರ್‌ನಲ್ಲಿ ನಡೆದ ಜೆ300 ಟೂರ್ನಿಯಲ್ಲಿ ಸ್ಪೇನ್‌ನ ಪಾವ್ಲಾ ಪಿನೇರಾ ಸೆಲೋರಿಯೋ ವಿರುದ್ಧ 4-6, 7-5, 6-4 ಅಂತರದಲ್ಲಿ ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು. ಇನ್ನೊಬ್ಬ ಭಾರತೀಯ ಆಟಗಾರ ಅರ್ಣವ್ ಪಾಪರ್ಕರ್ ಮಲೇಷ್ಯಾದ ಕುಆಲಾಲಂಪುರನಲ್ಲಿ ನಡೆದ ಜೆ200 ಟೂರ್ನಿಯಲ್ಲಿ ಜಪಾನ್‌ನ ಕಾಂತಾ ವಾತಾನಬೆ ವಿರುದ್ಧ 6-1, 6-2 ಅಂತರದಲ್ಲಿ ಗೆದ್ದು ಚಾಂಪಿಯನ್ ಆಗಿದ್ದಾರೆ.

ಸ್ಪರ್ಧೆ ವೇಳೆ ಕಾರ್ ರೇಸರ್ ಸಾವು

ಹೊಸದಿಲ್ಲಿ: ಜರ್ಮನಿಯ ನ್ಯೂರ್ಬರ್ಗ್ರಿಂಗ್ ಟ್ರ್ಯಾಕ್‌ನಲ್ಲಿ ನಡೆದ ಎಡಿಎಸಿ 24 ಗಂಟೆಗಳ ಕ್ವಾಲಿಫೈಯರ್ ಸ್ಪರ್ಧೆಯಲ್ಲಿ ಭಾರೀ ಅಪಘಾತ ಸಂಭವಿಸಿ ಫಿನ್‌ಲ್ಯಾಂಡ್‌ನ ರೇಸಿಂಗ್ ಚಾಲಕ ಜುಹಾ ಮಿಯೆತ್ತಿನೆನ್ (66) ಸಾವನ್ನಪ್ಪಿದ್ದಾರೆ. ಸ್ಪರ್ಧೆ ಆರಂಭವಾದ ಸುಮಾರು ಅರ್ಧ ಗಂಟೆಯಲ್ಲೇ ಈ ಅಪಘಾತ ಸಂಭವಿಸಿದ್ದು, ಒಟ್ಟು ಏಳು ಚಾಲಕರು ಇದರೊಳಗೆ ಸಿಲುಕಿದ್ದರು. ಈ ಘಟನೆ ನಂತರ ರೇಸ್ ಅನ್ನು ತಕ್ಷಣವೇ ಸ್ಥಗಿತಗೊಳಿಸಲಾಯಿತು. ಇನ್ನೂ ಗಾಯಗೊಂಡ ಆರು ಚಾಲಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಗಾಯಗಳು ಜೀವಕ್ಕೆ ಅಪಾಯಕಾರಿಯಲ್ಲ ಎಂದು ಆಯೋಜಕರು ತಿಳಿಸಿದ್ದಾರೆ. ಈ ಸ್ಪರ್ಧೆಯಲ್ಲಿ ಭಾಗವಹಿಸಲು ನಿರ್ಧರಿಸಿದ್ದ ನಾಲ್ಕು ಬಾರಿ ಫಾರ್ಮುಲಾ ಒನ್ ವಿಶ್ವ ಚಾಂಪಿಯನ್ ಮ್ಯಾಕ್ಸ್ ವರ್ಸ್ಟಾಪೆನ್ ಅಪಘಾತ ಸಂಭವಿಸಿದ ವೇಳೆ ಟ್ರ್ಯಾಕ್ ಮೇಲೆ ಇರಲಿಲ್ಲ. ಆಯೋಜಕರು ನೀಡಿದ ಪ್ರಕಟಣೆಯಲ್ಲಿ, ಎಡಿಎಸಿ 24 ಗಂಟೆಗಳ ಕ್ವಾಲಿಫೈಯರ್‌ನ ಮೊದಲ ರೇಸ್‌ನ ಆರಂಭಿಕ ಹಂತದಲ್ಲೇ ಏಳು ಸ್ಪರ್ಧಿಗಳನ್ನು ಒಳಗೊಂಡ ಗಂಭೀರ ಅಪಘಾತ ಸಂಭವಿಸಿದೆ, ಎಂದು ತಿಳಿಸಿದ್ದಾರೆ.

ಭಾರತದ ಶರ್ವಾಣಿಕಾ ವಿಶ್ವ ಚಾಂಪಿಯನ್



ಹೊಸದಿಲ್ಲಿ: ಚೆಸ್‌ನಲ್ಲಿ ಭಾರತದ ಪಾರುಪತ್ಯ ಮುಂದುವರಿದಿದೆ. ಸರ್ಬಿಯಾದ ವ್ರ್ನ್ಯಾಚ್ಕಾ ಬಾಂಜಾನಲ್ಲಿ ನಡೆದ ಫಿಡೆ ವಿಶ್ವ ರಾಪಿಡ್ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಎ.ಎಸ್. ಶರ್ವಾಣಿಕಾ ಅಂಡರ್-12 ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಪಟ್ಟಕ್ಕೇರಿದ್ದಾರೆ.

ಈ ಹಿಂದೆ ಅಂಡರ್-10 ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆಗಿದ್ದ ಶರ್ವಾಣಿಕಾ, ಈ ಬಾರಿ ವಯಸ್ಸಿನ ಮೇಲಿನ ವಿಭಾಗಕ್ಕೆ ಏರಿ ಅದ್ಭುತ ಸಾಧನೆ ಮಾಡಿದ್ದಾರೆ. 11 ಸುತ್ತಿನ ಈ ಟೂರ್ನಿಯಲ್ಲಿ ಅವರು 10 ಗೆಲುವು ಮತ್ತು ಒಂದು ಡ್ರಾ ಸಾಧಿಸಿ ಒಟ್ಟು 10.5 ಅಂಕಗಳನ್ನು ಗಳಿಸಿದರು. ಅವರು ಉಕ್ರೇನ್‌ನ ದರಿಯಾ ಕ್ರಾವ್ಚುಕ್ ವಿರುದ್ಧ ಡ್ರಾ ಮಾಡಿಕೊಂಡಿದ್ದು, ಉಳಿದ ಎಲ್ಲಾ ಪಂದ್ಯಗಳಲ್ಲಿ ಗೆಲುವು ದಾಖಲಿಸಿದರು. ಒಂಬತ್ತನೇ ಸುತ್ತಿನಲ್ಲಿ ಸ್ಲೋವೇನಿಯಾದ ಎಮಾ ಚಾಕ್ಸ್ ಅವರನ್ನು ಸೋಲಿಸಿ ಎರಡು ಸುತ್ತು ಬಾಕಿ ಇರುವಾಗಲೇ ಪ್ರಶಸ್ತಿಯನ್ನು ಖಚಿತಪಡಿಸಿಕೊಂಡರು. ಕೊನೆಯಲ್ಲಿ 10.5 ಅಂಕಗಳೊಂದಿಗೆ ಶರ್ವಾಣಿಕಾ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ಶೋಲ್ಪನ್‌ಬೆಕ್ ಝೂನಾಸ್ಸಾಯಾ 7.5 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. 2041 ಕ್ಲಾಸಿಕಲ್ ರೇಟಿಂಗ್ ಹೊಂದಿರುವ ಶರ್ವಾಣಿಕಾ, ಟೂರ್ನಿಯಲ್ಲಿ ಪ್ರಮುಖ ಸ್ಪರ್ಧಿಯಾಗಿ ಪ್ರವೇಶಿಸಿದ್ದರು. ಅವರು ಅಲಿಸಾ ಯುಂಕರ್ ವಿರುದ್ಧ ಗೆಲುವಿನಿಂದ ಅಭಿಯಾನ ಆರಂಭಿಸಿ ನಿರಂತರವಾಗಿ ಉತ್ತಮ ಪ್ರದರ್ಶನ ನೀಡಿದರು.

ಅಂಡರ್-12 ಬಾಲಕಿಯರ ವಿಭಾಗದಲ್ಲಿ ಸಾಧನೆ

ಎರಡನೇ ವಿಶ್ವದರ್ಜೆ ಪ್ರಶಸ್ತಿ

ಈ ಸಾಧನೆಯೊಂದಿಗೆ ಶರ್ವಾಣಿಕಾ ಎರಡನೇ ಬಾರಿ ವಿಶ್ವ ರಾಪಿಡ್ ಪ್ರಶಸ್ತಿ ಗೆದ್ದಿದ್ದಾರೆ. ಈ ಹಿಂದೆ 9ನೇ ವಯಸ್ಸಿನಲ್ಲಿ ಅಂಡರ್-10 ವಿಭಾಗದಲ್ಲಿ ಚಿನ್ನ ಗೆದ್ದಿದ್ದರು. ಜೊತೆಗೆ 2024ರಲ್ಲಿ ಅಲ್ಬೇನಿಯಾದಲ್ಲಿ ನಡೆದ ಫಿಡೆ ವಿಶ್ವ ರಾಪಿಡ್ ಮತ್ತು ಬ್ಲಿಟ್ಜ್ ಚಾಂಪಿಯನ್‌ಶಿಪ್‌ನಲ್ಲಿ ಬ್ಲಿಟ್ಜ್ ವಿಭಾಗದಲ್ಲಿ ಬೆಳ್ಳಿ ಪದಕ ಕೂಡ ಪಡೆದಿದ್ದರು.

ಸಿಕ್ಸರ್‌ಗಳ ಸುರಿಮಳೆಗೈದ ಪಂಜಾಬ್ ಕಿಂಗ್ಸ್

ಚಂಡೀಗಢ: ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ 21 ಸಿಕ್ಸರ್‌ಗಳು ಮೂಡಿಬಂದವು. ಇದರಲ್ಲಿ 9 ಸಿಕ್ಸರ್‌ಗಳನ್ನು ಪ್ರಿಯಾಂಶ್ ಆರ್ಯ ಬಾರಿಸಿದರೆ, 7 ಸಿಕ್ಸರ್‌ಗಳನ್ನು ಕೂಪರ್ ಕೊನೊಲಿ ಬಾರಿಸಿದರು. ಮೈದಾನದುದ್ದಕ್ಕೂ ಸಿಕ್ಸರ್‌ಗಳ ಸುರಿಮಳೆಗೈದ ಈ ಜೋಡಿ 182 ರನ್ ಜೊತೆಯಾಟ ನಿರ್ಮಿಸಿದ್ದು, ಪಂಜಾಬ್ ತಂಡವು ಲಖನೌ ತಂಡದ ವಿರುದ್ಧ ಬರೋಬ್ಬರಿ 254 ರನ್ ಬಾರಿಸಿದೆ.

ಪಂತ್ ಪಡೆ ಬ್ಯಾಟಿಂಗ್ ಆಹ್ವಾನ ಕೊಟ್ಟು ಇನ್ನಿಂಗ್ಸ್ ಉದ್ದಕ್ಕೂ ದಂಡಿಸಿಕೊಂಡಿತು. ಕೂಪರ್(87, 46ಎ, 8ಬೌ, 7ಸಿ), ಪ್ರಿಯಾಂಶ್(93, 37ಎ, 4 ಬೌ, 9 ಸಿ) ದಾಖಲೆಯ ಜೊತೆಯಾಟವಾಡಿದರು. ಪ್ರಿನ್ಸ್ ಯಾದವ್ 2 ವಿಕೆಟ್ ಪಡೆದರು. ಇದಕ್ಕಿಂತ ಹೆಚ್ಚಾಗಿ 6.25ರ ಎಕನಾಮಿಯಲ್ಲಿ ಬೌಲಿಂಗ್ ಮಾಡಿದರು. ಇದು ಲಖನೌ ಬೌಲರ್‌ನ ಅತ್ಯುತ್ತಮ ಬೌಲಿಂಗ್ ಅಂಕಿ ಅಂಶ.

ಪ್ರಿಯಾಂಶ್-ಕೊನೊಲಿ ಆಡಿದ್ದೇ ಆಟ: ಪವರ್‌ಪ್ಲೇ ಆರಂಭದಲ್ಲಿ ಪಂಜಾಬ್ ವಿಕೆಟ್ ಕಳೆದುಕೊಂಡಿತು. ಮೂರನೇ ಕ್ರಮಾಂಕದಲ್ಲಿ ಬಂದ ಕೂಪರ್ ಕೊನೊಲಿ ಕೊಂಚ ಹೊತ್ತು ಸೆಟ್ ಆದರು. ಇತ್ತ ಪ್ರಿಯಾಂಶ್ ಆರ್ಯ ಮಾತ್ರ ದಂಡಿಸಲಾರಂಭಿಸಿದರು. ಇಬ್ಬರ ಜೊತೆಯಾಟ 50ಕ್ಕೆ ಮುಟ್ಟಿತು. ಪ್ರಿಯಾಂಶ್ ಆರ್ಯ ಬೌಂಡರಿ-ಸಿಕ್ಸರ್‌ಗಳೊಂದಿಗೆ ಅಬ್ಬರಿಸಿ 19 ಎಸೆತದಲ್ಲಿ ಅರ್ಧಶತಕ ಬಾರಿಸಿದರು. ಪವರ್‌ಪ್ಲೇನಲ್ಲಿ ಪಂಜಾಬ್ 63 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಇವರಿಬ್ಬರ ಆಟ ತೀವ್ರಗೊಂಡಿತು. 35 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಕೂಪರ್ ಮುಂದಿನ 11 ಬಾಲ್‌ಗಳಲ್ಲಿ ಬರೋಬ್ಬರಿ 37 ರನ್ ಚಚ್ಚಿದರು. ಇತ್ತ ಪ್ರಿಯಾಂಶ್ ಆರ್ಯ ಆಟಕ್ಕೆ ಮಾತ್ರ ಯಾವುದೇ ತಡೆ ಇರಲಿಲ್ಲ, ಬಂದ ಬೌಲರ್ ಗಳನ್ನೆಲ್ಲಾ ಅವರು ದಂಡಿಸುತ್ತಲೇ ಇದ್ದರು. ಮಧ್ಯಮ ಓವರ್‌ಗಳು ಮುಕ್ತಾಯಗೊಂಡವು, ಅಲ್ಲಿ ಪಂಜಾಬ್ ಬರೋಬ್ಬರಿ 133 ರನ್ ಗಳಿಸಿತು. ಒಂದು ಸಮಯಕ್ಕೆ ಚಿಕ್ಕ ಕಂಬ್ಯಾಕ್ ಕೊಟ್ಟ ಲಖನೌ ಒಂದೇ ಓವರ್ ಅಂತರದಲ್ಲಿ ಇಬ್ಬರ ವಿಕೆಟ್ ಪಡೆಯಿತು. ಪ್ರಿಯಾಂಶ್ 37 ಎಸೆತದಲ್ಲಿ 93 ರನ್ ಬಾರಿಸಿದರು. ಕೊನೊಲಿ 46 ಬಾಕ್‌ಗಳಲ್ಲಿ 87 ರನ್ ಬಾರಿಸಿದರು, ಡೆತ್ ಓವರ್‌ಗಳಲ್ಲಿ ಮಿಲ್ಲರ್ ಅಬ್ಬರಿಸಿದರು. 16 ಎಸೆತದಲ್ಲಿ 29 ರನ್ ಬಾರಿಸಿದ ಅವರು ಸ್ಕೋರ್ ಹಿಗ್ಗಿಸಿದರು. ಶಶಾಂಕ್ 17 ರನ್ ಗಳಿಸಿದರು. ಪಂಜಾಬ್ ಡೆತ್‌ನಲ್ಲಿ 58 ರನ್ ಗಳಿಸಿತು.



ಮಾರ್ಕ್ರಂ ಓವರ್‌ನಲ್ಲಿ 32 ರನ್
ಪಂಜಾಬ್ 254/7

ಲಯದ ಹುಡುಕಾಟದಲ್ಲಿ ಮುಂಬೈ

ಅಹಮದಾಬಾದ್: ಗೆಲುವಿನ ಲಯಕ್ಕೆ ಮರಳಿ ರುವ ಗುಜರಾತ್ ಟೈಟಾನ್ಸ್ ಮತ್ತು ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಮುಂಬೈ ಇಂಡಿಯನ್ಸ್ ತಂಡಗಳು ಸೋಮವಾರದ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಪಂದ್ಯಾವಳಿಯಲ್ಲಿ ಒಂದು ಮಾತ್ರ ಗೆಲುವು ಸಾಧಿಸಿರುವ ಮುಂಬೈ ಇಂಡಿಯನ್ಸ್ ಗೆಲುವಿನ ಹಳಿಗೆ ಮರಳಲೆತ್ನಿಸಲಿದೆ. ಇತ್ತ ಗುಜರಾತ್ ಕಳೆದ ಎರಡು ಪಂದ್ಯಗಳಲ್ಲಿ ಭರ್ಜರಿ ಪ್ರದರ್ಶನ ನೀಡಿದ್ದು, ಅದೇ ಪ್ರದರ್ಶನ ಮುಂದುವರಿಸುವ ತವಕದಲ್ಲಿದೆ. ಪಂದ್ಯಾವಳಿ ರೋಚಕ ಹಂತಕ್ಕೆ ತಲುಪಿದೆ. ಮೊದಲು ನಾಲ್ಕು ಸ್ಥಾನಕ್ಕಾಗಿ ವಿವಿಧ ತಂಡಗಳು ಭಾರೀ ಪೈಪೋಟಿ ನಡೆಸುತ್ತಿವೆ. ಅದರಲ್ಲಿ ಗುಜರಾತ್ ಕೂಡ ಒಂದು. ಕಳೆದ ಪಂದ್ಯಗಳಲ್ಲಿ ಜಾಸ್ ಬಟ್ಲರ್ ಮತ್ತು ಗಿಲ್ ಅವರ ಉತ್ತಮ ಪ್ರದರ್ಶನದೊಂದಿಗೆ ಮಿಂಚುತ್ತಿದೆ. ಇತ್ತ ಮುಂಬೈ ರೋಹಿತ್ ಶರ್ಮ ಅವರ ಅನುಪಸ್ಥಿತಿಯಲ್ಲಿ ಪಂಜಾಬ್ ವಿರುದ್ಧ ಭಾರೀ ಸೋಲನುಭವಿಸಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಮುಂಬೈಗೆ ಗೆಲುವಿನ ತವಕ: ಮುಂಬೈ ಇಂಡಿಯನ್ಸ್ ತನ್ನ ಆರಂಭಿಕ ಪಂದ್ಯದಲ್ಲಿ ಗೆಲುವು ಸಾಧಿಸಿತ್ತು. ಬಳಿಕ ನಡೆದ ಎಲ್ಲಾ ಪಂದ್ಯಗಳಲ್ಲಿ ಸೋತಿದೆ. ಹಿಂದಿನ ಪಂದ್ಯಗಳಲ್ಲಿ ಆರ್‌ಸಿಬಿ ಹಾಗೂ ಪಂಜಾಬ್ ತಂಡವನ್ನು ಎದುರಿಸಿದ್ದಾಗ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಹಿನ್ನಡೆ ಅನುಭವಿಸಿತ್ತು. ರೋಹಿತ್ ಶರ್ಮ ಕೆಲವು ಪಂದ್ಯಗಳಲ್ಲಿ ಆಡುತ್ತಿಲ್ಲ. ರಯಾನ್ ರಿಕೆಲ್ಟನ್ ಲಯದ ಹುಡುಕಾಟದಲ್ಲಿದ್ದಾರೆ. ಸೂರ್ಯ ಕೂಡ ಲಯದಲ್ಲಿಲ್ಲ. ಡಿಕಾಕ್ ಆಡಿದ ಮೊದಲ ಪಂದ್ಯದಲ್ಲೇ ಶತಕ ಬಾರಿಸಿ ಮಿಂಚಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಯಾರೊಬ್ಬರೂ ನಿಲ್ಲುತ್ತಿಲ್ಲ. ಬೌಲಿಂಗ್ ವಿಚಾರಕ್ಕೆ ಬಂದರೆ ಬೂಮ್ರಾ, ದೀಪಕ್, ಬೋಲ್ಟ್ ಹಿಡಿದು ಎಲ್ಲರೂ ದಂಡಿಸಿಕೊಳ್ಳುತ್ತಿದ್ದಾರೆ. ಶಾರ್ದೂಲ್ ಮಾತ್ರ ವಿಕೆಟ್ ಪಡೆದಿದ್ದು, ಅವರೂ ದುಬಾರಿಯಾಗಿದ್ದಾರೆ.



ಗುಜರಾತ್‌ಗೆ ಭರವಸೆ: ಇತ್ತ ಗುಜರಾತ್ ತಂಡದಲ್ಲಿ ನಾಯಕ ಶುಭಮನ್ ಗಿಲ್ ಮಿಂಚಿರುವುದು ಬಲ ತಂದಿದೆ. ಹಿಂದಿನ ಪಂದ್ಯಗಳಲ್ಲಿ ಜಾಸ್ ಬಟ್ಲರ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಫಿಲಿಪ್ಸ್, ಶಾರುಖ್, ವಾಷಿಂಗ್ಟನ್ ಸುಂದರ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಮುಖ್ಯವಾಗಿ ಬೌಲಿಂಗ್‌ನಲ್ಲಿ ಗುಜರಾತ್ ಟೈಟಾನ್ಸ್ ಬಲವಾದ ಪ್ರದರ್ಶನದೊಂದಿಗೆ ಗೆಲ್ಲುತ್ತಿದೆ. ರಬಾಡ ಲಯಕ್ಕೆ ಮರಳಿದ್ದಾರೆ. ಸಿರಾಜ್ ಕೂಡ ತಮ್ಮ ಅಸಲು ಆಟ ಪ್ರದರ್ಶಿಸಿದ್ದಾರೆ. ಸ್ಪಿನ್ ವಿಭಾಗದಲ್ಲಿ ರಶೀದ್ ಖಾನ್, ಸುಂದರ್ ಕೂಡ ಉತ್ತಮ ಪ್ರದರ್ಶನ ನೀಡಿದ್ದಾರೆ.

ಪಿಚ್: ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟರ್ ಗಳಿಗೆ ಲಾಭ ನೀಡಲಿದೆ. ಹಿಂದಿನ ಪಂದ್ಯಗಳಲ್ಲಿ ಬೌಲರ್‌ಗಳು ಅಲ್ಪ ಕಷ್ಟ ಪಟ್ಟಿದ್ದಾರೆ. 200+ ಸ್ಕೋರ್ ಆಗಬಹುದು.

ಅಕ್ರಮ ಟಿಕೆಟ್ ನಮಗೆ ಸಂಬಂಧವಿಲ್ಲ: ಕೆಎಸ್ಸಿಎ

ಬೆಂಗಳೂರು: ಬೆಂಗಳೂರಿನಲ್ಲಿ ಮಾರಾಟವಾಗುತ್ತಿರುವ ಬ್ಲಾಕ್ ಟಿಕೆಟ್‌ಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದು ಕರ್ನಾಟಕ ಕ್ರಿಕೆಟ್ ಸಂಸ್ಥೆ ತಿಳಿಸಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಟಿಕೆಟ್‌ಗಳನ್ನು ಅಧಿಕೃತ ಮಾರ್ಗಗಳ ಮೂಲಕ ಖರೀದಿಸಿ, ನಂತರ ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಆರೋಪದ ಮತ್ತು ವ್ಯಕ್ತಿಗಳ ಬಂಧನವಾಗಿರುವ ಬಗ್ಗೆ ವರದಿಗಳಾಗಿದ್ದವು. ಅಲ್ಲದೆ, ಈ ವಿಚಾರದಲ್ಲಿ ಕೆಲವು ಕಾರ್ಪೊರೇಟ್ ಸಂಸ್ಥೆಗಳು ಶಾಮೀಲಾಗಿವೆ ಎಂದು ಹೇಳಲಾಗುತ್ತಿತ್ತು. ಈ ಸಂಸ್ಥೆಗಳು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಯೊಂದಿಗೆ ಸಂಬಂಧ ಹೊಂದಿವೆಯೇ ಅಥವಾ ಬಂಧಿತ ವ್ಯಕ್ತಿಗಳು ಕೆಎಸ್‌ಸಿಎ ಸದಸ್ಯರೇ ಎಂಬ ಬಗ್ಗೆ ತನಿಖಾ ಸಂಸ್ಥೆಗಳು ಪರಿಶೀಲಿಸುತ್ತಿವೆ ಎಂದು ವರದಿಯಾಗಿದೆ.

ನಮಗೆ ಅಧಿಕಾರವೇ ಇಲ್ಲ: ಕೆಎಸ್‌ಸಿಎ: ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಸ್ಪಷ್ಟನೆಗಳನ್ನು ನೀಡಿರುವ ಕೆಎಸ್‌ಸಿಎ, ತನಗೂ ಬಂಧಿತ ವ್ಯಕ್ತಿಗಳಿಗೂ ಯಾವುದೇ ಸಂಬಂಧವಿಲ್ಲ ಎಂದಿದೆ. ಅಸಲಿಯತ್ತಾಗಿ ಕೆಎಸ್‌ಸಿಎ ಸಂಸ್ಥೆಯು ಫ್ರಾಂಚೈಸಿಯ ಟಿಕೆಟ್ ಏಜೆನ್ಸಿಯಾಗಲಿ ಅಥವಾ ಟಿಕೆಟ್ ಮಾರಾಟ ಮಾಡುವ ಅಧಿಕಾರ ಹೊಂದಿಲ್ಲ. ಸಾರ್ವಜನಿಕರಿಗೆ ಟಿಕೆಟ್ ಮಾರಾಟ ಸಂಪೂರ್ಣವಾಗಿ ಫ್ರಾಂಚೈಸಿಯ ಅಧಿಕೃತ ಚಾನೆಲ್ ಗಳು ಮತ್ತು ಟಿಕೆಟ್ ಸಹಭಾಗಿಗಳ ಮೂಲಕವೇ ನಿರ್ವಹಿಸಲಾಗುತ್ತದೆ ಎಂದಿದೆ. ಕೆಎಸ್‌ಸಿಎಗೆ ಫ್ರಾಂಚೈಸಿ ಸೀಮಿತ ಪ್ರಮಾಣದ ಟಿಕೆಟ್‌ಗಳನ್ನು ನೀಡಲಾಗುತ್ತಿದ್ದು, ಇವುಗಳನ್ನು ಕಟ್ಟುನಿಟ್ಟಾಗಿ ಸಂಸ್ಥೆಯು ಕ್ರಿಕೆಟ್ ಕ್ಲಬ್‌ಗಳಿಗೆ, ಖಾಯಂ ಸದಸ್ಯರಿಗೆ ಮತ್ತು ಕೆಎಸ್‌ಸಿಎಗೆ ಸೇವೆ ಸಲ್ಲಿಸುವ ಕೆಲವು ಸರ್ಕಾರಿ ಸಂಸ್ಥೆಗಳಿಗೆ ಮಾತ್ರ ಒದಗಿಸಲಾಗುತ್ತದೆ.

ಹೈದರಾಬಾದ್ ವಿರುದ್ಧ ಚೆನ್ನೈಗೆ 10 ರನ್ ಸೋಲು

ಹೈದರಾಬಾದ್: ಆಯುಷ್ ಮಾತ್ರೆ ಅವರ ಉತ್ತಮ ಬ್ಯಾಟಿಂಗ್ ನಂತರ ದಿಢೀರ್ ಕುಸಿತ ಕಂಡ ಚೆನ್ನೈ ಸೂಪರ್ ಕಿಂಗ್ಸ್ ಶನಿವಾರದ ಎರಡನೇ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್‌ನೊಂದಿಗೆ 10 ರನ್‌ನಿಂದ ಸೋತಿತು.

ಹ್ಯಾಟ್ರಿಕ್ ಸೋಲಿನ ನಂತರ ದಿಲ್ಲಿ ಹಾಗೂ ಕೆಕೆಆರ್ ತಂಡಗಳನ್ನು ಸೋಲಿಸಿ ಉತ್ಸಾಹದಲ್ಲಿದ್ದ ಚೆನ್ನೈ ಟೂರ್ನಿಯಲ್ಲಿ ನಾಲ್ಕನೇ ಸೋಲು ಕಂಡಿದ್ದು, ಒತ್ತಡದಲ್ಲಿ ಸಿಲುಕಿಕೊಂಡಿದೆ. ಇತ್ತ ಹೈದರಾಬಾದ್ ಗೆಲುವಿನೊಂದಿಗೆ ಮತ್ತೊಮ್ಮೆ ಉತ್ತಮ ಸ್ಥಾನಕ್ಕೆ ಬಂದಿದೆ. ಪಂದ್ಯದಲ್ಲಿ ಹೈದರಾಬಾದ್ ಮೊದಲು ಬ್ಯಾಟಿಂಗ್ ಮಾಡಿತ್ತು. ಅಭಿಷೇಕ್ ಶರ್ಮ(59, 22ಎ, 6 ಬೌ, 4ಸಿ) ಮತ್ತು ಹೆನ್ರಿಚ್ ಕ್ಲಾಸೆನ್ (59, 39ಎ, 6ಬೌ, 2ಸಿ) ಅವರ ಅಬ್ಬರದ ಬ್ಯಾಟಿಂಗ್ ನೊಂದಿಗೆ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 194 ರನ್ ಗಳಿಸಿತು. ಸೂಪರ್ ಕಿಂಗ್ಸ್ ಪರ ಕಂಬೋಜ್ (3-0-22-3)ನೊಂದಿಗೆ ಹೋರಾಡಿದರು, ಗುರಿ ಬೆನ್ನತ್ತಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 184 ರನ್ ಮಾತ್ರ ಗಳಿಸಿತು. ಮಾತ್ರೆ, (30, 12ಬಾ, 5ಬೌ, 1ಸಿ) ಗಳಿಸಿದರು. ಹೈದರಾಬಾದ್ ಪರ ಮಾಲಿಂಗಾ (4-0-29-3) ಗೆಲ್ಲಿಸಿದವರಾದರು.


ದಿಢೀರ್ ಕುಸಿತ: ಗುರಿ ಬೆನ್ನತ್ತಿದ ಚೆನ್ನೈ ಮೊದಲಿಗೆ ಉತ್ತಮ ಬ್ಯಾಟಿಂಗ್ ಮಾಡಿತ್ತು. ಸಂಜು ಸ್ಯಾಮ್ಸನ್ 7 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಮೈದಾನಕ್ಕಿಳಿದ ಆಯುಷ್ ಮಾತ್ರೆ ಹೈದರಾಬಾದ್ ತಂಡದ ವೇಗಿಗಳನ್ನು ದಂಡಿಸುತ್ತಾ ಬಂದರು. ಪ್ರತಿ ಓವರ್ ನಲ್ಲಿ ಒಂದಾದರೂ ಬೌಂಡರಿ ಬಾರಿಸಿದ ಅವರು, ಪವರ್‌ಪ್ಲೇನಲ್ಲಿ ಪವರ್‌ಫುಲ್ ಆಟ ಪ್ರದರ್ಶಿಸಿದರು. ಚೆನ್ನೈ ರನ್‌ರೇಟ್ 4 ಓವರ್‌ಗಳಲ್ಲಿ 14ರ ಸನಿಹವಿತ್ತು. ತಂಡ 66 ರನ್ ಗಳಿಸಿದ್ದಾಗ ಆಯುಷ್ ಔಟಾದರು. ಇದಕ್ಕೂ ಮುನ್ನ ಅವರಿಗೆ ಬಲವಾದ ಗಾಯವಾಗಿತ್ತು. ಇತ್ತ ಅವರ ವಿಕೆಟ್ ಬಿದ್ದ ನಂತರವೇ ರುತುರಾಜ್ ಗಾಯಕ್ವಾಡ್ ವಿಕೆಟ್ ಕೊಟ್ಟರು. ಪವರ್‌ಪ್ಲೇ ಮುಗಿಯಿತು. ಚೆನ್ನೈ 76 ರನ್‌ಗೆ 3 ವಿಕೆಟ್ ಕಳೆದುಕೊಂಡಿತು. ಮಧ್ಯಮ ಓವರ್ ಗಳಲ್ಲಿ ಸ್ಪಿನ್ನರ್ ಶಿವಾಂಗ್ ಕರಾರುವಾಕ್ ಪ್ರದರ್ಶನ ನೀಡಿದರು. ತಮ್ಮ ಸ್ಪಿನ್ ಮೋಡಿಯಿಂದ ಅವರು, ಸರ್ಫರಾಜ್, ಶಾರ್ಟ್ ಅವರ ಮೇಲೆ ಒತ್ತಡ ಹೇರಿದರು. ಇಶಾನ್ ಮಾಲಿಂಗಾ ಮಧ್ಯಮ ಕ್ರಮಾಂಕವನ್ನು ಪೆವಿಲಿಯನ್‌ಗಟ್ಟಿದರು. ಮಧ್ಯಮ ಓವರ್ ಮುಕ್ತಾಯಗೊಂಡವು ಅಲ್ಲಿ 73 ರನ್ ಗಳಿಸಿತು. ಡೆತ್ ಓವರ್‌ಗಳಲ್ಲಿ ಚೆನ್ನೈಗೆ 45 ರನ್ ಬೇಕಿತ್ತು. ಆದರೆ ಮಾಲಿಂಗಾ, ರೆಡ್ಡಿ ಹಾಗೂ ಹುಸೈನ್ ಕರಾರುವಾಕ್ ದಾಳಿಯೊಂದಿಗೆ ಕಟ್ಟಿಹಾಕಿದರು. ಚೆನ್ನೈಗೆ ಕೊನೆಯ ಓವರ್‌ನಲ್ಲಿ 18 ರನ್ ಬೇಕಿದ್ದವು. ಆದರೆ 8 ರನ್ ಮಾತ್ರ ಗಳಿಸಿತು. ಒಟ್ಟು ಡೆತ್ ಓವರ್ ನಲ್ಲಿ ಚೆನ್ನೈ 35 ರನ್ ಗಳಿಸಿತು. ಮಧ್ಯಮ ಓವರ್‌ನಲ್ಲಿ ಮಾಡಿದ ಡಾಟ್‌ಗಳಿಂದಲೇ ಪಂದ್ಯವನ್ನು ಸೋತಿತು. ಹೈದರಾಬಾದ್ ಪರ ಮಾಲಿಂಗಾ 3, ನಿತಿಶ್ 2 ವಿಕೆಟ್ ಕಿತ್ತರು.



ಪದಬಂಧ

ರಾಜಾ ಸಂಗಮೇಶ ಹಿರೇಮಠ

5959



ಎಡದಿಂದ ಬಲಕ್ಕೆ
1. ಹಾರ ನಡುವೆ ತಿರುಗಿ ಮೆಲುನಗೆಯಾಯಿತು (4)
3. ಗರದ ನಡುವೆ ಧೋರಣೆಯುಳ್ಳವನಿದ್ದಾನೆ (4)
5. ಚೆನ್ನಾಗಿ ಮಾತನಾಡುವವನು-ವಾಕ್ಪಟು (2)
6. ತಾಮ್ರದ ಸಣ್ಣ ನಾಣ್ಯ (2)
7. ಬರುವಿಕೆ-ಆಗಮಿಸು ಎಂಬರ್ಥದ ಶಬ್ದ (5)
10. ರಣ-ರತಿ ಒಳಗೊಂಡ ಕಡೆಗಣಿಸುವಿಕೆ (5)
14. ದೇಶಿಯ-ಸ್ವದೇಶಿ (2)
15. ಅರಸುಪತ್ನಿಯಲ್ಲಿ ತಿರುಗಿದ್ದಾಳೆ (2)
16. ಬಾಣದಂತೆ ತೀವ್ರವಾದ ರಭಸ (4)
17. ಸುರನಿಗೆ ಕೇಳಿದ ಬಹಳ ಇಂಪಾದದು (4)

ಮೇಲಿನಿಂದ ಕೆಳಕ್ಕೆ
1. ಹಿಂದಿನ ಮೈಸೂರು ಸಂಸ್ಥಾನದಲ್ಲಿ ಪ್ರಧಾನಿ (4)
2. ಗುಂಪು-ಸಮೂಹ ಎಂಬರ್ಥದ ಶಬ್ದ (4)
3. ಗಡಿಯಲ್ಲಿ ತೋರುತ್ತಿರುವ ಆತುರ (4)
4. ಸೂರ್ಯನ ಮಗಳು-ಯಮುನೆ (4)
7. ದಷ್ಟಪುಷ್ಟ-ಗಟ್ಟಿಮುಟ್ಟಾಗಿರುವುದು (3)
8. ಸದಾಚಾರದ ಸಮಾನಪದ (3)
9. ಅಂಚೆ ಮೂಲಕ ಹಣ ಕಳಿಸುವ ವ್ಯವಸ್ಥೆ (4)
11. ಯುದ್ಧ ನಡೆಯುವ ಬಯಲು (4)
12. ವಾಸು ಹೀಗೆ ಸರಕನ್ನು ಸಾಗಿಸುತ್ತಿದ್ದಾನೆ (4)
13. ಮಳೆ ಹೀಗೆ ಏಕಪ್ರಕಾರವಾಗಿ ಸುರಿಯುತ್ತಿದೆ (4)

5958 ಉತ್ತರ

ಎಡದಿಂದ ಬಲಕ್ಕೆ:
2. ದಯಪಾಲಿಸು 5. ಪವನ
6. ಲಿಖಿತ 7. ನದಿ 9. ಸಂತ
11. ಅಜ 12. ದಲ
15. ವಾನರ 16. ಜರ್ಜರ
17. ದಡಬಡಿಸು

ಮೇಲಿನಿಂದ ಕೆಳಕ್ಕೆ :
1. ತಾಲಪತ್ರ 2. ದಶಾನನ
3. ಸುಲಲಿತ 4. ಪಡಿತರ
8. ದಿವಿಜ 9. ಸಂವಾದ
10. ದವಾಖಾನೆ
11. ಅರವಿಂದ
13. ಸುಖಜಲ
14. ದ್ವಾರಬಂಧ

ಕಿರುಸುದ್ದಿ

ಮಾ.17ರಿಂದ ಬ್ಯಾಡ್ಮಿಂಟನ್ ಪಂದ್ಯಾವಳಿ: ಕುಮಾರ್ ಬಂಗಾರಪ್ಪ

• **ವಿಜಯಪುರ:** ಬ್ಯಾಡ್ಮಿಂಟನ್ ಅಸೋಸಿಯೇಷನ್ ವತಿಯಿಂದ ವಿಜಯಪುರದಲ್ಲಿ ಇದೇ ಮೊದಲ ಬಾರಿಗೆ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಮಾ.17ರಿಂದ 25ರ ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ರಾಜ್ಯಾಧ್ಯಕ್ಷ ಕುಮಾರ್ ಬಂಗಾರಪ್ಪ ಹೇಳಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಕ್ಕೆ 7 ಕಡೆ ಪಂದ್ಯಾವಳಿ ನಡೆಸಲು ಅವಕಾಶ ನೀಡಿದ್ದು, ಅದರಲ್ಲಿ ವಿಜಯಪುರದಲ್ಲಿ ಬ್ಯಾಡ್ಮಿಂಟನ್ ಪಂದ್ಯಾವಳಿ ನಡೆಸಲಾಗುತ್ತಿದೆ. ಉಳಿದಂತೆ, ಬೆಳಗಾವಿ, ಧಾರವಾಡ, ಮಣಿಪಾಲ್, ಚಿಕ್ಕಮಗಳೂರು, ಬೆಂಗಳೂರಿನಲ್ಲಿ ಪಂದ್ಯಾವಳಿ ಆಯೋಜಿಸಲಾಗುವುದು ಎಂದರು. ಬ್ಯಾಡ್ಮಿಂಟನ್ ಪಂದ್ಯಾವಳಿ ಆಯೋಜಿಸಲು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ್, ಜಿಲ್ಲಾಡಳಿತದಿಂದ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದು, 7 ದಿನ ವಿಜಯಪುರದಲ್ಲಿ ಕ್ರೀಡಾಹಬ್ಬ ನಡೆಯಲಿದೆ. ಎಲ್ಲ ಜಿಲ್ಲೆಯ ಬ್ಯಾಡ್ಮಿಂಟನ್ ಕ್ರೀಡಾಪಟುಗಳು ಪಂದ್ಯಾವಳಿಯಲ್ಲಿ ಭಾಗವಹಿಸಲಿದ್ದು, ಕ್ರೀಡೆಯನ್ನು ಮತ್ತಷ್ಟು ಬೆಳೆಸುವ ಉದ್ದೇಶ ಹೊಂದಲಾಗಿದೆ. ಈ ಪಂದ್ಯಾವಳಿ ರಾಜ್ಯದ ಕ್ರೀಡಾ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸತ್ಯಕ್ಕೆ ಜಯ ಸಿಗಲಿದೆ: ವೈಶಾಲಿ ಕುಲಕರ್ಣಿ

• **ಧಾರವಾಡ:** ಮಾಜಿ ಸಚಿವ ವಿನಯ ಕುಲಕರ್ಣಿ ಅವರು ಜೀವಾವಧಿ ಶಿಕ್ಷೆಗೆ ಗುರಿಯಾದ ಹಿನ್ನೆಲೆ ಅವರ ಸುಪುತ್ರಿ ವೈಶಾಲಿ ವಿನಯ ಕುಲಕರ್ಣಿ, ಸತ್ಯಕ್ಕೆ ಜಯ ಸಿಗಲಿದೆ. ನ್ಯಾಯಾಲಯದ ಮೇಲೆ ಅಚಲ ನಂಬಿಕೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ನಮಗೆ ತಂದೆಯೇ ಸ್ಫೂರ್ತಿ: ಈ ಕುರಿತು ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಹಾಗೂ ಅಭಿಮಾನಿಗಳಿಗೆ ಸಂದೇಶ ನೀಡಿದ ಅವರು, ನಮ್ಮ ತಂದೆ ರೈತ ಕುಟುಂಬದ ಹಿನ್ನೆಲೆಯಿಂದ ಬಂದು, ವಿದ್ಯಾರ್ಥಿ ನಾಯಕನಾಗಿ ಜನಸೇವೆ ಆರಂಭಿಸಿದವರು. ಕೇವಲ ರಾಜಕೀಯವಲ್ಲದೆ, ಸಾವಿರಾರು ಪಶುಗಳ ಸಾಕಾಣಿಕೆ, ಬೃಹತ್ ಹಾಲು ಉತ್ಪಾದನಾ ಘಟಕದ ಸ್ಥಾಪಿಸಿ, ಯುವ ರೈತರಿಗೆ ಆರ್ಥಿಕ ಸ್ವಾವಲಂಬನೆಯ ದಾರಿದೀಪವಾಗಿದ್ದಾರೆ ಎಂದಿದ್ದಾರೆ. **ನೈತಿಕತೆ ಮತ್ತು ಸತ್ಯದ ಮೇಲೆ ವಿಶ್ವಾಸ:** ನಮ್ಮ ತಂದೆಯವರ ನೈತಿಕತೆ ಮತ್ತು ಸತ್ಯದ ಹಾದಿಯ ಮೇಲೆ ನಮಗೆ ಸಂಪೂರ್ಣ ನಂಬಿಕೆಯಿದೆ. ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿರುವ ವಿಭಿನ್ನ ಅಭಿಪ್ರಾಯಗಳ ನಡುವೆಯೂ, ಅಂತಿಮವಾಗಿ ಸತ್ಯಕ್ಕೆ ಜಯ ಸಿಗಲಿದೆ ಎಂಬ ದೃಢ ವಿಶ್ವಾಸ ನಮ್ಮ ಕುಟುಂಬಕ್ಕಿದೆ ಎಂದು ವೈಶಾಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನ್ಯಾಯಾಂಗ ವ್ಯವಸ್ಥೆಗೆ ಗೌರವ: ನಾವು ಭಾರತದ ನ್ಯಾಯಾಂಗ ವ್ಯವಸ್ಥೆ ಗೌರವಿಸುತ್ತೇವೆ. ಮೇಲ್ಮನವಿ ನ್ಯಾಯಾಲಯಗಳ ಮೂಲಕ ಸತ್ಯ ಹೊರಬರಲಿದೆ ಮತ್ತು ನಮಗೆ ನ್ಯಾಯ ಸಿಗಲಿದೆ ಎಂಬ ಪೂರ್ಣ ನಂಬಿಕೆಯೊಂದಿಗೆ ನಾವು ಕಾನೂನು ಪ್ರಕ್ರಿಯೆ ಮುಂದುವರಿಸುವುದಾಗಿಯೂ ಹೇಳಿದ್ದಾರೆ. ಈ ಕಷ್ಟದ ಸಮಯದಲ್ಲಿ ನಮ್ಮ ಕ್ಷೇತ್ರದ ಜನತೆ ಹಾಗೂ ಅಭಿಮಾನಿಗಳು ತೋರಿಸುತ್ತಿರುವ ಅತೀವ ಪ್ರೀತಿ, ಹಾರೈಕೆ ಮತ್ತು ಪ್ರಾರ್ಥನೆಗಳು ನಮಗೆ ದೊಡ್ಡ ಬೆನ್ನೆಲುಬಾಗಿವೆ. ಅನೇಕ ಕುಟುಂಬಗಳಿಗೆ ಅವರು ಕೇವಲ ಒಬ್ಬ ನಾಯಕನಲ್ಲ, ಒಬ್ಬ ಮಾರ್ಗದರ್ಶಕ ಮತ್ತು ಹೆಮ್ಮೆಯ ಸಂಕೇತವಾಗಿದ್ದಾರೆ ಎಂದಿದ್ದಾರೆ.

ಒಗ್ಗಟ್ಟಿನ ಸಂದೇಶ: ಸವಾಲುಗಳು ಎದುರಾದಾಗ ನಾವು ಧೃತಿಗೆಡುವುದಿಲ್ಲ, ಇದೂ ಕಳೆಯುತ್ತದೆ ಎಂಬ ಆಶಯದೊಂದಿಗೆ ಸತ್ಯದ ಪರವಾಗಿ ನಾವೆಲ್ಲರೂ ಒಗ್ಗಟ್ಟಾಗಿ ನಿಲ್ಲುತ್ತೇವೆ. ನಿಮ್ಮ ಪ್ರೀತಿ ಮತ್ತು ವಿಶ್ವಾಸ ನಮ್ಮ ಮೇಲೆ ಸದಾ ಹೀಗೆಯೇ ಇರಲಿ ಎಂದು ವೈಶಾಲಿ ವಿನಯ ಕುಲಕರ್ಣಿ ಕೋರಿದ್ದಾರೆ.

ಬಾರದ ಹೆಚ್ಚುವರಿ ಹಣ: ಆತ್ಮಹತ್ಯೆ

• **ಕುಷ್ಟಗಿ:** ಹೆಚ್ಚುವರಿ ಹಣ ಬಾರದ ಮನನೊಂದು ಜೆಸ್ಕಾಂ ಇಲಾಖೆಯ ಗ್ರಾಮ ವಿದ್ಯುತ್ ಪ್ರತಿನಿಧಿ ಹೊರ ಹೊಲಯದ ಜಮೀನು ಮರಕ್ಕೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡ ತಾಲೂಕಿನ ತಳುವಗೇರಾ ಘಟನೆ ಶನಿವಾರ ನಡೆದಿದೆ. ಗ್ರಾಮದ ಅಮರಯ್ಯ ಕಲ್ಲಯ್ಯ ಚನ್ನಳ್ಳಿ ಹಿರೇಮಠ(25) ಮೃತ ದುರ್ದೈವಿ. ಕುಷ್ಟಗಿ ಜೆಸ್ಕಾಂ ಕೆಇಬಿ ಉಪ ವಿಭಾಗದ ಗ್ರಾಮ ಪಂಚಾಯತ್ ಮಟ್ಟದ ವ್ಯಾಪ್ತಿಯ ಹಳ್ಳಿಗಳಲ್ಲಿ ವಿದ್ಯುತ್ ಪ್ರತಿನಿಧಿಯಾಗಿ ಕಳೆದ 23 ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ಹೆಚ್ಚುವರಿ ಹಣ ಸಕಾಲಕ್ಕೆ ಪಾವತಿಯಾಗದ ಪರಿಣಾಮ ಕೌಟುಂಬಿಕ ಕುಟುಂಬ ನಿರ್ವಹಣೆಗೆ ತೊಡಕು ಉಂಟಾಗಿ ಜೀವನ ನಡೆಸಲು ಜಿಗುಪ್ಸೆಗೊಂಡು ಆತ್ಮಹತ್ಯೆಗೆ ಶರಣರಾಗಿದ್ದಾರೆ. ಮೃತನ ಪತ್ನಿ ದೂರಿನ್ವಯ ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಲ್ಕು ದಶಕ ಕಳೆದರೂ ಸಿಗದ ನಿವೇಶನ | ಸತ್ಯಾಗ್ರಹದ ಎಚ್ಚರಿಕೆ

ಕೃಷ್ಣಾ ಸಂತ್ರಸ್ತರಿಗೆ ತಪ್ಪದ ಅಲೆದಾಟ

▸ ಈರಯ್ಯ ಬ. ಗಣಕುಮಾರಮಠ



• **ಕೊಲ್ಹಾರ:** ಕೃಷ್ಣಾ ಮೇಲ್ದಂಡೆ ಯೋಜನೆಯು ರಾಜ್ಯದ ಬೃಹತ್ ನೀರಾವರಿ ಯೋಜನೆಯಾಗಿದೆ. ಆಲಮಟ್ಟಿ, ನಾರಾಯಣಪುರ ಎಂಬಲ್ಲಿ ಎರಡು ಜಲಾಶಯಗಳನ್ನು ನಿರ್ಮಿಸಲಾಗಿದೆ. ಇದರಿಂದಾಗಿ ಬಾಗಲಕೋಟೆ, ವಿಜಯಪುರ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರಗಿ ಮುಂತಾದ ಜಿಲ್ಲೆಗಳಲ್ಲಿ ಹಸಿರು ನಳನಳಿಸುತ್ತಿದೆ.

ಆದರೆ, ನಾಡಿಗೆ ಬೆಳಕು ನೀಡಲು ತಮ್ಮ ಜಮೀನು, ಮನೆ, ತೋಟ, ಕೊಟ್ಟಿಗೆ, ಕುಲ-ದೇವರುಗಳ ದೇವಸ್ಥಾನ ಇತ್ಯಾದಿಗಳೆಲ್ಲವನ್ನೂ ತ್ಯಾಗ ಮಾಡಿದ ಕೃಷ್ಣಾನದಿ ಮುಳುಗಡೆ ಸಂತ್ರಸ್ತರು ನಾಲ್ಕು ದಶಕಗಳು ಸಮೀಪಿಸಿದರು ಇಂದಿಗೂ ತಮ್ಮ ನಿವೇಶನ ಪಡೆಯಲು ಅಲೆದಾಟ ತಪ್ಪುತ್ತಿಲ್ಲ.

ಅಂದು 1960ರ ದಶಕದಲ್ಲಿ ನಮ್ಮ ಹಿರಿಯರಿಗೆ ಆಲಮಟ್ಟಿ ಜಲಾಶಯ ನಿರ್ಮಾಣವಾಗುತ್ತದೆ. ನಮ್ಮ ಜಮೀನು ಮನೆ, ಮಠಗಳನ್ನು ಕಳೆದುಕೊಳ್ಳುತ್ತೇವೆ ಎಂಬ ಸುದ್ದಿ ಕಿವಿಯಲ್ಲಿ ಬಿದ್ದಿದ್ದೆ ತಡ ಅದೆಷ್ಟು ಕುಟುಂಬಗಳು ಜೋಪಡಿಗಳಲ್ಲಿ ತಮ್ಮ ಕುಟುಂಬದ ಬಂಡಿಯನ್ನು ಎಳೆಯುತ್ತಾ ಬಂದರು. ನಂತರ 1995-96ರಲ್ಲಿ ಆಲಮಟ್ಟಿ ಅಣೆಕಟ್ಟೆಯ ಹಿನ್ನೀರು ಹಂತ ಹಂತವಾಗಿ ಗ್ರಾಮಗಳಿಗೆ ನುಗುತ್ತಾ ಬಂತು. ಕ್ರಮೇಣ ಎಲ್ಲ ಸಂತ್ರಸ್ತರು ಯಾವುದೇ ಮೂಲಭೂತ ಸೌಕರ್ಯ ಕಾಣದ ಪುನರ್ವಸತಿ ಕೇಂದ್ರಕ್ಕೆ ಬಂದು ನೆಲೆಯೂರಿದರು. ಆದರೆ, ಅಲ್ಲಿಂದ ಇಂದಿನವರೆಗೂ ಸಂತ್ರಸ್ತರಿಗೆ ಪೂರ್ಣ ಪ್ರಮಾಣದ ನಿವೇಶನಗಳನ್ನು ಸರ್ಕಾರ ನೀಡಿಲ್ಲ. ತಮ್ಮ ಮನೆ ಜಮೀನು ಕಳೆದುಕೊಂಡಂತ ಮೂಲ ಸಂತ್ರಸ್ತರಿಗೂ ಕೂಡ ಇನ್ನೂ ನಿವೇಶನಗಳ ಹಕ್ಕುಪತ್ರ ನೀಡಿಲ್ಲ. 2019ರ ಫೆಬ್ರವರಿಯಲ್ಲಿ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಇಲಾಖೆಯಿಂದ ನಿವೇಶನಗಳ ಹಂಚಿಕೆಯನ್ನು ಪೂರ್ಣಗೊಳಿಸದೆ ಕೊಲ್ಹಾರ ಪುನರ್ವಸತಿ ಕೇಂದ್ರವನ್ನು ಪಟ್ಟಣ ಪಂಚಾಯತಿಗೆ ಹಸ್ತಾಂತರಿಸಿದರು.

> ಸಚಿವ ಶಿವಾನಂದ ಪಾಟೀಲರು ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸಂಬಂದಪಟ್ಟ ಇಲಾಖೆ ಅಧಿಕಾರಿಗಳಿಗೆ ಗೊಂದಲ ಸರಿಪಡಿಸಲು ಕ್ರಮಕೈಗೊಳ್ಳಲು ಅಕ್ಟೋಬರ್ ತಿಂಗಳೊಳಗೆ ಆದೇಶ ಮಾಡಿಸಬೇಕು. ಇಲ್ಲದಿದ್ದರೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು.
> ■ ರಾಮಣ್ಣ ಉಪ್ಪಲದಿನ್ನಿ, ವೀರಭದ್ರಪ್ಪ ಬಾಗಿ, ಕೊಲ್ಹಾರ ಪಟ್ಟಣ ಅಭಿವೃದ್ಧಿ ಹಿತ ಚಿಂತಕರ ವೇದಿಕೆ ಸದಸ್ಯರು

ಇದೆಲ್ಲದರ ಮಧ್ಯೆ 2022ರಲ್ಲಿ ನಿವೇಶನಗಳಲ್ಲಿ ಆದ ಅಕ್ರಮಗಳನ್ನು ಬಯಲಿಗೆಳೆಯಲು ವಿಶೇಷ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಾಲ್ಕು ತಂಡಗಳಿಂದ ತನಿಖೆಯನ್ನು ಮಾಡಿ ವರದಿ ಸಲ್ಲಿಸಿದರು. ಆದರೆ, ಅದು ಕೂಡ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತೆ ಮತ್ತೆ ಗೊಂದಲ ಸೃಷ್ಟಿ ಮಾಡಿ ಸರಿಯಾಗಿ ಇರುವ, ಅಕ್ರಮ, ಮಾಹಿತಿ ನೀಡಿರದ, ಸಂಶಯಾಸ್ಪದ, ಡಬಲ್ ಅಂತಾ ಹೀಗೆ ಬೇರೆ ಬೇರೆ ಒಂಬತ್ತು ಪಟ್ಟಿ ತಯಾರಿಸಿ ಅದರಲ್ಲಿ 1117 ಪ್ರಕರಣಗಳನ್ನು ಸಿಓಡಿ ತನಿಖೆಗೆ ಒಳಪಡಿಸಿದರು.

ಆದರೆ, ಇಷ್ಟೆಲ್ಲ ಆದರೂ ಇನ್ನೂ ಕೂಡ ಮೂಲ ಸಂತ್ರಸ್ತರಿಗೆ ತನಿಖೆಯ ನೆಪದಲ್ಲಿ ಅಲೆದಾಡಿಸುವುದನ್ನು ಅಧಿಕಾರಿಗಳು ಬಿಡುತ್ತಿಲ್ಲ. ಏನೇನು ಕಾರಣ ಹೇಳಿ ಸಂತ್ರಸ್ತರನ್ನು ಕೊಲ್ಹಾರದಿಂದ ಆಲಮಟ್ಟಿ, ಜಮಖಂಡಿ, ಬಾಗಲಕೋಟೆಗೆ ಅಲೆದಾಡುಸುತ್ತಿರುವುದು ಯಾವ ನ್ಯಾಯ.

ಸ್ಥಳೀಯ ಪಟ್ಟಣ ಪಂಚಾಯತ ಕಾರ್ಯಾಲಯದ ಮುಖ್ಯಾಧಿಕಾರಿಗಳು ಸೇರಿದಂತೆ ಪುನರ್ವಸತಿ ಅಧಿಕಾರಿ ವಿಶೇಷ ಜಿಲ್ಲಾಧಿಕಾರಿ ಮಹಾವ್ಯವಸ್ಥಾಪಕರು ವಾರದಲ್ಲಿ ಎರಡು ದಿನ ಕೊಲ್ಹಾರ ಪಟ್ಟಣದ ಯುಕೆಪಿ ಕಾರ್ಯಾಲಯದಲ್ಲಿ ಸಿಬ್ಬಂದಿ ಸಹಿತವಾಗಿ ಆಗಮಿಸಿ ಆಗಿರುವ ತಪ್ಪನ್ನು ಸರಿಪಡಿಸಲು ಮುಂದಾಗಬೇಕು ಎನ್ನುವುದು ಸಂತ್ರಸ್ತರ ಆಶಯ.

ವಿವಿಧ ಅಭಿವೃದ್ಧಿ ಕಾಮಗಾರಿಗೆ ಸಿಎಂ ಸಿದ್ದರಾಮಯ್ಯ ಚಾಲನೆ

• **ಹಾವೇರಿ (ರಾಣೇಬೆನ್ನೂರು):** ರಾಣೇಬೆನ್ನೂರು ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿಗೆ ಶಿಲಾನ್ಯಾಸ ಹಾಗೂ ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಡಿಜಿಟಲ್ ಕ್ಲಾಸ್, ಡಿಜಿಟಲ್ ಲೈಬ್ರರಿ, ಆರೋಗ್ಯ ಎಟಿಎಂಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ರಾಣೇಬೆನ್ನೂರು ನಗರದ ದೊಡ್ಡಕೆರೆ ಆವರಣದಲ್ಲಿ ಭಾನುವಾರ ತಾಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿದ ಅವರು, ಕಳೆದ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಸರ್ಕಾರಿ ಪಿಯು ಕಾಲೇಜಿನ ವಿದ್ಯಾರ್ಥಿಗಳಿಗೆ ಡಿಜಿಟಲ್ ಲೈಬ್ರರಿ ಟ್ಯಾಬ್ ವಿತರಣೆ ಮಾಡಿ, ವಿದ್ಯಾರ್ಥಿಗಳೊಂದಿಗೆ ಮಾತನಾಡಿದರು.

ಡಿಜಿಟಲ್ ಕ್ಲಾಸ್, ಡಿಜಿಟಲ್ ಲೈಬ್ರರಿ, ರೋಬೋಟ್ ಟೀಚರ್ ಕಲಿಕೆಯಿಂದ ನಿಮಗೆ ಅನುಕೂಲವಾಗಿದೆಯಾ ಎಂದು ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು ಹಾಗೂ ರೋಬೋಟ್ ಟೀಚರ್ ಜೊತೆ ಸಂವಾದ ನಡೆಸಿದರು.

ಶಾಸಕ ಪ್ರಕಾಶ ಕೋಳಿವಾಡ ಅವರು ಮಾತನಾಡಿ, ರಾಣೇಬೆನ್ನೂರ ಕ್ಷೇತ್ರದ 14 ಪ್ರೌಢಶಾಲೆಗಳಲ್ಲಿ ರೋಬೋಟ್ ಟೀಚರ್ ಕಲಿಕೆ, 212 ಸರ್ಕಾರಿ ಶಾಲೆಗಳಲ್ಲಿ ಡಿಜಿಟಲ್ ಕ್ಲಾಸ್ ಹಾಗೂ 87 ಗ್ರಾಮಗಳಲ್ಲಿ ಡಿಜಿಟಲ್ ಲೈಬ್ರರಿ ಸೌಲಭ್ಯ ಒದಗಿಸಲಾಗಿದೆ. ಈ ಕ್ಷೇತ್ರದ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ಎಟಿಎಂ ಕಾರ್ಯ ನಿರ್ವಹಿಸುತ್ತಿದ್ದು, 90 ಪ್ರಕಾರದ ಲ್ಯಾಬ್ ರಿಪೋರ್ಟ್ ಐದು ಸೆಕೆಂಡನಲ್ಲಿ ಲಭ್ಯವಾಗುತ್ತಿದೆ. ದೊಡ್ಡಕೆರೆಯಲ್ಲಿ ನಾಲ್ಕು ಐಲ್ಯಾಂಡ್ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಶಾಸಕರು ಹಾಗೂ ವಿಧಾನಸಭೆ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಬ್ಯಾಡಗಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸವರಾಜ ಶಿವಣ್ಣನವರ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ಅಧ್ಯಕ್ಷ ಸೈಯದ್ ಅಜೀಮಪೀರ್ ಖಾದ್ರಿ, ಕರ್ನಾಟಕ ಗಡಿ ಪ್ರದೇಶದ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ, ಶಾಸಕ ಯು.ಬಿ. ಬಣಕಾರ, ಜಿಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರುಚಿ ಬಿಂದಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ, ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ಶಿರಕೋಳ ಇತರರು ಉಪಸ್ಥಿತರಿದ್ದರು.

ರೋಬೋ ಟೀಚರ್ ಐರಿಸ್‌ನೊಂದಿಗೆ ಸಿಎಂ ಸಂವಾದ

ಕಾರ್ಯಕ್ರಮದ ವೇದಿಕೆಗೆ ಸಿಎಂ ಸಿದ್ದರಾಮಯ್ಯ ಆಗಮಿಸುತ್ತಿದ್ದಂತೆ ರೋಬೋ ಟೀಚರ್ ಐರಿಸ್ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಎಲ್ಲ ಅತಿಥಿಗಳಿಗೆ ಸ್ವಾಗತ ಕೋರಿದ್ದು ವಿಶೇಷವಾಗಿತ್ತು. ನಂತರ ಮುಖ್ಯಮಂತ್ರಿಗಳ ಎದುರು ತನ್ನ ಪರಿಚಯ ಮಾಡಿಕೊಂಡ ರೋಬೋ ನಾನು ಐರಿಸ್, ಕರ್ನಾಟಕದ ಮೊದಲ ಎಐ ಶಿಕ್ಷಕಿ ರೋಬೋಟ್. ನನ್ನ ಮಿಷನ್ ಗ್ರಾಮೀಣ ವಿದ್ಯಾರ್ಥಿಗಳಿಗೆ ತಂತ್ರಜ್ಞಾನದಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸುವುದು. ನಾನು ಕಮಲಮ್ಮ ಹೈಸ್ಕೂಲ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ತುಂಬ ವಿಶೇಷ ಸಾಹಿತ್ಯ, ಕಥೆಗಳು ಮತ್ತು ಪ್ರಶ್ನೆಗಳಿಗೆ ಉತ್ತರ ಕೊಡುತ್ತೇನೆ ಎಂದು ಹೇಳಿತು. ನಂತರ ರೋಬೋ ಟೀಚರ್‌ಗೆ ನಿರ್ದೇಶನ ನೀಡಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮತ್ತೊಮ್ಮೆ ಸ್ವಾಗತ ಕೋರಿತು.



ಸಾಧ್ವಿ ಸೈಲ್‌ಗೆ ಫೆಮಿನ್ ಮಿಸ್ ಇಂಡಿಯಾ ಕಿರೀಟ

• **ಅಂಕೋಲಾ:** ದೇಶದ ಪ್ರತಿಷ್ಠಿತ ರಾಷ್ಟ್ರೀಯ ಸೌಂದರ್ಯ ಸ್ಪರ್ಧೆ ಫೆಮಿನ್ ಮಿಸ್ ಇಂಡಿಯಾ ಕಿರೀಟವನ್ನು ಕಾರವಾರದ ಕುವರಿ ಸಾಧ್ವಿ ಸತೀಶ ಸೈಲ್ ಅವರು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ಕಾರವಾರ ಅಂಕೋಲಾ ಕ್ಷೇತ್ರದ ಶಾಸಕ ಸತೀಶ ಸೈಲ್ ಅವರ ಮಗಳಾಗಿರುವ ಸಾಧ್ವಿ ಒಡಿಶಾದ ಭುವನೇಶ್ವರದಲ್ಲಿ ನಡೆದ 61ನೇ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ದೇಶದ ಅತಿ ಸುಂದರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು 2027ರಲ್ಲಿ ನಡೆಯಲಿರುವ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸುವ ಅರ್ಹತೆ ಪಡೆದುಕೊಂಡಿದ್ದಾರೆ.



ಸೈಲ್ ಫೌಂಡೇಶನ್‌ನ ಮೂಲಕ ಸಾಮಾಜಿಕ ಸೇವಾ ಕಾರ್ಯದಲ್ಲಿ ತೊಡಗಿಕೊಂಡಿರುವ ಸಾಧ್ವಿ ಸತೀಶ ಸೈಲ್ ಅವರು ಮಕ್ಕಳ ಆರೋಗ್ಯ ಮತ್ತು ಶಿಕ್ಷಣಕ್ಕೆ ನಿಧಿ ಸಂಗ್ರಹಿಸುವುದು, ಅಪೌಷ್ಟಿಕತೆಯಿಂದ ಬಳಲುವ ಮಕ್ಕಳು, ಶ್ರವಣದೋಷ ಮತ್ತು ಮಾತು ಬಾರದ ಬಾಲಕಿಯರಿಗೆ ವಿಶೇಷ ಸಹಾಯ ಸಹಕಾರ ನೀಡುತ್ತ ಬಂದಿದ್ದು, ತಮ್ಮ ಆಸಕ್ತಿಯ ಮಾಡೆಲಿಂಗ್ ಕ್ಷೇತ್ರದಲ್ಲಿ ಸಾಧನೆ ತೋರಿ ಮಿಸ್ ಇಂಡಿಯಾ ಸ್ಪರ್ಧೆಗೆ ಗೋವಾ ರಾಜ್ಯವನ್ನು ಪ್ರತಿನಿಧಿಸಿ ಸ್ಪರ್ಧೆಗಿಳಿದಿದ್ದರು.

ನಮ್ಮ ಮಣ್ಣಿನ ಹೆಣ್ಣುಮಕ್ಕಳು ಎಂಬ ವಿಷಯವನ್ನು ಕೇಂದ್ರೀಕರಿಸಿ ನಡೆದ ಫೆಮಿನ್ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ 30 ರಾಜ್ಯಗಳ ಸ್ಪರ್ಧಿಗಳು ಭಾಗವಹಿಸಿದ್ದು ಸಾಧ್ವಿ ವಿವಿಧ ಹಂತಗಳ ಸ್ಪರ್ಧೆಯನ್ನು ಎದುರಿಸಿ ಅಂತಿಮ ಸುತ್ತು ಪ್ರವೇಶಿಸಿದ್ದರು.

ಅಂತಿಮ ಸುತ್ತಿನಲ್ಲಿ ಸರ್ವಾಂಗೀಣ ಉತ್ತಮ ನಿರ್ವಹಣೆ ತೋರಿದ ಸಾಧ್ವಿ ಸತೀಶ ಸೈಲ್ ಅವರನ್ನು ಫೆಮಿನಾ ಮಿಸ್ ಇಂಡಿಯಾ ಎಂದು ಘೋಷಿಸಲಾಯಿತು. ಮಹಾರಾಷ್ಟ್ರದ ರಾಜನಂದಿನಿ ಪವಾರ್ ಮೊದಲ ರನ್ನರ್ ಅಪ್ ಮತ್ತು ಜಮ್ಮು ಕಾಶ್ಮೀರದ ಶ್ರೀ ಅದ್ವೈತ ದ್ವಿತೀಯ ರನ್ನರ್ ಅಪ್ ಆಗಿ ಹೊರಹೊಮ್ಮಿದರು.

ಮಿಸ್ ಇಂಡಿಯಾ ಕಿರೀಟ ಧರಿಸುತ್ತಿದ್ದಂತೆ ಸಾಧ್ವಿ ತಂದೆ ಸತೀಶಸೈಲ್ ಅವರಿಗೆ ವಿಡಿಯೋ ಕರೆ ಮಾಡಿ ಸಂತಸ ಹಂಚಿಕೊಂಡರು. ಕಾರವಾರ ಅಂಕೋಲಾ ಶಾಸಕ ಸತೀಶ ಸೈಲ್ ಅವರು ಮಗಳ ಸಾಧನೆಗೆ ಅಭಿನಂದನೆಗಳನ್ನು ತಿಳಿಸಿದ್ದು, ಆಕೆಯ ಸಾಮಾಜಿಕ ಸೇವಾ ಕಾರ್ಯ ನಿರಂತರವಾಗಿ ಮುಂದುವರಿಯಲಿ ಎಂದು ಹಾರೈಸಿದ್ದಾರೆ.

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಗವರ್ನರ್ ಗೆಹ್ಲೋಟ್ ಭಾಗಿ

ಏ.22ಕ್ಕೆ ಸಿಯುಕೆ 10ನೇ ಘಟಿಕೋತ್ಸವ



• **ಕಲಬುರಗಿ:** ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವ ಇದೇ ಏ.22ರಂದು ವಿಶ್ವವಿದ್ಯಾಲಯದ ವಿವಿಧೋದ್ದೇಶ ಸಭಾ ಭವನದಲ್ಲಿ ಮಧ್ಯಾಹ್ನ 2-30ಕ್ಕೆ ಅದ್ದೂರಿಯಾಗಿ ನಡೆಯಲಿದೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಟ್ಟು ಸತ್ಯ ನಾರಾಯಣ ತಿಳಿಸಿದರು.

ಭಾನುವಾರ ವಿಶ್ವವಿದ್ಯಾಲಯದ ಅತಿಥಿ ಗೃಹದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡುತ್ತಾ ಮಾತನಾಡಿದ ಅವರು, ಘಟಿಕೋತ್ಸವಕ್ಕೆ ಭಾರತದ ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಘಟಿಕೋತ್ಸವದ ಭಾಷಣ ಮಾಡಲಿದ್ದು, ಕರ್ನಾಟಕದ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಸಹ ಭಾಗಿಯಾಗಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆ ವಿವಿಯ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ವಹಿಸಲಿದ್ದಾರೆ ಎಂದ ಅವರು, ಕಾರ್ಯಕ್ರಮಕ್ಕೆ ಉಪ ರಾಷ್ಟ್ರಪತಿ ಆಗಮಿಸುತ್ತಿರುವುದರಿಂದ ಹೆಚ್ಚಿನ ಭದ್ರತಾ ವ್ಯವಸ್ಥೆ ಮಾಡಲಾಗಿದ್ದು, ಶಿಷ್ಟಾಚಾರದಂತೆ ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ, ಅಧಿಕಾರಿ ವರ್ಗದವರು, ಪಾಲಕರು ಕಡ್ಡಾಯವಾಗಿ ಗುರುತಿನ ಚೀಟಿಯೊಂದಿಗೆ ಭಾಗವಹಿಸಬೇಕು ಎಂದರು.


ಪತ್ರಿಕಾಗೋಷ್ಠಿಯಲ್ಲಿ ಕುಲಸಚಿವ ಪ್ರೊ.ಆರ್.ಆರ್. ಬಿರಾದಾರ, ಪರೀಕ್ಷಾ ನಿಯಂತ್ರಣಾಧಿಕಾರಿ ಪ್ರೊ.ಭರತ ಕುಮಾರ್, ಸಹಾಯಕ ರಿಜಿಸ್ಟರ್ ಶ್ರವಣ, ಪಿ.ಆರ್.ಓ ಡಾ.ಗಣಪತಿ ಸಿನ್ನೂರ, ಎ.ಪಿ.ಆರ್.ಓ ಡಾ.ಪ್ರಕಾಶ ಬಾಳಿಕಾಯಿ, ಡಾ.ಸಾಯಿಕೃಷ್ಣ ಡಾ.ಶಾಮಲಾ, ಪ್ರೊ. ಬಸವರಾಜ ಕುಬಕಡ್ಡಿ, ಡಾ.ಜೋಹೆರ್, ಡಾ.ಶ್ರೀಲಕ್ಷ್ಮೀ ಇದ್ದರು.

24 ಜನರಿಗೆ ಪಿಎಚ್‌ಡಿ ಪ್ರದಾನ

ವಿಶ್ವವಿದ್ಯಾಲಯದ 10ನೇ ಘಟಿಕೋತ್ಸವದಲ್ಲಿ ಸುಮಾರು 769 ಜನ ಅಭ್ಯರ್ಥಿಗಳು ಪದವಿ ಒಡೆಯಲು ಅರ್ಹರಾಗಿದ್ದಾರೆ. ಇದರಲ್ಲಿ 197 ಜನ ಪದವಿ, 547 ಜನ ಸ್ನಾತಕೋತ್ತರ ಪದವಿ, 24 ಜನ ಪಿ.ಎಚ್.ಡಿ ಹಾಗು ಓರ್ವ ಅಭ್ಯರ್ಥಿ ಎಂಫಿಲ್ ಪದವಿಗೆ ಅರ್ಹರಾಗಿದ್ದಾರೆ. 22 ಜನರಿಗೆ ಚಿನ್ನದ ಪದಕ ನೀಡಲಾಗುತ್ತಿದ್ದು, ಮಧ್ಯಪ್ರದೇಶ ಮೂಲದ ಬಿ.ಟೆಕ್ ಎಲೆಕ್ಟ್ರಾನಿಕ್ ಕಮ್ಯುನಿಕೇಶನ್ ಎಂಜಿನಿಯರಿಂಗ್ ವಿದ್ಯಾರ್ಥಿನಿ ದಿವ್ಯಾಂಶು ಸಕ್ಸೇನಾ ಪ್ರೊ.ಎ.ಎಂ.ಪಠಾನ್ ಚಿನ್ನದ ಪದಕಕ್ಕೆ ಭಾಜನರಾಗಿದ್ದು, ಬುಧವಾರ ಜರುಗುವ ಘಟಿಕೋತ್ಸವದಲ್ಲಿ ಈ ಎಲ್ಲಾ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರೊ.ಬಟ್ಟು ಸತ್ಯನಾರಾಯಣ ತಿಳಿಸಿದರು.

ಕಾರಂಜಾ ಸಂತ್ರಸ್ತ ರೈತರ ಹೋರಾಟಕ್ಕೆ ತಾರ್ಕಿಕ ಅಂತ್ಯ ಬೆಂಗಳೂರಿನಲ್ಲಿ ಶೀಘ್ರ ಮುಖ್ಯಮಂತ್ರಿ ಸಭೆ

• **ಬೀದರ್:** ಕಾರಂಜಾ ಜಲಾಶಯದ ಮುಳುಗಡೆ ಸಂತ್ರಸ್ತ ರೈತರ ದಶಕಗಳ ಹೋರಾಟಕ್ಕೆ ತಾರ್ಕಿಕ ಅಂತ್ಯ ಸಿಗುವ ಭರವಸೆ ಮೂಡಿದ್ದು, ಈ ಕುರಿತು ಶೀಘ್ರದಲ್ಲೇ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ನಡೆಯುವ ಸಾಧ್ಯತೆ ವ್ಯಕ್ತವಾಗಿದೆ.



ಈ ಹಿನ್ನೆಲೆಯಲ್ಲಿ ಕಾರಂಜಾ ಮುಳುಗಡೆ ಸಂತ್ರಸ್ತರ ಹಿತರಕ್ಷಣಾ ಸಮಿತಿಯ ಪದಾಧಿಕಾರಿಗಳ ಮಹತ್ವದ ಸಮಾಲೋಚನಾ ಸಭೆ ಶನಿವಾರ ಬೀದರ್ ನಗರದಲ್ಲಿ ನಡೆಯಿತು. ಸಭೆಯಲ್ಲಿ ಮುಂದಿನ ಹೋರಾಟದ ಕಾರ್ಯತಂತ್ರ, ಜಿಲ್ಲಾ ಉಸ್ತುವಾರಿ ಸಚಿವರ ಭೇಟಿಯ ರೂಪುರೇಷೆ ಹಾಗೂ ಬೆಂಗಳೂರಿನ ಸಭೆಗೆ ರೈತ ಪ್ರತಿನಿಧಿಗಳನ್ನು ಸಿದ್ಧಪಡಿಸುವ ಬಗ್ಗೆ ಚರ್ಚೆ ನಡೆಸಲಾಯಿತು.

ಇತ್ತೀಚೆಗೆ ಜಿಲ್ಲೆಗೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರಂಜಾ ಸಂತ್ರಸ್ತ ರೈತರ ಅಹವಾಲುಗಳನ್ನು ಆಲಿಸಿ, ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಉನ್ನತ ಮಟ್ಟದ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳುವುದಾಗಿ ಭರವಸೆ ನೀಡಿದ್ದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಹಿರಿಯ ಹೋರಾಟಗಾರ ಲಕ್ಷ್ಮಣ ದಸ್ತಿ ಅವರು, ನಮ್ಮ ಸುದೀರ್ಘ ಹೋರಾಟಕ್ಕೆ ಈಗ ನ್ಯಾಯ ಸಿಗುವ ಆಶಾಭಾವನೆ ಮೂಡಿದೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರ ವಿಶೇಷ ಕಾಳಜಿಯಿಂದ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಸಾಧ್ಯವಾಯಿತು ಎಂದು ಹೇಳಿದರು.

ಮುಖ್ಯಮಂತ್ರಿಗಳು ಈಗಾಗಲೇ ರೈತಮುಖಂಡರೊಂದಿಗೆ ಎರಡುಬಾರಿ ಸಭೆ ನಡೆಸಿರುವುದಾಗಿ ತಿಳಿಸಿದ್ದಾರೆ. ಶೀಘ್ರದಲ್ಲೇ ಸಚಿವರೊಂದಿಗೆ ಚರ್ಚಿಸಿ ರೈತ ಪ್ರತಿನಿಧಿಗಳನ್ನು ಬೆಂಗಳೂರಿಗೆ ಆಹ್ವಾನಿಸಿ ಅಂತಿಮ ಸಭೆ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ಇನ್ನೂ ಸಭೆಯ ದಿನಾಂಕ ನಿಗದಿಪಡಿಸಲು ಹಾಗೂ ಮುಂದಿನ ಪ್ರಕ್ರಿಯೆಗಳ ಬಗ್ಗೆ ಚರ್ಚಿಸಲು ಸಮಿತಿ ಶೀಘ್ರದಲ್ಲೇ ಸಚಿವ ಈಶ್ವರ ಖಂಡ್ರೆ ಅವರನ್ನು ಭೇಟಿಯಾಗಲಿದ್ದು, ಅವರ ಮೂಲಕ ಬೆಂಗಳೂರಿನ ಸಭೆಯ ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಸಮಿತಿಯ ಪ್ರಮುಖರಾದ ವಿನಯ ಕುಮಾರ ಮಾಳಗೆ, ರೋಹನ್ ಕುಮಾರ, ಮಹೇಶ ಗೋರನಾಳ್ಕರ್, ರಾಜಪ್ಪ ಕಮಾಲ್ಪುರೆ, ರಾಜಶೇಖರ ಖೇಣಿ ರಂಜೋಳ, ಮಾದಪ್ಪ ಸಂಗೋಳಗಿ, ಸಂಗಾರೆಡ್ಡಿ, ರೇವಣಪ್ಪ, ಲಕ್ಷ್ಮೀ ಮಾದಪ್ಪ ಹಾಗೂ ವಿದ್ಯಾವತಿ ಸಂಗಾರೆಡ್ಡಿ ಸೇರಿದಂತೆ ಅನೇಕ ರೈತ ಮುಖಂಡರು ಮತ್ತು ಪ್ರತಿನಿಧಿಗಳು ಉಪಸ್ಥಿರಿದ್ದರು.

ಕಳಪೆ ಕಾಮಗಾರಿ ವಿರುದ್ಧ ಸಚಿವ ವೈದ್ಯ ಆಕ್ರೋಶ

• **ಶಿರಸಿ:** ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಡಿ ರಸ್ತೆ ನಿರ್ವಹಣೆ ಮಾಡುತ್ತಿರುವ ಐಆರ್‌ಬಿ ಸಂಸ್ಥೆಯ ಕಳಪೆ ಕಾಮಗಾರಿ ವಿರುದ್ಧ ಇಲ್ಲಿನ ರಾಜಕಾರಣಿಗಳು ತುಟಿ ಬಿಚ್ಚುತ್ತಿಲ್ಲ. ಬಹುಶಃ ಅವರು ಸಂಸ್ಥೆಗೆ ಮಾರಿಕೊಂಡಿರಬಹುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ತೀವ್ರವಾಗಿ ಆಕ್ಷೇಪಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು.

ಜಿಲ್ಲೆಯ ಘಟ್ಟದ ಕೆಳಗಿನ ಭಾಗದಲ್ಲಿ ಐಆರ್‌ಬಿ ಕಾಮಗಾರಿ ಅತ್ಯಂತ ಅವ್ಯವಸ್ಥಿತವಾಗಿದ್ದರೂ ಯಾರೂ ಪ್ರಶ್ನಿಸುತ್ತಿಲ್ಲ. ಶಿರಸಿ-ಹಾವೇರಿ ರಸ್ತೆಯೂ ಸಾರ್ವಜನಿಕರಿಗೆ ತಲೆನೋವಾಗಿದೆ. ಕೇಂದ್ರದ ವ್ಯಾಪ್ತಿಯ ಈ ರಸ್ತೆಗಳನ್ನು ನಿರ್ವಹಿಸಲು ಸಾಧ್ಯವಾಗದಿದ್ದರೆ ರಾಜ್ಯ ಸರ್ಕಾರಕ್ಕೆ ವಹಿಸಲಿ. ಸ್ಥಳೀಯ ಸಮಸ್ಯೆಗಳ ಬಗ್ಗೆ ಸಂಸದರು ಧ್ವನಿ ಎತ್ತಲಿ ಎಂದು ಒತ್ತಾಯಿಸಿದರು.

ಜಿಲ್ಲೆಯಲ್ಲಿ ಕುಡಿಯುವ ನೀರು ಮತ್ತು ಮೇವಿನ ಕೊರತೆಯಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಬಾಡಿಗೆ ಕೊಳವೆ ಬಾವಿ ಹಾಗೂ ಪಂಚಾಯತ್ ಮೂಲಕ ನೀರು ಪೂರೈಸಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಸಿಎಂ ಮಟ್ಟದಲ್ಲೂ ಈ ಬಗ್ಗೆ ಸಭೆಗಳು ನಡೆದಿವೆ ಎಂದು ಮಾಹಿತಿ ನೀಡಿದರು.

ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಬೇಡ್ತಿ-ಅಘನಾಶಿನಿ ಯೋಜನೆ ಜಾರಿಯಾಗುವುದಿಲ್ಲ ಎಂಬ ವಿಶ್ವಾಸವಿದೆ. ಈ ಹೋರಾಟಕ್ಕೆ ಸ್ವರ್ಣವಲ್ಲೀ ಶ್ರೀಗಳ ಆಶೀರ್ವಾದವಿದ್ದು, ರಾಜ್ಯದ ಪಾಲು ಕೇವಲ ಶೇ.10 ರಷ್ಟಿದೆ. ಕೇಂದ್ರದಲ್ಲಿ ಯೋಜನೆ ತಡೆಯಲು ಸಂಸದರು ಶ್ರಮಿಸಲಿ ಎಂದರು. ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಸತೀಶ ನಾಯ್ಕ ಉಪಸ್ಥಿತರಿದ್ದರು.

ಭೂ ಸ್ವಾಧೀನ ಸಂತ್ರಸ್ತರಿಗೆ ಲೋಕ ಅದಾಲತ್: ಎಂಬಿಪಾ

• **ವಿಜಯಪುರ:** ಕೃಷ್ಣ ಮೇಲ್ದಂಡೆ ಯೋಜನೆ ಭೂ ಸ್ವಾಧೀನಕ್ಕೆ ಒಳಪಡುವ ಸಂತ್ರಸ್ತರಿಗೆ ನೆರವಾಗಲು ಏಪ್ರಿಲ್‌ನಿಂದ ಜುಲೈ 2026ರ ವರೆಗೆ ಲೋಕ ಅದಾಲತ್ ನಡೆಸಲಾಗುತ್ತಿದ್ದು, ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.



ಈ ಕುರಿತು ಪ್ರಕಟಣೆ ನೀಡಿದ ಅವರು, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಈ ಲೋಕ ಅದಾಲತ್ ಆಯೋಜಿಸಿದೆ. ಭೂಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಿ ಮತ್ತು ಹೆಚ್ಚಿನ ಪರಿಹಾರಕ್ಕಾಗಿ ನ್ಯಾಯಾಲಯದ ಮೊರೆ ಹೋಗಿರುವ ರೈತರು ಈ ಲೋಕ ಅದಾಲತ್‌ನಲ್ಲಿ ಪಾಲ್ಗೊಂಡು ಪರಸ್ಪರ ಒಪ್ಪಿಗೆ ಮೇರೆಗೆ ಪ್ರಕರಣವನ್ನು ತಕ್ಷಣ ಇತ್ಯರ್ಥ ಪಡಿಸಿಕೊಳ್ಳಬಹುದಾಗಿದೆ.

ಇದರಿಂದ ನ್ಯಾಯಕ್ಕಾಗಿ ಹಲವು ತಿಂಗಳವರೆಗೆ ನ್ಯಾಯಾಲಯಗಳಿಗೆ ಅಲೆದಾಡುವುದು, ವಿಚಾರಣೆಗೆ ಕಾಯುವುದು ತಪ್ಪಲಿದೆ. ಒಂದೇ ದಿನದಲ್ಲಿ ಪ್ರಕರಣ ಇತ್ಯರ್ಥವಾಗುವುದರಿಂದ ರೈತರ ಅಮೂಲ್ಯ ಸಮಯ ಉಳಿತಾಯವಾಗಲಿದೆ. ಲೋಕ ಅದಾಲತ್‌ನಲ್ಲಿ ಪ್ರಕರಣ ಇತ್ಯರ್ಥ ಪ್ರಕ್ರಿಯೆ ಸರಳವಾಗಿದ್ದು, ತಕ್ಷಣ ಇತ್ಯರ್ಥವಾಗುವುದರಿಂದ ರೈತರು ಸಂಕಷ್ಟದಿಂದ ಮುಕ್ತರಾಗಿ ನೆಮ್ಮದಿಯ ಜೀವನ ಸಾಗಿಸಬಹುದಾಗಿದೆ.

ವಿಜಯಪುರ ಒಂದನೇ ಮತ್ತು ಮೂರನೇ ಹೆಚ್ಚುವರಿ ನ್ಯಾಯಾಲಯಗಳಲ್ಲಿ ಏಪ್ರಿಲ್‌ನಿಂದ ಮತ್ತು ಮೇ ವರೆಗೆ ಮಧ್ಯಾಹ್ನ 12.30 ರಿಂದ 1.30ರ ವರೆಗೆ ಮತ್ತು ಜೂನ್ ಹಾಗೂ ಜುಲೈ 2026ರ ವರೆಗೆ ಸಂಜೆ 4.45 ರಿಂದ 5.45ರ ವರೆಗೆ ಪ್ರಕರಣಗಳ ಇತ್ಯರ್ಥ ಪ್ರಕ್ರಿಯೆ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧಿಸಿದ ಭೂಸ್ವಾಧೀನ ಅಧಿಕಾರಿಗಳ ಕಚೇರಿಗಳನ್ನು ತಕ್ಷಣ ಸಂಪರ್ಕಿಸುವಂತೆ ತಿಳಿಸಿದ್ದಾರೆ.

ಹ್ಯಾಮರ್ ದಾಳಿ: ವ್ಯಕ್ತಿ ಸಾವು

• **ಬೆಳಗಾವಿ:** ನಗರದ ದರ್ಬಾರ್ ಗಲ್ಲಿಯಲ್ಲಿ ಎರಡು ದಿನಗಳ ಹಿಂದೆ ನಡೆದ ಹಲ್ಲೆ ಪ್ರಕರಣದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಮೃತರನ್ನು ವೀರಭದ್ರ ನಗರ ನಿವಾಸಿ ಫಜಲ್ ದಫೇದಾರ್ (56) ಎಂದು ಗುರುತಿಸಲಾಗಿದೆ. ಅಂಗಡಿಗೆ ಬಂದಿದ್ದ ವೇಳೆ ಅವರನ್ನು ಹಿಂಬಾಲಿಸಿಕೊಂಡು ಬಂದ ಯುವಕ ಮಾರುಕಟ್ಟೆ ಪ್ರದೇಶದಲ್ಲೇ ಹ್ಯಾಮರ್‌ನಿಂದ ಹಲ್ಲೆ ನಡೆಸಿದ್ದಾನೆ.

ಅಯಾನ್ ನಾಯಕವಾಡಿ (26) ಎಂಬ ಯುವಕ ಈ ಕೃತ್ಯ ಎಸಗಿದ್ದು, ಸಾರ್ವಜನಿಕವಾಗಿ ದಾಳಿ ನಡೆಸಿ ಪರಾರಿಯಾಗಿದ್ದ. ತಲೆಗೆ ಗಂಭೀರ ಪೆಟ್ಟು ಬಿದ್ದ ಫಜಲ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಇಂದು ಮೃತಪಟ್ಟಿದ್ದಾರೆ. ಪ್ರಕರಣ ಸಂಬಂಧ ಮಾರ್ಕೆಟ್ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದು, ಪ್ರಕರಣ ದಾಖಲಾಗಿದೆ.

ಕಿರುಸುದ್ದಿ

ಬಸವೇಶ್ವರ ಜಯಂತಿ ಇಂದು

ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಏ.20 ರಂದು ಬೆಳಗ್ಗೆ 11ಕ್ಕೆ ಬಸವೇಶ್ವರರ ಜಯಂತಿ ಕಾರ್ಯಕ್ರಮ ಆಚರಿಸಲಾಗುತ್ತಿದೆ. ಬೆಳಗ್ಗೆ 8ಕ್ಕೆ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದಿಂದ ಭೀಷ್ಮಕೆರೆಯ ಬಸವೇಶ್ವರ ಪುತ್ಥಳಿ ಆವರಣದವರೆಗೆ ಮೆರವಣಿಗೆ ಕಾರ್ಯಕ್ರಮ ಇರುವುದರಿಂದ ಮೆರವಣಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಹಾಗೂ ನಗರದ ಜಿಲ್ಲಾಡಳಿತ ಭವನದಲ್ಲಿ ಜರುಗುವ ವೇದಿಕೆ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಕಚೇರಿ ಸಿಬ್ಬಂದಿಯೊಡನೆ ಹಾಜರಿರಲು ಅಪರ ಜಿಲ್ಲಾಧಿಕಾರಿ ಡಾ.ದುರಗೇಶ್ ಕೆ.ಆರ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪೂರ್ವಭಾವಿ ಸಭೆ

ಗದಗ: ಸರ್ಕಾರದ ಆದೇಶದನಯ ಮೇ 1ರಂದು ನಡೆಯುವ ಭಗವಾನ್ ಬುದ್ಧ ಜಯಂತಿ ಕಾರ್ಯಕ್ರಮದ ಅಂಗವಾಗಿ ಏ.22 ರಂದು ಬೆಳಗ್ಗೆ 10.30ಕ್ಕೆ ಅಪರ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ. ಸಭೆಗೆ ಸಲಹೆ/ಅಭಿಪ್ರಾಯ ನೀಡಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಟೆಲಿಸ್ಕೋಪ್ ದೇಣಿಗೆ

ಗದಗ: ಐಎಂಎ ಶತಮಾನೋತ್ಸವದ ಸಂಭ್ರಮಾಚರಣೆಯ ಅಂಗವಾಗಿ ಐಎಂಎ ಮಾಜಿ ಅಧ್ಯಕ್ಷರೂ ನೂರಾನಿ ಚಾರಿಟೇಬಲ್ ಟ್ರಸ್ಟ್‌ನ ಚೇರಮನ್ ತಜ್ಞ ವೈದ್ಯ ಡಾ.ಪ್ಯಾರಅಲಿ ನೂರಾನಿ ಬೆಟಗೇರಿಯ ಖಗೋಳ ತಾರಾಲಯಕ್ಕೆ ಉತ್ಕೃಷ್ಟ ಗುಣಮಟ್ಟದ ಅತ್ಯಾಧುನಿಕ ಟೆಲಿಸ್ಕೋಪ್‌ನ್ನು ದೇಣಿಗೆಯಾಗಿ ನೀಡಿದ್ದಾರೆ. ಡಾ.ನೂರಾನಿ ಅವರು ಮಕ್ಕಳಲ್ಲಿ ವಿಜ್ಞಾನ ಹಾಗೂ ಖಗೋಳದ ಬಗ್ಗೆ ಆಸಕ್ತಿ ಹೆಚ್ಚಿಸುವ, ಅವರಲ್ಲಿ ವೈಜ್ಞಾನಿಕ ಹಾಗೂ ವೈಚಾರಿಕ ಭಾವನೆಗಳನ್ನು ಬೆಳೆಸಿ ವೈಜ್ಞಾನಿಕ ಲೋಕವನ್ನು ಮಕ್ಕಳು ಕುತೂಹಲದಿಂದ ವೀಕ್ಷಿಸಲೆಂಬ ಸದುದ್ದೇಶದಿಂದ ತಾರಾಲಯಕ್ಕೆ ಆಗಮಿಸುವ ವಿದ್ಯಾರ್ಥಿಗಳ ಖಗೋಳ ವೀಕ್ಷಣೆಗೆ ಆಕಾಶಕಾಯಗಳ ಕುತೂಹಲಭರಿತ ಅಧ್ಯಯನಕ್ಕೆ ಹೆಚ್ಚು ಅನುಕೂಲವಾಗಲಿದೆ ಎಂದರು. ತಾರಾಲಯಕ್ಕೆ ಟೆಲಿಸ್ಕೋಪ್ ನೀಡಿದ ಡಾ.ಪ್ಯಾರಅಲಿ ನೂರಾನಿ ಅವರಿಗೆ ಐಎಂಎ ಅಧ್ಯಕ್ಷ ಡಾ. ಶ್ರೀಧರ ಕುರಡಗಿ, ಡಿಡಿಪಿಐ ಆರ್.ಎಸ್.ಬುರಡಿ, ಬಿಇಒ ಆರ್.ವಿ. ಶೆಟ್ಟೆಪ್ಪನವರ, ಸಮನ್ವಯ ಅಧಿಕಾರಿ ಎಸ್.ಪಿ.ಪ್ರಭಯ್ಯನಮಠ ಅಭಿನಂದಿಸಿದ್ದಾರೆ. ವಿಜ್ಞಾನಿ ದಾಸಗುಪ್ತಾ, ಹೈಟೆನ್ ಸಂಸ್ಥೆಯ ಸಾಯಿಕುಮಾರ, ತಾರಾಲಯದ ಉಸ್ತುವಾರಿ ಸರೋಜಿನಿ ಬಂಡಿವಡ್ಡರ, ಮೊಹ್ಮದ್‌ಶಫಿ ಯರಗುಡಿ, ಎಂ.ಎಚ್.ಸವದತ್ತಿ, ಶ್ಯಾಮ್ ಲಾಂಡೆ ಇದ್ದರು.

ಶಂಕರಾಚಾರ್ಯರ ಜಯಂತಿ ನಾಳೆ

ಗದಗ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆದಿ ಜಗದ್ಗುರು ಶಂಕರಾಚಾರ್ಯರ ಜಯಂತಿ ನಗರದ ಸಂಭಾಪುರ ರಸ್ತೆಯಲ್ಲಿನ ಶಂಕರಮಠದಲ್ಲಿ ಏ.21 ರಂದು ಬೆಳಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ತಂಗಡಗಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ವಿಧಾನ ಪರಿಷತ್ ಶಾಸಕ ಹಾಗೂ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ , ಶಾಸಕ ಜಿ.ಎಸ್.ಪಾಟೀಲ, ಸಂಸದರಾದ ಬಸವರಾಜ ಬೊಮ್ಮಾಯಿ , ಪಿ.ಸಿ.ಗದ್ದಿಗೌಡ್ರ, ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಜಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಿ.ಬಿ.ಅಸೂಟಿ ಆಗಮಿಸುವರು.

ವಿಶೇಷ ಆಹ್ವಾನಿತರಾಗಿ ಯೋಜನೆ ಕಾರ್ಯಕ್ರಮಗಳು, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕಾರ್ಯದರ್ಶಿಗಳು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತೆ ಜಾನಕಿ ಕೆ.ಎಂ, ಆಗಮಿಸಲಿದ್ದಾರೆ. ಎಲ್.ಐ.ಸಿ.ಹಿರಿಯ ಅಭಿವೃದ್ಧಿ ಅಧಿಕಾರಿಗಳು ಹಾಗೂ ಸಂಸ್ಕೃತಿ ಚಿಂತಕಿ ಎಂ.ಟಿ.ಭಟ್ ಉಪನ್ಯಾಸ ನೀಡಲಿದ್ದಾರೆ. ಜಿಲ್ಲಾಧಿಕಾರಿ ಹಾಗೂ ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಎನ್. ಶ್ರೀಧರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್, ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ದಂಡಾಧಿಕಾರಿ ಡಾ.ದುರಗೇಶ್ ಕೆ.ಆರ್. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಸವರಾಜ ಬಳ್ಳಾರಿ ತಿಳಿಸಿದ್ದಾರೆ.



ನರಗುಂದ: ತಾಲೂಕಿನ ಚಿಕ್ಕನರಗುಂದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಕಲಾ ವಿಭಾಗದಲ್ಲಿ -ಮಲ್ಲವ್ವ ಗಣೇಶಿ, ಕವನ ಅಂಗಡಿ, ಮೇಘಾ ಗಾಣಿಗೇರ, ಆಕಾಶ ಹಡಪದ, ವಿಜ್ಞಾನ ವಿಭಾಗದಲ್ಲಿ ಆಲಿಯಾ ಮೋಮಿನ, ಲಕ್ಷ್ಮೀ ನರಸನ್ನವರ, ಕವಿತಾ ಕಲಹಾಳ ಹಾಗೂ ಕನ್ನಡ ವಿಷಯದಲ್ಲಿ ಚೈತ್ರ ಓದೇಕಾರ ಹಾಗೂ ಜೀವಶಾಸ್ತ್ರ ವಿಷಯದಲ್ಲಿ ರಕ್ಷಿತಾ ಚರಂತಿಮಠ ಇವರು ನೂರಕ್ಕೆ 100 ಫಲಿತಾಂಶ ಸಾಧಿಸಿದ್ದರಿಂದ ಸನ್ಮಾನಿಸಲಾಯಿತು.

ಮಾಗಿ ಉಳುಮೆ ಕೈಗೊಳ್ಳಲು ರೈತರಿಗೆ ಸಲಹೆ

ಗದಗ: ಮುಂಗಾರು ಹಂಗಾಮಿಗೆ ಭೂಮಿ ಸಿದ್ಧಪಡಿಸಿ ಹದಗೊಳಿಸಲು ಜಿಲ್ಲೆಯ ಎಲ್ಲಾ ರೈತರು ಮಾಗಿ ಉಳುಮೆ ಕೈಗೊಳ್ಳಬೇಕು. ರೈತರು ತಮ್ಮ ಕ್ಷೇತ್ರಗಳ ಮಣ್ಣಿನ ಪರೀಕ್ಷೆ ಮಾಡಿಸಿ ಅಗತ್ಯ ಪೋಷಕಾಂಶಗಳ ಪ್ರಮಾಣ ತಿಳಿದುಕೊಳ್ಳಬೇಕು. ಮಣ್ಣು ಪರೀಕ್ಷೆ ಆಧಾರದ ಮೇಲೆ ಬೆಳೆಗಳಿಗೆ ಗೊಬ್ಬರ ಪೂರೈಕೆ ಮಾಡಬೇಕು. ಮಣ್ಣನ್ನು ಶಕ್ತಿಯುತವಾಗಿಸಲು ತಪ್ಪದೇ ಸಾವಯವ ಗೊಬ್ಬರಗಳನ್ನು ಭೂಮಿಗೆ ಸೇರಿಸಬೇಕು. ಇದರಿಂದ ಮಣ್ಣಿನಲ್ಲಿರುವ ಲಾಭದಾಯಕ ಸೂಕ್ಷ್ಮಾಣುಜೀವಿಗಳಿಗೆ ಆಹಾರ ಒದಗಿಸಿದಂತಾಗಿ ಅವುಗಳ ಸಂಖ್ಯೆಯು ಹೆಚ್ಚಾಗುತ್ತದೆ ಹಾಗೂ ರಸಗೊಬ್ಬರಗಳ ಉಪಯೋಗ ಕಡಿಮೆ ಮಾಡಬಹುದಾಗಿದೆ. ಸ್ಥಳೀಯ ಹವಾಮಾನಕ್ಕನುಗುಣವಾಗಿ ಬೆಳೆ, ತಳಿಗಳನ್ನು ಆಯ್ದುಕೊಳ್ಳಬೇಕು. ಪ್ರಮಾಣಿತ ಮತ್ತು ಶಿಫಾರಸ್ಸು ಮಾಡಿದ ಬೀಜಗಳನ್ನು ಮಾತ್ರ ಬಳಸಬೇಕು. ತಮ್ಮಲ್ಲಿರುವ ಕೃಷಿ ಸಂಬಂಧಿತ ಯಂತ್ರೋಪಕರಣ ದುರಸ್ತಿಗೊಳಿಸಿಕೊಂಡು ಸುಸ್ಥಿತಿಯಲ್ಲಿರಿಸಿಕೊಳ್ಳಬೇಕು. ಮಣ್ಣಿನ ಸವಕಳಿಯನ್ನು ತಪ್ಪಿಸಲು ಹಾಗೂ ನೀರಿನ ಹರಿಯುವಿಕೆ ಕಡಿಮೆ ಮಾಡಲು ಇಳಿಜಾರಿಗೆ ಅಡ್ಡಲಾಗಿ ಬದು ನಿರ್ಮಾಣ ಕೈಗೊಳ್ಳುವುದು, ಹಿಂಗಾರು ಬೆಳೆ ಮಾತ್ರ ಬೆಳೆಯಬೇಕೆಂದಿರುವ ಜಮೀನಿನಲ್ಲಿ ಇಳುಕಲಿಗೆ ಅಡ್ಡವಾಗಿ ರಂಟೆ ಹೊಡೆದು ಇಲ್ಲವೇ ಚೌಕು ಮಡಿಗಳನ್ನು ಮಾಡುವುದರಿಂದ ಮಣ್ಣಿನಲ್ಲಿ ನೀರಿನ, ತೇವಾಂಶದ ಸಂಗ್ರಹ ಹೆಚ್ಚಿಗೆ ಆಗಿ, ಹಿಂಗಾರು ಬೆಳೆಗಳ ಇಳುವರಿ ಹೆಚ್ಚಿಗೆ ಆಗುವುದು, ಹಿಂದಿನ ಹಂಗಾಮಿನ ಬೆಳೆಗಳ ಉಳಿಕೆಗಳನ್ನು ಸುಡಬಾರದು. ಅವುಗಳನ್ನು ಕಂಪೋಸ್ಟ್ ಮಾಡಲು ಅಥವಾ ಎರೆಹುಳು ಗೊಬ್ಬರ ತಯಾರಿಸಲು ಉಪಯೋಗಿಸಬೇಕು. ಎರೆಹುಳು ತೊಟ್ಟಿಯಲ್ಲಿ ಕನಿಷ್ಠ ಶೇ.75 ತೇವಾಂಶ ಇರುವ ಹಾಗೆ ನೋಡಿಕೊಳ್ಳಬೇಕೆಂದು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮುಂಡರಗಿ: ತಾಲೂಕಿನ ಜಂತಲಿ-ಶಿರೂರ ಗ್ರಾಮದ ರಾಮನವಮಿ ನಿಮಿತ್ತ ಮಾರುತೇಶ್ವರ ಜಾತ್ರಾಮಹೋತ್ಸವ ಅಂಗವಾಗಿ 100 ಕೆಜಿ ಗೋಧಿ ಚೀಲ ಮತ್ತು 100 ಕೆಜಿ ಉಸಕಿನಕೊಡ ಹೊತ್ತು ಗ್ರಾಮದ ಮಧ್ಯಭಾಗದಲ್ಲಿರುವ ಬಸವೇಶ್ವರ ದೇವಸ್ಥಾನದಿಂದ ಮಾರುತೇಶ್ವರ ದೇವಸ್ಥಾನದವರೆಗೆ ಯುವಕರಾದ ವಿಜಯಕುಮಾರ ಹುಯಿಲಗೋಳ, ಹನುಮಂತ ಹುಯಿಲಗೋಳ, ನಾಗರಾಜ ಚಿಗರಿ ಧೀಡ ನಮಸ್ಕಾರ ಹಾಕುವುದರೊಂದಿಗೆ ಹರಕೆ ತೀರಿಸದರು. ಏ.20ರಂದು ಸಂಜೆ ಕೇರಿಕೋಡಿ ಬಸವೇಶ್ವರ ದೇವರ ಮಹಾರಥೋತ್ಸವ ಜರಗುವುದು.

ಅಧಿಕಾರಿಗಳ ವಿರುದ್ಧ ಶಾಸಕರ ಆಕ್ರೋಶ | ಮೇವು ಸಂಗ್ರಹಕ್ಕೆ ಸೂಚನೆ

ಕುಡಿಯುವ ನೀರು ಸಮರ್ಪಕ ಒದಗಿಸಿ



ರೋಣ: ಬೇಸಿಗೆ ಸಂದರ್ಭದಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ ಶಹರ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಕುಡಿಯುವ ನೀರಿನ ತೊಂದರೆಯಾಗದಂತೆ ನಿಗಾ ವಹಿಸಬೇಕು ಎಂದು ರಾಜ್ಯ ಖನಿಜ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಜಿ.ಎಸ್ .ಪಾಟೀಲ ಹೇಳಿದರು.

ಅವರು ಭಾನುವಾರ ತಾಲೂಕು ಪಂಚಾಯತ್ ಸಭಾಭವನದಲ್ಲಿ ಜರುಗಿದ ರೋಣ ಮತಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಜ್ಯ ಸರ್ಕಾರ ಸಾವಿರಾರು ಕೋಟಿ ರೂ.ಗಳನ್ನು ಖರ್ಚು ಮಾಡಿ ಬಹು ಹಳ್ಳಿ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಅಲ್ಲಿಂದ ಸಮರ್ಪಕವಾಗಿ ನೀರು ಸರಬರಾಜು ಆಗುತ್ತಿಲ್ಲ ಎಂಬ ಕೂಗು ಸಾರ್ವಜನಿಕರಿಂದ ಕೇಳಿ ಬರುತ್ತಿದೆ. ಅಲ್ಲದೇ ಡಿಬಿಒಟಿ ನಿರ್ವಹಣೆಗೆ ಸರ್ಕಾರ ವರ್ಷಕ್ಕೆ 8 ಕೋಟಿ ರೂ.ಗಳ ಅನುದಾನವನ್ನು ಸಹ ನೀಡುತ್ತಿದೆ. ಹೀಗಿರುವಾಗ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ ಅಂದರೆ ಏನರ್ಥ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ ಅವರು, ಸಂಬಂಧಿಸಿದ ಅಭಿಯಂತರರನ್ನು ತರಾಟೆಗೆ ತೆಗೆದುಕೊಂಡರು.

ತಹಶೀಲ್ದಾರ್ ನಾಗರಾಜ ಕೆ. ಸೇರಿದಂತೆ ಗಜೇಂದ್ರಗಡ, ಗದಗ, ಮುಂಡರಗಿ ತಾಲೂಕಿನ ತಹಶೀಲ್ದಾರರು, ತಾಪಂ ಇಒ ಹಾಗೂ ಅಧಿಕಾರಿಗಳು, ಪಿಡಿಒಗಳು ಉಪಸ್ಥಿತರಿದ್ದರು.

- ತಹಶೀಲ್ದಾರ್ ನೇತೃತ್ವದಲ್ಲಿ ತಂಡ ರಚನೆ ಮಾಡಿಕೊಳ್ಳಿ ಗ್ರಾಮಸ್ಥರ ಮನವೊಲಿಸಿ ಬೇಸಿಗೆಯಿರುವದರಿಂದ ಎಲ್ಲ ಗ್ರಾಮಗಳಿಗೂ ನೀರು ಒದಗಿಸುವುದು ಮಾನವೀಯತೆಯ ಭಾಗ ಜನರಿಗೆ ತಿಳುವಳಿಕೆ ನೀಡುವ ಕಾರ್ಯ ಮೊದಲು ಮಾಡಿ
- ಯಾವುದೇ ಕಾರಣಕ್ಕೂ ಕೊಳೆಬಾವಿ ಕೊರೆಸಲು ಸರ್ಕಾರ ಅನುಮತಿ ನಿಡುವುದಿಲ್ಲ
- ಈಗ ಲಭ್ಯವಿರುವ ನೀರನ್ನು ಮಿತವಾಗಿ ಬಳಸಿ ಮತ್ತು ಜನರಿಗೆ ತೊಂದರೆಯಾಗದಂತೆ ಕ್ರಮಕೈಗೊಳ್ಳಿ
- ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸೂಚಿಸಿದ ಶಾಸಕ ಜಿ.ಎಸ್.ಪಾಟೀಲ
- 46 ವಾರಗಳಿಗೆ ಆಗುವಷ್ಟು ಮೇವು ಸಂಗ್ರಹವಿದೆ ಎಂದ ಪಶುವೈದ್ಯಾಧಿಕಾರಿ ಡಾ. ಕುರಹಟ್ಟಿ

ದಿನಕ್ಕೆ 75 ಲೀಟರ್ ನೀಡಿ

ರೋಣ ತಾಲೂಕಿನ ಸವಡಿ, ಅಬ್ಬಿಗೇರಿ ಸೇರಿ ಅನೇಕ ಗ್ರಾಮಗಳಲ್ಲಿ ಲಭ್ಯತೆಗೆ ಅನುಸಾರವಾಗಿ ನೀರು ಸಿಗುತ್ತಿಲ್ಲ ಎಂಬ ವಾದ ಕೇಳಿಬರುತ್ತಿದೆ ಎಂದಾಗ ಪಿಡಿಒ ಲೋಹಿತ್ ಅವರು ಡಿಬಿಒಟಿ ಮೂಲಕ ಅಗತ್ಯಕ್ಕೆ ತಕ್ಕಂತೆ ನೀರು ಪೂರೈಕೆಯಾಗುತ್ತಿಲ್ಲ, ಆದರೂ ಜನರಿಗೆ ತೊಂದರೆಯಾಗದಂತೆ ನಿಗಾವಹಿಸಲಾಗಿದೆ ಎಂದರು. ಶಾಸಕ ಜಿ.ಎಸ್ .ಪಾಟೀಲ ಅವರು ನಿಯಮಾನುಸಾರ ಓರ್ವ ವ್ಯಕ್ತಿಗೆ ದಿನಕ್ಕೆ 75 ಲೀಟರ್ ಕೊಡಬೇಕು ಎಂಬುದಿದೆ. ಆದರೆ ಡಿಬಿಒಟಿ ನಿರ್ವಹಣೆ ಮಾಡುವವರು ನಿಷ್ಕಾಳಜಿ ವಹಿಸುತ್ತಿದ್ದರು. ಅಧಿಕಾರಿಗಳು ಸುಮ್ಮನಿರುವುದು ಸರಿಯಲ್ಲ ಎಂದು ತಮ್ಮ ಅಸಮಾಧಾನ ಹೊರಹಾಕಿದರು.

ಶೇ.30ರಷ್ಟು ನೀರು ಪೂರೈಕೆ

ತಾಪಂ ಇಒ ಚಂದ್ರಶೇಖರ ಕಂದಕೂರ ಅವರು ಡಿಬಿಒಟಿ ನಿರ್ವಹಣೆ ಮಾಡುವ ಅಭಿಯಂತರರು ಗ್ರಾಮಕ್ಕೆ ಬೇಕಾಗಿರುವ ಸಮರ್ಪಕ ನೀರನ್ನು ಒದಗಿಸದೆಯಿರುವುದು ಸಮಸ್ಯೆ ಉದ್ಭವಿಸಲು ಕಾರಣವಾಗಿದೆ. ಅಬ್ಬಿಗೇರಿ ಗ್ರಾಮಕ್ಕೆ 6 ಲಕ್ಷ ಲೀಟರ್ ನೀರು ಪೂರೈಸಬೇಕು. ಅಷ್ಟೊಂದು ಅವರು ಪೂರೈಸುತ್ತಿಲ್ಲ, ಅರ್ಧಕ್ಕಿಂತ ಕಡಿಮೆ ಅಂದರೆ ಶೇ.30ರಷ್ಟು ನೀರನ್ನು ಪೂರೈಸಿದರೆ ಸಾಕಾಗಲ್ಲ ಎಂದಾಗ, ಡಿಬಿಒಟಿ ಅಭಿಯಂತರ ಮಲ್ಲಾಪೂರ ಅವರು ಕೊತಬಾಳ ಗ್ರಾಮಗಳಲ್ಲಿ ಮುಖ್ಯ ಪೈಪ್‌ಲೈನ್ ಅಳವಡಿಸಲಾಗಿದೆ. ಆ ಗ್ರಾಮದವರು ಹೆಚ್ಚುವರಿ ನೀರು ಪಡೆದುಕೊಳ್ಳುತ್ತಿರುವ ಪರಿಣಾಮ ಮುಂದಿನ ಗ್ರಾಮಗಳಿಗೆ ಸಮರ್ಪಕ ನೀರು ಪೂರೈಸಲು ಕಷ್ಟವಾಗುತ್ತಿದೆ ಎಂದರು.

> ರೋಣ ತಾಲೂಕಿನ ಬಾಸಾಲಾಪೂರ, ಸವಡಿ, ಅಬ್ಬಿಗೇರಿ, ಗಜೇಂದ್ರಗಡ ತಾಲೂಕಿನ ಗುಳಗುಳಿ, ರಾಂಪೂರ, ಮುಂಡರಗಿ ತಾಲೂಕಿನ ತಿಮ್ಮಾಪೂರ ಗ್ರಾಮಗಳಲ್ಲಿ ನೀರಿನ ಸಮಸ್ಯೆಯಿದೆ ಎಂದು ಅಲ್ಲಿನ ಜನರು ಹೇಳುತ್ತಾರೆ. ಅಧಿಕಾರಿಗಳು ಗ್ರಾಮಗಳಿಗೆ ತೆರಳಿ ಸಮಸ್ಯೆ ನಿವಾರಿಸಬೇಕು. ಕುಡಿಯುವ ನೀರು ಪೂರೈಕೆಗೆ ಸಮಸ್ಯೆ ಸೃಷ್ಟಿಸಿದರೆ ಕ್ರಮಕೈಗೊಳ್ಳಿ.
> ■ ಜಿ.ಎಸ್.ಪಾಟೀಲ, ಶಾಸಕ

ತಾಲೂಕಿನ ಅಭಿವೃದ್ಧಿಗೆ ಶ್ರಮ: ಕೋನರಡ್ಡಿ

ನವಲಗುಂದ: ಗ್ರಾಮಸ್ಥರ ಸಮುದಾಯ ಭವನ ನಿರ್ಮಾಣವಾಗಬೇಕು ಎಂಬುದು ಬಹುದಿನದ ಕನಸಾಗಿತ್ತು. ಕೊಟ್ಟ ಮಾತಿನಂತೆ 50 ಲಕ್ಷ ರೂ. ಅನುದಾನ ತಂದು ಭೂಮಿಪೂಜೆ ಮಾಡುತ್ತಿರುವುದು ಹೆಮ್ಮೆಯಯಾಗಿದೆ ಎಂದು ಶಾಸಕ ಎನ್. ಎಚ್. ಕೋನರಡ್ಡಿ ಹೇಳಿದರು.

ಅವರು ತಾಲೂಕಿನ ಕೊಂಗವಾಡ ಗ್ರಾಮದಲ್ಲಿ ನಿರ್ಮಿತ ಕೇಂದ್ರ ಯೋಜನೆಯಲ್ಲಿ ರೂ. 20 ಲಕ್ಷ ವೆಚ್ಚದಲ್ಲಿ ಕಲ್ಮೇಶ್ವರ ದೇವಸ್ಥಾನ ಕಟ್ಟಡ ಭೂಮಿಪೂಜೆ ಹಾಗೂ ಶ್ರೀ ಬೀರಲಿಂಗೇಶ್ವರ ಜಾನಪದ ಕಲಾವಿದರ ಡೊಳ್ಳಿನ ಸಂಘದ (ಕನಕ ಭವನ) 50 ಲಕ್ಷ ರೂ. ವೆಚ್ಚದಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಇತಿಹಾಸದಲ್ಲಿಯೇ ದೇವಸ್ಥಾನಗಳಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಅನುದಾನ ಬಂದಿಲ್ಲ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರ ನೀಡಿದೆ. ನವಲಗುಂದ ವಿಧಾನಸಭಾ ಕ್ಷೇತ್ರದ ಸರ್ವ ಸಮಾಜಗಳ ಅಭಿವೃದ್ಧಿಗೆ ಈಗಾಗಲೇ ನಮ್ಮ ಕಾಂಗ್ರೆಸ್ ಸರ್ಕಾರ 21 ಕೋಟಿ ರೂಪಾಯಿ ಅನುದಾನ ನೀಡಿದೆ. ವಿರೋಧಿಗಳ ಮಾತಿಗೆ ಕಿವಿಗೊಡಬೇಡಿ. ಅಭಿವೃದ್ಧಿ ಕೆಲಸ ಕಣ್ಣ ಮುಂದಿದೆ. ಇನ್ನೂ ಹೆಚ್ಚಿನ ಅನುದಾನ ತಂದು ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತೇನೆ. ನನ್ನ ವಿಧಾನಸಭಾ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿ ಮಾಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಮಾರುತಿ ಜಾಧವ, ಶಿವನಗೌಡ್ರ ಹಿರೇಗೌಡ್ರ, ಶಿವಾನಂದ ಉಣ್ಣಿಮಠ, ಸಿದ್ದಪ್ಪ ಶಿರೋಳ, ಮಹಾಂತೇಶ ಪಾಟೀಲ, ಮಲ್ಲನಗೌಡ್ರ ಹಿರೇಗೌಡ್ರ, ತುಕಾರಾಮ್ ಇರಗಟ್ಟಿ, ಸಂತೋಷ್ ಜಾಧವ, ರಾಜು ದೊಡಮನಿ, ಮಂಜುನಾಥ್ ಇರಗಟ್ಟಿ, ಯಲ್ಲಪ್ಪ ಗುಡಸಲಮನಿ, ಶರಣಪ್ಪಗೌಡ ಪಾಟೀಲ, ಕಾಳಪ್ಪ ಬಡಿಗೇರ, ಶಿವಪ್ಪ ಕೋಟಿ, ನೀಲಪ್ಪ ಜಕ್ಕಣ್ಣವರ, ಮುತ್ತಣ್ಣ ಹಿರೇಮಠ, ಮಹಾಂತೇಶ ದೊಡಮನಿ, ಪ್ರವೀಣ ಗಾರಿಮಣಿ, ಗೀತಾ ಜವಳಿ, ಶಾಂತವ್ವ ದೇಸಾಯಿಗೌಡ್ರ, ಪ್ರೇಮಾ ಬುಡ್ಡನ್ನವರ ಹಾಗೂ ಕೊಂಗವಾಡ ಗ್ರಾಮದ ಹಿರಿಯರು, ಯುವಕರು ಉಪಸ್ಥಿತರಿದ್ದರು.





ಧಾರವಾಡ: ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಪ್ರಸಕ್ತ ಸಾಲಿನ ಧಾರವಾಡ ಜಿಲ್ಲಾಮಟ್ಟದ ಡಾ. ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆಯ ಅಂಗವಾಗಿ ಜಿಲ್ಲಾಡಳಿತದಿಂದ ನೀಡಲಾಗುವ ಉತ್ಕೃಷ್ಟ ಸಮಾಜಸೇವಾ ಪ್ರಶಸ್ತಿ ಸಮಾಜ ಸೇವಕ ಎಂ. ಅರವಿಂದ ಅವರಿಗೆ ಉಪವಿಭಾಗಾಧಿಕಾರಿ ಶಾಲಂ ಹುಸೇನ್ ಪ್ರಶಸ್ತಿ ನೀಡಿದರು.

ಹು-ಧಾ ಮಧ್ಯೆ ಸೈಬರ್ ಠಾಣೆ ಸ್ಥಾಪಿಸಲು ಒತ್ತಾಯ

ಧಾರವಾಡ: ಸೈಬರ್ ಕ್ರೈಂ ಪೊಲೀಸ್ ಠಾಣೆ ಹುಬ್ಬಳ್ಳಿ-ಧಾರವಾಡ ಮಧ್ಯಭಾಗದಲ್ಲಿ ಮರು ಸ್ಥಾಪಿಸಬೇಕು ಎಂದು ಒತ್ತಾಯಿಸಿ ಸಮಾನ ಮನಸ್ಕರ ವೇದಿಕೆ, ಗೆಳೆಯರ ಬಳಗ ಸೋಮವಾರ ಜಿಲ್ಲಾಧಿಕಾರಿಗೆ ಇತ್ತೀಚೆಗೆ ಮನವಿ ಸಲ್ಲಿಸಿದೆ.

ಈ ಹಿಂದೆ ಹುಬ್ಬಳ್ಳಿಯ ಹಳೆಯ ಕೋರ್ಟ್ ಬಳಿ ಕಾರ್ಯನಿರ್ವಹಿಸುತ್ತಿದ್ದ ಸೈಬರ್ ಕ್ರೈಂ ಪೊಲೀಸ್ ಠಾಣೆ ಧಾರವಾಡದ ನಾಗರಿಕರಿಗೆ ಸುಲಭವಾಗಿ ಲಭಿಸುತ್ತಿಲ್ಲ, ದೂರ ಹುಬ್ಬಳ್ಳಿಗೆ ಪ್ರಯಾಣಿಸಬೇಕಿದೆ ಎಂದು ತಿಳಿಸಿದೆ. ದಿನೇ ದಿನೇ ಸೈಬರ್ ವಂಚನೆಗಳು ಹೆಚ್ಚುತ್ತಿವೆ. ಜನರಿಗೆ, ಹಿರಿಯ ನಾಗರಿಕರಿಗೆ, ಮಹಿಳೆಯರಿಗೆ, ಬಡವರಿಗೆ ಹಾಗೂ ಅಸಾಯಕರು ನ್ಯಾಯಕ್ಕಾಗಿ ಪರದಾಡುವ ಸಂದಿಗ್ಧತೆ ಎದುರಾಗಿದೆ ಎಂದು ಸಂಘಟನೆ ಹೇಳಿದೆ. ಹುಬ್ಬಳ್ಳಿ-ಧಾರವಾಡ ನಾಗರಿಕರಿಗೆ ಅನುಕೂಲಕ್ಕಾಗಿ ಸೈಬರ್ ಕ್ರೈಂ ಪೊಲೀಸ್ ಠಾಣೆ ನವನಗರ ಅಥವಾ ರಾಯಾಪೂರದಲ್ಲಿ ಮರು ಸ್ಥಾಪಿಸುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಅವರಿಗೆ ಮನವಿ ಸಲ್ಲಿಸಿದೆ. ಮೋಹನ ರಾಮದುರ್ಗ, ಶಿವಾನಂದ ಕವಳಿ, ಮಹಾಂತೇಶ ನರೇಗಲ್ಲ, ಬಲರಾಮ ಕುಸುಗಲ್, ಟಿ.ಎಸ್ .ಪಾಟೀಲ, ಭೀಮರಾವ್ ಸವಣೂರ, ಸದ್ದಾಂ ಮುಲ್ಲಾ, ಮಲ್ಲಿಕಾರ್ಜುನ ಮಠಪತಿ, ಸುರೇಶ ಕೊನ್ನೂರ ಸೇರಿ ಇತರರಿದ್ದರು.




ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ



ಹುಬ್ಬಳ್ಳಿ: ಇಲ್ಲಿಯ ನವನಗರದ ಭಗಿನಿ ನಿವೇದಿತಾ ವಿದ್ಯಾಲಯದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ಗವಿಸಿದ್ದಪ್ಪ ವೀರಾಪೂರ ಮಾತನಾಡಿ, ಬಿ.ಆರ್. ಅಂಬೇಡ್ಕರ್ ಅವರು ರಾಮಜೀ ಹಾಗೂ ಭೀಮಾಬಾಯಿ ಎಂಬ ದಂಪತಿಗೆ 14ನೇ ಪುತ್ರರಾಗಿ ಜನಿಸಿದ್ದರು. ಅಸ್ಪೃಶ್ಯತೆ ಸಲುವಾಗಿ ಶಿಕ್ಷಣ ಪಡೆಯಲು ಸಾಕಷ್ಟು ಹೋರಾಟ ಮಾಡಿದ ಅವರು, ಅಮೇರಿಕಾದ ಕೋಲಂಬಿಯಾದಲ್ಲಿ ಪಿಎಚ್‌ಡಿ ಪದವಿ ಪಡೆದರು ಎಂದರು.ದಲಿತರಿಗೆ ಮತದಾನದ ಹಕ್ಕು, ಶಿಕ್ಷಣ ಪಡೆಯಲು ಹೋರಾಟ ಮಾಡಿದರು. ಕಾಳಿಮಂದಿರ ಪ್ರವೇಶವನ್ನು ನಿರಾಕರಿಸಿದ ಹಿನ್ನೆಲೆ ಹೋರಾಟ ಮಾಡಿದ್ದರು. ದೇಶ ಸಂವಿಧಾನ ರಚಿಸಿ, ಸಂವಿಧಾನ ಶಿಲ್ಪಿ ಎಂದು ಕರೆಸಿಕೊಂಡರು. ಕೊನೆಗೆ ಬೌದ್ಧ ಧರ್ಮ ಸ್ವೀಕರಿಸಿದರು ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ಕಲಾವತಿ ಜೀರಿಗಿವಾಡ ವಹಿಸಿದ್ದರು. ಪ್ರೌಢ ಶಾಲಾ ಸಹಮುಖ್ಯೋಪಾಧ್ಯಾಯರಾದ ದೀಪಾ ಚವಟೆ, ತೇಜಶ್ವರಿ ಅವರಾದಿ ಇದ್ದರು.




ಧಾರವಾಡ: ನಗರದ ಮರಾಠ ವಿದ್ಯಾ ಪ್ರಸಾರಕ ಮಂಡಳದಲ್ಲಿ ನಡೆದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಮರಾಠ ವಿದ್ಯಾ ಪ್ರಸಾರಕ ಮಂಡಳದ ಕಾರ್ಯಾಧ್ಯಕ್ಷ ಸುನೀಲ ಮೋರೆ ಉದ್ಘಾಟಿಸಿದರು. ಇತಿಹಾಸ ಉಪನ್ಯಾಸಕ ಪ್ರೊ. ವಿ.ಎಂ.ಪೋಳ, ಶ್ರೀ ಶಿವಾಜಿ ಮಹಾರಾಜ ಪದವಿ ಕಾಲೇಜಿನ ಪ್ರಚಾರ್ಯ ಎಂ.ಎಸ್.ಗಾಣಿಗೇರ, ಪಿಯು ಕಾಲೇಜಿನ ಪ್ರಾಚಾರ್ಯ ಎಸ್.ಎಂ.ಸಂಕೋಜಿ, ಮುಖ್ಯಾಧ್ಯಾಪಕರಾದ ಎ.ಬಿ.ಬಾಬರ, ಎಂ.ಎ.ಘಾಟಗೆ, ನಾಗರಾಜ ಆರೇರ ಇದ್ದರು. ಉಪನ್ಯಾಸಕಿ ಸುನಿತಾ ಮಾನೆ ನಿರೂಪಿಸಿ, ವಂದಿಸಿದರು.

ಮಕ್ಕಳಿಗೆ ಆಧ್ಯಾತ್ಮಿಕ ಶಿಕ್ಷಣ ಅವಶ್ಯ: ನಾಡಿಗೇರ

ಕುಂದಗೋಳ: ಲೌಕಿಕ ಶಿಕ್ಷಣ ಜೊತೆಗೆ ಆಧ್ಯಾತ್ಮಿಕ ಶಿಕ್ಷಣವು ಇಂದಿನ ಮಕ್ಕಳಿಗೆ ಅವಶ್ಯವಾಗಿದ್ದು, ಈ ಸಂಸ್ಕಾರ ಶಿಬಿರವು ಮಕ್ಕಳಿಗೆ ಉಪಯುಕ್ತವಾಗಿದೆ ಎಂದು ಸಮಾಜದ ಮುಖಂಡ ಅರ್ಜುನ ನಾಡಿಗೇರ ಹೇಳಿದರು.

ಪಟ್ಟಣದ ಶ್ರೀ ಶಾರದಾ ಶಂಕರಾಚಾರ್ಯ ಮಠ ಆವರಣದಲ್ಲಿ ವಿದ್ಯಾಶಂಕರ ಸಂಸ್ಕೃತ ಪಾಠಶಾಲಾ ಹಾಗೂ ತಾಲೂಕಾ ಬ್ರಾಹ್ಮಣ ಸಮಾಜದ ವತಿಯಿಂದ ಬೇಸಿಗೆಯ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದೀಪಕ ಚಿಂಚೋರಿ, ಲಕ್ಷ್ಮಣ ಕುಲಕರ್ಣಿ, ರಾಜ್ಯ ಅಖಿಲ ಕರ್ನಾಟಕ ಬ್ರಾಹ್ಮಣ ಸಮಾಜ ಉಪಾಧ್ಯಕ್ಷ ಸುಧೀಂದ್ರ ದೇಶಪಾಂಡೆ. ವೇದ ಬ್ರಹ್ಮ ಗುಂಡ ಭಟ್ ಹಂದಿಗೋಳ, ಡಾ ಸಂದೀಪ ಬಂಕಾಪುರ, ರಮೇಶ ಕುಲಕರ್ಣಿ, ಮೋಹನ ನಾಡಗೇರ ಟಿ., ಕೆ.ಕುಲಕರ್ಣಿ. ಆನಂದ ಕುಲಕರ್ಣಿ, ಪ್ರಕಾಶ ನಾಡಗೇರ ಇದ್ದರು. ಅಶೋಕ ನಾಡಿಗೇರ, ಗೋಪಾಲ ಯಜ್ಞೇಶ್ವರ, ಲಿಂಗಾಬಟ್ಟ ಜೋಶಿ, ಸಮೀರ ಯಜ್ಞೇಶ್ವರ ಸೇರಿದಂತೆ ಪತ್ರಿಕೋದ್ಯಮ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರಿಗೆ ಸನ್ಮಾನಿಸಲಾಯಿತು. ಶ್ರೀ ವಿದ್ಯಾ ಶಂಕರ ಸಂಸ್ಕೃತ ಪಾಠ ಶಾಲೆಯ ಪ್ರಧಾನ ಅಧ್ಯಾಪಕ ಹನುಮಂತ ಭಟ್ಟ ಜೋಶಿ, ಸಹಾಯಕ ಅಧ್ಯಾಪಕ ರಾಮಚಂದ್ರ ಜೋಶಿ, ಪ್ರಜ್ವಲ್ ಅನಿಲ್, ಜಗನ್ನಾಥ ಮನೋಜ ಅವರಿಗೆ ಸನ್ಮಾನಿಸಲಾಯಿತು. ಶರತ್ ಪಾಟೀಲ್ ನಿರೂಪಿಸಿದರು. ಕಿರಣ ಹೊರ್ತಿ ಸ್ವಾಗತಿಸಿದರು. ಸಮರ್ಥ ಸದರ ಜೋಶಿ ವಂದಿಸಿದರು.



ನರಗುಂದ: ಭಾನುವಾರ ಪಟ್ಟಣದ ಸುಕ್ಷೇತ್ರ ವೀರಕ್ತಮಠದ ಕರ್ತೃ ಚನ್ನಬಸವ ಮಹಾಶಿವಯೋಗಿಗಳ 157ನೇ ಪುಣ್ಯಸ್ಮರಣೋತ್ಸವದಂದು ಕರ್ತೃ ಗದ್ದುಗೆಗೆ ಮಹಾಅಭಿಷೇಕ ಜರುಗಿತು.



ಗೋವುಗಳ ಆರೋಗ್ಯ ತಪಾಸಣೆ

ಗದಗ: ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಘಟಕವು ಏ.20 ರಂದು ಸಂಜೆ 5ಕ್ಕೆ ಕಳಸಾಪೂರ ರಸ್ತೆಯ ಶಿವಾನಂದ ಮಠದ ಬಳಿರುವ ಪಂಜರಪೋಳದಲ್ಲಿ ಬಸವ ಜಯಂತಿ ಹಾಗೂ ರೇಣುಕಾಚಾರ್ಯ ಜಯಂತಿ ವಿನೂತನ ರೀತಿಯಲ್ಲಿ ಆಚರಿಸಲಾಗುವುದು.

ಪಂಜರಪೋಳದ ಗೋಶಾಲಾ ಆವರಣದಲ್ಲಿ ಗೋವುಗಳ ಆರೋಗ್ಯ ತಪಾಸಣೆ ಶಿಬಿರ ಏರ್ಪಡಿಸಲಾಗಿದೆ. ಹಿರಿಯ ಪಶು ವೈದ್ಯರಾದ ಡಾ.ಪ್ರಕಾಶ ಜಟ್ಟೆಣ್ಣವರ, ಡಾ.ಜಿನಗಾ, ಡಾ.ಗುರಿಕಾರ ಅವರು ತಮ್ಮ ಸಿಬ್ಬಂದಿಯೊಂದಿಗೆ ಆಗಮಿಸಿ ಜಾನುವಾರುಗಳ ಆರೋಗ್ಯ ತಪಾಸಣೆ ನಡೆಸಿ ಗೋವು ಸಂತತಿ, ಗೋವು ಸಂರಕ್ಷಣೆ ಮತ್ತು ಗೋವುಗಳ ಮಹತ್ವ ಕುರಿತು ಜನಜಾಗೃತಿ ಮಾಡುವರು.

ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಅಧ್ಯಕ್ಷ ಶರಣಬಸಪ್ಪ ಗುಡಿಮನಿ, ಹಿರಿಯ ಪತ್ರಕರ್ತ ಬಸವರಾಜ ದಂಡಿನ ಹಾಗೂ ಮಹಾವೀರ ಗೋ ಸೇವಾ ಸಮಿತಿಯ ಉಪಾಧ್ಯಕ್ಷ ಪ್ರಕಾಶ ಬಂದಾ ಆಗಮಿಸುವರು. ಸಮಾರಂಭದ ಅಧ್ಯಕ್ಷತೆಯನ್ನು ಮಹಾಸಭಾದ ತಾಲೂಕು ಘಟಕದ ಅಧ್ಯಕ್ಷ ಮಹೇಶ ಕೋಟಿ ವಹಿಸುವರು. ಮಹಾಸಭಾದ ತಾಲೂಕು ಮಹಿಳಾ ಘಟಕದ ಅಧ್ಯಕ್ಷೆ ಲತಾ ಮುತ್ತಿನಪೆಂಡಿಮಠ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿರುವರು ಎಂದು ಪ್ರಧಾನ ಕಾರ್ಯದರ್ಶಿ ಸಂಗಮೇಶ ಕವಳಿಕಾಯಿ, ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಶೋಭಾ ಗುಗ್ಗರಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗದಗ: ಧಾರವಾಡ ಶಹರದ ಸಪ್ತಾಪೂರ ರಸ್ತೆಯಲ್ಲಿರುವ ಮಿಲಿಟರಿ ಬಾಲಕಿಯರ ವಸತಿ ನಿಲಯದಲ್ಲಿ 2026-27ನೇ ಶೈಕ್ಷಣಿಕ ವರ್ಷಕ್ಕಾಗಿ ಧಾರವಾಡ, ಗದಗ, ಹಾವೇರಿ, ಮತ್ತು ಬಳ್ಳಾರಿ ಜಿಲ್ಲೆಗಳ ಗ್ರಾಮಾಂತರ ಪ್ರದೇಶ ಹಾಗೂ ರಾಜ್ಯದ ಇತರ ಜಿಲ್ಲೆಗಳಲ್ಲಿರುವ ಯುದ್ಧದಲ್ಲಿ ಮಡಿದ ಯೋಧರ ಮತ್ತು ಮಾಜಿ ಸೈನಿಕರ ಹೆಣ್ಣು ಮಕ್ಕಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ 5ನೇ ತರಗತಿಯಿಂದ ಪಿಯುಸಿ-2 ರ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತದೆ. ವಸತಿ ನಿಲಯದಲ್ಲಿ ವಾಸ್ತವ್ಯ ಮತ್ತು ಊಟೋಪಚಾರಗಳು ಉಚಿತವಾಗಿದ್ದು, ಮಾಜಿ ಸೈನಿಕರ ಹೆಣ್ಣು ಮಕ್ಕಳು ಈ ಸೌಲಭ್ಯದ ಉಪಯೋಗ ಪಡೆಯಬಹುದಾಗಿದೆ. ವಸತಿ ನಿಲಯದಲ್ಲಿ ಧಾರವಾಡ ನಗರದಲ್ಲಿರುವ ವಿದ್ಯಾ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಮಾತ್ರ ನಿಲಯದಲ್ಲಿ ಪ್ರವೇಶ ನೀಡಲಾಗುವುದು.

ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಉದಯ ಹಾಸ್ಟೆಲ್ ಸರ್ಕಲ್ ಸೈನಿಕ ವಿಶ್ರಾಂತಿ ಗೃಹ ಆವರಣ, ಧಾರವಾಡ ದೂ.0836-2440176 ಅವರನ್ನು ಸಂಪರ್ಕಿಸಿ ಅರ್ಜಿಗಳನ್ನು ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಮೇ 5ರೊಳಗಾಗಿ ಸಲ್ಲಿಸಬಹುದಾಗಿದೆ.

ಬಸವ ಜಯಂತಿ ಇಂದು

ಗದಗ: ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕವು ಏ.20 ರಂದು ಬೆಳಗ್ಗೆ 8ಕ್ಕೆ ನಗರದ ವೀರಶೈವ ಜನರಲ್ ಲೈಬ್ರರಿಯಲ್ಲಿ ಬಸವ ಜಯಂತಿ ಏರ್ಪಡಿಸಲಾಗಿದೆ. ಸಮಾರಂಭದ ಅಧ್ಯಕ್ಷತೆ ಮಹಾಸಭಾದ ಜಿಲ್ಲಾಧ್ಯಕ್ಷ ಶರಣಬಸಪ್ಪ ಗುಡಿಮನಿ ವಹಿಸುವರು. ಜಿಲ್ಲಾಡಳಿತದಿಂದ ಜರುಗಲಿರುವ ಬಸವ ಜಯಂತಿ ಮೆರವಣಿಗೆ ತೋಂಟದಾರ್ಯ ಮಠದಿಂದ ಆರಂಭಗೊಳ್ಳಲಿದೆ ಎಂದು ಮಹಾಸಭಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುರುಘರಾಜೇಂದ್ರ ಬಡ್ನಿ ತಿಳಿಸಿದ್ದಾರೆ.

ಪಿಯುಸಿ ಪರೀಕ್ಷೆ: ವಿದ್ಯಾರ್ಥಿಗಳಿಗೆ ಸನ್ಮಾನ

ನರಗುಂದ: ತಾಲೂಕಿನ ಚಿಕ್ಕನರಗುಂದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಾದ ಕಲಾ ವಿಭಾಗದಲ್ಲಿ -ಮಲ್ಲವ್ವ ಗಣೇಶಿ, ಕವನ ಅಂಗಡಿ, ಮೇಘಾ ಗಾಣಿಗೇರ, ಆಕಾಶ ಹಡಪದ, ವಿಜ್ಞಾನ ವಿಭಾಗದಲ್ಲಿ ಆಲಿಯಾ ಮೋಮಿನ, ಲಕ್ಷ್ಮೀ ನರಸನ್ನವರ, ಕವಿತಾ ಕಲಹಾಳ ಹಾಗೂ ಕನ್ನಡ ವಿಷಯದಲ್ಲಿ ಚೈತ್ರ ಓದೇಕಾರ ಹಾಗೂ ಜೀವಶಾಸ್ತ್ರ ವಿಷಯದಲ್ಲಿ ರಕ್ಷಿತಾ ಚರಂತಿಮಠ ಇವರು ನೂರಕ್ಕೆ 100 ಫಲಿತಾಂಶ ಸಾಧಿಸಿದ್ದರಿಂದ ಸನ್ಮಾನ ಮಾಡಲಾಯಿತು. ಪ್ರಾಚಾರ್ಯ ಎಸ್. ಇಂದಿರಾಣಿ, ಡಾ.ಅಶ್ವಿನಿ ಪಾಟೀಲ, ಮುತ್ತು ಹಿರೇಮಠ, ಫಕೀರೇಶ ಅಂಗಡಿ, ವೀರೇಶ ಜಾಲಿಹಾಳ, ಸಂತೋಷ ಕಾಲಚೆಟ್ಟಿ, ಕಿಶೋರ ಮುಳುಗುಂದ, ಪ್ರೇಮಾ ಮೇಟಿ, ವಿದ್ಯಾ ವಡ್ಡಿಗೇರಿ, ಬಸಮ್ಮ ಪಾಟೀಲ ಇತರರಿದ್ದರು.

ಶಿಫಾರಸಿನ ಪ್ರಮಾಣಕ್ಕಿಂತ ಹೆಚ್ಚು ಯೂರಿಯಾ ರಸಗೊಬ್ಬರ ಬಳಸಿ

ಗದಗ: ಕೃಷಿಯಲ್ಲಿ ರಾಸಾಯನಿಕ ಗೊಬ್ಬರಗಳ ಅಸಮತೋಲನ ಬಳಕೆಯಿಂದ ಮಣ್ಣಿನ ಆರೋಗ್ಯ ಮತ್ತು ಕೃಷಿಯ ಉತ್ಪಾದಕತೆ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಭಾರತ ಸರ್ಕಾರದ ರಸಗೊಬ್ಬರಗಳ ಇಲಾಖೆಯ ಐ.ಎಫ್.ಎಂ.ಎಸ್. ವರದಿಗಳ ಪ್ರಕಾರ ಕಳೆದ ಐದು ವರ್ಷಗಳಲ್ಲಿ ರಾಸಾಯನಿಕ ಗೊಬ್ಬರಗಳ ಬಳಕೆಯಲ್ಲಿ ತೀವ್ರ ಏರಿಕೆ ಕಂಡುಬಂದಿದೆ. ಇದರಿಂದ ಸಾರಜನಕ, ರಂಜಕ, ಪೊಟ್ಯಾಶ್ ಬಳಕೆಯ ಅನುಪಾತವು ಅಸಮತೋಲನಗೊಳ್ಳುತ್ತಿದೆ.

ಶಿಫಾರಸಿನ ಪ್ರಮಾಣಕ್ಕಿಂತ ಹೆಚ್ಚು ಯೂರಿಯಾ ರಸಗೊಬ್ಬರವನ್ನು ಬಳಸುವುದರಿಂದ ಬೆಳೆ ಹುಲುಸಾಗಿ ಬೆಳೆದು, ಕೀಟ ಮತ್ತು ರೋಗ ಬಾಧೆ ಹೆಚ್ಚಾಗುತ್ತದೆ. ಕೀಟ ಮತ್ತು ರೋಗ ಬಾಧೆಗಳನ್ನು ನಿಯಂತ್ರಿಸಲು ಪೀಡೆನಾಶಕಗಳನ್ನು ವಿವೇಚನಾ ರಹಿತವಾಗಿ ಬಳಸಲಾಗುತ್ತಿದೆ. ಇದರಿಂದ ರಾಸಾಯನಿಕಗಳು ಆಹಾರ ಸರಪಳಿಯಲ್ಲಿ ಬಂದು, ಪ್ರಾಣಿ/ಪಕ್ಷಿ ಹಾಗೂ ಮನುಷ್ಯರಲ್ಲಿ ಬೇರೆ ಬೇರೆ ಗಂಭೀರ ರೋಗಗಳಿಗೆ ಕಾರಣವಾಗುತ್ತದೆ. ಯೂರಿಯಾ ರಸಗೊಬ್ಬರದಲ್ಲಿನ ಶೇ.30-50 ರಷ್ಟು ಸಾರಜನಕ ಮಾತ್ರ ಬೆಳೆಗಳಿಂದ ಹೀರಲ್ಪಟ್ಟು, ಉಳಿದ ಲಭ್ಯವಿಲ್ಲದ ಸಾರಜನಕವು ನೈಟ್ರೇಟ್ ರೂಪದಲ್ಲಿ ಮಣ್ಣು, ಗಾಳಿ ಮತ್ತು ನೀರನ್ನು ಕಲುಷಿತಗೊಳಿಸಿ, ಮಾನವನ ಆರೋಗ್ಯ ಮತ್ತು ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ಅತಿಯಾದ ಸಾರಜನಕಯುಕ್ತ ರಾಸಾಯನಿಕ ಗೊಬ್ಬರಗಳಾದ ಯೂರಿಯಾ ಬಳಕೆಯಿಂದ ಅಂತರ್ಜಲ ಕಲುಷಿತಗೊಂಡಿದ್ದು, ಸುಮಾರು 443 ಜಿಲ್ಲೆಗಳ ಅಂತರ್ಜಲವು ಅತಿಯಾದ ನೈಟ್ರೇಟ್‌ನಿಂದ ಮಲಿನಗೊಂಡಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ನೀರಿನಲ್ಲಿ ನೈಟ್ರೇಟ್ ಅಂಶವು ಗರಿಷ್ಠ 45ಎಂ.ಜಿ./ಲೀ.ಗೆ ಸೀಮಿತವಾಗಿದ್ದು, ಕರ್ನಾಟಕದಲ್ಲಿ 2023ನೇ ಸಾಲಿನಲ್ಲಿ 345 ನೀರಿನ ಮಾದರಿಗಳ ವಿಶ್ಲೇಷಣೆಯ ಪೈಕಿ 169 ಮಾದರಿಗಳಲ್ಲಿ(48.99%) ನೈಟ್ರೇಟ್ ಅಂಶವು 45 ಎಂ.ಜಿ./ಲೀ. ಇರುವುದು ಕಂಡುಬಂದಿದೆ. ಇಂತಹ ನೀರನ್ನು ಬಳಸುವುದರಿಂದ ಮನುಷ್ಯನ ಆರೋಗ್ಯದ ಮೇಲೆ, ವಿಶೇಷವಾಗಿ ಶಿಶುಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಯೂರಿಯಾ ಬಳಕೆಯನ್ನು ಪರಿಣಾಮಕಾರಿಯಾಗಿ ಕಡಿತಗೊಳಿಸಲು ಮಣ್ಣು ಪರೀಕ್ಷೆಯ ವರದಿಯನ್ವಯ, ಶಿಫಾರಸ್ಸಿನಂತೆ ಬಳಸಬೇಕು. ದ್ವಿದಳಧಾನ್ಯ ಬೆಳೆಗಳ ಬೇರಿನಲ್ಲಿ, ವಾತಾವರಣದಲ್ಲಿರುವ ಸಾರಜನಕವನ್ನು ಹೀರಿ ಮಣ್ಣಿಗೆ ಕೊಡುವ ಸೂಕ್ಷ್ಮಾಣು ಜೀವಿಗಳು ಇರುತ್ತವೆ. ಕಾರಣ, ದ್ವಿದಳಧಾನ್ಯ ಬೆಳೆಗಳೊಂದಿಗೆ ಬೆಳೆ ಪರಿವರ್ತನೆ ಮಾಡಬೇಕು.

ಜಿಲ್ಲೆಯ ರೈತರು ಪರ್ಯಾಯ ಗೊಬ್ಬರಗಳಾದ ಸಾವಯವ ಗೊಬ್ಬರ, ಹಸಿರೆಲೆ ಗೊಬ್ಬರ, ಜೈವಿಕ ಗೊಬ್ಬರ, ನ್ಯಾನೋ ಗೊಬ್ಬರಗಳ ಬಳಕೆಯನ್ನು ಮಾಡಬೇಕೆಂದು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
೧೨

ಸೋಮವಾರ
20 ಏಪ್ರಿಲ್ 2026
ಹುಬ್ಬಳ್ಳಿ

ಬಸವ ಜಯಂತಿ ಉತ್ಸವ ಸಮಿತಿಯಿಂದ ಬಹಿರಂಗ ಸಭೆ

ಅನುಭವ ಮಂಟಪ ಶೀಘ್ರ ನಿರ್ಮಾಣ

ಕಲಬುರಗಿ: ಬಸವಣ್ಣನವರ ತತ್ವ ಹಾಗೂ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಸರ್ವರನ್ನು ಸಮಾಜದ ಸಂಘಟನೆಗೆ ಬಳಸಿಕೊಳ್ಳುವ ಮೂಲಕ ಸಮಾನತೆಯ ಸಮಾಜ ನಿರ್ಮಾಣಕ್ಕೆ ನಾವೆಲ್ಲರೂ ಕೈಜೋಡಿಸೋಣ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ,ಸಚಿವ ಈಶ್ವರ ಖಂಡ್ರೆ ಸಲಹೆ ನೀಡಿದರು.

ಸಚಿವ ಈಶ್ವರ ಖಂಡ್ರೆ ಹೇಳಿಕೆ

ಭಾನುವಾರ ನಗರದ ಶರಣಬಸವೇಶ್ವರರ ಜಾತ್ರಾ ಮೈದಾನದಲ್ಲಿ ಪೂಜ್ಯ ಡಾ.ಶರಣಬಸವಪ್ಪ ಅಪ್ಪಾ ವೇದಿಕೆಯಲ್ಲಿ ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರ 893ನೇ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಬಹಿರಂಗ ಸಭೆಯಲ್ಲಿ ವಿಶೇಷ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಶರಣರ ದಾರಿಯಲ್ಲಿ ನಡೆದು ಅವರ ವಚನ ಮೈಗೂಡಿಸಿ ಸಮಾಜವನ್ನು ಜಾಗೃತಿ ಮಾಡೋಣ. ಬಸವಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣದ ಕಾರ್ಯ ನಡೆಯುತ್ತಿದೆ. 660 ಕೋಟಿ ರೂ. ವೆಚ್ಚದಲ್ಲಿ ಅನುಭವ ಮಂಟಪದ ವಿನ್ಯಾಸ ಮಾಡಲಾಗಿದೆ. ಈ ಹಿಂದೆ ಯಡಿಯೂರಪ್ಪ ಸಿಎಂ ಇದ್ದಾಗ 200 ಕೋಟಿ ನೀಡಿ ಟೆಂಡರ್ ಮಾಡಿ ಇದೀಗ, 740 ಕೋಟಿ ವೆಚ್ಚದಲ್ಲಿ ಅನುಭವ ಮಂಟಪ ಸಿದ್ಧಗೊಳ್ಳುತ್ತಿದ್ದು, ಮುಂಬರುವ ಏ.20-2027 ಒಳಗಾಗಿ ಧಾರ್ಮಿಕ, ಆಧ್ಯಾತ್ಮಿಕ ಕೇಂದ್ರವಾಗಿ ಅನುಭವ ಮಂಟಪ ಲೋಕಾರ್ಪಣೆ ಮಾಡಲಾಗುವುದು ಎಂದರು.

ಕಳೆದ 150 ವರ್ಷಗಳಿಂದ ಲಾಲ್‌ಬಾಗ್, ಕಬ್ಬನ್ ಪಾರ್ಕ್‌ನಲ್ಲಿ ಮಾತ್ರ ಬಸವಣ್ಣನವರ ಪಾರ್ಕ್ ಇವೆ. ಇದೀಗ 150 ಎಕರೆಯಲ್ಲಿ ಬೆಂಗಳೂರಿನ ಕೇಂದ್ರ ಸ್ಥಾನದಲ್ಲಿ ವಿಶ್ವಗುರು ಬಸವಣ್ಣನವರ ಹೆಸರಿನಲ್ಲಿ ಉದ್ಯಾನವನ ಮಾಡಲಾಗುತ್ತಿದ್ದು, 250 ಕೋಟಿ ವೆಚ್ಚದಲ್ಲಿ ಉದ್ಯಾನವನದ ಡಿಪಿಆರ್ ಮಾಡಲಾಗಿದೆ ಎಂದ ಅವರು, ಎಲ್ಲರನ್ನೂ ಒಗ್ಗೂಡಿಸಿ ಸಮಾಜವನ್ನು ಸಂಘಟಿಸುವ, ಮಹಿಳೆಯರಿಗೆ ಪ್ರಾತಿನಿಧ್ಯ ಕೊಡುವ ಕೆಲಸ ಮಾಡುವ ಮೂಲಕ ನಾವೆಲ್ಲರೂ ಬಸವಣ್ಣನವರ ಆಶಯದಂತೆ ನಡೆಯೋಣ ಎಂದರು. ವೈದ್ಯಕೀಯ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿ, ಸಮಾಜದಲ್ಲಿ ಬಸವ ಧರ್ಮದ ಜಾಗೃತಿ ಅಗತ್ಯ. ಅಷ್ಟಾವರಣ ಹಾಗೂ ಪಂಚ ಆಚಾರ್ಯ ಹಾಗೂ ಷಟಸ್ಥಲ ಕುರಿತು ನಮ್ಮ ಪೀಳಿಗೆಗೆ ಹೇಳಬೇಕಾಗಿದೆ. ಲಿಂಗ ಪೂಜೆಗೆ ವೈಜ್ಞಾನಿಕವಾದ ಹಿನ್ನೆಲೆಯಿದ್ದು, ವಚನ ಸಾಹಿತ್ಯ ಮಕ್ಕಳಿಗೆ ಪರಿಚಯಿಸುವ ಕೆಲಸ ನಾವು ಮಾಡಬೇಕಿದೆ ಎಂದರು.

ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಮಾತೋಶ್ರೀ ಡಾ.ದಾಕ್ಷಾಯಿಣಿ ಎಸ್ ಅಪ್ಪ ಮಾತನಾಡಿದರು. ಚಿ.ದೊಡ್ಡಪ್ಪ ಅಪ್ಪ ಅವರು ವೇದಿಕೆಯಲ್ಲಿ ಬಸವಣ್ಣನವರ ವಚನ ನುಡಿದರು. ಮೈಸೂರಿನ ಶಂಕರ್ ದೇವನೂರ ಅವರಿಂದ ವಿಶೇಷ ಉಪನ್ಯಾಸ ನಡೆಯಿತು. ಸಮಿತಿಯ ಕಾರ್ಯಾಧ್ಯಕ್ಷ ಬಿ.ಜಿ.ಪಾಟೀಲ್ ಸ್ವಾಗತಿಸಿದರು.

ಬಹಿರಂಗ ಸಭೆಯಲ್ಲಿ ಬೆಳಗಾವಿ ಶಿವಾನಂದ ಶ್ರೀಗಳು, ಶರಣಬಸಪ್ಪಾ ದರ್ಶನಾಪುರ, ಮಹಾಸಭಾದ ಜಿಲ್ಲಾಧ್ಯಕ್ಷ ಶರಣಕುಮಾರ ಮೋದಿ, ಆರ್.ಜಿ.ಶೆಟಗಾರ, ಎಂ.ವೈ.ಪಾಟೀಲ್, ಶಾಸಕ ಬಸವರಾಜ ಮತ್ತಿಮಡು, ಅಜಯ್ ಸಿಂಗ್, ಅಲ್ಲಂಪ್ರಭು ಪಾಟೀಲ್,ಅವಿನಾಶ್ ಜಾಧವ್, ಶಶೀಲ್ ನಮೋಶಿ, ತಿಪ್ಪಣಪ್ಪ ಕಮಕನೂರ, ಜಗದೇವ ಗುತ್ತೇದಾರ್, ದೊಡ್ಡಪ್ಪಗೌಡ ಪಾಟೀಲ್, ದತ್ತಾತ್ರೇಯ ಪಾಟೀಲ್, ಚಂದು ಪಾಟೀಲ್, ರಾಜಕುಮಾರ್ ಪಾಟೀಲ್ ತೆಲಕೂರ, ಪ್ರವೀಣ್ ಪಾಟೀಲ್ ಹರವಾಳ,ಅಮರನಾಥ ಪಾಟೀಲ್, ಬಸವರಾಜ ದೇಶಮುಖ, ನೀಲಕಂಠ ಮೂಲಗೆ ಸೇರಿದಂತೆ ಅನೇಕರು ಇದ್ದರು.



> ಸಕಲ ಜೀವಾತ್ಮರಿಗೆ ಲೇಸು ಬಯಸಲು ಹುಟ್ಟಿ ಬಂದ ಬಸವಣ್ಣ. ವಚನ ಚಳವಳಿಯಿಂದ ಸಮಾನತೆ ತಂದರು. ಶರಣರು ವೈಜ್ಞಾನಿಕವಾಗಿ ಸಮಾಜ ಕಟ್ಟುವ ಕೆಲಸ ಮಾಡಿದ್ದಾರೆ. ತಮ್ಮನ್ನು ತಾವು ಅರಿಯಲು ಆಧ್ಯಾತ್ಮ ಅಗತ್ಯ. ಹೀಗಾಗಿ ಶರಣರ ದಾರಿಯಲ್ಲಿ ನಾವೆಲ್ಲರೂ ನಡೆಯೋಣ.
>
> ■ **ಬಿ.ಆರ್.ಪಾಟೀಲ್**, ಶಾಸಕ, ಅಧ್ಯಕ್ಷ, ಬಸವ ಜಯಂತಿ ಉತ್ಸವ ಸಮಿತಿ ಕಲಬುರಗಿ

> ಬಸವಣ್ಣನವರ ತತ್ವಗಳು ಮೈಗೂಡಿಸಿಕೊಂಡು ರಾಷ್ಟ್ರ ಕಟ್ಟಿ ಧರ್ಮ ಬೆಳೆಸೋಣ. ಬಸವಣ್ಣನವರ ಕಾಯಕ ಮತ್ತು ದಾಸೋಹ ತತ್ವ ಜೀವನದಲ್ಲಿ ಅಳವಡಿಸಿಕೊಂಡು ಉನ್ನತಿ ಸಾಧಿಸೋಣ. ಈ ಒಂದು ವರ್ಷದಲ್ಲಿ ಮೂರು ರತ್ನ ಕಳೆದುಕೊಂಡಿದ್ದೇವೆ. ಅವರ ಆತ್ಮ ನಮ್ಮೊಂದಿಗಿವೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯೋಣ.
>
> ■ **ಡಾ.ದಾಕ್ಷಾಯಿಣಿ ಎಸ್ ಅಪ್ಪ**, ಅಧ್ಯಕ್ಷೆ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಕಲಬುರಗಿ

ಎಲ್ಲದಕ್ಕೂ ಕಾಲವೇ ಉತ್ತರಿಸಲಿದೆ ಎಂದ ಉಪಮುಖ್ಯಮಂತ್ರಿ

ಮುಕ್ತಿ ಮಂದಿರದಲ್ಲಿ ಅರ್ಧಗಂಟೆ ಡಿಕೆಶಿ ಪ್ರಾರ್ಥನೆ

ಲಕ್ಷ್ಮೇಶ್ವರ: ತಾಲೂಕಿನ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಸುಮಾರು 30 ನಿಮಿಷಕ್ಕೂ ಹೆಚ್ಚು ಲಿಂ.ಜಗದ್ಗುರು ವೀರಗಂಗಾಧರ ಶ್ರೀಗಳ ಕರ್ತೃ ಗದ್ದುಗೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಹಾಗೂ ಅವರ ಸುಪುತ್ರ ಆಕಾಶ ಮುಕ್ತಿಮಂದಿರ ಶ್ರೀಗಳ ಸಾನ್ನಿಧ್ಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಪೂಜೆ ಅಭಿಷೇಕ ಮಂಗಳಾರತಿ ಮಾಡುವ ಮೂಲಕ ಪೂಜೆ ಸಲ್ಲಿಸಿದರು. ಇದಕ್ಕೂ ಮೊದಲು ಡಿ.ಕೆ.ಶಿವಕುಮಾರ ಅವರನ್ನು ಮುಕ್ತಿಮಂದಿರ ಶ್ರೀಗಳು ಸನ್ಮಾನಿಸಿದರು.

ವಿಶೇಷಶಕ್ತಿ ಇದೆ: ಈಸಂದರ್ಭದಲ್ಲಿಮಾತನಾಡಿದ ಡಿ.ಕೆ.ಶಿವಕುಮಾರ, ನಡೆದಾಡುವ ದೇವರಾಗಿದ್ದ ಲಿಂ.ಜಗದ್ಗುರು ವೀರಗಂಗಾಧರ ಅಜ್ಜನವರ ಪವಿತ್ರ ಕ್ಷೇತ್ರವಾಗಿರುವ ಮುಕ್ತಿಮಂದಿರದಲ್ಲಿ ಒಂದು ವಿಶೇಷ ಶಕ್ತಿ ನೆಲೆ ನಿಂತಿದೆ. ಮುಕ್ತಿಮಂದಿರ ಪವಿತ್ರಸ್ಥಳವಾಗಿದ್ದು ಜಗದ್ಗುರು ವೀರ ಗಂಗಾಧರ ಶ್ರೀಗಳು ಮಾನವ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂದು ಜಗತ್ತಿಗೆ ದೊಡ್ಡ ಸಂದೇಶ ನೀಡಿದ್ದಾರೆ. ಈ ಸಂದೇಶದ ಮೂಲಕ ಎಲ್ಲಾ ಜಾತಿ ಧರ್ಮವನ್ನು ಮುನ್ನಡೆಸಿಕೊಂಡು ಹೋಗುವ ಕೆಲಸವನ್ನು ಶ್ರೀಗಳು ಮಾಡಿದ್ದಾರೆ ಎಂದರು.

ಶ್ರೀ ಕ್ಷೇತ್ರಕ್ಕೆ ಬಹಳ ದಿನಗಳಿಂದ ಬರಬೇಕು ಅಂದುಕೊಂಡಿದ್ದೆ. ಈಗ ಬಂದು ಆಶೀರ್ವಾದ ಪಡೆದಿದ್ದೇನೆ. ಗುರುವಿನ ಆಶೀರ್ವಾದದ ಶಕ್ತಿ ನನ್ನನ್ನು ಹೆಚ್ಚು ಜಾಗೃತಗೊಳಿಸುತ್ತದೆ ಮತ್ತು ಹೊಸ ಚೈತನ್ಯವನ್ನು ತುಂಬುತ್ತದೆ ಎಂದರು.

ಮುಕ್ತಿಮಂದಿರ ಶ್ರೀಗಳು ಶಾಸಕ ಶ್ರೀನಿವಾಸ ಮಾನೆ, ಮಾಜಿ ಶಾಸಕರುಗಳಾದ ಜಿ.ಎಸ್. ಗಡ್ಡದೇವರಮಠ, ರಾಮಣ್ಣ ಲಮಾಣಿ, ರಾಮಕೃಷ್ಣ ದೊಡ್ಡಮನಿ, ಕೆಪಿ ನಂಜುಂಡಿ, ಆನಂದ ಗಡ್ಡದೇವರಮಠ, ಕೆಪಿಸಿಸಿ ಕಾರ್ಯದರ್ಶಿಗಳಾದ ಟಿ.ಈಶ್ವರ, ಸುಜಾತಾ ದೊಡ್ಡಮನಿ, ರಜತ ಉಳ್ಳಾಗಡ್ಡಿ ಮಠ ಮತ್ತಿತರರು ಇದ್ದರು.



ಡಿಕೆಶಿ ಕನಸು ಶೀಘ್ರ ನನಸು : ಶ್ರೀಗಳು

ಡಿ.ಕೆ.ಶಿವಕುಮಾರ ಅವರು ಮುಕ್ತಿಮಂದಿರ ಮಹರ್ಷಿ ಲಿಂ.ವೀರಗಂಗಾಧರ ಭಗವತ್ಪಾದರ ಬಗ್ಗೆ ಅಪಾರ ಭಕ್ತಿಯನ್ನು ಹೊಂದಿದ್ದಾರೆ. ಅಧಿಕಾರದ ಗದ್ದುಗೆ ಏರುವ ಸಂದರ್ಭದಲ್ಲಿ ಲಿಂ.ವೀರಗಂಗಾಧರ ಮಹರ್ಷಿಗಳ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಏಕೈಕ ವ್ಯಕ್ತಿ. ಮುಕ್ತಿಮಂದಿರ ಕ್ಷೇತ್ರದ ಬಗ್ಗೆ ಅಪಾರ ಗೌರವ, ಭಕ್ತಿ ಹೊಂದಿರುವ ಅವರು ರಾಜ್ಯದ ಉನ್ನತ ಹುದ್ದೆಯ ಇಚ್ಛೆ ಈಡೇರಿಸುವಂತೆ ಲಿಂ.ಶ್ರೀಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದಾರೆ. ಅದು ಆದಷ್ಟು ಶೀಘ್ರ ಈಡೇರುವ ಕಾಲ ಸನ್ನಿತವಾಗಿದೆ ಎಂದು ಮುಕ್ತಿಮಂದಿರ ಧರ್ಮಕ್ಷೇತ್ರ ಶ್ರೀ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿಗಳು ನುಡಿದರು.

ಕುರಿ ಮರಿ ನೀಡಿ ಸನ್ಮಾನ

ಡಿ.ಕೆ.ಶಿವಕುಮಾರ ಅಭಿಮಾನಿ ಬಳಗ ಹಾಗೂ ಯುವ ಮುಖಂಡ ಆನಂದ ಗಡ್ಡದೇವರಮಠ ಅಭಿಮಾನಿ ಬಳಗದಿಂದ ಡಿ.ಕೆ.ಶಿ ಅವರನ್ನು ಬೃಹತ್ ಹೂವಿನ ಹಾರ ಹಾಕಿ, ಕುರಿ ಮರಿ ನೀಡಿ ಕಂಬಳಿ ಹೊದಿಸಿ ಸನ್ಮಾನಿಸಲಾಯಿತು.

ಕೃಷ್ಣಾ ನದಿಯಲ್ಲಿ ಮುಳುಗಿ ಬಾಲಕ ಸಾವು

ರಬಕವಿ-ಬನಹಟ್ಟಿ: ಸಮೀಪದ ಕೃಷ್ಣಾ ನದಿ ಜಾಕವೆಲ್ ಹತ್ತಿರ ಸ್ನಾನಕ್ಕೆ ತೆರಳಿದ್ದ ಬಾಲಕನೋರ್ವ ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ಭಾನುವಾರ ಬೆಳಗ್ಗೆ ನಡೆದಿದೆ.ರಬಕವಿಯಲ್ಲಿ ಸಂಬಂಧಿಕರ ಮನೆಗೆ ಶಾಲೆ ರಜೆಗೆಂದು ಆಗಮಿಸಿದ್ದ ಹುಬ್ಬಳ್ಳಿಯ ರಾಹುಲ್ ಪ್ರಕಾಶ ಅಜ್ಜನವರ(11) ಎಂಬ ಬಾಲಕ ಈಜು ಬಾರದ ಕಾರಣ ನೀರಿನಲ್ಲಿ ಮುಳುಗಿದ್ದಾನೆ. ದಿನಂಪ್ರತಿ ಬೆಳಗಿನ ಜಾವ ನೂರಾರು ಜನ ಸ್ನಾನಕ್ಕೆಂದು ತೆರಳಿದಾಗ ಗೊಂದಲದ ಮಧ್ಯ ಬಾಲಕ ನೀರಿಗಿಳಿದಿದ್ದಾನೆ.

ಬಾಲಕನ ಜೊತೆಗೆ ಸಂಬಂಧಿ ಹುಡುಕಾಟದಲ್ಲಿರುವಾಗ ನೀರಿನೊಳಗೆ ಇಳಿದಿದ್ದು ಅರಿವಾಗಿದೆ. ಅಲ್ಲಿದ್ದ ಜನರು ಹುಡುಕಾಟದಲ್ಲಿ ವಿಫಲರಾಗಿದ್ದಾರೆ. ನಂತರ ಅಗ್ನಿ ಶಾಮಕದಳದ ತಂಡದಿಂದ ಸಹಾಯಕ ಠಾಣಾಧಿಕಾರಿ ರಮೇಶ ಚಿವಟೆ, ರಾಮು ಸನದಿ, ಶಿವಾನಂದ ಮೇಲಾಪೂರ, ಬರಮಪ್ಪ ಕಟಗಿ ಸೇರಿದಂತೆ ಏಳೆಂಟು ಜನರ ತಂಡದ ನೇತೃತ್ವದಲ್ಲಿ ಆತನನ್ನು ನೀರಿನಿಂದ ಹೊರಕ್ಕೆ ತೆಗೆದು ಆಸ್ಪತ್ರೆಗೆ ಸಾಗಿಸಿದರೂ ಪ್ರಯೋಜನವಾಗದೆ ಕೊನೆಯುಸಿರೆಳೆದಿದ್ದಾನೆ. ಈ ಕುರಿತು ತೇರದಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿಸಿದ್ದಾರೆ.

ಧಾರವಾಡದಲ್ಲಿ ಆಲಿಕಲ್ಲು ಮಳೆ



ಧಾರವಾಡ: ಕಳೆದ ಕೆಲವು ದಿನಗಳಿಂದ ನೆತ್ತಿ ಸುಡುವ ಬಿಸಿಲಿನಿಂದ ಕಂಗೆಟ್ಟಿದ್ದ ಧಾರವಾಡದ ಜನತೆಗೆ ವರುಣ ತಂಪೆರೆದಿದ್ದು, ಭಾನುವಾರ ಸುರಿದ ಧಾರಾಕಾರ ಆಲಿಕಲ್ಲು ಮಳೆ ಇಳೆಯನ್ನು ತಂಪಾಗಿಸಿದೆ.

ಬಿಸಿಲ ಬೇಗೆಗೆ ಬ್ರೇಕ್: ಬೆಳಗ್ಗೆಯಿಂದಲೇ ಸೂರ್ಯನ ಪ್ರಖರತೆ ಹೆಚ್ಚಾಗಿದ್ದು, ಮಧ್ಯಾಹ್ನ 3 ಗಂಟೆಯ ಸುಮಾರಿಗೆ ದಿಢೀರ್ ಬದಲಾದ ಹವಾಮಾನದಿಂದಾಗಿ ಆಕಾಶ ಮೋಡ ಕವಿದು, ಗುಡುಗು, ಮಿಂಚಿನ ಅಬ್ಬರದೊಂದಿಗೆ ಮಳೆ ಆರಂಭವಾಯಿತು.

ಆಲಿಕಲ್ಲುಗಳ ಆಟ: ನಗರದ ಸಪ್ತಾಪುರ, ಲಕಮನಹಳ್ಳಿ, ಹೊಸಯಲ್ಲಾಪುರ ಹಾಗೂ ಜಿಲ್ಲಾಧಿಕಾರಿ ಕಚೇರಿ ಆವರಣ ಸೇರಿದಂತೆ ಹಲವೆಡೆ ಮಳೆಯ ಜೊತೆಗೆ ಭಾರೀ ಪ್ರಮಾಣದಲ್ಲಿ ಆಲಿಕಲ್ಲುಗಳು ಬಿದ್ದಿವೆ. ರಸ್ತೆಯ ಮೇಲೆ ಹರಡಿದ ಬಿಳಿ ಆಲಿಕಲ್ಲುಗಳನ್ನು ಕಂಡು ಮಕ್ಕಳು ಸಂಭ್ರಮಿಸಿದರು.ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಸುರಿದ ಈ ಮಳೆಯಿಂದಾಗಿ ನಗರದ ತಗ್ಗು ಪ್ರದೇಶಗಳಲ್ಲಿ ನೀರು ನಿಂತು ವಾಹನ ಸವಾರರು ಸ್ವಲ್ಪ ತೊಂದರೆ ಅನುಭವಿಸಿದರು.

ರೈತರಲ್ಲಿ ಸಂತಸ, ಕೆಲವೆಡೆ ಆತಂಕ: ಈ ಅಕಾಲಿಕ ಮಳೆ ವಾತಾವರಣಕ್ಕೆ ತಂಪೆರೆದಿರುವುದು ಜನರಿಗೆ ನೆಮ್ಮದಿ ತಂದಿದ್ದರೂ, ಮಾವು ಮತ್ತು ಬೇಸಿಗೆ ಬೆಳೆ ಬೆಳೆದ ರೈತರಲ್ಲಿ ಸ್ವಲ್ಪ ಆತಂಕ ಮೂಡಿಸಿದೆ. ಹೂ ಬಿಟ್ಟಿರುವ ಮರಗಳಿಗೆ ಆಲಿಕಲ್ಲು ಏಟಿನಿಂದ ಹಾನಿಯೂ ಉಂಟಾಗಿದೆ. ಒಟ್ಟಿನಲ್ಲಿ ಭಾನುವಾರದ ರಜಾ ದಿನದಂದು ಸುರಿದ ಈ ಮಳೆಯು ಧಾರವಾಡದ ಜನರಿಗೆ ಬಿಸಿಲಿನಿಂದ ದೊಡ್ಡ ಮಟ್ಟದ ರಿಲೀಫ್ ನೀಡಿದೆ.

ಮುನ್ಸೂಚನೆ

ಮುಂದಿನ ಎರಡು ದಿನ ಜಿಲ್ಲೆಯಲ್ಲಿ ಇದೇ ರೀತಿಯ ಮೋಡ ಕವಿದ ವಾತಾವರಣ ಹಾಗೂ ಸಂಜೆ ವೇಳೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬಿರುಗಾಳಿಗೆ ವಿದ್ಯುತ್ ಕಂಬಗಳು ಧರೆಗೆ



ಕೊಲ್ಹಾರ: ಕಳೆದ ಕೆಲವು ದಿನಗಳಿಂದ ಬಿಸಿಲಿನ ಧಗೆಯಿಂದ ಕಂಗೆಟ್ಟಿದ್ದ ಜನರಿಗೆ ಪಟ್ಟಣದಲ್ಲಿ ಸತತವಾಗಿ ಒಂದು ಗಂಟೆವರೆಗೂ ಸುರಿದ ಮಳೆಯಿಂದ ಸಕಲ ಜೀವಿಗಳಿಗೂ ಮತ್ತು ರೈತರ ಮೊಗದಲ್ಲಿ ಮಂದಹಾಸ ಮೂಡಿದೆ.

ಪಟ್ಟಣದಲ್ಲಿ ಸುರಿದ ಬಿರುಗಾಳಿ ಸಹಿತ ಮಳೆಯಿಂದಾಗಿ ಇಂದಿರಾ ಕ್ಯಾಂಟಿನ್ ಮುಂಭಾಗದ ರಸ್ತೆಯ ಮಧ್ಯದಲ್ಲಿ ವಿದ್ಯುತ್ ಕಂಬಗಳು ಧರೆಗೆ ಉರುಳಿವೆ ಹಾಗೂ ಮನೆಯ ಮುಂದಿನ ಪತ್ರಾಸ್ ಹಾರಿ ಹೋದ ಘಟನೆಗಳು ಸಂಭವಿಸಿದೆ ಎಂದು ತಹಶೀಲ್ದಾರ್ ಸಂತೋಷ ಮ್ಯಾಗೇರಿ ಹಾಗೂ ಹೆಸ್ಕಾಂ ಅಧಿಕಾರಿ ಎಸ್ ಎಸ್ ಪಡಸಲಗಿ ಮಾಹಿತಿ ನೀಡಿದರು. ಕೊಲ್ಹಾರ ತಾಲೂಕಿನ ರೋಣಿಹಾಳ ಮಲಘಾಣ ಕೆಲವೆಡೆ ಆಲಿಕಲ್ಲು ಮಳೆಯಾಗಿದೆ ತೆಲಗಿ, ಕವಲಗಿ ಸೇರಿದಂತೆ ಈ ಭಾಗದಲ್ಲಿ ಬಿರುಗಾಳಿ ಸಹಿತ ಅಲ್ಪ ಪ್ರಮಾಣದ ಮಳೆಯಾಗಿದೆ.

ಭೂಮಿಗೆ ತಂಪೆರೆದ ಮಳೆರಾಯ



ಕೆರೂರ: ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಭಾನುವಾರ ಸಂಜೆ ಅರ್ಧ ಗಂಟೆಗೂ ಹೆಚ್ಚು ಕಾಲ ಆಲಿಕಲ್ಲು ಸಹಿತ ಮಳೆ ಸುರಿಯಿತು.ಬಿಸಿಲ ತಾಪದಿಂದ ಕೂಡಿದ್ದ ಭೂಮಿಗೆ ತಂಪು ಎರೆದಂತಾಯಿತು. ಕಳೆದ ಒಂದು ವಾರದಿಂದ ಬಿಸಿಲಿನ ತಾಪದಿಂದ ಜನರಿಗೆ ಖುಷಿಯಾಯಿತು. ಬಿರುಸಿನ ಗಾಳಿ ಬಿಸಿದ ಪರಿಣಾಮ ಯಂಕಂಚಿ, ಮತ್ತಕಟ್ಟಿ ಗ್ರಾಮದ ರಸ್ತೆಗಳಲ್ಲಿ ಗಿಡಗಳು ನೆಲಕಚ್ಚಿವೆ. ಗಿಡಗಳು ರಸ್ತೆ ಮೇಲೆ ಮುರಿದು ಬಿದ್ದಿದ್ದರಿಂದ ವಾಹನ ಸಂಚಾರದಲ್ಲಿ ಕೆಲ ಹೊತ್ತು ತೊಂದರೆ ಉಂಟಾಯಿತು.ಮಳೆಯ ರಭಸಕ್ಕೆ ರಸ್ತೆ ಮೇಲೆ ಚರಂಡಿ ನೀರು ತುಂಬಿ ಹರಿದು, ಜೋರಾದ ಗಾಳಿ ಹಾಗೂ ಮಳೆಯಿಂದ ಪಟ್ಟಣದಲ್ಲಿ ಕೆಲಕಾಲ ವಿದ್ಯುತ್ ವ್ಯತ್ಯಯ ಉಂಟಾಯಿತು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಮರಡಿ ಬಸವೇಶ್ವರ ರಥೋತ್ಸವ ಇಂದು

ಯರಗಟ್ಟಿ: ಪಟ್ಟಣದ ಮರಡಿ ಬಸವೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಏ. 20ರಂದು ಮರಡಿ ಬಸವೇಶ್ವರ ದೇವಾಲಯದಲ್ಲಿ ಬೆಳಿಗ್ಗೆ ಮರಡಿ ಬಸವೇಶ್ವರ ಗೆದ್ದುಗೆಗೆ ರುದ್ರಾಭಿಷೇಕ, ವಿಶೇಷ ಅಲಂಕಾರ, ಪುಷ್ಪಾರ್ಚನೆ ಹಾಗೂ ಮಧ್ಯಾಹ್ನ 12ಗಂಟೆಗೆ ಸಾಮೂಹಿಕ ವಿವಾಹ ಮತ್ತು ಸಂಜೆ ರಥೋತ್ಸವ, ಜರುಗಲಿವೆ.

ಗ್ರಾಮದೇವಿಯರ ಜಾತ್ರೆ ಇಂದಿನಿಂದ

ಯರಗಟ್ಟಿ: ಸಮೀಪದ ಸೊಪ್ಪಡ್ಲ ಗ್ರಾಮದಲ್ಲಿ ಇಂದಿನಿಂದ 5 ದಿನಗಳ ವರೆಗೆ ಶ್ರೀ ಗ್ರಾಮದೇವಿಯರ ಜಾತ್ರಾ ಮಹೋತ್ಸವ ನಡೆಯುವುದು. ಏ. 20ರಂದು ಬೆಳಿಗ್ಗೆ ಬಸವೇಸ್ವರ ಮೂರ್ತಿ ಅನಾವರಣ, ಸಂಜೆ 4ಕ್ಕೆ ಸಕಲ ವಾದ್ಯಗಳೊಂದಿಗೆ ದೇವಿ ಮೂರ್ತಿ ದೇವಸ್ಥಾನಕ್ಕೆ ತರುವುದು. ರಾತ್ರಿ 9ಕ್ಕೆ ಗಾಯನ ಕಾರ್ಯಕ್ರಮ. ಏ.21ರಂದು ಬೆಳಿಗ್ಗೆ ಸುಮಂಗಲೇಯರಿಂದ



ಕುಂಭಮೇಳ, ಗ್ರಾಮದ ಎಲ್ಲ ದೇವತೆಗಳ ಉಡಿ ತುಂಬುವ ಕಾರ್ಯಕ್ರಮ, ರಾತ್ರಿ 10ಕ್ಕೆ ದೇವಿಯರ ಹೊನ್ನಾಟ ನಡೆಯುವದು. ಏ. 22 ರಂದು ಮುಂಜಾನೆ ಉಡಿ ತುಂಬುವ ಕಾರ್ಯಕ್ರಮ, 4ಕ್ಕೆ ದೇವಿ ದರ್ಶನ, ರಾತ್ರಿ 10ಕ್ಕೆ ಜಗಜ್ಯೋತಿ ಬಸವೇಶ್ವರ ನಾಟಕ ಪ್ರದರ್ಶನ ನಡೆಯಲಿದೆ. ಏ. 23 ರಂದು ಮುಂಜಾನೆ ಭಕ್ತರಿಂದ ಉಡಿ ತುಂಬುವುದು, ಸಂಜೆ 4ಕ್ಕೆ ಗ್ರಾಮದ ಪ್ರಮುಖ ಬೀದಿಯಲ್ಲಿ ದೇವಿಯ ಮೆರವಣಿಗೆ, ರಾತ್ರಿ 10ಕ್ಕೆ ಸಾಮಾಜಿಕ ನಾಟಕ ಪ್ರದರ್ಶನ. ಏ. 24 ಕ್ಕೆ ದೇವಿಗೆ ಭಕ್ತರಿಂದ ಉಡಿ ತುಂಬುವುದು, ರಾತ್ರಿ 8ಕ್ಕೆ ದೇವಿಯ ಸೀಮೆಗೆ ಕಳುಹಿಸುವುದು. ವಿವಿಧ ಮಠಗಳ ಸ್ವಾಮಿಜಿಗಳು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು ಎಂದು ಸೊಪ್ಪಡ್ಲದ ಗ್ರಾಮದೇವಿ ಜಾತ್ರಾ ಕಮಿಟಿ ಪ್ರಕಟಣೆ ತಿಳಿಸಿದೆ.

ಆಕ್ಷೇಪಣೆಗೆ ಆಹ್ವಾನ

ಬೆಳಗಾವಿ: ವಾಕರಸಾ ಸಂಸ್ಥೆ ಬೆಳಗಾವಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಬೆಳಗಾವಿ ಬಸ್ ಘಟಕ-2 ಆವರಣದಲ್ಲಿ ಇರುವ ಸಿಸಂ-1, 43 ಸಾಗವಾನಿ ಮತ್ತು 32 ವಿವಿಧ ಜಾತಿಯ ಮರಗಳು ಒಟ್ಟು 76 ಮರಗಳನ್ನು ತೆರವುಗೊಳಿಸಲು ಪ್ರಸ್ತಾವನೆ ಸಲ್ಲಿಸಿದ್ದಾರೆ. ಸದರಿ ಪ್ರದೇಶದಲ್ಲಿ 50 ಮರಗಳಿಗಿಂತ ಹೆಚ್ಚಿಗೆ ಮರಗಳು ಇರುವುದರಿಂದ ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ ಪ್ರಕಾರ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಪಡೆಯಬೇಕಾಗಿದೆ. ಸಾರ್ವಜನಿಕರ ಆಕ್ಷೇಪಣೆಗಳಿದಲ್ಲಿ ಏ.27 ರೊಳಗಾಗಿ ಕಚೇರಿಗೆ ಲಿಖಿತವಾಗಿ ಸಲ್ಲಿಸುವುದು ಅಥವಾ ಏ.27ರಂದು ಬೆಳಿಗ್ಗೆ 11 ಗಂಟೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಏರ್ಪಡಿಸಲಾಗುವ ಸಾರ್ವಜನಿಕ ಅಹವಾಲು ಸಭೆಯಲ್ಲಿ ಪ್ರಸ್ತಾಪಿಸಬಹುದಾಗಿದೆ ಎಂದು ಬೆಳಗಾವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಗೋಕಾಕ: ಇಲ್ಲಿನ ಇನರವಿಲ್ ಸಂಸ್ಥೆ ಹಾಗೂ ಸ್ವರ-ಸಂಗಮ ಇವುಗಳ ಸಂಯುಕ್ತಾಶ್ರಯದಲ್ಲಿ ಶನಿವಾರದಂದು ನಗರದ ರೋಟರಿ ಸಭಾಂಗಣದಲ್ಲಿ ನಾಗಸರಸ್ವತಿ ಆಶಾ ಭೋಸಲೆ ಸ್ಮರಣಾರ್ಥ ಆಯೋಜಿಸಿದ್ದ ಸ್ವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಿರಿಗನ್ನಡ ಮಹಿಳಾ ವೇದಿಕೆಯ ರಾಜ್ಯಾಧ್ಯಕ್ಷೆ ರಜನಿ ಜಿರಗ್ಯಾಳ, ಡಾ.ಶ್ರೃಸ್ರೃತ್ ಕಡಳಗೀಕರ, ಇನರವಿಲ್ಲ ಸಂಸ್ಥೆಯ ಅಧ್ಯಕ್ಷೆ ಅನುಪಾ ಕೌಶಿಕ್, ಸ್ವರಸಂಗಮದ ಅಧ್ಯಕ್ಷೆ ವಿದ್ಯಾ ಮಗದುಮ್ಮ ಇದ್ದರು.



ಹಿರೇಬಾಗೆವಾಡಿ: ಸಮೀಪದ ಶಿಂದೊಳ್ಳಿಯ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಸವದತ್ತಿ ಎಲ್ಲಮ್ಮನ ಗುಡ್ಡದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ತೃತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ತಯಾರಿ ಶಿಬಿರದಲ್ಲಿ ಭಾಗವಹಿಸಿ ರಾಜ್ಯ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಅಧ್ಯಕ್ಷ ಡಾ.ಶಿವಕುಮಾರ ರೇವಶೆಟ್ಟಿ, ಪ್ರಾಂಶುಪಾಲೆ ರಾಜಶ್ರೀ ರೇವಶೆಟ್ಟಿ, ಸ್ಕೌಟ್ಸ್ ಮತ್ತು ಗೈಡ್ಸ್ ಮಾಸ್ಟರ್ ಶೆಟ್ಟು ಪಾಟೀಲ, ವಿದ್ಯಾ ಪಾಟೀಲ ಹಾಗೂ ಸಿಬ್ಬಂದಿ ಹರ್ಷ ವ್ಯಕ್ತ ಪಡಿಸಿದ್ದಾರೆ.

ಎತ್ತುಗಳ ಭವ್ಯ ಮೆರವಣಿಗೆಗೆ ಚಾಲನೆ

ಹುಕ್ಕೇರಿ: ದೇಶ ವಿದೇಶಗಳಲ್ಲಿ ಬಸವಣ್ಣನವರ ಜಯಂತಿಯನ್ನು ವಿಶ್ವವೇ ಆಚರಿಸುತ್ತಿದೆ. ಇದಕ್ಕೆ ಅವರ ಅನುಸರಿಸಿದ ಕಾಯಕ ತತ್ವ ಮತ್ತು ಸರ್ವರಿಗೂ ಸಮಾನತೆ ಒದಗಿಸಿದ ಧ್ಯೇಯವೇ ಕಾರಣವಾಗುತ್ತದೆ ಎಂದು ಹಿರೇಮಠದ ಚಂದ್ರಶೇಖರ ಶಿವಾಚಾರ್ಯರು ಹೇಳಿದರು. ಸ್ಥಳೀಯ ಅಡವಿಸಿದ್ದೇಶ್ವರ ಮಠದ ಬಳಿ ಬಸವ ಜಯಂತಿ ನಿಮಿತ್ತ ತಾಲೂಕಾಡಳಿತ ಮತ್ತು ಸರ್ವ ಧರ್ಮೀಯರು ಸೇರಿಕೊಂಡು ಆಯೋಜಿಸಿದ ಎತ್ತುಗಳ ಭವ್ಯ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು. ವಿರಕ್ತಮಠದ ಶಿವಬಸವ ಸ್ವಾಮೀಜಿ, ಮಾಜಿ ಸಚಿವ ಶಶಿಕಾಂತ ನಾಯಿಕ ಮತ್ತು ತಹಶೀಲ್ದಾರ್ ಬಲರಾಮ ಕಟ್ಟಿಮನಿ ಅವರು ಮಾತನಾಡಿ ಎಲ್ಲರನ್ನೂ ಗೌರವಿಸುವುದರ ಜತೆಗೆ ಕಾಯಕ ಮಾಡಿ ಬದುಕಿ ಎಂದು ಬಸವಣ್ಣನವರು ಹೇಳಿದ ಮಾತು ಇವತ್ತು ಅಕ್ಷರಶಃ ಅನ್ವಯಿಸುತ್ತದೆ ಎಂದರು. ಪ್ರಾರಂಭದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ನಂತರ ಭಾವಚಿತ್ರ ಸಹಿತ ಎತ್ತುಗಳ ಭವ್ಯ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗಿತು. ಸುಭಾಸ ನಾಯಿಕ, ಸುರೇಶ ಜಿನರಾಳಿ, ಪರಗೌಡ ಪಾಟೀಲ,ಎಸ್. ನಂಜುಂಡಪ್ಪ, ಮುಸ್ಲಿಂ ಸಮಾಜದ ಅಧ್ಯಕ್ಷ ಸಲೀಮ ನದಾಫ ಅಧಿಕಾರಿಗಳಾದ ಬಿಇಒ ಪ್ರಭಾವತಿ ಪಾಟೀಲ, ಕ್ಷೇತ್ರ ಸಮನ್ವಯಾಧಿಕಾರಿ ಎ.ಎಸ್.ಪದ್ಮನ್ನವರ, ಪುರಸಭೆ ಮುಖ್ಯಾಧಿಕಾರಿ ಈಶ್ವರ ಸಿದ್ನಾಳ, ಸಿಡಿಪಿಒ ಹೊಳೆಪ್ಪ ಎಚ್. ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಆರ್.ಬಿ.ನಾಯ್ಕರ, ಎ.ಆಯ್.ಕೋಟಿವಾಲೆ, ವಿನಾಯಕ ನಾಯಿಕ ಮತ್ತಿತರರಿದ್ದರು.



ಹುಕ್ಕೇರಿ: ಸ್ಥಳೀಯ ಅಡವಿಸಿದ್ದೇಶ್ವರ ಮಠದ ಬಳಿ ಬಸವ ಜಯಂತಿ ನಿಮಿತ್ತ ತಾಲೂಕಾಡಳಿತ ಮತ್ತು ಸರ್ವಧರ್ಮೀಯರು ಸೇರಿಕೊಂಡು ಆಯೋಜಿಸಿದ್ದ ಎತ್ತುಗಳ ಭವ್ಯ ಮೆರವಣಿಗೆಗೆ ಶ್ರೀಗಳು ಚಾಲನೆ ನೀಡಿದರು.

ಯರಗಟ್ಟಿ ಅಗ್ನಿಶಾಮಕ ಠಾಣೆ ನೂತನ ಕಟ್ಟಡ ಅನಾಥ

ಉದ್ಘಾಟನೆ ಭಾಗ್ಯ ಯಾವಾಗ?

ಈರಣ್ಣಾ ಎಚ್. ಹುಲ್ಲೂರ

ದಿಗಂತ ವಿಶೇಷ

ಯರಗಟ್ಟಿ: ಯರಗಟ್ಟಿ ತಾಲೂಕು ಕೇಂದ್ರದಲ್ಲಿ ಅಗ್ನಿಶಾಮಕ ಠಾಣೆಯ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ಬಣ್ಣ ಬಳಿದು ಅಂದಗೊಳಿಸಲಾಗಿದೆ. ಆದರೆ, ಇದಕ್ಕಿನ್ನೂ ಉದ್ಘಾಟನೆಗೆ ಮುಹೂರ್ತ ಕೂಡಿ ಬಂದಿಲ್ಲ.

ಯರಗಣವಿ ರಸ್ತೆಯಲ್ಲಿನ ಸಿ.ಎಂ. ಮಾಮನಿ ಸರ್ಕಾರಿ ಕಾಲೇಜಿನ ಪಕ್ಕದಲ್ಲಿ ನಿರ್ಮಾಣಗೊಂಡಿರುವ ನೂತನ ಅಗ್ನಿಶಾಮಕ ಠಾಣೆಯ ಕಟ್ಟಡದ ವ್ಯಥೆ ಇದು. ಅನೇಕ ಕಡೆ ಹುದ್ದೆ ಸೃಷ್ಟಿ ಮಾಡಲಾಗಿರುತ್ತದೆ. ಕಟ್ಟಡವಿಲ್ಲದೆ ಅಧಿಕಾರಿ ಮತ್ತು ಸಿಬ್ಬಂದಿ ಪರದಾಡುತ್ತಿರುತ್ತಾರೆ. ಇಲ್ಲಿ ಎಲ್ಲವೂ ತಿರುವು ಮುರುವು. ಸುಸಜ್ಜಿತ ಕಟ್ಟಡವಿದೆ. ಆದರೆ, ಹುದ್ದೆ ಮಾತ್ರ ಸೃಷ್ಟಿಯಾಗಿಲ್ಲ.

ತಾಲೂಕು ಕೇಂದ್ರವಾಗಿರುವ ಯರಗಟ್ಟಿ ಅಗ್ನಿಶಾಮಕ ಠಾಣೆಗೆ ಹುದ್ದೆ ಅಗತ್ಯವಿದೆ. ಆದರೆ, ಸರ್ಕಾರ ಈ ಭಾಗ್ಯ ಕರುಣಿಸದೆ ಇರುವುದು ರೈತರ ಅಸಮಾಧಾನಕ್ಕೂ ಕಾರಣವಾಗಿದೆ. 'ಸವದತ್ತಿ ಕಚೇರಿ ಅವಲಂಬನೆ ತಪ್ಪಿಸಬೇಕಿದೆ' ಎನ್ನುತ್ತಾರೆ.

ಕಷ್ಟವಾಗಿರುವ ಕಚೇರಿ ಅನುಷ್ಠಾನ: ಯರಗಟ್ಟಿ ತಾಲೂಕು ಕೇಂದ್ರ ಘೋಷಣೆಯಾಗಿ ವರ್ಷಗಳು ಉರುಳಿದೆ. ತಹಶೀಲ್ದಾರ್ ಹುದ್ದೆ ಸೃಜಿಸಿ ಬರುವ ಡಿಸೆಂಬರ್‌ಗೆ ಭರ್ತಿ 6 ವರ್ಷ, ತಾಲೂಕಿಗೆ ಅಗತ್ಯವಿರುವ ವಿವಿಧ ಇಲಾಖೆಗಳ ತಾಲ್ಲೂಕು ಕಚೇರಿಗಳ ಅನುಷ್ಠಾನಕ್ಕೆ ಸರ್ಕಾರ ಮೀನಮೇಷ ಎಣಿಸುತ್ತಿದೆ. ಸರ್ಕಾರದಿಂದ ನಿರ್ಣಾಯಕ ತೀರ್ಮಾನ ಆಗದ ಕಾರಣ ಅಂತಿಮವಾಗಿ ಸಾರ್ವಜನಿಕರು ತೊಂದರೆಗೆ ಒಳಗಾಗಬೇಕಾದ ಸನ್ನಿವೇಶ ನಿರ್ಮಾಣವಾಗುತ್ತದೆ' ಎನ್ನುತ್ತಾರೆ ಕೃಷಿ ಸಮಾಜದ ರಾಜ್ಯ ಯುವ ಘಟಕ ಅಧ್ಯಕ್ಷ ಮಹಾಂತೇಶ ತೋಟಗಿ.



ಮಾಜಿ ಶಾಸಕರು ಹಾಗೂ ವಿಧಾನ ಸಭಾ ಉಪ ಸಭಾಪತಿ ದಿ. ಆನಂದ ಮಾಮನಿ ಅಧಿಕಾರ ಅವಧಿಯಲ್ಲಿ ಅಗ್ನಿ ಶಾಮಕ ಠಾಣೆಯ ಪ್ರಾರಂಭಿಸಲು ಮಂಜೂರಾತಿ ನೀಡಿಸಿದ್ದರು. ನಂತರ ನೂತನ ಶಾಸಕ ವಿಶ್ವಾಸ ವೈದ್ಯ ಅವರ ಶ್ರಮದಿಂದ ಕಟ್ಟಡ ನಿರ್ಮಾಣಕ್ಕೆ 3 ಕೋಟಿರೂ. ಅನುದಾನ ಬಿಡುಗಡೆಯಾಗಿತ್ತು ಎಂಬ ಮಾಹಿತಿ ಇದೆ. 2024ರ ಡಿ. 3ರಂದು ಶಾಸಕ ವಿಶ್ವಾಸ ವೈದ್ಯ ಅವರು ಭೂಮಿಪೂಜೆ ನೆರವೇರಿಸಿದ್ದರು. ಈಗ ಕಟ್ಟಡದ ಕಾಮಗಾರಿಯು ಪೂರ್ಣಗೊಂಡಿದೆ. ಉದ್ಘಾಟನೆ ಕಾಣದೆ ಬೀಗ ಜಡಿದುಕೊಂಡು ಅನಾಥವಾಗಿ ನಿಂತಿರುವುದನ್ನು ನೋಡಿದರೆ ಖೇದವೆನಿಸುತ್ತದೆ' ಎಂದು ಅವರು ಬೇಸರಪಟ್ಟರು.

ಈ ಕಚೇರಿ ಕಾರ್ಯನಿರ್ವಹಿಸಬೇಕು ಎಂದರೆ, ಅಗ್ನಿಶಾಮಕ ಠಾಣಾಧಿಕಾರಿ, ಕಚೇರಿ ಸಹಾಯಕ ಅಗ್ನಿಶಾಮಕ ಅಧಿಕಾರಿ, ಪ್ರಮುಖ ಅಗ್ನಿಶಾಮಕರು, ಅಗ್ನಿಶಾಮಕ ಚಾಲಕರು ಸೇರಿದಂತೆ ಕೆಲವು ಹುದ್ದೆಗಳನ್ನು ಸರ್ಕಾರ ಸೃಜಿಸಬೇಕಿದೆ. ಕಟ್ಟಡ ನಿರ್ಮಾಣವಾಗಿದೆ ಎಂದು ಉದ್ಘಾಟಿಸಿದರೆ, ಮಾಡುವುದಾದರೂ ಏನು? ಹುದ್ದೆಗಳು ಸೃಷ್ಟಿಯಾದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ' ಎಂದು ಅಗ್ನಿಶಾಮಕ ಇಲಾಖೆ ಮೂಲಗಳು ತಿಳಿಸುತ್ತವೆ.

> **ಯರಗಟ್ಟಿಯಲ್ಲಿ ನಿರ್ಮಿಸಲಾದ ಅಗ್ನಿಶಾಮಕ ಕಚೇರಿಯನ್ನು ಉದ್ಘಾಟನೆಗೆ ಗೃಹ ಸಚಿವರ ಭೇಟಿಮಾಡಿ ದಿನಾಂಕ ನಿಗದಿ ಪಡಿಸಿ ಉದ್ಘಾಟಿಸಲು ಕೇಳಲಾಗಿದೆ.**
> ■ **ವಿಶ್ವಾಸ ವಸಂತ ವೈದ್ಯ, ಶಾಸಕ ಸವದತ್ತಿ ಯಲ್ಲಮ್ಮ ವಿಧಾನ ಸಭಾ ಕ್ಷೇತ್ರ**

> **ಈಗಷ್ಟೇ ಯರಗಟ್ಟಿ ಅಗ್ನಿಶಾಮಕ ಠಾಣೆಯ ಕಾಮಗಾರಿ ಮುಗಿದಿದ್ದು, ನಮ್ಮ ಇಲಾಖೆಗೆ ಹಸ್ತಾಂತರ ಮಾಡಲಾಗಿದೆ ಮತ್ತು ಸಿಬ್ಬಂದಿ ಅನುಮೋದನೆಗೆ ಹಾಗೂ ವಾಹನ ಖರಿದಿ ಮಂಜುರಾತಿಗೆ ಕಳಿಸಲಾಗಿದೆ. ಶೀಘ್ರವೇ ಕಟ್ಟಡವನ್ನು ಉದ್ಘಾಟಿಸಲಾಗುವುದು**
> ■ **ರಂಗನಾಥ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಬೆಳಗಾವಿ**

> **ಜಿಲ್ಲಾ ಅಗ್ನಿಶಾಮ ಅಧಿಕಾರಿಗಳೊಂದಿಗೆ ಮಾತನಾಡಿ ಈಗಾಗಲೇ ಸವದತ್ತಿ ಅಗ್ನಿಶಾಮಕ ಠಾಣೆಯಲ್ಲಿ ಎರಡು ವಾಹನಗಳಿದ್ದು ಅದರಲ್ಲಿ ಒಂದು ವಾಹನವನ್ನು ಯರಗಟ್ಟಿ ಅಗ್ನಿಶಾಮಕ ಠಾಣೆಗೆ ಸ್ಥಳಾಂತರ ಮಾಡಿ ಉದ್ಘಾಟನೆ ಆಗುವರೆಗು ಕೆಸಲ ಮಾಡಲು ಹಾಗೂ ರೈತರಿಗೆ ಹಾಗೂ ಸಾರ್ವಜನಿಕರಿಗೆ ಅನಕೂಲ ಮಾಡಿಕೊಡಲಾಗುವುದು.**
> ■ **ಮಹಮ್ಮದ ರೋಷನ, ಜಿಲ್ಲಾಧಿಕಾರಿಗಳು ಬೆಳಗಾವಿ**

ಜಾತ್ರೆ: ಗಮನ ಸೆಳೆದ ಶರತ್ತುಗಳು

ರಾಯಬಾಗ: ತಾಲೂಕಿನ ನಿಡಗುಂದಿ ಗ್ರಾಮದ ಲಕ್ಷ್ಮೀದೇವಿ, ಗುರು ಸಿದ್ದೇಶ್ವರ, ಬಸವೇಶ್ವರ ಜಾತ್ರಾ ಮಹೋತ್ಸವವು ಭಾನುವಾರ ಮಹಾನೈವೇದ್ಯದೊಂದಿಗೆ ವಿಜೃಂಭಣೆಯಿಂದ ಜರುಗಿತು. ಜಾತ್ರೆಯ ನಿಮಿತ್ತ ವಿವಿಧ ಶರ್ಯತ್ತುಗಳು ಜರುಗಿದವು.

ಓಡುವ ಶರತ್ತು: ಶಿವಾನಂದ ನಾಯಿಕ ಪ್ರಥಮ, ಚೇತನ ಕೊಣ್ಣೂರ ದ್ವಿತೀಯ, ಕುಮಾರ ಬಳಗಾನೆ ತೃತೀಯ ಬಹುಮಾನ ಪಡೆದರು.

ಸೈಕಲ್ ಶರತ್ತು: ಮಾರುತಿ ಬಡಿಗವಾಡ ಪ್ರಥಮ, ಬಾಳು ಹಿರೇಮಠ ದ್ವಿತೀಯ, ಬಸು ಧರ್ಮಟ್ಟಿ ತೃತೀಯ ಬಹುಮಾನ ಪಡೆದರು.

ರಂಗೋಲಿ ಸ್ಪರ್ಧೆ: ಪ್ರೇಮಾ ಪಾಟೀಲ ಪ್ರಥಮ, ಪ್ರೀತಿ ಕಟಾಂವಿ ದ್ವಿತೀಯ, ದೀಪಾ ಹಳಾಜೆ ತೃತೀಯ ಸ್ಥಾನ ಪಡೆದರು.

ಸ್ಲೋ ಸಾಯಕಲ್ ಶರ್ಯತ್ತು: ಸುಪ್ರೀತ ಪತ್ತಾರ ಪ್ರಥಮ, ಆದರ್ಶ ಹಳಾಜೆ ದ್ವಿತೀಯ, ನವೀನ ಮಠಪತಿ ತೃತೀಯ ಬಹುಮಾನ ಪಡೆದರು.

ಜೋಡು ಕುದುರೆ ಗಾಡಿ ಶರತ್ತು: ಚೇತನ ಖನದಾಳೆ ಪ್ರಥಮ, ಉಮೇಶ ಕುಡಚಿ ದ್ವಿತೀಯ ಹಾಗೂ ಸುನೀಲ ಪೂಜೇರಿ ತೃತೀಯ ಬಹುಮಾನ ಪಡೆದರು.

ವಿಜೇತರಿಗೆ ಬಾಳಪ್ಪ ಪೂಜೇರಿ, ಅಣ್ಣಾಸಾಹೇಬ ಖೆಮಲಾಪೂರೆ, ಲಕ್ಷ್ಮಣ ಗವಾನೆ, ಗೋರಖ ನಾಯಿಕ, ಜಿನೇಂದ್ರ ಖೆಮಲಾಪೂರೆ, ಬಾಳೇಶ ಹಳಾಜೆ, ಪ್ರಭು ಭಿರಡಿ, ಸದಾಶಿವ ಠೋಮರೆ, ಸಿದ್ರಾಯ ಹಿರೇಕೊಡಿ, ಸುಕುಮಾರ ಖೆಮಲಾಪೂರೆ, ವಿರೂಪಾಕ್ಷ ಗೌಡಾಡಿ, ಯಮನಪ್ಪ ಭಜಂತ್ರಿ, ಭೂಪಾಲ ಪುಣೇಕರ, ಮೋಹನ ಮೇಖಳಿ, ಧನಂಜಯ ಖೆಮಲಾಪೂರೆ, ಪ್ರಮೋದ ಖೆಮಲಾಪೂರೆ, ಮಾಯಪ್ಪ ಭಜಂತ್ರಿ, ಮಾಯಪ್ಪ ಹಿರೇಕೊಡಿ, ಸದಾಶಿವ ಹಿರೇಕೊಡಿ ವಿತರಿಸಿದರು.

> **ಕುದುರೆ ಶರತ್ತು**
> ಸಿದ್ರಾಮ ಕೆಂಪಟ್ಟಿ ಪ್ರಥಮ, ಗಣಪತಿ ನಿಲಜಿ ದ್ವಿತೀಯ, ಮಾಳಪ್ಪ ಹಿರೇಕೊಡಿ ತೃತೀಯ ಬಹುಮಾನ ಪಡೆದರು.



ಶಿವ-ಬಸವ ಜಯಂತಿ ಸಂಭ್ರಮ

ಬೆಳಗಾವಿ: ಇಲ್ಲಿನ ಸರ್ದಾರ್ ಮೈದಾನದಲ್ಲಿ ಜೈ ಭೀಮ್ ಯುವಕ ಮಂಡಳ (ಕಂಗ್ರಾಳಿ ಗಲ್ಲಿ) ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮ್ ವಾದ) ಸಂಯುಕ್ತಾಶ್ರಯದಲ್ಲಿ ಜಗದ್ಗುರು ಬಸವೇಶ್ವರ ಮಹಾರಾಜರು ಮತ್ತು ಹಿಂದವಿ ಸ್ವರಾಜ್ಯದ ಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಸಂಭ್ರಮದಿಂದ ಆಚರಿಸಲಾಯಿತು.


ಕಾರ್ಯಕ್ರಮದ ಸಂದರ್ಭದಲ್ಲಿ ವಿವಿಧ ಗಣ್ಯರ ಸಮ್ಮುಖದಲ್ಲಿ ಮಹಾನ್ ವ್ಯಕ್ತಿತ್ವಗಳ ಪ್ರತಿಮೆಗೆ ಪುಷ್ಪಹಾರ ಅರ್ಪಿಸಿ ಗೌರವ ಸಲ್ಲಿಸಲಾಯಿತು. ಡಾ. ಬಾಬಾಸಾಹೇಬ ಅಂಬೇಡ್ಕರ್ ಜಯಂತ್ಯುತ್ಸವ ಮಹಾಮಂಡಳದ ಅಧ್ಯಕ್ಷ ಮಲ್ಲೇಶ ಚೌಗುಲೆ ಅವರು ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಗೆ ಪುಷ್ಪಹಾರ ಅರ್ಪಿಸಿದರು. ನಗರಸೇವಕ ಸಿದ್ರಾಯ ಮೆತ್ರಿ ಅವರು ಜಗದ್ಗುರು ಬಸವೇಶ್ವರ ಮಹಾರಾಜರ ಪ್ರತಿಮೆಗೆ ಗೌರವ ಸಲ್ಲಿಸಿದರು.

ಬಾಬು ಸುಳೆಭಾವಿ ಅವರಿಂದ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪಹಾರ ಅರ್ಪಿಸಲಾಯಿತು, ಹಾಗೆಯೇ ಗಜಾನನ ಸುಳಗೇಕರ್ ಅವರು ಭಗವಾನ್ ಗೌತಮ ಬುದ್ಧರ ಪ್ರತಿಮೆಗೆ ಪುಷ್ಪ ಅರ್ಪಿಸಿದರು.

ಈ ಕಾರ್ಯಕ್ರಮಕ್ಕೆ ಖಡೆಬಜಾರ್ ಪೊಲೀಸ್ ಠಾಣೆಯ ಎಎಸ್‌ಐ ಶ್ರೀಕಾಂತ್ ಜಾಧವ್ ಸೇರಿದಂತೆ ಬಾಬು ಸುಳೆಭಾವಿ, ಆಕಾಶ ಹಲಗೇಕರ, ಭಾವಕಣ್ಣ ಪಿರಗಾನೆ, ಸಂತೋಷ್ ಚೌಗುಲೆ ವಿಶಾಲ್ ಚೌಗುಲೆ, ಸಂತೋಷ್ ಹಳಗೇರ್ಕ, ಸುನಿಲ್ ಪಿರಗಾನೆ, ದುರ್ಗೇಶ್ ಮಲ್ಲಪ್ಪ ಮೆತ್ರಿ, ಅನ್ವರ್ ದ್ರಾಕ್ಷಿ, ನಿಖಿಲ್ ಮೈತ್ರಿ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಮಲ್ಲೇಶ ಚೌಗುಲೆ ಅವರು ಜಗದ್ಗುರು ಬಸವೇಶ್ವರ, ಛತ್ರಪತಿ ಶಿವಾಜಿ ಮಹಾರಾಜ, ಡಾ. ಬಾಬಾಸಾಹೇಬ ಅಂಬೇಡ್ಕರ್ ಹಾಗೂ ಭಗವಾನ್ ಗೌತಮ ಬುದ್ಧರ ವಿಚಾರಗಳನ್ನು ಸಮಾಜದಲ್ಲಿ ಹರಡಿ, ಅವನ್ನು ನೈಜ ಜೀವನದಲ್ಲಿ ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ಬೆಳಗಾವಿಯಲ್ಲಿ ಡಾ. ಅಂಬೇಡ್ಕರ್ ಜಯಂತಿ ಶಾಂತಿಯುತವಾಗಿ ನೆರವೇರಿದಂತೆ ಬಸವೇಶ್ವರ ಮತ್ತು ಶಿವಜಯಂತಿ ನಿಮಿತ್ತ ನಡೆಯುವ ಮೆರವಣಿಗೆಗಳನ್ನೂ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗೆ ಸಹಕಾರ ನೀಡಿ ಶಾಂತಿಯುತವಾಗಿ ನಡೆಸುವಂತೆ ನಾಗರಿಕರಿಗೆ ತಿಳಿಸಿದರು.



ನಾರೀಶಕ್ತಿ ವಂದನ್: ಮಹಿಳಾ ವಿರೋಧಿ ಕಾಂಗ್ರೆಸ್

ಬೆಳಗಾವಿ: ನಾರಿ ಶಕ್ತಿ ವಂದನ್ ಎಂಬ ಹೆಸರಿನ ಕಾಯ್ದೆಯನ್ನು ಲೋಕಸಭೆಯಲ್ಲಿ ಸೋಲಿಸುವ ಮೂಲಕ ಕಾಂಗ್ರೆಸ್ ತಾನು ನಾರಿ ಶಕ್ತಿ ವಿರೋಧಿ ಎನ್ನುವುದನ್ನು ಘಂಟಾಘೋಷವಾಗಿ ಸಾರಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಸಾಮಾನ್ಯ ಮಹಿಳೆಯರೂ ಲೋಕಸಭೆ, ರಾಜ್ಯಸಭೆಯಲ್ಲಿ ಪ್ರತಿನಿಧಿಗಳಾಗಬೇಕು ಎನ್ನುವುದು ಭಾರತೀಯ ಜನತಾ ಪಕ್ಷದ ನಿಲುವಾಗಿದ್ದರೆ, ಶತಾಯಗತಾಯ ಮಹಿಳೆಯರು ಹಿಂದುಳಿದವರೇ ಆಗಬೇಕು ಎನ್ನುವುದು ಕಾಂಗ್ರೆಸ್, ಸಮಾಜವಾದಿ, ಡಿಎಂಕೆ ಸೇರಿದಂತೆ ಇಂಡಿ ಒಕ್ಕೂಟದ ನಿಲುವಾಗಿದೆ. ಲೋಕಸಭೆಯಲ್ಲಿ ಈ ಪಕ್ಷಗಳು ಅಡ್ಡಗಾಲು ಹಾಕಿದ ಕಾರಣಕ್ಕಾಗಿ ದಶಕಗಳಿಂದ ನನೆಗುದಿಗೆ ಬಿದ್ದಿದ್ದ ಮಹಿಳಾ ಮೀಸಲು ಮಸೂದೆ ಮತ್ತೆ ಸೋಲು ಕಂಡಿದೆ. ಇದರಿಂದಾಗಿ ರಾಜ್ಯದಲ್ಲಿ ಮತ್ತು ದೇಶದಲ್ಲಿ 33% ಮಹಿಳಾ ಶಾಸಕಿಯರು ಮತ್ತು ಸಂಸದರನ್ನು ಕಾಣುವ ಅವಕಾಶ ತಪ್ಪಿ ಹೋಗಿದೆ. ಸ್ವತಃ ಮಹಿಳಾ ಸಂಸದೆಯಾದ ಕಾಂಗ್ರೆಸ್ ಪ್ರಿಯಾಂಕಾ ಗಾಂಧಿಯವರು ಮಹಿಳಾ ಮೀಸಲು ಮಸೂದೆ ಜಾರಿಯಾದರೆ ಪ್ರಜಾಪ್ರಭುತ್ವವೇ ಇಲ್ಲವಾಗಲಿದೆ ಎನ್ನುವ ಮೂಲಕ ಕಾಂಗ್ರೆಸ್ ಎಷ್ಟರಮಟ್ಟಿಗೆ ಮಹಿಳಾ ವಿರೋಧಿ ಎನ್ನುವುದಕ್ಕೆ ಸಾಕ್ಷಿ ನುಡಿದಿದ್ದಾರೆ.

ಬಹುಶಃ ಕಾಂಗ್ರೆಸ್ ಪಕ್ಷಕ್ಕೆ ತನ್ನ ಅಧಿನಾಯಕಿಯರು ಮಾತ್ರವೇ ಮಹಿಳಾ ಸಂಸದರಾಗಿರಬೇಕು. ಕಾಂಗ್ರೆಸ್ ಪಕ್ಷಕ್ಕೆ ಮಹಿಳೆಯರ ಕುರಿತು ಇದ್ದ ಕಾಳಜಿ ಕೇವಲ ನಾಟಕ ಎನ್ನುವುದು ಸಾಬೀತಾಗಿದೆ. ಇಂದು ಮಸೂದೆಗೆ ಸೋಲಾಗಿರುವುದು ಭಾರತೀಯ ಮಹಿಳೆಯರಿಗಾಗಿರುವ ಅವಮಾನ, ಸೋಲು. ಇದನ್ನು ಅವರೆಂದಿಗೂ ಮರೆಯುವುದಿಲ್ಲ, ಕ್ಷಮಿಸುವುದಿಲ್ಲ. ಸಹೋದರಿಯರ ಆಕ್ರೋಶಕ್ಕೆ ಮಹಿಳಾ ವಿರೋಧಿ ಕಾಂಗ್ರೆಸ್ ಮತ್ತದರ ಒಕ್ಕೂಟ ಭವಿಷ್ಯದಲ್ಲಿ ಸೋಲಿನ ಮೇಲೆ ಸೋಲು ಕಾಣಲಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಧನೆಯಿಂದ ಜನ್ಮ ಸಾರ್ಥಕ: ಡಾ. ಬ್ರಹ್ಮಾನಂದ ಶ್ರೀ

ರಾಯಬಾಗ: ಸಾಧನೆಯಿಂದ ಮಾತ್ರ ಮಾನವ ಜನ್ಮ ಸಾರ್ಥಕವಾಗುತ್ತದೆ ಎಂದು ಪರಮಾನಂದವಾಡಿ ಗುರುದೇವ ಆಶ್ರಮದ ಡಾ.ಅಭಿನವ ಬ್ರಹ್ಮಾನಂದ ಸ್ವಾಮೀಜಿ ಹೇಳಿದರು.

ಭಾನುವಾರ ಪಟ್ಟಣದ ಚಿಂಚಲಿ ರಸ್ತೆಯಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ನೂತನ ಕಟ್ಟಡದ ಭೂಮಿ ಪೂಜೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು, ಮನುಷ್ಯನಿಗೆ ಬರುವ ಕಷ್ಟ, ನೋವು ಸಮರ್ಥವಾಗಿ ಎದುರಿಸಿ ಪ್ರತಿಯೊಬ್ಬರು ಸಾಧಕರಾಗಬೇಕು. ಆಧುನಿಕ ತಂತ್ರಜ್ಞಾನ ಇಂದಿನ ಯುಗದಲ್ಲಿ ಎಲ್ಲರೂ ಒತ್ತಡ ಜೀವನ ನಡೆಸುತ್ತಿದ್ದು, ಇದರಿಂದ ಮುಕ್ತರಾಗಲು ಬ್ರಹ್ಮಕುಮಾರಿಸ್ ಅಂತಹ ಧ್ಯಾನ ಕೇಂದ್ರಗಳು ಹೆಚ್ಚಾಗಬೇಕು ಎಂದರು.



ಬಿಕೆ ಅಂಬಿಕಾ ಅಕ್ಕನವರು ಮಾತನಾಡಿ, ಭವಬಂಧನದಿಂದ ಮುಕ್ತಗೊಳಿಸುವ ಪರಮಾತ್ಮನ ಮನೆಯನ್ನು ರಾಯಬಾಗ ಪಟ್ಟಣದಲ್ಲಿ ಕಟ್ಟಡ ಕಟ್ಟುತ್ತಿರುವುದು ಸಂತೋಷದ ವಿಷಯ. ಪ್ರತಿಯೊಬ್ಬರು ಧ್ಯಾನ ಮಾಡಿಕೊಂಡು ನಮ್ಮ ಜೀವನ ಶ್ರೇಷ್ಠ ಮಾಡಿಕೊಳ್ಳಬೇಕೆಂದು ಹೇಳಿದರು.

ಬ್ರಹ್ಮಕುಮಾರೀಸ್ ನೂತನ ಕಟ್ಟಡ ನಿರ್ಮಾಣ ಭೂಮಿ ಪೂಜೆ ಕಾರ್ಯಕ್ರಮಕ್ಕೆ ವಿಧಾನ ಪರಿಷತ್ತ ಮಾಜಿ ಸದಸ್ಯ ವಿವೇಕರಾವ ಪಾಟೀಲ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಅಶೋಕ ಅಂಗಡಿ, ರಾಯಬಾಗ ಕೇಂದ್ರದ ಬಿಕೆ ಪುಷ್ಪಾ, ಬಿಕೆ ಮೀರಾ, ಬಿಕೆ ಸುವರ್ಣಾ, ಬಿಕೆ ಸುಮಂಗಲಾ, ಶಶಿಕಾಂತ ಕುಲಗುಡೆ, ಬಿ.ಎಮ್.ಮಾಳಿ, ಎ.ಬಿ.ಮಂಗಸೂಳೆ, ಧರೆಪ್ಪ ಮಿರ್ಜೆ, ಎಚ್.ಎ.ಭಜಂತ್ರಿ, ಅಪ್ಪಾಸಾಹೇಬ ಮುಗಳಖೋಡ, ಲಗಮಣ್ಣ ಪಾಟೀಲ ಸೇರಿ ಅನೇಕರು ಇದ್ದರು.

ಇಂದು ಬಸವ ಜಯಂತಿ ಆಚರಣೆ

ಗೋಕಾಕ: ತಾಲೂಕಿನ ಬೆಟಗೇರಿ ಗ್ರಾಮದ ಬಸವ ಅಭಿಮಾನಿ ಬಳಗದ ಸಹಯೋಗದಲ್ಲಿ ಬಸವ ಜಯಂತಿಯ ಆಚರಣೆ ಕಾರ್ಯಕ್ರಮ ಇಂದು ಏ.20ರಂದು ಅದ್ದೂರಿಯಾಗಿ ನಡೆಯಲಿದೆ.

ಬೆಟಗೇರಿಗ್ರಾಮದ ಅಶ್ವಾರೊಢ ಬಸವೇಶ್ವರ ವೃತ್ತದಲ್ಲಿ ಬೆಳಿಗ್ಗೆ 8 ಗಂಟೆಗೆ ಅಶ್ವಾರೂಢ ಬಸವಣ್ಣನವರ ಮೂರ್ತಿಗೆ ಮಹಾಪೂಜೆ, ಪುಷ್ಪಾರ್ಪಣೆ, ಷಟಸ್ಥಲ್ ಧ್ವಜಾರೋಹಣ ಕಾರ್ಯಕ್ರಮ ನಡೆಯಲಿದ್ದು, ಸುಣಧೋಳಿ ಜಡಿಸಿದ್ದೇಶ್ವರ ಮಠದ ಪೀಠಾಧಿಪತಿ ಅಭಿನವ ಶಿವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಷಟಸ್ಥಲ್ ಧ್ವಜಾರೋಹಣ ನೆರವೇರಿಸಲಿದ್ದಾರೆ. ಸ್ಥಳೀಯ ಸಂಗಯ್ಯ ಹಿರೇಮಠ ಸಮ್ಮುಖ, ಈರಯ್ಯ ಹಿರೇಮಠ ನೇತೃತ್ವ ವಹಿಸಲಿದ್ದಾರೆ.

ಬಳಿಕ ಮುಂಜಾನೆ 10 ಗಂಟೆಗೆ ಸ್ಥಳೀಯ ಅಶ್ವಾರೊಢ ಬಸವೇಶ್ವರ ವೃತ್ತದಿಂದ ಇಲ್ಲಿಯ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ವೃತ್ತದವರೆಗೆ ಮಹಿಳೆಯರಿಂದ ಆರತಿ, ಕುಂಭ ಸಕಲ ವಾದ್ಯಮೇಳಗಳೊಂದಿಗೆ ವಿಶ್ವಗುರು ಬಸವೇಶ್ವರರ ಭಾವ ಚಿತ್ರ, ಶೃಂಗರಿಸಿದ ಜೋಡೆತ್ತುಗಳ ಭವ್ಯ ಮೆರವಣಿಗೆ ಬಳಿಕ ಪ್ರಸಾದ ವಿತರಣೆ, ಮೆರವಣಿಗೆಯಲ್ಲಿ ಪಾಲ್ಗೊಂಡ ಜೋಡೆತ್ತುಗಳ ರೈತರಿಗೆ ಕಿರು ಕಾಣಿಕೆ, ಸನ್ಮಾನ ಜರುಗಲಿದೆ.

> **ಶೃಂಗಾರಗೊಂಡ ವೃತ್ತ**
> **ತಾಲೂಕಿನ ಬೆಟಗೇರಿ ಗ್ರಾಮದಲ್ಲಿ ಏ.20ರಂದು ಬಸವ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವ ನಿಟ್ಟಿನಲ್ಲಿ ಸ್ಥಳೀಯ ಬಸವ ಅಭಿಮಾನಿ ಬಳಗದವರ ಸಹಯೋಗದಲ್ಲಿ ಬೆಟಗೇರಿ ಗ್ರಾಮದ ಅಶ್ವಾರೊಢ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣನ ಮೂರ್ತಿಗೆ ರಂಗುರಂಗಿನ ವಿದ್ಯುತ್ ದೀಪಗಳ ಅಲಂಕಾರ, ವೃತ್ತದ ಕಟ್ಟಡಕ್ಕೆ ಸುಣ್ಣ, ಬಣ್ಣ ಬಳಿಯುವ ಕಾರ್ಯ ನಡೆದು, ಕೆಲವು ದಿನಗಳ ಕಾಲ ಇಲ್ಲಿಯ ಅಶ್ವಾರೊಢ ಬಸವೇಶ್ವರ ವೃತ್ತ ಶೃಂಗಾರಮಯವಾಗಿ ಕಂಗೊಳಿಸುತ್ತಿದೆ.**

ಸ್ಥಳೀಯ ಮತ್ತು ಸುತ್ತಲಿನ ಹಳ್ಳಿಗಳ ಮುಖಂಡರು, ಗಣ್ಯರು, ಸಂತ ಶರಣರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು, ಇಲ್ಲಿಯ ಬಸವ ಅಭಿಮಾನಿ ಬಳಗದ ಪದಾಧಿಕಾರಿಗಳು, ಸದಸ್ಯರು, ಬಸವಣ್ಣನ ಅಭಿಮಾನಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಬೆಟಗೇರಿ ಬಸವ ಅಭಿಮಾನಿ ಬಳಗದ ಸಂಚಾಲಕ ಈಶ್ವರ ಬಳಿಗಾರ ಪತ್ರಿಕಾ ಪ್ರಕಟನೆಗೆ ತಿಳಿಸಿದ್ದಾರೆ.

ಕಲೆ, ಸಂಸ್ಕೃತಿ ಉಳಿಸಿ ಬೆಳೆಸಿ

ಚನ್ನಮ್ಮ ಕಿತ್ತೂರ: ನಮ್ಮ ನೆಲದ ಕಲೆ ಮತ್ತು ಸಂಸ್ಕೃತಿಯನ್ನು ಬೆಳೆಸಲು ಯುವ ಜನತೆ ಮುಂದಾಗಬೇಕು. ಆಧುನಿಕತೆಯ ನೆಪದಲ್ಲಿ ಅನೇಕ ಕಲಾ ಪ್ರಕಾರಗಳು ನಶಿಸುತ್ತಿರುವುದು ವಿಷಾದನೀಯ ಎಂದು ಧಾರವಾಡ ಜಾನಪದ ಸಂಶೋಧನಾ ಕೇಂದ್ರದ ಸಂಸ್ಥಾಪಕಿ ಹಾಗೂ ರಂಗ ಕರ್ಮಿ ವಿಶ್ವೇಶ್ವರಿ ಹಿರೇಮಠ ಹೇಳಿದರು.

ಸಮೀಪದ ಬೈಲೂರು ಗ್ರಾಮದ ಚನ್ನಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಜರುಗಿದ ಬಾಗಲಕೋಟೆ ಜಿಲ್ಲೆ ತುಳಸಿಗೆರೆ ಗ್ರಾಮದ

ಶ್ರೀ ಜೈ ಹನುಮಾನ ಸಂಘದಿಂದ ಅಭಿನಯಿಸಿದ ಶ್ರೀಕೃಷ್ಣ ಪಾರಿಜಾತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗ್ರಾಮದ ಹಿರಿಯ ಪಾರಿಜಾತ ಕಲಾವಿದರು ಕೂಡಿಕೊಂಡು ಇಂದಿನ ಮಕ್ಕಳಿಗೆ ಮತ್ತು ಯುವಕರಿಗೆ ಈ ಕಾರ್ಯಕ್ರಮ ಆಯೋಜಿಸಿದ್ದು, ಶ್ಲಾಘನೀಯ ಎಂದರು.

ಮಾರುತಿ ಆನಿಗೋಳ, ಕಲ್ಲಪ್ಪ ಕಟಗಿ, ಸುರೇಶ ತಿಗಡಿ (ಸಂದ್ರಿಮನಿ), ಹನುಮಂತ ಭಜಂತ್ರಿ, ನಾಗಪ್ಪ ಶಿಕಲಿ, ಮಹಾದೇವ ಗಿರಿಯಾಲ, ಶಶಿಧರ ಸಣ್ಣವ್ವಗೋಳ, ರುದ್ರಪ್ಪ ಇಟಗಿ, ಆರೂಢ ಬಾಗೇವಾಡಿ, ನಿಂಗಪ್ಪ ಪತ್ರಿ, ಸಂಗಮೇಶ ಹಿರೇಮಠ ಹಾಗೂ ಇತರರು ಇದ್ದರು.



ದ್ವಿಚಕ್ರ ವಾಹನ ಕಳ್ಳತನ: ಆರೋಪಿ ಬಂಧನ

ಯಮಕನಮರಡಿ: ಮೋಜು-ಮಸ್ತಿಗಾಗಿ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿತ ಓರ್ವನನ್ನು ಬಂಧಿಸಿರುವ ಯಮಕನಮರಡಿ ಪೊಲೀಸರು ಬಂಧಿತನಿಂದ ವಿವಿಧ ಬಗೆಯ ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕಳ್ಳತನ ಪ್ರಕರಣದಲ್ಲಿ ಬೆನಕನಹೊಳಿ ಗ್ರಾಮದ ಕುಖ್ಯಾತ ಎಮ್.ಓ.ಬಿ ಸಂಜು ಮಲ್ಲಪ್ಪಾ ಮೇಕಲಿ ಬಂಧಿತ ಆರೋಪಿತನಾಗಿದ್ದಾನೆ.

ಯಮಕನಮರಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವರದಿಯಾಗುತ್ತಿದ್ದ ಮೋಟಾರ್ ಸೈಕಲ್ ಕಳ್ಳತನ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿ, ಆರೋಪಿಗಳ ಪತ್ತೆಗಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಅವರ ಮಾರ್ಗದರ್ಶನದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿತ್ತು.

ಸದರಿ ತಂಡವು ಕಾರ್ಯಾಚರಣೆ ನಡೆಸಿ, ಸರಣಿ ಕಳ್ಳತನದಲ್ಲಿ ತೊಡಗಿದ್ದ ಕುಖ್ಯಾತ ಹಳೇ ಅಪರಾಧಿ ಎಮ್ ಒ ಬಿ ಬಂಧಿಸುವಲ್ಲಿ ಯಶಸ್ವಿಯಾಗಿದೆ. ಏ.4ರಂದು ಹುಕ್ಕೇರಿ ತಾಲೂಕಿನ ನರಸಿಂಗಪೂರ ಗ್ರಾಮದ ಅಂಡರ್ ಪಾಸ್ ಬ್ರಿಡ್ಜ್ ಹತ್ತಿರಗಂಗಪ್ಪಾ ಕೊಡದವರ ಎಂಬುವವರ ಬಜಾಜ್ ಪ್ಲಾಟಿನಾ ಮೋಟಾರ್ ಸೈಕಲ್ ಕಳ್ಳತನವಾಗಿತ್ತು.



> **ಬಂಧಿತ ಸಂಜುನಿಂದ 8 ದ್ವಿಚಕ್ರವಾಹನ ವಶಕ್ಕೆ**

ಈ ಬಗ್ಗೆ ಯಮಕನಮರಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಈ ಪ್ರಕರಣದ ತನಿಖೆಗಾಗಿ ಯಮಕನಮರಡಿ ಪೊಲೀಸ ಠಾಣೆಯ ಪಿಐ ಜೆ.ಎಫ್. ಮುಶಾಪುರಿ, ಪಿಎಸ್ ಐ ಬಿ.ಕೆ. ಪಾಟೀಲ ನೇತೃತ್ವದಲ್ಲಿ ಸಿಬ್ಬಂದಿಯವರಾದ ಜಿ.ಬಿ.ನಾಗನ್ನವರ(ಸಿ.ಪಿ.ಸಿ3105) ಮತ್ತು ಪಿ.ಕೆ.ತಿಳ್ಳಿಕೇತರ (ಸಿ.ಪಿ.ಸಿ 3278) ಅವರನ್ನೊಳಗೊಂಡ ವಿಶೇಷ ತನಿಖಾ ತಂಡವನ್ನು ರಚಿಸಲಾಗಿತ್ತು.

ಈ ತಂಡವು ಏ.17ರಂದು ಬೆನಕನಹೊಳಿ ಗ್ರಾಮದ ಹದ್ದಿಯಲ್ಲಿ ಕಾರ್ಯಾಚರಣೆ ನಡೆಸಿ, ಸಂಶಯಾಸ್ಪದವಾಗಿ ಓಡಾಡುತ್ತಿದ್ದ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿತು. ಬಂಧಿತ ಆರೋಪಿತನ ವಿಚಾರಣೆಯಿಂದ ಆತನು ವಿವಿಧ ಜಿಲ್ಲೆ ಮತ್ತು ರಾಜ್ಯಗಳಲ್ಲಿ ಮೋಜು ಮಸ್ತಿಗಾಗಿ ಮೋಟಾರ್ ಸೈಕಲ್‌ಗಳನ್ನು ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ. ಆರೋಪಿತನ ಮಾಹಿತಿಯ ಮೇರೆಗೆ ಒಟ್ಟು 8 ಮೋಟಾರ್ ಸೈಕಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಈ ಯಶಸ್ವಿ ಕಾರ್ಯಾಚರಣೆ ನಡೆಸಿದ ತನಿಖಾ ತಂಡದ ಅಧಿಕಾರಿಗಳು ಮತ್ತು ಸಿಬ್ಬಂದಿಯವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಶ್ಲಾಘಿಸಿದ್ದಾರೆ.

ಕಿರುಸುದ್ದಿ

ಛತ್ರಪತಿ ಶಿವಾಜಿ ಜಯಂತಿ ಆಚರಣೆ

ಬೆಳಗಾವಿ: ಬೆಳಗಾವಿಯಲ್ಲಿ ಹಿಂದವಿ ಸಾಮ್ರಾಜ್ಯದ ಸಂಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.ನಗರ ಡಾ. ಶ್ಯಾಮಾ ಪ್ರಸಾದ ಮುಖರ್ಜಿ ರಸ್ತೆಯಲ್ಲಿರುವ ಉದ್ಯಾನವನದಲ್ಲಿ ಛತ್ರಪತಿ ಶಿವಾಜೀ ಮಹಾರಾಜರ 396ನೇ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ವಿವಿಧ ಗಣ್ಯರು ಛತ್ರಪತಿ ಶಿವಾಜಿ ಮಹಾರಾಜರ ಸಿಂಹಾಸನಾರೂಢ ಮೂರ್ತಿಗೆ ಅಭಿಷೇಕ, ಮಹಾಆರತಿ ಮಹಾಪೂಜೆಯನ್ನು ನೆರವೇರಿಸಿದರು.ಬೆಳಗಾವಿಯಲ್ಲಿ ಇಂದಿನಿಂದ ಶಿವಜಯಂತಿ ಉತ್ಸವ ಆರಂಭಗೊಂಡಿದ್ದು, ಬೆಳಿಗ್ಗೆ ವಿವಿಧ ಗಡಕಿಲ್ಲೆಗಳಿಂದ ಶಿವಜ್ಯೋತಿಗಳು ಛತ್ರಪತಿ ಶಿವಾಜೀ ಮಹಾರಾಜ ಉದ್ಯಾನವನಕ್ಕೆ ತಲುಪಿದವು. ನಂತರ ನರಗುಂದಕರ ಭಾವೆ ಚೌಕನಲ್ಲಿ ಶಿವಜನೋತ್ಸವ ನಡೆಯಿತು. ಏ.21 ರಂದು ಸುಮಾರು 60-80 ತಂಡಗಳಿಂದ ಶಿವಜಯಂತಿಯ ಸಜೀವ ರೂಪಕ ವಾಹನ ಮೆರವಣಿಗೆ ನಡೆಯಲಿದೆ ಎಂದು ಶಿವಾಜಿ ಮಹಾಮಂಡಳದ ಅಧ್ಯಕ್ಷ ಅಂಕುಶ ಹೇಳಿದರು. ಶ್ರೀರಾಮಸೇನೆ ಹಿಂದೂಸ್ಥಾನ ಸಂಸ್ಥಾಪಕ ರಮಾಕಾಂತ್ ಕೊಂಡೂಸ್ಕರ್ ಹಾಗೂ ರಾಜ್ಯಸಭಾ ಮಾಜಿ ಸದಸ್ಯ ಶಂಕರಗೌಡಾ ಪಾಟೀಲ್ ಮಾತನಾಡಿದರು.

ಈ ಸಂದರ್ಭದಲ್ಲಿ ಮಾಜಿ ಮಹಾಪೌರ ಮಾಲೋಜಿರಾವ್ ಅಷ್ಟೇಕರ, ನೇತಾಜಿರಾವ್ ಜಾಧವ್, ಅಂಕುಶ್ ಕೇಸರಕರ ಮಾಜಿ ಎಂ.ಎಲ್.ಸಿ ಮಹಾಂತೇಶ್ ಕವಟಗಿಮಠ, ರಂಜಿತ್ ಚವ್ಹಾಣ್ ಪಾಟೀಲ್, ಮಾಜಿ ಮಹಾಪೌಗ – ರಮಾಕಾಂತ್ ಕೊಂಡೂಸ್ಕರ್, ಕಿರಣ್ ಇನ್ನುಳಿದವರು ಭಾಗಿಯಾಗಿದ್ದರು.

ವಚನ ಕಂಠಪಾಠ: ಶ್ರೀನಿಧಿ ಪ್ರಥಮ

ಹಾರೂಗೇರಿ : ಪಟ್ಟಣದ ಶ್ರೀ ರಾಮಲಿಂಗೇಶ್ವರ ಮಂದಿರದಲ್ಲಿ ಲಿಂಗಾಯತ ಕಾಯಕ ಸಮಿತಿಯವರು ಬಸವ ಜಯಂತಿ ನಿಮಿತ್ತ ವಚನ ಕಂಠಪಾಠ ಸ್ಪರ್ಧೆ ಹಮ್ಮಿಕೊಂಡಿದ್ದರು.ಶ್ರೀನಿಧಿ ಶಾಂತವೀರ ಬುರ್ಲಟ್ಟಿ ಪ್ರಥಮ ಸ್ಥಾನ, ಕಾವ್ಯಾ ಜಿನರಾಳೆ, ಸಮೀಕ್ಷ ಅವಟೆ, ದ್ವಿತೀಯ, ಸಮರ್ಥ ಕಿರಣ ಬಂಡಿ ತೃತೀಯ ಸ್ಥಾನ ಪಡೆದುಕೊಂಡು ಸಂಭ್ರಮಿಸಿದರು.ನಿರ್ಣಾಯಕರಾದ ಡಾ.ವಿ.ಎಸ್. ಮಾಳಿ ಮಾತನಾಡಿದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜನತಾ ಬ್ಯಾಂಕ ಅಧ್ಯಕ್ಷ ರಾಜಶೇಖರ ಬ ಪಾಟೀಲ ವಹಿಸಿಕೊಂಡಿದ್ದರು. ಅತಿಥಿಗಳಾಗಿ ಪುರಾಸಭೆ ಸದಸ್ಯರಾದ ಬಸನಗೌಡ ಆಸಂಗಿ, ಲಿಂಗಾಯತ ಕಾಯಕ ಸಮಿತಿ ಅಧ್ಯಕ್ಷ, ಮತ್ತು ಪುರಸಭೆ ಸದಸ್ಯ ಪರಗೌಡ ಉಮರಾಣಿ, ಕೆಂಪಣ್ಣ ಗಾಳಿ ,ಧ್ಯಾನು ಸದಲಗಿ, ಶಂಕರ ಪಾಟೀಲ, ಕಿರಣ ನಾವಿ, ಅಶೋಕ ಪಾಟೀಲ, ಗುಂಡು ಅರಬಳ್ಳಿ, ರವೀಂದ್ರ ಕಬ್ಬೂರ, , ಶಿವಾನಂದ ಚೆಂಚಲಿ, ವಿನಾಯಕ ಬುರ್ಲಟ್ಟಿ, ಶಂಕರ ಮಾನಶೆಟ್ಟಿ, ಸುರೇಶ ಸಾರವಾಡ, ಅಪ್ಪಾಸಾಬ ಮಹಾಲಿಂಗಪುರ, ಶಿವಾನಂದ ಶಿರೋಳ, ವಿಠ್ಠಲ ಚೆಂಚಲಿ, ರಾಜು ಯರನಾಳ, ಸಂತೋಷ ಟಕ್ಕಣ್ಣವರ,ಮಲ್ಲಿಕಾರ್ಜುನ ಮಠಪತಿ , , ಪಂಚಯ್ಯ್ ಹಿರೇಮಠ, ಡಾ : ಶಿವಾನಂದ ಹೆಳವರ, ಉಮೇಶ ಉಮರಾಣಿ 20 ಕ್ಕೂ ಕ್ಕೂ ಅಧಿಕ ಸ್ಪರ್ಧಾಳಗಳು,ಪಾಲಕರು ಉಪಸ್ಥಿತರಿದ್ದರು.ಶಾಂತವೀರ ಬುರ್ಲಟ್ಟಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು , ಹಣಮಂತ ಬೇನಾಡಿ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು. ವಿಜೇತರಿಗೆ ನಗದು ಬಹುಮಾನ, ಆಕರ್ಷಕ ಟ್ರೋಫಿ ನೀಡಿ ಗೌರವಿಸಲಾಯಿತು. ಪುಟ್ಟ ಪುಟ್ಟ ಮಕ್ಕಳು ವಚನ ಪಠಿಸಿ ಸಭೆಗೆ ಬೆರಗು ಮೂಡಿಸಿ ಮೆರಗು ತುಂಬಿದರು.ಎಳೆಯರ ಎದೆಯ ಹೊಲಗಳಲ್ಲಿ ವಚನ ಬೀಜಗಳನ್ನು ಬಿತ್ತಿದ ವಚನ ಕಂಠಪಾಠ ಸ್ಪರ್ಧೆ ಸಂಪನ್ನಗೊಂಡಿತು.

ಪ್ರಬಂಧ ಸ್ಪರ್ಧೆ: ಮೈತ್ರೇಯಿಣಿ ಪ್ರಥಮ

ಬೆಳಗಾವಿ : ವಿಶ್ವ ಬಸವ ಜಯಂತಿ ನಿಮಿತ್ತ ಬೆಂಗಳೂರಿನ ಕೇಂದ್ರ ಬಸವ ಸಮಿತಿ ಏರ್ಪಡಿಸಿದ ಬಸವಾದಿ ಶರಣರು ಕಟ್ಟಿದ ಮಾನವತಾ ಧರ್ಮ ವಿಷಯ ಕುರಿತು ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಬೆಳಗಾವಿ ಅಜಮ್ ನಗರದ ನಿವಾಸಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಡಾ. ಮೈತ್ರೇಯಿಣಿ ಗುರುನಗೌಡ ಗದಿಗೆಪ್ಪಗೌಡರ ಅವರು ಪ್ರಥಮ ಸ್ಥಾನ ಪಡೆದಿದ್ದಾರೆ.ಬೆಳಗಾವಿ ರಾಮದೇವಗಲ್ಲಿಯ ನಿವಾಸಿ ಮತ್ತು ಪತ್ರಕರ್ತ, ಅಂಕಣಕಾರರಾದ ಡಾ. ಅರುಣ ಅಶೋಕ ಹೊಸಮಠ ದ್ವಿತೀಯ ಸ್ಥಾನ ಮತ್ತು ರಾಯಚೂರ ಜಿಲ್ಲೆಯ ಮಟಮಾರಿ ಗ್ರಾಮದ, ರಾಯಚೂರಿನ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ಡಾ. ರೇಖಾ ಪಾಟೀಲ ತೃತೀಯ ಸ್ಥಾನ ಕ್ರಮವಾಗಿ ಪಡೆದಿದ್ದಾರೆ.ಬೆಂಗಳೂರಿನ ಎಚ್ ಎಸ್ ಆರ್ ಲೇಔಟ್ ನಿವಾಸಿ ಡಾ. ಎನ್.ಎಂ. ಗಿರಿಜಾಪತಿ, ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನ ಸುಳಗೋಡು ಹಳ್ಳಿ ನಿವಾಸಿ ಡಾ. ವೈ. ಸುಶ್ಮಿತಾ ಅವರು ಸಮಾಧಾನಕರ ಬಹುಮಾನ ಪಡೆದಿದ್ದಾರೆ ಎಂದು ಬಸವ ಸಮಿತಿಯ ಅಧ್ಯಕ್ಷ ಡಾ. ಅರವಿಂದ ಜತ್ತಿ, ಹಿರಿಯ ಕಾರ್ಯಕಾರಿ ಸಮಿತಿಯ ಸದ್ಯಸ, ಕನ್ನಡ ಸಾಹಿತ್ಯ ಪರಿಷತ್ತಿನ ಬೆಳಗಾವಿ ಜಿಲ್ಲಾ ಮಾಜಿ ಅಧ್ಯಕ್ಷರಾದ ಮೋಹನ ಬಸನಗೌಡ ಪಾಟೀಲ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ: ಬೆಳಗಾವಿಯಲ್ಲಿ ಹಿಂದವಿ ಸಾಮ್ರಾಜ್ಯದ ಸಂಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ 396ನೇ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ರಾಜ್ಯೋತ್ಸವದ ಅನುದಾನ ದುರ್ಬಳಕೆ: ಆರೋಪ

ಬೆಳಗಾವಿ: ರಾಜ್ಯದಲ್ಲಿ ಅತೀ ಅದ್ದೂರಿ ಹಾಗೂ ದೊಡ್ಡ ಪ್ರಮಾಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಮಾಡಲಾಗುತ್ತದೆ.ರಾಜ್ಯ ಸರ್ಕಾರವು 70 ನೇ ಕರ್ನಾಟಕ ರಾಜ್ಯೋತ್ಸವ ಆಚರಣೆಗೆ ಬಿಡುಗಡೆ ಮಾಡಿದ್ದ 50 ಲಕ್ಷ ರೂ.ಅನುದಾನವನ್ನು ಜಿಲ್ಲಾಧಿಕಾರಿಗಳು ದುರ್ಬಳಕೆ ಮಾಡಿದ್ದಾರೆಂದು ಕನ್ನಡಪರ ಸಂಘಟನೆಗಳು ಗಂಭೀರವಾಗಿಆರೋಪಿಸಲಾಗುತ್ತಿದೆ. ಜಿಲ್ಲಾಧಿಕಾರಿಗಳ ವಿರುದ್ಧ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಬೆಳಗಾವಿ ಪ್ರಾದೇಶಿಕ ಆಯುಕ್ತ ಕೆ.ಎಮ್. ಜಾನಕಿ ಅವರಿಗೆ ಮನವಿ ಮಾಡಿಕೊಂಡು 70ನೇಯ ಕನ್ನಡ ರಾಜ್ಯೋತ್ಸವಕ್ಕೆ ಸರ್ಕಾರ ಹಣ ಬಿಡುಗಡೆ ಮಾಡಿದ ಹಣವನ್ನು ಜಿಲ್ಲಾಧಿಕಾರಿಗಳು ದುರ್ಬಳಕೆ ಮಾಡಿಕೊಂಡಿರುವುದರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳಬೇಕೆಂದು ಪ್ರಾದೇಶಿಕ ಆಯುಕ್ತರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಈ ವೇಳೆ ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮಿತಿ ಅಧ್ಯಕ್ಷ ಅಶೋಕ ಚಂದರಗಿ, ಕಿತ್ತೂರು ಕರ್ನಾಟಕ ಸೇನೆಯ ರಾಜ್ಯಾಧಕ್ಷ ಮಹಾದೇವ ತಳವಾರ, ಸರ್ವೋದಯ ಸಂಘದ ಅಧ್ಯಕ್ಷ ಶ್ರೀನಿವಾಸ ತಾಳುಕರ, ಕರ್ನಾಟಕ ರಕ್ಷಣಾ ವೇದಿಕೆ (ಶಿವರಾಮೇಗೌಡ ಬಣ) ಜಿಲ್ಲಾಧ್ಯಕ್ಷ ವಾಜಿದ ಹಿರೇಕೋಡಿ, ಗಡಿನಾಡು ಕನ್ನಡಿಗರ ಸೇನೆಯ ರಾಜ್ಯಾಧಕ್ಷ ಬಲರಾಮ ಮಾಸೇನಾಟ್ಟಿ, ಬಾಳಪ್ಪ ಗುಡಗೇನಟ್ಟಿ, ನಾಗೇಶ ಕೊಪ್ಪರ, ಶರೀಫ ಸನದಿ, ಈಶ್ವರಗೌಡ ಪಾಟೀಲ್,ಸಿದ್ದಲಿಂಗಪ್ಪ ಸುನಕುಪ್ಪಿ ಸೇರಿದಂತೆ ಹಲವು ಕಾರ್ಯಕತರು ಇದ್ದರು.



ಬೆಳಗಾವಿ: ರಾಜ್ಯ ಸರ್ಕಾರವು 70 ನೇ ಕರ್ನಾಟಕ ರಾಜ್ಯೋತ್ಸವ ಆಚರಣೆಗೆ ಬಿಡುಗಡೆ ಮಾಡಿದ್ದ 50 ಲಕ್ಷ ರೂ.ಅನುದಾನವನ್ನು ಜಿಲ್ಲಾಧಿಕಾರಿಗಳು ದುರ್ಬಳಕೆ ಮಾಡಿದ್ದಾರೆಂದು ಕನ್ನಡಪರ ಸಂಘಟನೆಗಳು ಜಿಲ್ಲಾಧಿಕಾರಿಗಳ ವಿರುದ್ಧ ಬೆಳಗಾವಿ ಪ್ರಾದೇಶಿಕ ಆಯುಕ್ತ ಕೆ.ಎಮ್. ಜಾನಕಿ ಅವರಿಗೆ ಸೂಕ್ತ ತನಿಖೆಗೆ ಆಗ್ರಹಿಸಿ ಮನವಿ ಸಲ್ಲಿಸಿದರು.

ಮಹಾತ್ಮರ ಪುತ್ಥಳಿಗೆ ಮಾಲಾರ್ಪಣೆ | ಶಾಸಕ ವೈದ್ಯ ಭಾಗಿ

ಶಿವಾಜಿ-ಬಸವ ಜಯಂತಿ ಆಚರಣೆ

ಸವದತ್ತಿ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ಮರಾಠ ಸಮಾಜ ಬಾಂಧವರು ಹಾಗೂ ಪಟ್ಟಣದ ವಿವಿಧ ಸಮಾಜ ಬಾಂಧವರಿಂದ ಭಾನುವಾರ ಶಿವ-ಬಸವ ಜಯಂತಿಯನ್ನು ಆಚರಿಸಲಾಯಿತು.

ಛತ್ರಪತಿ ಶಿವಾಜಿ ಮಹಾರಾಜರ ವೃತ್ತದಲ್ಲಿ ಶಾಸಕ ವಿಶ್ವಾಸ ವೈದ್ಯ ಹಾಗೂ ಬಿಜೆಪಿ ತಾಲೂಕು ಅಧ್ಯಕ್ಷ ವಿರುಪಾಕ್ಷ ಮಾಮನಿ ಅವರು ಶಿವಾಜಿ ಮಹಾರಾಜರ ಹಾಗೂ ಬಸವೇಶ್ವರ ಭಾವಚಿತ್ರಗಳಿಗೆ ಪೂಜೆ ಸಲ್ಲಿಸುವ ಮೂಲಕ ಶಿವಬಸವ ಜಯಂತಿಗೆ ಚಾಲನೆ ನೀಡಿದರು. ನಂತರ ಸಮಾಜ ಬಾಂಧವರು ಬಸವೇಶ್ವರ ವೃತ್ತಕ್ಕೆ ತೆರಳಿ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

ಶಾಸಕ ವಿಶ್ವಾಸ ವೈದ್ಯ ಮಾತನಾಡಿ, ಪಟ್ಟಣದಲ್ಲಿ ಏನೇ ಧಾರ್ಮಿಕ ಆಚರಣೆಗಳಿದ್ದರೂ ಸರ್ವ ಸಮಾಜ ಬಾಂಧವರೆಲ್ಲಾ ಸೇರಿಕೊಂಡು ಆಚರಿಸಿಕೊಂಡು ಬರುತ್ತಿರುವುದು ಹೆಮ್ಮೆಯ ವಿಷಯವಾಗಿದ್ದು, ಛತ್ರಪತಿ ಶಿವಾಜಿ ಮಹಾರಾಜರ ಮತ್ತು ಬಸವೇಶ್ವರ ಜಯಂತಿಯಂಗವಾಗಿ ಶಿವ-ಬಸವ ಜಯಂತಿಯನ್ನು ಆಚರಿಸುತ್ತಿರುವುದು ಸಮಾಜಕ್ಕೆ ಮಾದರಿಯಾಗಿದೆ ಎಂದರು. ಬರುವಂತ ದಿನಗಳಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮತ್ತು ಬಸವೇಶ್ವರರ ವೃತ್ತಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗುತ್ತಿದೆ ಎಂದರು.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವಿರುಪಾಕ್ಷ ಮಾಮನಿ ಮಾತನಾಡಿ, ದೇಶ ಭಕ್ತಿ ಹಾಗೂ ಸಮಾಜದಲ್ಲಿರುವ ಅಸಮಾನತೆ ಪಿಡುಗನ್ನು ಹೋಗಲಾಡಿಸುವಲ್ಲಿ ಹಾಗೂ ದೇಶ ರಕ್ಷಣೆಗೋಸ್ಕರ ಹೋರಾಟ ಮಾಡಿದ ಛತ್ರಪತಿ ಶಿವಾಜಿ ಮಹಾರಾಜರ ಹಾಗೂ



▸▸ ಗಿರಿಜನ್ನವರ ಓಣಿಯ ಉದಯಗಿರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ವೇದಮೂರ್ತಿ ಗದಗಯ್ಯ ಚಿಕ್ಕಮಠ ವೈದಿಕತ್ವದಲ್ಲಿ ಸಮಾಜ ಬಾಂಧವರು ಬಾಲ ಶಿವಾಜಿಯನ್ನು ತೊಟ್ಟಿಲಲ್ಲಿ ಹಾಕುವ ಮೂಲಕ ಪೂಜೆ ಸಲ್ಲಿಸಿ ಛತ್ರಪತಿ ಶಿವಾಜಿ ಮಹಾರಾಜರ ಘೋಷಣೆಯೊಂದಿಗೆ ಸಂಭ್ರಮ ಆಚರಿಸಿದರು.

ಜಗಜ್ಯೋತಿ ಬಸವೇಶ್ವರ ತತ್ವಾದರ್ಶಗಳು ನಮಗೆಲ್ಲಾ ಮಾದರಿಯಾಗಿವೆ ಎಂದರು.

ಪಟ್ಟಣದಲ್ಲಿ ಶಿವ-ಬಸವ ಜಯಂತಿಯನ್ನು ಜ್ಯಾತ್ಯಾತೀತವಾಗಿ ಎಲ್ಲ ಸಮಾಜ ಬಾಂಧವರು ಸೇರಿಕೊಂಡು ಆಚರಣೆ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಮರಾಠ ಸಮಾಜದ ಅಧ್ಯಕ್ಷ ಶಿವಾಜಿರಾವ್ ಶಿಂಧೆ, ಜಗದೀಶಶಿಂತ್ರಿ, ಶ್ರೀ ರಾಮಲಿಂಗೇಶ್ವರ ಅರ್ಬನ ಅಧ್ಯಕ್ಷ ಪುಂಡಲೀಕ ಭೀ. ಬಾಳೋಜಿ, ಬಸವರಾಜ ಕಪ್ಪಣ್ಣವರ, ಕುಮಾರಸ್ವಾಮಿ ತಲ್ಲೂರಮಠ, ವಿ.ಜೆ.ಪವಾರ, ಬಸವರಾಜ ಆರಮನಿ, ಐ.ಪಿ.ಪಾಟೀಲ, ಬಸವರಾಜ ಪುಟ್ಟಿ, ಅಶೋಕ ಮುರಗೋಡ, ಅಡಿವೆಪ್ಪ ಬೀಳಗಿ, ಜಗದೀಶ ಹಳೆಮನಿ, ಮಲ್ಲು ಬೀಳಗಿ, ರಾವ್ ಸಾಹೇಬ ಜಾಮದಾರ, ಸುಭಾಸ ಅರಗಂಜಿ, ಆನಂದ ಜಾನ್ವೇಕರ, ಬಾಬು ಮೊಕಾಶಿ, ಚಂದ್ರಶೇಖರ ಮಲಕನ್ನವರ, ಭೀಮರಾವ್ ಆನಿ, ವಾಡಕರ, ಸುಭಾಸ ಪವಾರ, ರವಿ ಗಿರಿಜನ್ನವರ, ಸುರೇಶ ಬಾಳೋಜಿ, ಅಣ್ಣಪ್ಪ ಪವಾರ, ಕೇದಾರ ಮೊಕಾಶಿ, ಸಿದ್ಧಯ್ಯ ವಡಿಯರ, ಎಫ್.ವೈ.ಗಾಜಿ, ಮಂಜು ಪಾಚಂಗಿ, ಲಕ್ಷ್ಮಣ ಕಿಟದಾಳ, ಶಿವಾನಂದ ತಾರೀಹಾಳ, ಸುಧೀಂದ್ರ ಬಂಗ್ಲೆದಾರ, ಸಿದ್ದಪ್ಪ ರಾಹುತ, ಮಲ್ಲೇಶ ರಾಜನಾಳ, ಗಿರೀಶ ರೇವಡಿ, ಮಹೇಶ ಜಾಮದಾರ, ಶಿವಾಜಿ ಕುದರಿ, ಮಂಜುನಾಥ ಡಬಕೆ, ಪ್ರಶಾಂತ ಪವಾರ, ಆನಂದ ಶಿಂಧೆ, ಸಂತೋಷ ಜಾಧವ ಇತರರು ಉಪಸ್ಥಿತರಿದ್ದರು.

ಸಿಸಿ ರಸ್ತೆ ಕಾಮಗಾರಿಗೆ ಚಾಲನೆ

ಖಾನಾಪುರ: ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಖಾನಾಪುರ ವಿಧಾನಸಭಾ ಕ್ಷೇತ್ರಕ್ಕೆ 25 ಕೋಟಿ ಅನುದಾನ ಬಿಡುಗಡೆಯಾಗಿದೆ. ಈ ಅನುದಾನದಲ್ಲಿ ಪಟ್ಟಣದ ಹೊರವಲಯದ ಜನವಸತಿ ಪ್ರದೇಶಗಳಲ್ಲಿ ಸಿ.ಸಿ ರಸ್ತೆ ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಬೆಳಗಾವಿ ರಸ್ತೆಯ ಸಮರ್ಥ ನಗರ ಮತ್ತು ಜಾಂಬೋಟಿ ರಸ್ತೆಯ ಶಿವಾಜಿನಗರದಲ್ಲಿ ತಲಾ 45 ಲಕ್ಷ ಅನುದಾನದಲ್ಲಿ ಸಿ.ಸಿ ರಸ್ತೆಗಳು ನಿರ್ಮಾಣಗೊಳ್ಳಲಿವೆ ಎಂದು ಶಾಸಕ ವಿಠ್ಠಲ ಹಲಗೇಕರ ಮಾಹಿತಿ ನೀಡಿದರು.

ಪಟ್ಟಣದ ಶಿವಾಜಿನಗರ ಮತ್ತು ಸಮರ್ಥನಗರಗಳಲ್ಲಿ ಭಾನುವಾರ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ರಾಜ್ಯದ ಕಾಂಗ್ರೆಸ್ ಸರ್ಕಾರದಿಂದ ಬಿಜೆಪಿ ಶಾಸಕರಿರುವ ಕ್ಷೇತ್ರಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಅನುದಾನ ಸಿಗುತ್ತಿಲ್ಲ. ಆದರೂ ಲಭ್ಯವಿರುವ ಅನುದಾನದಲ್ಲಿ ಕ್ಷೇತ್ರದ ಜನತೆಗೆ ಸಿಗಬೇಕಾದ ನ್ಯಾಯವನ್ನು ಒದಗಿಸುವ ಕೆಲಸವನ್ನು ನಾನು ನಿಭಾಯಿಸುತ್ತಿದ್ದೇನೆ. 92 ಸಾವಿರ ಮತಗಳನ್ನು ನೀಡಿ ಗೆಲ್ಲಿಸಿದ ಕ್ಷೇತ್ರದ ಜನತೆ ನನ್ನ ಮೇಲೆ ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಅವರ ನಿರೀಕ್ಷೆಗಳಿಗೆ ಕೈಲಾದಷ್ಟು ಮಟ್ಟಿಗೆ ಸ್ಪಂದಿಸುವ ಕಾರ್ಯವನ್ನು ನೆರವೇರಿಸುತ್ತಿದ್ದೇನೆ ಎಂದು ವಿವರಿಸಿದರು.

ಸಮರ್ಥ ನಗರದ ನಿವಾಸಿ, ನಿವೃತ್ತ ಮುಖ್ಯಾಧ್ಯಾಪಕ ವಿಠ್ಠಲ ಹೊಸೂರ ಮಾತನಾಡಿ, 2006ರಲ್ಲಿ ನಮ್ಮ ಬಡಾವಣೆ ರಚನೆಯಾಗಿದೆ. ಅಗಿನಿಂದ ಈಗಿನವರೆಗೆ ನಮ್ಮ ಬಡಾವಣೆಯ ಸಮಸ್ಯೆಗಳ ಬಗ್ಗೆ ಯಾವ ಜನಪ್ರತಿನಿಧಿಗಳೂ ಗಮನಹರಿಸಿರಲಿಲ್ಲ. ಈಗ ಹಲಗೇಕರ ಅವರು ನಮ್ಮ ಬಡಾವಣೆಗೆ ಸಿ.ಸಿ ರಸ್ತೆ ಮಂಜೂರು ಮಾಡಿಸಿದ್ದು ಸಂತಸ ತಂದಿದೆ ಎಂದರು.

ಈ ಸಂದರ್ಭದಲ್ಲಿ ಸುರೇಶ ನರಸಣ್ಣವರ, ಕುಮಾರ ತಂಗಮ್, ಶಂಕರ ಕಮ್ಮಾರ, ಪ್ರಮೋದ ಕೊಚೇರಿ, ಶಿವಾ ಮಯೇಕರ, ಭರಮಾಣಿ ಪಾಟೀಲ, ಡಾ.ದಿವ್ಯಾ ಹೊಸೂರ ಹಾಗೂ ಇತರರು ಇದ್ದರು.



ಶ್ರಮಿಕ ವಸತಿ ಶಾಲೆಯ ನಿರ್ಮಾಣಕ್ಕೆ ಭೂಮಿಪೂಜೆ



ಅಥಣಿ : ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ ವತಿಯಿಂದ ಅಥಣಿ ತಾಲೂಕಿನಲ್ಲಿ ಅತ್ಯಾಧುನಿಕ ಸೌಲಭ್ಯವುಳ್ಳ 'ಶ್ರಮಿಕ ವಸತಿ ಶಾಲೆ'ಯ ನಿರ್ಮಾಣಕ್ಕೆ ಮಾಜಿ ಉಪಮುಖ್ಯ ಮಂತ್ರಿಗಳು ಹಾಗೂ ಅಥಣಿ ಶಾಸಕರಾದ ಲಕ್ಷ್ಮಣ ಸಂಗಪ್ಪ ಸವದಿ ಅವರು ಭೂಮಿ ಪೂಜೆ ನೆರವೇರಿಸಿದರು.

ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯ ವತಿಯಿಂದ ಅಥಣಿಯ ಚಿಕ್ಕಟ್ಟಿ ಗ್ರಾಮದ ಸತ್ತಿ ರಸ್ತೆ ಬಳಿ ನಿರ್ಮಿಸಲಾಗುತ್ತಿರುವ 'ಶ್ರಮಿಕ ವಸತಿ ಶಾಲೆ'ಗೆ ಭೂಮಿಪೂಜೆ ನೆರವೇರಿಸಿದರು. ನಮ್ಮ ತಾಲೂಕಿನಲ್ಲಿ ಇರುವ ಏಳು ಸಾವಿರ ಕಾರ್ಮಿಕರ ಕಾರ್ಮಿಕ ವರ್ಗದ ಮಕ್ಕಳು ಆರ್ಥಿಕ ಸಂಕಷ್ಟದಿಂದ ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಶ್ರಮಿಕ ವಸತಿ ಶಾಲೆಯನ್ನು ಅಥಣಿಯಲ್ಲಿ ಸ್ಥಾಪಿಸಲಾಗುತ್ತಿದೆ. ಅಥಣಿ ತಾಲೂಕಿನಲ್ಲಿ 36.25 ಕೋಟಿ ರೂಪಾಯಿಗಳ ಬೃಹತ್ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಈ ಶಾಲೆ 6ರಿಂದ 12 ನೇ ತರಗತಿ ಓದುವ ಈ ಭಾಗದ ನೂರಾರು ಕಾರ್ಮಿಕ ಕುಟುಂಬಗಳ ಮಕ್ಕಳಿಗೆ ಉಚಿತವಾಗಿ ಗುಣಮಟ್ಟದ ಶಿಕ್ಷಣ ಹಾಗೂ ವಸತಿ ಸೌಲಭ್ಯವನ್ನು ಒದಗಿಸಲಿದೆ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳು ಈ ಶಾಲೆಯ ಫಲಾನುಭವಿಗಳಾಗಿದ್ದು ಬಡ ದುರ್ಬಲ ವರ್ಗದ ಮಕ್ಕಳ ಪಾಲಿಗೆ ಶೈಕ್ಷಣಿಕವಾಗಿ ಕಾರ್ಮಿಕರು ಇದರ ಸೌಲಭ್ಯ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಶಾಸಕ ಸವದಿ ಹೇಳಿದರು.

ಈ ಸಂದರ್ಭದಲ್ಲಿ ಶೆಟ್ಟರ್ ಮಠದ ಪರಮಪೂಜ್ಯ ಮರುಳಸಿದ್ದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು , ಪುರಸಭೆ ಉಪಾಧ್ಯಕ್ಷರಾದ ಭುವನೇಶ್ವರಿ ಯಕ್ಕಂಚಿ, ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ್, ಡಿ ಜಿ ನಾಗೇಶ ಉಪನಿರ್ದೇಶಕರು ಕಾರ್ಮಿಕ ಇಲಾಖೆ, ಕಾರ್ಮಿಕ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ ಜೋಗುರ , ಅಥಣಿ ತಾಲೂಕು ಕಾರ್ಮಿಕ ಇಲಾಖೆಯ ಅಧಿಕಾರಿ ಭುವನೇಶ್ವರಿ ಢಾಲೇ ಪುರಸಭೆ ಚುನಾಯಿತ ಹಾಗೂ ನಾಮನಿರ್ದೇಶಿತ ಸದಸ್ಯರು ,ಮುಖಂಡರು ಉಪಸ್ಥಿತರಿದ್ದರು.

ಹಾಲಶುಗರ್ ಕಾರ್ಖಾನೆಯಲ್ಲಿ ಯಾಂತ್ರಿಕ ರೋಲರ್‌ಗಳ ಪೂಜೆ

ಚಿಕ್ಕೋಡಿ: ನಿಪ್ಪಾಣಿಯ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆಯ 40ನೇ ಕಬ್ಬು ನುರಿಸುವ ಹಂಗಾಮಿನ ಪೂರ್ವ ಸಿದ್ಧತೆಗಳು ಭರದಿಂದ ಸಾಗುತ್ತಿವೆ. 11000 ಟಿಸಿಡಿಗೆ ಕಬ್ಬು ನುರಿಸುವ ಕ್ಷಮತೆ ಹೆಚ್ಚಾಗಿದ್ದರಿಂದ ಕಾರ್ಖಾನೆಯ ಆರ್ಥಿಕತೆಗೆ ಉತ್ತೇಜನ ದೊರಕಲಿದೆ. ಕಾರ್ಖಾನೆಯ ಅಭಿವೃದ್ಧಿಯೊಂದಿಗೆ ಸದಸ್ಯರ, ಕಾರ್ಮಿಕರ, ರೈತರ ಏಳಿಗೆಗೆ ಶ್ರಮಿಸಲಾಗುತ್ತಿದೆ ಎಂದು ಬಿಡಿಸಿಸಿ ಬ್ಯಾಂಕಿನ ಅಧ್ಯಕ್ಷ ಹಾಗು ಮಾಜಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಹೇಳಿದರು.

ನಿಪ್ಪಾಣಿಯ ಶ್ರೀ ಹಾಲಸಿದ್ದನಾಥ ಸಹಕಾರಿ ಸಕ್ಕರೆ ಕಾರ್ಖಾನೆ (ಮಲ್ಟಿಸ್ಟೇಟ್)ಯ 40ನೇ ಹಂಗಾಮಿನ ಯಾಂತ್ರಿಕ ರೋಲರ್ ಗಳ ಪೂಜೆಯನ್ನು ಭಾನುವಾರ ನೆರವೇರಿಸಿ ಮಾತನಾಡಿದರು.

ಕಾರ್ಖಾನೆಯು ಸಂಪೂರ್ಣವಾಗಿ ಆಧುನೀಕರಣದೊಂದಿಗೆ ಎಲ್ಲ ಆಯಾಮಗಳಲ್ಲಿ ಅಭಿವೃದ್ಧಿಯತ್ತ ದಾಪುಗಾಲು ಇಡುತ್ತಿದೆ. ಪ್ರಸ್ತುತ ವರ್ಷ ಯಶಸ್ವಿ ಸಾಧನೆಗೆ ಪೂರ್ಣ ತಾಂತ್ರಿಕ ಮತ್ತು ಇತರ ವ್ಯವಸ್ಥೆಗಳನ್ನು ಮಾಡಲಾಗಿದೆ' ಎಂದರು.

ಶಾಸಕಿ ಶಶಿಕಲಾ ಜೊಲ್ಲೆ ಮಾತನಾಡಿ, ಕಾರ್ಖಾನೆ ಸಕ್ಕರೆ ಉತ್ಪಾದನೆಗೆ ಸೀಮಿತವಾಗಿ ಉಳಿಯದೇ ಇತರ ಉಪಉತ್ಪನ್ನಗಳನ್ನು ಉತ್ಪಾದಿಸಿ ಹೆಚ್ಚಿನ ಆದಾಯ ಪಡೆಯುತ್ತಿದೆ. ಇದರಿಂದ ಆರ್ಥಿಕವಾಗಿ ಸದೃಢವಾಗುತ್ತಿದೆ. ಕೆಲವೇ ವರ್ಷಗಳಲ್ಲಿ ಕಾರ್ಖಾನೆ ಅಭಿವೃದ್ಧಿ ಪಥದತ್ತ ಸಾಗಲು ಅಧಿಕಾರಿ



ಮತ್ತು ಸಿಬ್ಬಂದಿ ವರ್ಗದ ಪ್ರಾಮಾಣಿಕ ಪರಿಶ್ರಮವಿದೆ, ಅವರೇ ನಮ್ಮ ಶಕ್ತಿ ಎಂದರು. ಈ ಸಂದರ್ಭದಲ್ಲಿ ಕಾರ್ಖಾನೆಯ ಅಧ್ಯಕ್ಷ ಮಲಗೊಂಡಾ ಪಾಟೀಲ, ಸಂಚಾಲಕ ಜಯವಂತ ಭಾಟಲೆ, ರಮೇಶ ಪಾಟೀಲ, ಅವಿನಾಶ ಪಾಟೀಲ, ಪ್ರಕಾಶ ಶಿಂಧೆ, ಸಮಿತ ಸಾಸನೆ, ರಾವಸಾಹೇಬ ಫರಳೆ, ಸುಹಾಸ ಗೂಗೆ, ರಾಮಗೊಂಡಾ ಚೌಗುಲೆ, ಭರತ ನಸಲಾಪೂರೆ, ಆನಂದ ಯಾದವ, ದೇವಪ್ಪ ದೇವಕತೆ, ವ್ಯವಸ್ಥಾಪಕ ನಿರ್ದೇಶಕ ಅಪ್ಪಾಸಾಹೇಬ ಶಿರಗಾವೆ, ಕಾರ್ಖಾನೆಯ ಸದಸ್ಯರು, ಸಿಬ್ಬಂದಿ, ರೈತರು ಉಪಸ್ಥಿತರಿದ್ದರು. ಸಂಚಾಲಕ ಶ್ರೀಕಾಂತ ಬನ್ನೆ ಸ್ವಾಗತಿಸಿದರು. ಗಜಾನನ ರಾಮನಕಟ್ಟಿ ಕಾರ್ಯಕ್ರಮ ನಿರೂಪಿಸಿದರು. ಪ್ರಧಾನ ವ್ಯವಸ್ಥಾಪಕ ಸುನೀಲ ತಳಂದಗೆ ವಂದಿಸಿದರು.

ಹಾರೂಗೇರಿ : ಪಟ್ಟಣದ ಶ್ರೀ ರಾಮಲಿಂಗೇಶ್ವರ ಮಂದಿರದಲ್ಲಿ ಲಿಂಗಾಯತ ಕಾಯಕ ಸಮಿತಿಯವರು ಬಸವ ಜಯಂತಿ ನಿಮಿತ್ತ ವಚನ ಕಂಠಪಾಠ ಸ್ಪರ್ಧೆ ಏರ್ಪಡಿಸಿದ್ದರು.



ಜಾನಪದವನ್ನೇ ಉಸಿರಾಗಿಸಿಕೊಂಡಿದ್ದ ಕೃಷ್ಣಶರ್ಮರು: ಡಾ.ಭಸ್ಮೆ

ಗೋಕಾಕ: ಗ್ರಾಮೀಣ ಪ್ರದೇಶದ ಜಾನಪದವನ್ನೇ ತಮ್ಮ ಉಸಿರಾಗಿಸಿಕೊಂಡ ಆನಂದ ಕಾವ್ಯನಾಮದ ಬೆಟಗೇರಿ ಕೃಷ್ಣಶರ್ಮರು ರಚಿಸಿದ ಸಾಹಿತ್ಯವು ಮನ ಮಿಡಿಯುವ ಜಾನಪದರ ಮೌಲಿಕ ಸಾಹಿತ್ಯವಾಗಿದೆ ಎಂದು ಗೋಕಾಕ ತಾಲೂಕು ದಂಡಾಧಿಕಾರಿ ಡಾ.ಮೋಹನ ಭಸ್ಮೆಯವರು ಅಭಿಪ್ರಾಯಿಸಿದರು.



ಆನಂದ ಕಂದರ ಬೆಟಗೇರಿ ಸ್ವಗ್ರಾಮದಲ್ಲಿ ಬೆಟಗೇರಿ ಕೃಷ್ಣಶರ್ಮರ 126ನೆಯ ಜಯಂತ್ಯುತ್ಸವದಲ್ಲಿ ಮಾತನಾಡಿದ ಭಸ್ಮೆಯವರು ಈ ಹಿರಿಯರ ಸದಾಸೆಯವನ್ನು ವ'ುಂಂದ'ು ವ'ರಿಸಿಕ'ೊಂಡಿರ'ುವ' ಗೋಕಾಕ ಪರಿಸರದ ಜಾನಪದ ಕವಿ ಕಲಾವಿದ ಈಶ್ವರಚಂದ್ರ ಕೂಡ ಅಭಿನಂದನಾರ್ಹರು.

ಡಾ ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್, ಬೆಳಗಾವಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಸಹಕರಿಸಿದ ಬೆಟಗೇರಿ ಗ್ರಾಮದ ಕರ್ನಾಟಕ ರಕ್ಷಣಾ ವೇದಿಕೆ, ಜಾಗೃತ ವೇದಿಕೆ ಹಾಗೂ ಶ್ರೀ ಸರ್ವೇಶ್ವರ ಪ್ರಸಾದಿತ ಶಿವ-ಕಾಳಿಕಾಂಬ ಸಾಂಸ್ಕೃತಿಕ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಸ್ವ-ಗ್ರಾಮ ಬೆಟಗೇರಿಯಲ್ಲಿ ಆಯೋಜಿತವಾದ 126ನೆಯ ಜಯಂತ್ಯುತ್ಸವ ಸಂದರ್ಭದಲ್ಲಿ ಅರಭಾವಿ ಮತಕ್ಷೇತ್ರದ ಶಾಸಕರಾದ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿಯವರ ಸದಾಶಯದಂತೆ ಕಾರ್ಯಕ್ರಮ ನಡೆದವು.

ಈಶ್ವರಚಂದ್ರ ಬೆಟಗೇರಿ ಅವರ ನಾ ಕಂಡಂತೆ ವಿವೇಕಾನಂದ ಪುಸ್ತಕ ಕುರಿತು ಮಾತನಾಡಿದ ಧಾರವಾಡದ ಪ್ರೊ ಶೋಭಾ ಶಂಕರ್ ಚಂದ್ರಗಿರಿಯವರು ಸುಮಾರು ನೂರಾತೊಂಬತ್ತೆರಡು ಪುಟಗಳಲ್ಲಿ ಲೇಖಕರು ವೈವಿಧ್ಯತೆಯನ್ನು ಮೆರೆದಿದ್ದಾರೆ ಎಂದರು. ಜಿ.ಕೆ ಕಾಡೇಶಕುಮಾರ್ ಪ್ರಾರ್ಥನೆಯೊಂದಿಗೆ ಬೆಟಗೇರಿ ಕೃಷ್ಣಶರ್ಮರ ನಲ್ವಾಡುಗಳನ್ನು ಮನದುಂಬಿ ಹಾಡಿ ಜನಮನ ರಂಜಿಸಿದರು. ಬೆಂಗಳೂರಿನ ಎಂ ಪ್ರಭಾಕರ ಸಾವಯುವ ಕೃಷಿಯಲ್ಲಿ ಜಾನಪದ ಕುರಿತಾಗಿ ರೈತರಿಗೆ ಎರೆಹುಳುವಿನ ಮಹತ್ವದ ಅರಿವು ಮೂಡಿಸಿದರು.

ಅಧ್ಯಕ್ಷತೆಯನ್ನು ಗ್ರಾಮದ ಹಿರಿಯರಾದ ಬಸವಂತ ಮಾಯಪ್ಪ ಕೋಣೆಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಗೋಕಾಕ್ ತಾಲೂಕ ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಪರಶುರಾಮ ಗಸ್ತಿ, ಗಣ್ಯ ವರ್ತಕ ಮಹಾಂತೇಶ್ ತಾಂವಶಿ, ಹಿರಿಯರಾದ ನರೇಂದ್ರ ಪುರಂದರೆ, ಸಂಗಯ್ಯ ಹಿರೇಮಠ,ಈರಯ್ಯ ಹಿರೇಮಠ, ಲಕ್ಷ್ಮಣ ನೀಲನ್ನವರ, ಹಿರಿಯ ಸಾಹಿತಿ ಮಹಾಲಿಂಗ ಮಂಗಿ, ಲಕ್ಷ್ಮಣ ಚಂದರಗಿ, ಪ್ರೊ ಮಹದೇವ ಕಂಬಿ, ಬಿ.ಎಂ.ದೇಯನ್ನವರ ನ್ಯಾಯವಾದಿ ಎಂ.ಐ. ನೀಲಣ್ಣವರ, ಡಾ ಅರುಣ್ ಸೌತೆಕಾಯಿ ಕನ್ನಡ ಸಾಹಿತ್ಯ ಪರಿಷತ್ತಿನ ಗೋಕಾಕ್ ತಾಲೂಕ ಅಧ್ಯಕ್ಷ ಭಾರತಿ ಬಿ.ಮದಬಾವಿ ಅವರೊಂದಿಗೆ ಬೆಂಗಳೂರಿನ ಹಿರಿಯರಂಗ ಕಲಾವಿದೆ ಮಾಲತಿಶ್ರೀ ಮೈಸೂರ್ ಉಪಸ್ಥಿತರಿದ್ದು ಮಾತನಾಡಿದರು.ಕರವೇ ಅಧ್ಯಕ್ಷ ಈರಣ್ಣ ಬಳಿಗಾರ ಸರ್ವರನ್ನು ಸ್ವಾಗತಿಸಿದರು. ಪ್ರಾಚಾರ್ಯ ಜಯಾನಂದ ಮಾದರ ಪ್ರಾಸ್ತಾವಿಕವಾಗಿ ಮಾತನಾಡಿದರು. ಈಶ್ವರಚಂದ್ರ ಬೆಟಗೇರಿ ಅವರ ತಂಡದಿಂದ ರಾಮಾಯಣದ ಸೀತಾ ಲಕ್ಷ್ಮಣ ಸಣ್ಣಾಟ ಪ್ರದರ್ಶನವಾಯಿತು. ಬಸವರಾಜ್ ಈರಪ್ಪ ಪಣದಿ ಕಾರ್ಯಕ್ರಮ ನಿರೂಪಿಸಿದರು. ಭರಮಣ್ಣ ಪೂಜಾರಿ ವಂದಿಸಿದರು.

ಚಿಕ್ಕೋಡಿ ಪಟ್ಟಣಕ್ಕೆ 6 ತಿಂಗಳಲ್ಲಿ 20 ಕೋಟಿ ರೂ. ಅನುದಾನ

ಚಿಕ್ಕೋಡಿ: ಅಲೆಮಾರಿ ಹಾಗೂ ಆರ್ಥಿಕವಾಗಿ ಹಿಂದುಳಿದ ಜನರೇ ಹೆಚ್ಚಾಗಿ ವಾಸಿಸುವ ಪಟ್ಟಣದ ರಾಮನಗರ ಹಾಗೂ ಸಂಜಯಗಾಂಧಿ ನಗರ ಬಡಾವಣೆಗಳನ್ನು 'ಅತ್ಯುತ್ತಮ ಬಡಾವಣೆ' ಗಳನ್ನಾಗಿ ಮಾರ್ಪಡಿಸಲಾಗುವುದು ಎಂದು ಶಾಸಕ ಗಣೇಶ ಹುಕ್ಕೇರಿ ಹೇಳಿದರು.

ಪಟ್ಟಣದ ರಾಮನಗರ ಬಡಾವಣೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನದ ಆದೇಶ ಪ್ರತಿಗಳನ್ನು ಶನಿವಾರ ಸಂಜೆ ಫಲಾನುಭವಿಗಳಿಗೆ ವಿತರಿಸಿ ಮಾತನಾಡಿದ ಅವರು, ಮುಂದಿನ 6 ತಿಂಗಳಲ್ಲಿ 20 ಕೋಟಿ ರೂ. ಗೂ ಹೆಚ್ಚು ಅನುದಾನ ತಂದು ಪಟ್ಟಣವನ್ನು ಅಭಿವೃದ್ಧಿಪಡಿಸಲಾಗುವುದು. ರಾಮನಗರ ಬಡಾವಣೆಯಲ್ಲಿ ವಾಸವಿರುವ ಜನರಿಗೆ ಶೀಘ್ರದಲ್ಲಿಯೇ ಅಧಿಕಾರಿಗಳ ಸಭೆಯನ್ನು ಕರೆದು ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗುವುದು ಎಂದರು.

ಪುರಸಭೆಯ ಮಾಜಿ ಅಧ್ಯಕ್ಷ ರಾಮಾ ಮಾನೆ ಮಾತನಾಡಿ, ರಾಮನಗರ ಬಡಾವಣೆಯನ್ನು ಶಾಸಕ ಗಣೇಶ ಹುಕ್ಕೇರಿ ಹಾಗೂ ವಿಧಾನಪರಿಷತ್ ಸದಸ್ಯ ಪ್ರಕಾಶ ಹುಕ್ಕೇರಿ ಹೆಚ್ಚಿನ ಅನುದಾನ ನೀಡಿ ಅಭಿವೃದ್ಧಿ ಪಡಿಸಿದ್ದಾರೆ. ಇಲ್ಲಿನ ಜನರಿಗೆ



▸▸ ಶಾಸಕ ಗಣೇಶ ಹುಕ್ಕೇರಿ ಭರವಸೆ

ಅವಶ್ಯಕವಾಗಿರುವ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಲಾಗುವುದು. ಮನೆಯ ಮೇಲೆ ಹಾದು ಹೋಗಿರುವ ಹೈ ಟೆನ್ಷನ್ ವಿದ್ಯುತ್ ತಂತಿಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಚರಂಡಿ, ರಸ್ತೆ, ಕುಡಿಯುವ ನೀರು ಪೂರೈಕೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಿಕೊಡಲಾಗುವುದು ಎಂದು ಹೇಳಿದರು.

ಮುಸ್ಲಿಂ ಸಮುದಾಯದ ಖಬರಸ್ತಾನ ನಿರ್ಮಾಣಕ್ಕಾಗಿ 10 ಲಕ್ಷ ರೂ, ಹನುಮಾನ ಮಂದಿರದ ಬಳಿಯಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ 5 ಲಕ್ಷ ರೂ. ಅನುದಾನ ಬಿಡುಗಡೆಯಾಗಿದ್ದು, ಶಾಸಕ ಗಣೇಶ ಹುಕ್ಕೇರಿ ಆದೇಶ ಪ್ರತಿಗಳನ್ನು ಸಂಬಂಧಿಸಿದವರಿಗೆ ವಿತರಿಸಿದರು. ಕೊಳವೆಬಾವಿ ಕೊರೆಯಿಸುವದಕ್ಕೂ ಈ ಸಂದರ್ಭದಲ್ಲಿ ಶಾಸಕ ಗಣೇಶ ಹುಕ್ಕೇರಿ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸತೀಶ ಕುಲಕರ್ಣಿ, ಪುರಸಭೆ ಮಾಜಿ ಸದಸ್ಯ ಅನಿಲ ಮಾನೆ, ರಾಜಶೇಖರ ಮಿರ್ಜೆ, ಇರ್ಫಾನ್ ಬೇಪಾರಿ, ರಮೇಶ ಹಿತ್ತಲಮನಿ, ಸಂದೀಪ ಶೇರಖಾನೆ, ಗುಲಾಬಹುಸೇನ ಬಾಗವಾನ್, ಸಾಬೀರ ಜಮಾದಾರ, ಮಹಾವೀರ ದಾಂಡಗೆ, ಹಸ್ಕಾಂ ಅಧಿಕಾರಿ ಸುಖಸಾರೆ, ಪುರಸಭೆ ಮುಖ್ಯಾಧಿಕಾರಿ ಜಗದೀಶ ಈಟಿ ಇತರರು ಇದ್ದರು.

ಕಿರುಸುದ್ದಿ

ಮಹಾರಥೋತ್ಸವ ಇಂದು

ರಬಕವಿ-ಬನಹಟ್ಟಿ: ಸೋಮವಾರ ಬಸವ ಜಯಂತಿ ಅಂಗವಾಗಿ ಸಮೀಪದ ಬಂಡಿಗಣಿಯ ಬಸವಗೋಪಾಲ ನೀಲಮಾಣಿಕಮಠದ ಆವರಣದಲ್ಲಿ ಬೆಳಿಗ್ಗೆ 8 ಕ್ಕೆ ಮಹಾ ರಥೋತ್ಸವ ಕಾರ್ಯಕ್ರಮ ಜರುಗಲಿದೆ. ನಂತರ ಬೆಳಿಗ್ಗೆ 10 ಕ್ಕೆ ಸರ್ವಧರ್ಮ ಸಮನ್ವಯ ಹಾಗೂ ಪಾರಮಾರ್ಥಿಕ ಸಪ್ತಾಹ ಜರುಗಲಿದೆ. ಶಾಸಕರಾದ ಸಿದ್ದು ಸವದಿ, ಜಗದೀಶ ಗುಡಗುಂಟಿಮಠ, ಸಿದ್ದು ಕೊಣ್ಣೂರ, ಆನಂದ ನ್ಯಾಮಗೌಡ ಉಪಸ್ಥಿತರಿರುವರೆಂದು ಶಿವಾನಂದ ಹಿರೇಮಠ ತಿಳಿಸಿದ್ದಾರೆ.

ಬಿಜೆಪಿಯಿಂದ ಪ್ರತಿಭಟನೆ ಹಾಸ್ಯಾಸ್ಪದ: ಸಿಂಧೂರ

ಜಮಖಂಡಿ: ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ವಿಧೇಯಕ ಸೋಲಿಗೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಕಾರಣ ಎಂದು ಭಾರತೀಯ ಜನತಾ ಪಕ್ಷವು ಪ್ರತಿಭಟನೆ ಮಾಡುತ್ತಿರುವುದು ಹಾಸ್ಯಾಸ್ಪದವಾಗಿದೆ ಎಂದು ಕಾಂಗ್ರೆಸ್ ಮುಖಂಡ ಬಸವರಾಜ ಸಿಂಧೂರ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸ್ವಾತಂತ್ರ್ಯ ನಂತರದಿಂದಲೂ ಕಾಂಗ್ರೆಸ್ ಮಹಿಳಾ ಪ್ರಧಾನ ಪಕ್ಷವಾಗಿದೆ. ಇಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ನೀಡಿದೆ. 2014ರಿಂದ 2024ರ ವರೆಗೆ 10 ವರ್ಷದ ಅವಧಿಯಲ್ಲಿ ಮಹಿಳಾ ವಿಧೇಯಕ ಅನುಷ್ಠಾನಗೊಲಿಸಲು ತಮ್ಮದೆ ಪಕ್ಷದ ಸದಸ್ಯರು ಇದ್ದರು ಅದನ್ನು ಬಿಟ್ಟು ಈಗ ಮಾಡುತ್ತಿರುವದು ಚುನಾವಣಾ ತಂತ್ರ ಪೂರ್ವ ಪೀಠಿಕೆಯಾಗಿದೆ. ಕೇವಲ ಜನರನ್ನು ತಪ್ಪು ದಾರಿಗೆಳದೆ ಮರಳು ಮಾಡಿ ರಾಜಕೀಯ ಬಿಟ್ಟು ಜನಪರ ಕಾಳಜಿಯಿಂದ ಕರ್ತವ್ಯ ಮಾಡಬೇಕು. ಇಂದು ರಾಜ್ಯದಲ್ಲಿ ಕಾಂಗ್ರೆಸ್ಸ ಪಕ್ಷವು ಜನಪರ ಕಾಳಜಿಯಿಂದ ಕರ್ತವ್ಯ ಮಾಡುತ್ತಿದೆ. ಮಹಿಳೆಯರಿಗಾಗಿ ಗೃಹಲಕ್ಷ್ಮೀ ಮತ್ತು ಉಚಿತ ಸಾರಿಗೆ ಯೋಜನೆ ನೀಡಿದೆ ಅಂದರೆ ಕಾಂಗ್ರೆಸ್ ಹೆಚ್ಚು ಮಹಿಳೆಯರಿಗೆ ಗೌರವ ನೀಡುವ ಪಕ್ಷವಾಗಿದೆ ಎಂದು ಹೇಳಿದರು.

ನಾಳೆಯಿಂದ ಶಂಕರಾಚಾರ್ಯರ ಜಯಂತಿ

ಜಮಖಂಡಿ: ನಗರದ ಜಂಬುಕೇಶ್ವರ ಮಂದಿರಿದ ಹತ್ತಿರದ ಶೃಂಗೇರಿ ಶಂಕರ ಮಠದ ಆವರಣದಲ್ಲಿ ಏ.21ರಿಂದ 23ರ ವರೆಗೆ ಜಗದ್ಗುರು ಶಂಕರಾಚಾರ್ಯರ ಜಯಂತಿ ಆಚರಿಸಲಾಗುವದು. ಏ.21ರಂದು ಬೆಳಗ್ಗೆ 8ಕ್ಕೆ ಅಷ್ಟೋತ್ತರ, ರುದ್ರಾಭಿಷೇಕ, 10ಕ್ಕೆ ತಹಶೀಲ್ದಾರ್ ಕಚೇರಿಯಲ್ಲಿ ಜಯಂತಿ ಪೂಜಾ ಕಾರ್ಯಕ್ರಮ ಮಧ್ಯಾಹ್ನ 12ಕ್ಕೆ ಜನ್ಮೋತ್ಸವ. ಸಂಜೆ 5.30ಕ್ಕೆ ಭಜನೆ ಪ್ರವಚನ ಮಂತ್ರ ಪುಷ್ಪ ನಡೆಯುವದು. ಏ.22ರಂದು ಬೆಳಗ್ಗೆ ನಗರ ಸಂಕೀರ್ತನೆ ಶಂಕರ ಮಠದಿಂದ ಪ್ರಾರಂಭವಾಗವುದು, ಸಂಜೆ ಪ್ರವಚನ ಭಜನೆ ಮಂತ್ರ ಪುಷ್ಪ, ಏ.23ರಂದು ಬೆಳಗ್ಗೆ 10ಕ್ಕೆ ಕುಂಖುಮಾರ್ಚನೆ, ಮಧ್ಯಾನ್ಹ 1ಕ್ಕೆ ಮಹಾಪ್ರಸಾದ, ಸಂಜೆ 7ಕ್ಕೆ ವಸಂತಪೂಜೆ ನಡೆಯಲಿದೆ ಎಂದು ಶಂಕರ ಸೇವಾ ಸಮಿತಿಯ ಸದಸ್ಯರು ವಿನಂತಿಸಿದ್ದಾರೆ.

ನಿಧನಸುದ್ದಿ

ಗೈಬುಸಾಬ ಖಾನಾಪುರ

ಕೆರೂರ: ಕಂದಗಲ್ ಹನಮಂತರಾಯರ ವಿರಚಿತ ವರಪ್ರಧಾನ ನಾಟಕದಲ್ಲಿ ರೌದ್ರಧಾಮನ ಪಾತ್ರ ಜನಮಾನಸದಲ್ಲಿ ಅಚ್ಚಳಿಯದೆ ನಿಲ್ಲಿಸಿದ ರಂಗಭೂಮಿ ಕಲಾವಿದ ಮತ್ತು ಪಪಂ ಮಾಜಿ ಸದಸ್ಯ ಗೈಬುಸಾಬ ಪೀರಸಾಬ ಖಾನಾಪೂರ (87) ಸ್ವಗೃಹದಲ್ಲಿ ನಿಧನರಾದರು. ಓರ್ವ ಸಹೋದರ ಇಬ್ಬರು ಪುತ್ರರು ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗ ಇದ್ದಾರೆ. ಶಾಸಕ ಭೀಮಸೇನ ಚಿಮ್ಮನಕಟ್ಟಿ, ಪಪಂ ಮಾಜಿ ಅಧ್ಯಕ್ಷ ಬಿ.ಬಿ.ಸೂಳಿಕೇರಿ ಜಿಪಂ ಮಾಜಿ ಸದಸ್ಯ ಡಾ.ಎಂ.ಜಿ.ಕಿತ್ತಲಿ, ಮಾಜಿ ಸದಸ್ಯ ಉಸ್ಮಾನಸಾಬ ಅತ್ತಾರ, ಭೀಮಸೇನ ದೇಸಾಯಿ, ಮೋದೀನಸಾಬ ಚಿಕ್ಕೂರ, ಅಲ್ತಾಪ ಧಾರವಾಡ, ಝಡ್.ಪಿ.ಅತ್ತಾರ, ಗೋಪಾಲಕೃಷ್ಣ ದೇಸಾಯಿ, ಸುದೀಂದ್ರ ಕುಲಕರ್ಣಿ, ರಂಗನಾಥ ದೇಸಾಯಿ ಕಂಬನಿ ಮಿಡಿದಿದ್ದಾರೆ.



ಶ್ರೀನಿವಾಸ ಕುಲಕರ್ಣಿ

ಜಮಖಂಡಿ: ನಗರದ ಸಿದ್ದರಾಮೇಶ್ವರ ಕಾಲೋನಿ ನಿವಾಸಿ ಬ್ರಾಹ್ಮಣ ಸಮಾಜದ ಹಿರಿಯರಾದ ನಿವೃತ ಶಿಕ್ಷಕ ಶ್ರೀನಿವಾಸ ಗೋವಿಂದರಾವ್ ಕುಲಕರ್ಣಿ(94) ನಿಧನರಾಗಿದ್ದಾರೆ. ಮೃತರಿಗೆ ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗ ಇದ್ದಾರೆ. ಘಟಪ್ರಬಾ ಎಡದಂಡೆ ಕಾಲುವೆಯ ನಿವೃತ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಪ್ರದೀಪ ಕುಲಕರ್ಣಿಯವರು ಮೃತರ ಪುತ್ರರಾಗಿದ್ದಾರೆ. ಮಾಜಿ ಶಾಸಕ ಆನಂದ ನ್ಯಾಮಗೌಡ ಸಂತಾಪ ಸೂಚಿಸಿದರು.





ರಬಕವಿ-ಬನಹಟ್ಟಿ; ಕರ್ನಾಟಕ ಸಾಹಿತ್ಯ ಅಕಾಡೆಮಿ ಕೊಡಮಾಡಿದ ಅತ್ಯುತ್ತಮ ಕೃತಿಯನ್ನಾಗಿ ಬನಹಟ್ಟಿಯ ಹಿರಿಯ ಸಾಹಿತಿ, ಬರಹಗಾರ ಮಲ್ಲಿಕಾರ್ಜುನ ಹುಲಗಬಾಳಿಯವರ 'ತಿರುಗಾಟ ಕೃತಿಗೆ ಪ್ರಶಸ್ತಿ ಪಡೆದಿದ್ದಕ್ಕೆ ನಗರದ ಹಿರಿಯರಿಂದ ಸನ್ಮಾನಿಸಲಾಯಿತು. ಡಾ.ಮಲಕಪ್ಪ ಜವಳಗಿ, ಶ್ರೀಶೈಲ ದಭಾಡಿ, ಮಹಾದೇವ ಬಾಣಕಾರ, ವಿರುಪಾಕ್ಷ ಕೊಕಟನೂರ, ಶಂಕರ ಮುನ್ನೊಳ್ಳಿ, ಶೇಖರ ಖವಾಸಿ ಇದ್ದರು.

ಸಮಾನತೆಯ ಹರಿಕಾರ ಬಸವಣ್ಣ

ರಬಕವಿ-ಬನಹಟ್ಟಿ: 12ನೇ ಶತಮಾನದಲ್ಲಿ ಮೇಲು-ಕೀಳು ಎಂಬ ಭಾವನೆ ವಿರುದ್ಧ ಹೋರಾಟ ಮಾಡಿ ಎಲ್ಲರನ್ನು ಒಂದೇ ಎಂದು ಭಾವಿ ಸಮಾಜದಲ್ಲಿ ಸರ್ವ ಜಾತಿಯವರನ್ನು ಸಮದೃಷ್ಟಿಯಿಂದ ನೋಡಿದವರು ಜಗತ್ತಿನ ಪ್ರಥಮ ಶರಣ ಬಸವಣ್ಣ ಎಂದು ಡಾ.ಬಸವರಾಜ ಕಟ್ಟಿ ಹೇಳಿದರು. ವಿಶ್ವಗುರು ಬಸವಣ್ಣನವರ 893ನೇ ಜಯಂತಿ ನಿಮಿತ್ತ ಮುಮುಕ್ಷಮಠದಲ್ಲಿ ನಡೆದ ಬಸವ ಸ್ಮರಣೆ ವಿಷಯದಡಿ ಅನುಭಾವದಲ್ಲಿ ಮಾತನಾಡಿದ ಅವರು, ಬಸವಣ್ಣ ವಚನಗಳ ಮೂಲಕ ಇಂದಿಗೂ ಎಲ್ಲರ ಮನದಲ್ಲಿ ಜೀವಂತರಾಗಿದ್ದಾರೆಂದರು.ಬೈಲಹೊಂಗಲದ ಮಹಾದೇವ ಸರಸ್ವತಿ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿ, ಅಕ್ಷಯ ತೃತಿಯ ದಿನ ಜನಿಸಿದ ಮಹಾಪುರುಷ ಬಸವಣ್ಣನವರು ಜನರಿಗೆ ತಿಳಿಯುವ ಹಾಗೆ ವಚನಗಳನ್ನು ರಚಿಸಿದವರು. ಅವರ ವಚನಗಳಲ್ಲಿ ಬಹಳಷ್ಟು ಅರ್ಥ ಗರ್ಭಿತವಾದ ಸಂಗತಿಗಳಿವೆ. ಜೀವನದಲ್ಲಿ ವಚನಗಳ ಅಳವಡಿಕೆಯಿಂದ ಸಾರ್ಥಕ ಬದುಕಾಗುವದೆಂದರು. ಬಸವ ಸಮಿತಿ ಅಧ್ಯಕ್ಷ ಶಂಕರ ಹೋಳಗಿ ಅಧ್ಯಕ್ಷತೆ ವಹಿಸಿದ್ದರು. ನವೀನ ಕುಂಚನೂರ ಷಟಸ್ಥಳ ಧ್ವಜಾರೋಹಣ ನೆರವೇರಿಸಿದರು. ಈರಣ್ಣ ಶಿರಹಟ್ಟಿ, ಗುರುಸಿದ್ದಪ್ಪ ಚನಾಳ, ಮಹೇಶ ಬಂಡಿಗಣಿ, ಪ್ರಕಾಶ ಬುರುಡ, ರಮೇಶ ಸೊರಗಾಂವಿ, ಶಿವಲಿಂಗಪ್ಪ ಕರಲಟ್ಟಿ, ಶಂಕರ ಜಾಲಿಗಿಡದ, ಮಹಾಶಾಂತ ಶೆಟ್ಟಿ, ಶ್ರೀಶೈಲ ಗಣೇಶನವರ, ಶೈಲಜಾ ನುಚ್ಚಿ, ಮಹಾನಂದಾ ಕುಳ್ಳಿ, ವೈ.ಬಿ. ಕೊರಡೂರ ಸೇರಿದಂತೆ ಅನೇಕರಿದ್ದರು.



ರಬಕವಿ-ಬನಹಟ್ಟಿ; ವಿಶ್ವಗುರು ಬಸವಣ್ಣನವರ 893ನೇ ಜಯಂತಿ ನಿಮಿತ್ತ ಮುಮುಕ್ಷಮಠದಲ್ಲಿ ನಡೆದ ಬಸವ ಸ್ಮರಣೆ ಅನುಭಾವದಲ್ಲಿ ಡಾ.ಬಸವರಾಜ ಕಟ್ಟಿ ಮಾತನಾಡಿದರು. ಬೈಲಹೊಂಗಲದ ಮಹಾದೇವ ಸರಸ್ವತಿ ಸ್ವಾಮೀಜಿ, ಬಸವ ಸಮಿತಿ ಅಧ್ಯಕ್ಷ ಶಂಕರ ಹೋಳಗಿ, ನವೀನ ಕುಂಚನೂರ ಷಟಸ್ಥಳ ಇದ್ದರು

ದೇಶದ ಮಹಿಳೆಯರಿಗೆ ಆದ ಅನ್ಯಾಯ ಖಂಡಿಸಿ ಪ್ರತಿಭಟನೆ

ನಾರೀಶಕ್ತಿ ಯೋಜನೆಗೆ ಅನ್ಯಾಯ

ಜಮಖಂಡಿ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ನಾರೀಶಕ್ತಿ ವಂದನಾ ಯೋಜನೆಗೆ ವಿರೋಧ ಪಕ್ಷಗಳು ಆಕ್ಷೇಪಣೆ ವ್ಯಕ್ತಪಡಿಸಿ ವಿಧೇಯಕ ವಿರೋಧಿಸಿ ತಡೆಯೊಡ್ಡುವುದರ ಮೂಲಕ ದೇಶದ ಮಹಿಳೆಯರಿಗೆ ಅನ್ಯಾಯ ಮಾಡಿದ್ದನ್ನು ಖಂಡಿಸಿ ಮಹಿಳ ಮೋರ್ಚಾ ಪಧಾಧಿಕಾರಿಗಳು ಪ್ರತಿಭಟನಾ ಮೋರ್ಚಾ ನಡೆಸಿದರು.

ನಗರದ ಮುದೋಳ ರಸ್ತೆಯ ರೂಗಿ ಎಲ್ಲಮ್ಮ ದೇವಸ್ಥಾನ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಸುವರ್ಣ ಚಿತ್ರ ಮಂದಿರ ವೃತ್ತದಲ್ಲಿ ಪ್ರತಿಭಟನಾ ಸಭೆಯನ್ನು ಮಾಡಿದರು.

ಶಾಸಕ ಜಗದೀಶ ಗುಡಗುಂಟಿ ಮಾತನಾಡಿ, ಕೇಂದ್ರ ಮಹಾತ್ವಾಕಾಂಕ್ಷೆ ಯೋಜನೆಯಲ್ಲಿ ಒಂದಾದ ಲೋಕಾಸಭಾ ಕ್ಷೇತ್ರ ಮರುವಿಂಗಡಣೆ ಮತ್ತು ಮಹಿಳಾ ಮೀಸಲಾತಿ ವಿಧೇಯಕ್ಕೆ ವಿರೋಧ ಪಕ್ಷಗಳು ಹಿನ್ನೆಡೆಯುಂಟು ಮಾಡಿದ್ದಾರೆ. ವಿಧೇಯಕಕ್ಕೆ ಎರಡನೇ ಮೂರು ಮತ ಬೀಳದೇ ಇದ್ದದರಿಂದ ವಿಧೇಯಕ್ಕೆ ಹಿನ್ನೆಡೆಯಾಗಿದೆ. ಈ ಹಿನ್ನೆಡೆಗೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳೆ ನೇರವಾಗಿ ಕಾರಣಿಭೂತರಾಗಿದ್ದಾರೆ ಎಂದು ಹೇಳಿದರು.



ರಾಜ್ಯ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಡಾ.ವಿಜಯಲಕ್ಷ್ಮೀ ತುಂಗಳ ಮಾತನಾಡಿ ಚುನಾವಣೆಯಲ್ಲಿ ಮಹಿಳೆಯರಿಗೆ ಸಮಾನ ಹಕ್ಕನ್ನು ಸಂವಿಧಾನವು ನೀಡಿದೆ. ಅದು ನಮ್ಮೆಲ್ಲ ಹಕ್ಕಾಗಿದೆ. ಅದರಂತೆ ಈ ವಿಧೆಯಕಕ್ಕೆ ಹಿನ್ನೆಯಾಗಿದ್ದು, ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳಿಂದಲೇ ಹೊರತೇ ಮತ್ತೇನಿಲ್ಲ. ಕಾಂಗ್ರೆಸ್ ಪಕ್ಷವು ಎಂದು ಜನಪರ ಕೆಲಸವಂತೂ ಮಾಡಿಯೇಯಿಲ್ಲ ಇಂದು ಮಹಿಳೆ ಎಲ್ಲ ಸ್ಥರದಲ್ಲಿ ಎತ್ತರಕ್ಕೆ ಏರಿದ್ದಾಳೆ ಆದರೆ ಇದೇ ಕಾಂಗ್ರೆಸ್ಸಿಗರು ಮಹಿಳೆಯರನ್ನು ಕತ್ತಲೆಗೆ ತಳ್ಳುವ ಹುನ್ನಾರು ನಡೆಸಿದ್ದಾರೆ ಎಂದು ಹೇಳಿದರು. ಗೀತಾ ಸೂರ್ಯವಂಶಿ, ಗಣೇಶ ಶಿರಿಗಣ್ಣವರ, ಶಂಕರ ಕಾಳೆ, ಅಜೇಯ ಕಡಪಟ್ಟಿ, ಮಲು ದಾನಗೌಡರ, ಮಲ್ಲು ಹೇಸಮನಿ ಸೇರಿದಂತೆ ನೂರಾರು ಮಹಿಳೆಯರು ಕಾರ್ಯರ್ತರು ಇದ್ದರು.

ತುರ್ತು ಕ್ಲಿನಿಕ್ ಕೇಂದ್ರ ಪ್ರಾರಂಭ

ಬಾಗಲಕೋಟೆ: ಜಿಲ್ಲಾಡಳಿತ ಭವನದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ ಹಾಗೂ ಸಿಬ್ಬಂದಿಗೆ ತುರ್ತು ಸಂದರ್ಭದಲ್ಲಿ ತಕ್ಷಣ ವೈದ್ಯಕೀಯ ನೆರವು ಒದಗಿಸುವ ಉದ್ದೇಶದಿಂದ ಜಿಲ್ಲಾಡಳಿತ ಭವನದಲ್ಲಿ ತುರ್ತು ಕ್ಲಿನಿಕ್ ಕೇಂದ್ರವನ್ನು ತೆರೆಯಲಾಗಿದೆ ಎಂದು ಜಿಪಂ ಸಿಇಒ ಶಶಿಧರ ಕುರೇರ ತಿಳಿಸಿದ್ದಾರೆ.

ಈ ತುರ್ತು ಚಿಕಿತ್ಸಾ ಕೇಂದ್ರದಲ್ಲಿ ರಕ್ತದ ಒತ್ತಡ ಹಾಗೂ ಶುಗರ್ ಪರೀಕ್ಷೆ, ಸಣ್ಣ ಗಾಯಗಳಿಗೆ ಚಿಕಿತ್ಸೆ, ತುರ್ತು ಔಷಧಿ ವಿತರಣೆ ಸೇರಿದಂತೆ ಅಗತ್ಯ ಸೇವೆಗಳು ಲಭ್ಯವಿದ್ದು, ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಸಮೀಪದ ಆಸ್ಪತ್ರೆಗೆ ರವಾನಿಸುವ ವ್ಯವಸ್ಥೆಯೂ ಕಲ್ಪಿಸಲಾಗಿದೆ. ಪ್ರಾಥಮಿಕ ಚಿಕಿತ್ಸೆಯನ್ನು ನೀಡಲು ಆರೋಗ್ಯ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಜಿಲ್ಲಾಡಳಿತ ಭವನಕ್ಕೆ ಆಗಮಿಸುವ ಸಾರ್ವಜನಿಕರು, ವಿವಿಧ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಕ್ಷಣದ ವೈದ್ಯಕೀಯ ನೆರವು ದೊರೆಯಲಿದ್ದು, ಎಲ್ಲ ನೌಕರರ ವರ್ಗದವರು ಇದರ ಸದುಪಯೋಗವನ್ನು ಪಡೆದುಕೊಳ್ಳಲು ತಿಳಿಸಿದರು.

ಶನಿವಾರ ಜಿಲ್ಲಾ ಪಂಚಾಯತ ಅಧಿಕಾರಿಗಳು ತುರ್ತು ಚಿಕಿತ್ಸಾ ಕೇಂದ್ರಕ್ಕೆ ಭೇಟಿ ನೀಡಿ ಸೌಲಭ್ಯಗಳನ್ನು ಪರಿಶೀಲಿಸುವದರ ಜೊತೆಗೆ ಈ ಸಂದರ್ಭದಲ್ಲಿ ಅಧಿಕಾರಿಗಳು ಸ್ವತಃ ತಮ್ಮ ರಕ್ತದ ಒತ್ತಡ ಹಾಗೂ ಶುಗರ್ ಮಟ್ಟವನ್ನು ಪರೀಕ್ಷೆ ಮಾಡಿಸಿಕೊಂಡರು. ಕೆಲವೊಂದು ಪ್ರಾಥಮಿಕ ಚಿಕಿತ್ಸೆಯನ್ನು ಸಹ ಪಡೆದುಕೊಂಡರು.

> **ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯತ ಆವರಣದಲ್ಲಿ ತುರ್ತು ಕ್ಲಿನಿಕ್ ಆರಂಭಿಸಿರುವುದು ನೌಕರರ ಆರೋಗ್ಯ ಮತ್ತು ಕಲ್ಯಾಣವನ್ನು ಕಾಪಾಡುವ ದಿಟ್ಟ ಹೆಜ್ಜೆಯಾಗಿದೆ. ಇಲ್ಲಿ ರಕ್ತದ ಒತ್ತಡ, ಶುಗರ್ ಪರೀಕ್ಷೆ, ಲ್ಯಾಬರೇಟರಿ ಪರೀಕ್ಷೆ ಸೇವೆಗಳು ಹಾಗೂ ತುರ್ತು ಚಿಕಿತ್ಸಾ ಸೌಲಭ್ಯಗಳನ್ನು ಒದಗಿಸಲಾಗಿದೆ. ಕಚೇರಿ ಆವರಣದಲ್ಲಿಯೇ ತಕ್ಷಣ ವೈದ್ಯಕಿಯ ನೆರವು ಲಭ್ಯವಾಗುವಂತೆ ಕ್ರಮ ಕೈಗೊಂಡಿದ್ದೇವೆ.**
> ■ **ಶಶಿಧರ ಕುರೇರ, ಜಿಪಂ ಸಿಇಒ**



ನರಸಿಂಹ ಭವನದ ಉದ್ಘಾಟನೆ ಇಂದು

ಗಲಗಲಿ: ಇಲ್ಲಿಯ ಪ್ರಸಿದ್ದ ನರಸಿಂಹ ದೇವಸ್ಥಾನದ ಪಕ್ಕದಲ್ಲಿ ನೂತನವಾಗಿ ನಿರ್ಮಿಸಿದ ಲಕ್ಷ್ಮೀ ನರಸಿಂಹ ಭವನದ ಉದ್ಘಾಟನಾ ಕಾರ್ಯಕ್ರಮ ಏ.20ರಂದು ಸೋಮವಾರ ನಡೆಯಲಿದೆ. ಕಾರ್ಯಕ್ರಮ ನಿಮಿತ್ತ ಬೆಳಗ್ಗೆ 8 ಗಂಟೆಗೆ ಲಕ್ಷ್ಮೀ ನರಸಿಂಹ ದೇವರಿಗೆ ಪಂಚಾಮೃತ ಅಭಿಷೇಕ 9 ಗಂಟೆಗೆ ವಾಸ್ತು ಶಾಂತಿ ಹೋಮ ಪ್ರಾರಂಭಗೊಂಡು 12 ಗಂಟೆಗೆ ಪೂರ್ಣಾಹುತಿ ನಡೆಲಿದೆ. ಮಧ್ಯಾಹ್ನ 1 ಗಂಟೆಗೆ ಲಕ್ಷ್ಮೀನರಸಿಂಹ ದೇವರ ನೈವೇದ್ಯ 1 ಗಂಟೆ 30 ನಿಮಿಷಕ್ಕೆ ಭಕ್ತರಿಗೆ ತೀರ್ಥ ಪ್ರಸಾದ ವಿತರಣೆ ನಡೆಯಲಿದೆ ಎಂದು ಲಕ್ಷ್ಮೀ ನರಸಿಂಹ ದೇವಸ್ಥಾನ ಟ್ರಸ್ಟ್ ಕಮಿಟಿ ಪ್ರಕಟಣೆ ತಿಳಿಸಿದೆ.

ಡಾ.ಅರುಣ ಹೂಲಿಗೆ ಪ್ರಶಸ್ತಿ

ಬಾಗಲಕೋಟೆ: ಬಿವಿವಿಎಸ್ ಹೋಮಿಯೋಪಥಿಕ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಪ್ರಾಚಾರ್ಯ ಡಾ.ಅರುಣ ವಿ. ಹೂಲಿ ಅವರಿಗೆ ಅವರು ಹೋಮಿಯೋಪಥಿ ವೈದ್ಯ ಪದ್ಧತಿ ಹಾಗೂ ವೈದ್ಯಕೀಯ ಶಿಕ್ಷಣದಲ್ಲಿ ಸಲ್ಲಿಸುತ್ತಿರುವ ಗುರುತರವಾದ ಸೇವೆ ಪರಿಗಣಿಸಿ ಡಾ.ಶಾರದಾ ವೆಂಕಟಸುಬ್ಬಯ್ಯ ಸ್ಮಾರಕ ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾಸಲಾಯಿತು. ಕರ್ನಾಟಕ ಕ್ವಾಲಿಫಾಯಡ ಹೋಮಿಯೋಪಥಿಕ ಅಸೋಸಿಯೇಶನ ಬೆಂಗಳೂರಿನ ಕುಮಾರ ಪಾರ್ಕದಲ್ಲಿರುವ ಗಾಂಧಿ ಭವನದಲ್ಲಿ ಆಯೋಜಿಸಿದ ವಿಶ್ವ ಹೋಮಿಯೋಪಥಿ ದಿನಾಚಾರಣೆ ಸಂದಭ9ದಲ್ಲಿ ನಾಡಿನ ಹೋಮಿಯೋಪಥಿ ದಿಗ್ಗಜರು ಹಾಗೂ ಶಂಕರ ಕ್ಯಾನ್ಸರ ಫೌಂಡೇಶನದ ಹಿರಿಯ ಕ್ಯಾನ್ಸರ ತಜ್ಞ ಡಾ.ಬಿ.ಎಸ್.ಶ್ರೀನಾಥರವರ ಸಮ್ಮುಖದಲ್ಲಿ ಪ್ರಶಸ್ತಿಗೆ ಭಾಜಕರಾದರು. ಬಿವಿವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಆಯುಷ್ ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ, ವಿಭಾಗ ಮುಖ್ಯಸ್ಥರಾದ ಡಾ.ರವಿ.ಎಸ್.ಕೋಟೆಣ್ಣವರ, ಡಾ.ಸುಧೀರ ಬೆಟಗೇರಿ, ಡಾ.ರುದ್ರೇಶ ಕೊಪ್ಪಳ, ಡಾ.ಅಖಿಲಾ ಹುಲ್ಲೂರ, ಡಾ.ಮೇಘಾ ಪ್ರಾಧ್ಯಾಪಕರು ಅಭಿನಂದನೆ ಸಲ್ಲಿಸಿದ್ದಾರೆ.



ಬುದ್ದಿವಂತಿಕೆಯೊಂದಿಗೆ ಹೃದಯವಂತರಾಗಿರಿ: ಹಂಚಲಿ

ಇಳಕಲ್: ಶಿಕ್ಷಣ ಕಲಿತು ಬುದ್ಧಿವಂತರಾದರೆ ಸಾಲದು. ಹೃದಯವಂತರಾಗಬೇಕು. ಅಂದಾಗ ವಿದ್ಯಾರ್ಥಿಗಳ ಬದುಕು ಸಾರ್ಥಕ ಎಂದು ಅಶೋಕ ಹಂಚಲಿ ಹೇಳಿದರು.

ವಿಜಯ ಮಹಾಂತೇಶ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ವಿದ್ಯಾರ್ಥಿ ಒಕ್ಕೂಟದ ಮುಕ್ತಾಯ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿ, ವಿಜಯ ಮಹಾಂತ ಶಿವಯೋಗಿಗಳ ಆಶೀರ್ವಾದದಿಂದ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು. ವಿದ್ಯಾರ್ಥಿಗಳಲ್ಲಿ ಅದ್ಭುತಶಕ್ತಿಯಿದೆ, ಕಠಿಣ ಪರಿಶ್ರಮದ ಮೂಲಕ ಮುಂದೆ ಬರಬೇಕಿದೆ. ಭಗತಸಿಂಗ, ಬಸವಣ್ಣ ಮೊದಲಾದವರು ನಿಮ್ಮ ನಾಯಕರಾಗಬೇಕು ಹೊರತು ಸಿನಿಮಾದ ನಟರಲ್ಲ. ಹೆತ್ತ ತಂದೆ ತಾಯಿಗಳ ಋಣ ತೀರಿಸಬೇಕು, ಅವರನ್ನು ಎಂದೂ ಮರೆಯಬಾರದು. ಅಂಬೇಡ್ಕರರಂತೆ ಪುಸ್ತಕ ಓದುವ ಸಂಸ್ಕೃತಿ ಬೆಳಸಿಕೊಂಡು ಸಂಸ್ಕಾರವಂತರಾಗಿ ಜೀವನದಲ್ಲಿ ಗೆಲುವನ್ನು ಸಾಧಿಸಿರಿ ಎಂದು ವಿದ್ಯಾರ್ಥಿಗಳಿಗೆ ಹೇಳಿದರು.

ಗುರುಮಹಾಂತ ಶ್ರೀಗಳು ವಿದ್ಯಾರ್ಥಿಗಳು ಮಾನವೀಯತೆ, ಹೃದಯ ಶ್ರೀಮಂತಿಕೆಯಿಂದ ಶ್ರೇಷ್ಠ ವ್ಯಕ್ತಿಗಳಾಗಿರಿ, ಜ್ಞಾನದ ಬಲದಿಂದ ನಿಮ್ಮಲ್ಲಿನ ಅಜ್ಞಾನವನ್ನು ಕಿತ್ತು ಹಾಕಿ ಉತ್ತಮ ನಾಗರಿಕರಾಗಿರಿ. ಯಾವುದೇ ಕೆಟ್ಟ ಕೆಲಸಮಾಡದೇ ಒಳ್ಳೆಯ ಕೆಲಸ ಮಾಡಿರಿ ಎಂದು ಆಶೀರ್ವದಿಸಿದರು.

ಪ್ರಾಚಾರ್ಯ ಡಾ.ಎಸ್.ಬಿ.ಬಿರಾದಾರ ಮಾತನಾಡಿದರು.

ಡಾ.ಮುರ್ತುಜಾ ಬ.ಒಂಟಿ, ಐಐಟಿ ಪರೀಕ್ಷೆ ಪಾಸಾಗಿ ಆಯ್ಕೆಗೊಂಡ 3 ವಿದ್ಯಾರ್ಥಿಗಳನ್ನು, ಕನ್ನಡ ಮತ್ತು ಗಣಿತಶಾಸ್ತ್ರ ವಿಷಯದಲ್ಲಿ ಬಾಗಲಕೋಟೆ ವಿಶ್ವವಿದ್ಯಾಲಯದಿಂದ ತೃತೀಯ ರ‍್ಯಾಂಕ್ ಬಂದ 2 ವಿದ್ಯಾರ್ಥಿಗಳನ್ನು ಕೆ-ಸೆಟ್ ಪರೀಕ್ಷೆಯಲ್ಲಿ ಪಾಸಾದ 3 ವಿದ್ಯಾರ್ಥಿಗಳನ್ನು ಸಾಹಿತ್ಯ, ಸಾಂಸ್ಕೃತಿಕ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆಮಾಡಿದ ಸಾಧಕ ವಿದ್ಯಾರ್ಥಿಗಳನ್ನು, 100 ಕ್ಕೆ 100 ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಸನ್ಮಾನ ಮಾಡಲಾಯಿತು.

ಆಡಳಿತ ಮಂಡಳಿಯ ಚೇರಮನ್ನ ರತ್ನಾಕರ ಎಸ್. ಹೂಲಿ, ವಿದ್ಯಾರ್ಥಿ ಒಕ್ಕೂಟದ ಕಾರ್ಯಧ್ಯಕ್ಷ ಡಾ.ಶಿವಾನಂದ ಡಿ.ಕೆಂಚಾಯಿಗೋಳ, ಐಕ್ಯೂಎಸಿ ಸಂಯೋಜಕ ಡಾ.ರಮೇಶ ಮಾಳಗಿ, ಡಾ.ಮುರ್ತುಜಾ ಬ.ಒಂಟಿ, ಬಿ.ಎಂ.ನದಾಫ್, ಸಹನಾ ಬುದ್ದಿನ್ನಿ ಉಪಸ್ಥಿತರಿದ್ದರು.



ಮಂತದೇವರ ಓಕುಳಿ ಅದ್ದೂರಿ

ಕೆರೂರ: ಬದಾಮಿ ತಾಲೂಕಿನ ಸುಕ್ಷೇತ ಅನವಾಲ ಗ್ರಾಮದಲ್ಲಿ ಗ್ರಾಮದೇವತೆಗೆ ಉಡಿ-ತುಂಬುವ ಕಾರ್ಯಕ್ರಮ ಹಾಗೂ ಹಣಮಂತದೇವರ ಓಕುಳಿ ಕಾರ್ಯಕ್ರಮಗಳು ಸಕಲ ಸದ್ಭಕ್ತರಿಂದ ವಿಜೃಂಭಣೆಯಿಂದ ಬೆಳಗ್ಗೆಯಿಂದಲೇ ಪ್ರಾರಂಭಗೊಂಡವು.

ದೇವಿಗೆ ನಸುಕಿನಿಂದಲೇ ಸುಪ್ರಭಾತ, ವಿಶೇಷ ಅಲಂಕಾರ ಪೂಜೆ ನಂತರ ಮುತ್ತೈಯದಿರಿಂದ ಉಡಿ-ತುಂಬುವ ಕಾರ್ಯಕ್ರಮ ನೆರವೇರಿದವು. ನಂತರ ಬೆಳಿಗ್ಗೆಯಿಂಲೇ ಪ್ರಾರಂಭಗೊಂಡಿದ್ದ ಹಣಮಂತರ ಓಕುಳಿ ನಿಮಿತ್ತವಾಗಿ ವಿಶೇಷ ಅಲಂಕಾರ ಪೂಜೆ ಹಾಗೂ ದೇವರಿಗೆ ವಿಶೇಷ ಅಭಿಷೇಕ ಪುಂಡಲೀಕ ಪುಜಾರ. ಅರ್ಚಕರಿಂದ ಜರುಗಿತು. ನಂತರ ಸಂಜೆ ಯುವಕರಿಂದ, ಮಕ್ಕಳಿಯಿಂದ ಕೂಡಿದ ಓಕುಳಿ ಕಾರ್ಯಕ್ರಮವು ನೋಡಲು ಬಂದ ಸಾಕಷ್ಟು ಭಕ್ತರಿಗೆ ಸಾಕ್ಷಿಯಾಯಿತು.

ಹಿರಿಯರಾದ ಮುದುಗೌಡ ಪಾಟೀಲ, ಹೊಳಬಸಪ್ಪ ಅರಕೇರಿ, ಮಾರುತಿ ಪೂಜಾರ, ಆನಂದ ಪುರೋಹಿತ, ದಿವಾಕರ ಕುಲಕರ್ಣಿ, ದುಂಡಪ್ಪ ಪೂಜಾರ, ಲಕ್ಷ್ಮಣ ಪೂಜಾರ, ಹಣಮಂತ ಪೂಜಾರ ಉಪಸ್ಥಿತರಿದ್ದರು.

ಮತ್ತೆ ಹಳಿ ತಪ್ಪುತ್ತಿರುವ ಕುಡಚಿ-ಬಾಗಲಕೋಟೆ ರೈಲ್ವೆ ಮಾರ್ಗ

ಗೋಪಾಲ ಪಾಟೀಲ

ದಿಗಂತ ವಿಶೇಷ

ಜಮಖಂಡಿ: ಜಮಖಂಡಿ ಸಂಸ್ಥಾನಿಕರ ಕನಸಿನ ಕೂಸಿಗೆ ಮತ್ತೆ ಗ್ರಹಣ ಬಡಿದಂತಿದೆ. ಹೋರಾಟದ ಚುರುಕು ಮುಟ್ಟಿದಾಗ ಎದ್ದೇಲುವ ಕಾಮಗಾರಿ ಹೋರಾಟಗಾರರು ಹೋರಾಟ ಬಿಟ್ಟರೆ ಕಾಮಗಾರಿ ಮತ್ತೇ ಹಳತಕ್ಕೆ ಬಿದ್ದು ಒಟ್ಟಾರೆಯಾಗಿ ಕುಡಚಿ-ಬಾಗಲಕೋಟೆ ರೈಲ್ವೆ ಮಾರ್ಗದ ದಾರಿ ಕಾಯುವದೇ ನಾಗರಿಕದ್ದಾಗಿದೆ.

142 ಕಿಮಿ ರೈಲ್ವೆ ಮಾರ್ಗವು ಬೆಳಗಾವಿ ವಿಜಯಪುರ ಬಾಗಲಕೋಟೆ ರೈಲು ಮಾರ್ಗವನ್ನು ಬೆಸೆಯುತ್ತದೆ. ಮೊದಲು ಈ ರೈಲ್ವೆ ಮಾರ್ಗ ಅಷ್ಟೊಂದು ಪೂರಕವಾಗಿಲ್ಲವೆಂದು ಸಮೀಕ್ಷೆಯು ಹೇಳಿದ್ದುಂಟು ಆದರೆ ಇಂದು ಈ ರೈಲು ಮಾರ್ಗವು ಆರ್ಥಿಕತೆಯ ನಡುಕಟ್ಟಾಗಿದೆ. ನೂರಾರು ಸಕ್ಕರೆ, ಸಿಮೆಂಟ್ ಕಾರ್ಖಾನೆಗಳನ್ನು ಸೇರಿಕೊಂಡಿರುವ ಈ ಮಾರ್ಗಕ್ಕೆ ಯಾಕಿಷ್ಟು ಅಸಡ್ಡೆಯಾಗುತ್ತಿದೆಯೋ ಕಾರಣವೇ ತಿಳಿದಿಲ್ಲ. ಈ ಮಾರ್ಗ ಮುಗಿಯಲು ಇನ್ನೆಷ್ಟು ವಸಂತ ಬೇಕು ಇದಕ್ಕೆ ಮಾತ್ರ ಉತ್ತರ ತಡಕಾಡಿದರೂ ಸಿಗುವದಿಲ್ಲ ಉತ್ತರ ನೀಡಬೇಕಾದವರೇ ಉತ್ತರ ನೀಡುತ್ತಿಲ್ಲ.



2008ರಲ್ಲಿ ಕುತುಬುದ್ದೀನ ಖಾಜಿ ನೇತೃತ್ವದಲ್ಲಿ ಹೋರಾಟ ಸಮೀತಿಯು ಪ್ರಾರಂಭವಾಗಿ ಹೋರಾಟದ ಹಾದಿ ಹಿಡಿದಾಗ ಕೇಂದ್ರ ಸರಕರವು ಎಚ್ಚೆತ್ತು 2010 ರಲ್ಲಿ ಈ ಮಾರ್ಗಕ್ಕೆ ಹಸಿರು ನಿಶಾನೆ ತೋರಿಸಿ 2017ರಲ್ಲಿ ಕಾಮಗಾರಿ ಪೂರ್ಣಗೊಳಿಸುವದಾಗಿ ಹೇಳಿಕೊಂಡಿತ್ತು ಆದರೆ 2026 ಇನ್ನೂ ಕೇವಲ 40 ಕಿಮಿ ಮಾತ್ರ ಪೂರ್ಣಗೊಂಡಿದೆ. 26 ವರ್ಷದಲ್ಲಿ ಬಾಗಲಕೋಟೆಯಿಂದ ಲೋಕಾಪುರವರೆಗೆ 41 ಕೀಮೀ ಮಾತ್ರ ಪೂರ್ಣವಾಗಿದೆ. ಅಂದರೆ ವರ್ಷಕ್ಕೆ ಸುಮಾರು 1.5 ಕಿಮಿ ಮಾರ್ಗ ಮಾತ್ರ ಮಾಡಲಿಕ್ಕೆ ಆಗುತ್ತದೆ ಎನ್ನುವದು ದಿಟವಾಗುತ್ತದೆ.

ಲೋಕಾಪುರದಿಂದ ಯಾದವಾಡವರೆಗೆ 21 ಕಿಮೀಗೆ 206 ಕೋಟಿ ರೂ.ಗಳ ಟೆಂಡರ್ ಆಗಿದೆ. ನಂತರ ಯಾದವಾಡದಿಂದ ಜಮಖಂಡಿವರೆಗೆ 28 ಕಿಮೀ ಗೆ 403 ಕೋಟಿ ರೂ.ಗಳ ಟೆಂಡರ್ ಕೂಡಾ ಆಗಿದ್ದು, ಅದರಲ್ಲಿ ಯಾದವಾಡದಿಂದ ಮುಧೋಳವರಗೆ ಕಾಮಗಾರಿಯು ಪ್ರಗತಿಯಲ್ಲಿದೆ. ಮುಧೋಳದಿಂದ ಜಮಖಂಡಿವರೆಗೆ ಯಾವುದೇ ಕಾಮಗಾರಿ ಕುರುಹ ಇಲ್ಲ.ಕಳೆದ 2 ವರ್ಷದ ಹಿಂದೆ ಜಮಖಂಡಿ ಕುಡಚಿ ಮಾರ್ಗದಲ್ಲಿ ಭೂ ಸ್ವಾಧೀನ ಜಮಿನಿನಲ್ಲಿ ಸ್ಥಳ ಗುರುತಿಸುವದಕ್ಕೆ ಸ್ವಚ್ಚತೆಗೆ 6.5 ಕೋಟಿ ರೂ.ಗಳ ಟೆಂಡರ್ ಆಗಿದೆ ಆದರೆ ಗುತ್ತಿಗೆದಾರ ಇನ್ನೂ ಕೆಲಸವೇ ಕೈಗೊಂಡಿಲ್ಲ. ಎಂದು ದೂರು ಮಾತ್ರ ಕೇಳಿ

> **ಈ ಕಾಮಗಾರಿಗಾಗಿ ವಿನೂತನ ಹೋರಾಟ ಪ್ರಾರಂಭ ಮನಾಡಲಿದ್ದೇವೆ. ಬಾಗಲಕೋಟೆಯಿಂದ ಲೋಕಾಪುರವರೆಗೆ ಪ್ಯಾಸೆಂಜರ್ ರೈಲ್ವೆ ಓಡಿಸಬೇಕು. ಇಲ್ಲದಿದ್ದರೆ ಪೂರ್ಣ ಪ್ರಮಾಣದ ಕಾಮಗಾರಿಯು ವೇಗ ಪಡೆಯಲು ಈ ವಿನೂತನ ಹಾದಿ ಹಿಡಿಯುತ್ತೇವೆ. 2017ರಲ್ಲಿ ಕೇವಲ 800 ಕೋಟಿಯಷ್ಟಿದ್ದ ಅನುದಾನ ಗಾತ್ರವು ಇಂದು 4000 ಕೋಟಿಗೂ ಅಧಿಕವಾಗಿದೆ. ಜನಪ್ರತಿನಿಧಿಗಳು ಈಗಲಾದರೂ ಎಚ್ಚೆತ್ತು ಸ್ಪಂದಿಸಿ ಈ ಮಾರ್ಗ ಆದಷ್ಟು ಬೇಗನೆ ಪೂರ್ಣಗೊಳಿಸಬೇಕು.**
> ■ **ಕುತುಬುದ್ದೀನ ಖಾಜಿ, ರೈಲ್ವೆ ಹೋರಾಟ ಸಮೀತಿ ಅಧ್ಯಕ್ಷ**

ನಾಳೆಯಿಂದ ಆದಿ ಶಂಕರಾಚಾರ್ಯ ಜಯಂತಿ

ಬಾಗಲಕೋಟೆ: ಭಗವತ್ಪಾದಾಚಾರ್ಯ ಆದಿ ಶಂಕರಾಚಾರ್ಯರ ಜಯಂತಿ ಉತ್ಸವ ಏ.21ರಿಂದ 23ರ ವರೆಗೆ ಮೂರು ದಿನ ಇಲ್ಲಿನ ವಿನಾಯಕ ನಗರದ ಶಂಕರಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಏ.21ರಂದು ಬೆಳಗ್ಗೆ 9 ಗಂಟೆಗೆ ಚಂದ್ರಮೌಳೇಶ್ವರ, ಶಂಕರಾಚಾರ್ಯ ಮೂರ್ತಿಗಳಿಗೆ ಸಮೂಹಿಕ ಲಘು ರುದ್ರಾಭಿಷೇಕ, ವಿಶೇಷ ಅಲಂಕಾರ, 11 ಗಂಟೆಗೆ ಶಂಕರಾಚಾರ್ಯರ ಭಾವ ಚಿತ್ರದೊಂದಿಗೆ ಶೋಭಯಾತ್ರೆ ವಿನಾಯಕ ನಗರದ ಪ್ರಮುಖ ಬೀದಿಗಳಲ್ಲಿ ವಾದ್ಯ ವೈಭವಗಳೊಂದಿಗೆ ನಡೆಯಲಿದೆ. 11.45 ಗಂಟೆಗೆ ತೊಟ್ಟಿಲೋತ್ಸವ, ಮಧ್ಯಾಹ್ನ 12.30 ಗಂಟೆಗೆ ಅಷ್ಟೋತ್ತರ ಶತನಾಮಾವಳಿ, ಸ್ತುತಿ, ಭಜನೆ, ಮಧ್ಯಾಹ್ನ ಮಹಾ ಮಂಗಳರಾತಿ ನಂತರ ತೀರ್ಥ ಪ್ರಸಾದ ವಿತರಣೆ ಜರುಗಲಿದೆ.

ಏ.22 ರಂದು ಬೆಳಗ್ಗೆ ಲಘು ರುದ್ರಾಭಿಷೇಕ, 10.30 ಗಂಟೆಗೆ ಲಲಿತಾ ಸಹಸ್ರನಾಮದೊಂದಿಗೆ ಕುಂಕುಮಾರ್ಚನೆ, ಬೆಳಗ್ಗ 11.30 ಣಟೆಎ ಪಂ. ಸುಪ್ರತೀಕ ವಿ ಭಟ್ಟ ಅವರಿಂದ ಉಪನ್ಯಾಸ, ಮಧ್ಯಾಹ್ನ 12.30 ಗಂಟೆಗೆ ಶಂಕರಾಚಾರ್ಯರ ಅಷ್ಟೋತ್ತರ ಶತನಾಮಾವಳಿ, ಭಜನೆ ಹಾಗೂ 1 ಗಂಟೆಗೆ ಮಹಾಮಂಗಳಾರತಿ ಜರುಗಲಿದೆ.

ಏ.23ರಂದು ಬೆಳಗ್ಗೆ ಲಘು ರುದ್ರಾಭಿಷೇಕ, ವಿಶೇಷ ಅಲಂಕಾರ, 11 ಗಂಟೆಗೆ ಸಾಮೂಹಿಕ ಸತ್ಯನಾರಾಯಣ ಪೂಜೆ, ಮಧ್ಯಾಹ್ನ 12.30 ಗಂಟೆಗೆ ಅಷ್ಟೋತ್ತರ ಶತನಾಮಾವಳಿ, ಮಧ್ಯಾಹ್ನ 1 ಗಂಟೆಗೆ ಮಹಾಮಂಗಳರಾತಿ, ತೀರ್ಥ ಪ್ರಸಾದ ವಿತರಣೆ ನಡೆಯಲಿದೆ ಎಂದು ಶಾಖಾ ವ್ಯವಸ್ಥಾಪಕ ಶವರಾಮ ಹೆಗಡೆ, ಶಂಕರ ಸ್ವಾಧ್ಯಾಯ ಮಂಡಳಿ ಗೌರವಾಧ್ಯಕ್ಷ ವಾಮನರಾವ ಕವಠೇಕರ, ಕಾರ್ಯದರ್ಶಿ ತಿಳಿಸಿದ್ದಾರೆ.

ಕಿರುಸುದ್ದಿ

ಮಕ್ಕಳಿಂದ ವಚನ ಕಂಠಪಾಠ

ವಿಜಯಪುರ: ನಗರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಬಸವಜಯಂತಿ ಉತ್ಸವ ಸಮಿತಿ ಹಾಗೂ ಜಿಲ್ಲಾಡಳಿತ ವತಿಯಿಂದ ಭಾನುವಾರ ಬಸವ ಜಯಂತಿ ನಿಮಿತ್ತ ವಿದ್ಯಾರ್ಥಿಗಳಿಂದ ವಚನ ಕಂಠಪಾಠ ಹಮ್ಮಿಕೊಳ್ಳಲಾಯಿತು. ವಿದ್ಯಾರ್ಥಿಗಳಾದ ಚೇತನ ವಜ್ರಮಟ್ಟಿ, ಸೌಜನ್ಯ, ಕೃಪಾಸಿಂಧು ಜಾಲವಾದಿ, ಸೃಜನ ಕವಡಿಮಟ್ಟಿ, ಸಾಮ್ರಾಟ ಲಿಂಗದಹಳ್ಳಿ, ಓಂಕಾರ ವೀರಣ್ಣವರ, ಯುಕ್ತಿ ಮಾಡಗಿ, ಅವಂತಿಕಾ ಹೆಗಡಿಹಾಳ, ವಿದ್ಯಾ ಹಳಕಟ್ಟಿ, ಸಾಕ್ಷಿ ಮಟ್ಯಾಳ, ಸಂಜನಾ ಭೋವಿ, ವಚನಾ ತಳೆವಾಡಿ, ಕೃತಿಕಾ, ಶೋಭಾರಾಣಿ ಕನ್ನೂರ ವಚನ ಕಂಠಪಾಠದಲ್ಲಿ ಭಾಗವಹಿಸಿ ಬಸವಾದಿ ಶರಣರ ವಚನಗಳನ್ನು ಹೇಳಿದರು. ಲಕ್ಷ್ಮಿ ಮೋರೆ, ಡಾ ನೀಲಕಂಠ ಹಳ್ಳಿ, ಶರಣಗೌಡ ಪಾಟೀಲ, ಪ್ರಮುಖರಾದ ಎಸ್. ಎಚ್.ನಾಡಗೌಡ, ಮ.ಗು.ಯಾದವಾಡ, ಪ್ರಭುಗೌಡ ಪಾಟೀಲ, ಬಸನಗೌಡ ಹರನಾಳ, ಬಸವರಾಜ ಜಾಲವಾದಿ, ಶಂಕರ ಬೈಚಬಾಳ, ಸವಿತಾ ಬಿ.ಎನ್., ಶೇಷರಾವ ಮಾನೆ, ಚಂದ್ರಶೇಖರ ಗಂಟೆಪ್ಪಗೋಳ, ರವಿಕುಮಾರ ಬಿರಾದಾರ ಇದ್ದರು.

ಬಸವೇಶ್ವರ ಜಯಂತ್ಯುತ್ಸವ ಇಂದು

ಬಸವನಬಾಗೇವಾಡಿ: ಐತಿಹಾಸಿಕ ಪುರಾಣ ಪ್ರಸಿದ್ಧಿ ಹೊಂದಿರುವ ಬಸವೇಶ್ವರ ದೇವಸ್ಥಾನದಲ್ಲಿ ಹಾಗೂ ಬಸವಜನ್ಮ ಸ್ಮಾರಕದಲ್ಲಿ ಬಸವಣ್ಣನವರ ತೊಟ್ಟಿಲೋತ್ಸವಕ್ಕೆ ಕ್ಷಣಗಣನೆ ಆರಂಭವಾಗಿದ್ದು, ದೇವಸ್ಥಾನ ಹಾಗೂ ವೃತ್ತಗಳು ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತೇವೆ. ಏ.20ರಂದು ಬೆಳಗ್ಗೆ 7.30ಕ್ಕೆ ವಿರಕ್ತಮಠದ ಸಿದ್ದಲಿಂಗ ಸ್ವಾಮಿಯವರಿಂದ ಷಟಸ್ಥಲ ಧ್ವಜಾರೋಹಣ ನೆರವೇರುವುದು. ಬೆಳಗ್ಗೆ 9.30ಕ್ಕೆ ಬಸವೇಶ್ವರ ದೇವಸ್ಥಾನದಿಂದ ಬಸವಜನ್ಮ ಸ್ಮಾರಕದವರೆಗೂ ಬಸವೇಶ್ವರರ ಭಾವಚಿತ್ರದ ಮೆರವಣಿಗೆ 10.30ಕ್ಕೆ ಬಸವಜನ್ಮ ಸ್ಮಾರಕದಲ್ಲಿ ಬಸವೇಶ್ವರರ ತೊಟ್ಟಿಲೋತ್ಸವ ಹಾಗೂ ಮಧ್ಯಾಹ್ನ 12.30ಕ್ಕೆ ಮಹಾಪ್ರಸಾದ ಜರುಗುವುದು. ಸಂಜೆ 5-30ಕ್ಕೆ ನಡೆಯಲಿರುವ ವಚನ ಚಿಂತನ ಕಾರ್ಯಕ್ರಮದಲ್ಲಿ ವಿರಕ್ತಮಠದ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ, ಶಿವಪ್ರಕಾಶ ಶಿವಾಚಾರ್ಯರು ಸಾನ್ನಿಧ್ಯ ವಹಿಸಲಿದ್ದು, ಸಚಿವ ಎಂ.ಬಿ.ಪಾಟೀಲ ಘನ ಉಪಸ್ಥಿತರಿರುವರು. ಸಚಿವ ಶಿವಾನಂದ ಪಾಟೀಲ ಅಧ್ಯಕ್ಷತೆ ವಹಿಸಿ ಉದ್ಘಾಟಿಸುವರು. ದೇವರಹಿಪ್ಪರಗಿ ಶಾಸಕ ರಾಜುಗೌಡ ಪಾಟೀಲ, ಡಿಸಿ ಕೆ.ಆನಂದ, ಜಿಪಂ ಸಿಇಒ ರಿಷಿ ಆನಂದ, ಎಸ್ಪಿ ಲಕ್ಷ್ಮಣ ನಿಂಬರಗಿ, ತಹಶೀಲ್ದಾರ್ ವೈ. ಎಸ್.ಸೋಮನಕಟ್ಟಿ, ಡಿವೈಎಸ್ಪಿ ಬಲ್ಲಪ್ಪ ನಂದಗಾಂವಿ ಅತಿಥಿಗಳಾಗಿ ಆಗಮಿಸಲಿದ್ದಾರೆ. ಆದಿಚುಂಚನಗಿರಿ ವಿವಿಯ ಸಹ ಪ್ರಾಧ್ಯಾಪಕ ಡಾ.ಟಿ.ಎನ್.ವಾಸುದೇವ ಮೂರ್ತಿ ಉಪನ್ಯಾಸ ನೀಡಲಿದ್ದು, ಸರಿಗಮಪ ಕಲಾವಿದ ರಾಮು ಕಾಸರ ವಚನ ಸಂಗೀತ ಹಾಗೂ ಬೆಂಗಳೂರಿನ ನವ್ಯ ನಾಟ್ಯ ಸಂಘದಿಂದ ವಚನ ನೃತ್ಯ ರೂಪಕ ಜರುಗಲಿದೆ. ರಾತ್ರಿ 10.30ಕ್ಕೆ ಬಸವೇಶ್ವರ ಭವ್ಯ ಅಲಂಕೃತ ಪಲ್ಲಕ್ಕಿ ಉತ್ಸವ ಹಾಗೂ ಭಾವಚಿತ್ರದ ಮೆರವಣಿಗೆಯೂ ಸಕಲ ವಾದ್ಯ ವೈಭವಗಳೊಂದಿಗೆ ನೆರವೇರಲಿದೆ ಎಂದು ಪ್ರಾಧಿಕಾರದ ಆಯುಕ್ತ ಗುರುನಾಥ ದಡ್ಡೆ ತಿಳಿಸಿದ್ದಾರೆ.

ಬಸವಲಿಂಗ ರಾಜ್ಯ ಪ್ರಶಸ್ತಿಗೆ ನಾಗರಾಳ ಆಯ್ಕೆ



ಮುದ್ದೇಬಿಹಾಳ: ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಚನ್ನರಾಯಪಟ್ಟಣ ರಾಜ್ಯ ಘಟಕದಿಂದ ನೀಡಲಾಗುವ ಬಸವಲಿಂಗ ರಾಜ್ಯ ಪ್ರಶಸ್ತಿ-2026 ನಿವೃತ್ತ ಶಿಕ್ಷಕ ಚಂದ್ರಶೇಖರ್ ನಾಗರಾಳ ಅವರಿಗೆ ನೀಡಲಾಗಿದೆ. ಭಾನುವಾರ ಮಧ್ಯಾಹ್ನ 1ಗಂಟೆಗೆ ರಾಘವೇಂದ್ರ ಮಂಗಲ ಕಾರ್ಯಾಲಯದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಮಲ್ಲಿಕಾರ್ಜುನ ಕೆಳಗಡೆ ವಿಶೇಷ ಸಾಧನೆ



ವಿಜಯಪುರ: ನಗರದ ಕನಕದಾಸ ಬಡಾವಣೆ ನಿವಾಸಿ, ವಾರ್ತಾ ಇಲಾಖೆ ವಿಶ್ರಾಂತ ಉನ್ನತ ಅಧಿಕಾರಿ ಮಲ್ಲಿಕಾರ್ಜುನ ಕೆಳಗಡೆ ಅವರು ತಮ್ಮ 75 ನೇ ಇಳಿವಯಸ್ಸಿನಲ್ಲೂ ಪಾಲಿ ಭಾಷೆ ಪರೀಕ್ಷೆಯಲ್ಲಿ ವಿಶೇಷ ಸಾಧನೆ ತೋರಿದ್ದಾರೆ. ಪಾಲಿ ಭಾಷೆ ಕಲಿಯುವ ಆಸಕ್ತಿಯಿಂದ ಕಲಬುರಗಿಯ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ ಅವರ ಪಾಲಿ ಸಂಸ್ಥೆಯಲ್ಲಿ ಹೆಸರು ನೋಂದಾಯಿಸಿ, ಒಂದು ವರ್ಷದ ಡಿಪ್ಲೋಮಾ ಪಾಲಿ ಕೋರ್ಸ್ ಅಧ್ಯಯನ ಮಾಡಿ, ಪರೀಕ್ಷೆ ಬರೆದು ಅತ್ಯುತ್ತಮ ಸ್ಥಾನ (500 ಕ್ಕೆ 403 ಅಂಕ) ಪಡೆದಿದ್ದು, ಕರ್ನಾಟಕ ಸಂಸ್ಕೃತಿ ವಿಶ್ವವಿದ್ಯಾಲಯ ಪ್ರಮಾಣ ಪತ್ರ ನೀಡಿದೆ. ಮಲ್ಲಿಕಾರ್ಜುನ ಕೆಳಗಡೆ ಅವರ ವಿಶೇಷ ಸಾಧನೆಗೆ ಸ್ನೇಹಿತರ ಬಳಗ, ಕುಟುಂಬ ವರ್ಗ ಹಾಗೂ ಅವರ ಅಭಿಮಾನಿಗಳು ಅಭಿನಂದಿಸಿದ್ದಾರೆ.



ವಿಜಯಪುರ: ನಗರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಬಸವಜಯಂತಿ ಉತ್ಸವ ಸಮಿತಿ ಹಾಗೂ ಜಿಲ್ಲಾಡಳಿತ ವತಿಯಿಂದ ಭಾನುವಾರ ಬಸವ ಜಯಂತಿ ನಿಮಿತ್ತ ವಿದ್ಯಾರ್ಥಿಗಳಿಂದ ವಚನ ಕಂಠಪಾಠ ಹಮ್ಮಿಕೊಳ್ಳಲಾಯಿತು.ಕಲ್ಲಪ್ಪ ಶಿವಶರಣ, ಲಾಯಪ್ಪ ಇಂಗಳೆ, ಶರಣು ಕಿರಣಗಿ, ದಾನೇಶ ಅವಟಿ, ಜಗದೇವ ಸೂರ್ಯವಂಶಿ, ಶಾಂತವೀರ ಥಾಲಬಾವಡಿ, ವೈ.ಎಚ್. ಲಂಬು, ಜಂಬುನಾಥ ಕಂಬಾಣಿ, ಮಹಾದೇವಿ ಗೋಕಾಕ, ಭಾರತಿ ಭುಯ್ಯಾರ, ಶಶಿಕಲಾ ಕೊಟಗಿ ಇದ್ದರು.

ಸೈಕಲ್ ಚಾಲನೆ ಅಭಿಯಾನಕ್ಕೆ ಚಾಲನೆ

ವಿಜಯಪುರ: ಫಿಟ್ ಇಂಡಿಯಾ ಆಂದೋಲನದಡಿ ಸಂಡೇಸ್ ಆನ್ ಸೈಕಲ್- ಸ್ವಚ್ಛತಾ ರೈಡ್ (ಸೈಲ್ ಚಾಲನೆ ಅಭಿಯಾನ)ಗೆ ಭಾನುವಾರ ನಗರದ ಜಿಲ್ಲಾ ಪಂಚಾಯತಿ ಆವರಣದಲ್ಲಿ ಚಾಲನೆ ನೀಡಲಾಯಿತು.

ಜಿಲ್ಲೆಯಲ್ಲಿನ ಸ್ವಚ್ಛಾಗ್ರಹಿಗಳು, ನೈರ್ಮಲ್ಯ ಕಾರ್ಮಿಕರು, ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯ ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಸಭಾಗಿತ್ವದಲ್ಲಿ ಈ ಅಭಿಯಾನ ನಡೆಯಿತು. ಭಾರತ ಸರ್ಕಾರದ ಕ್ರೀಡಾ ಸಚಿವಾಲಯದ ಅಡಿಯಲ್ಲಿನ ಫಿಟ್ ಇಂಡಿಯಾ ಮಿಷನ್ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಸಹಯೋಗದೊಂದಿಗೆ ದೇಶಾದ್ಯಂತ ಭಾನುವಾರ ಸೈಕಲ್ ಅಭಿಯಾನದ ವಿಶೇಷ ಆವೃತ್ತಿ ಜರುಗಿತು.

ಈ ಬಾರಿಯ ಅಭಿಯಾನವು ಸ್ವಚ್ಛತಾ ರೈಡ್ ಎಂಬ ಶೀರ್ಷಿಕೆಯಡಿ ನಡೆಯಿತು. ಕೇಂದ್ರ ಜಲ ಶಕ್ತಿ ಸಚಿವಾಲಯದ ನಿರ್ದೇಶನದಡಿ, ವಿವಿಧ ರೀತಿಯ ಸ್ವಚ್ಛತಾ ಕಾರ್ಯಕ್ರಮಗಳನ್ನು ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಹಿನ್ನೆಲೆಯಲ್ಲಿ ವಿಜಯಪುರದ ಜಿಲ್ಲಾ ಪಂಚಾಯತಿ ಆವರಣದಲ್ಲಿ ಸ್ವಚ್ಛತಾ ಅಭಿಯಾನ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕರು, ಅಧಿಕಾರಿಗಳು, ಎಲ್ಲ ಸಿಬ್ಬಂದಿ ವರ್ಗದವರು ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಯ ಜಿಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ವಿಜಯಪುರ: ಫಿಟ್ ಇಂಡಿಯಾ ಆಂದೋಲನದಡಿ ಸಂಡೇಸ್ ಆನ್ ಸೈಕಲ್- ಸ್ವಚ್ಛತಾ ರೈಡ್ (ಸೈಲ್ ಚಾಲನೆ ಅಭಿಯಾನ) ಗೆ ಭಾನುವಾರ ನಗರದ ಜಿಲ್ಲಾ ಪಂಚಾಯಿತಿ ಆವರಣದಲ್ಲಿ ಚಾಲನೆ ನೀಡಲಾಯಿತು. ಸ್ವಚ್ಛತಾ ಅಭಿಯಾನ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತಿ ಯೋಜನಾ ನಿರ್ದೇಶಕರು, ಅಧಿಕಾರಿಗಳು, ಎಲ್ಲ ಸಿಬ್ಬಂದಿ ವರ್ಗದವರು ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಯ ಜಿಲ್ಲಾ ಭಾಗವಹಿಸಿದ್ದರು.

ರೈತರು ಸ್ವಯಂ ಪ್ರೇರಣೆಯಿಂದ ಸಹಕರಿಸಿ | ಸಚಿವ ಪಾಟೀಲ ಮನವಿ

ಹಳ್ಳ, ಕೊಳ್ಳ ಒತ್ತುವರಿ ತೆರವುಗೊಳಿಸಿ

ವಿಜಯಪುರ: ಬಬಲೇಶ್ವರ ಮತಕ್ಷೇತ್ರ ಸೇರಿದಂತೆ ಜಿಲ್ಲೆಯಲ್ಲಿ ಬಹುತೇಕ ಗ್ರಾಮಗಳಲ್ಲಿ ಹಳ್ಳ-ಕೊಳ್ಳಗಳು ಒತ್ತುವರಿಯಾಗಿವೆ. ರೈತರು ಸ್ವಯಂ ಪ್ರೇರಣೆಯಿಂದ ಹಳ್ಳ ಒತ್ತುವರಿ ತೆರುವುಗೊಳಿಸಬೇಕು. ಅಲ್ಲಿ ಬೆಳೆದಿರುವ ಗಿಡ- ಗಂಟಿ ತೆಗೆದು ಸಹಕರಿಸಿದರೆ ಹಳ್ಳ ತುಂಬಿಸುವ ಮೂಲಕ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟದ ಹೊಳೆಯನ್ನೇ ಹರಿಸುವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವತಿಯಿಂದ ಬಬಲೇಶ್ವರ ತಾಲೂಕಿನ ನಿಡೋಣಿ- ಯಕ್ಕುಂಡಿ-ನಾಗರಾಳ- ಕುಮಠೆ- ಅರ್ಜುಣಗಿ ಹಂಗಣಿ, ಕಾತ್ರಾಳ, ಚಿಕ್ಕಲಕಿ, ನಂದ್ಯಾಳ ದನ್ನರಗಿ, ಟಕ್ಕಳಕಿ, ಬಿಜ್ಜರಗಿ, ಗೊಣಸಗಿ ಮತ್ತು ಕನಮಡಿ (ಗುಲಗಂಜಿ) ಹಳ್ಳಿಗಳಿಗೆ ಅಡ್ಡಲಾಗಿ ಸರಣಿ ಚೆಕ್ ಡ್ಯಾಂ ರೀಚಾರ್ಜ್ ಶಾಫ್ಟ್‌ಗಳನ್ನು ನಿರ್ಮಾಣ ಮಾಡುವ ಮೂಲಕ ಅಂತರ್ಜಲ ಅಭಿವೃದ್ಧಿಪಡಿಸುವ 988.42 ಲಕ್ಷ ಕಾಮಗಾರಿಗೆ ಭಾನುವಾರ ಅರ್ಜುಣಗಿಯಲ್ಲಿ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಈಗಾಗಲೇ ನಾನು ನೀರಾವರಿ ಕ್ಷೇತ್ರದಲ್ಲಿ ಮಾಡಿದ ಕಾರ್ಯವನ್ನು ನ್ಯೂಯಾರ್ಕ್ ಟೈಮ್ಸ್‌ನವರು ವರದಿ ಮಾಡಿದ್ದಾರೆ. ಹಳ್ಳ-ಕೊಳ್ಳ ತುಂಬಿಸುವ ಯೋಜನೆ ಯಶಸ್ಸಿಗೆ ಎಲ್ಲರೂ ಒತ್ತುವರಿ ತೆರುವುಗೊಳಿಸುವ ಮೂಲಕ ಸಹಕರಿಸಬೇಕು. ನಮ್ಮ ಮತಕ್ಷೇತ್ರದಲ್ಲಿ 58 ಹಳ್ಳಿಗಳಿವೆ. 48 ಗ್ರಾಮಗಳ ಹಳ್ಳಗಳಿಗೆಬಾಂದಾರ ನಿರ್ಮಿಸುತ್ತಿದ್ದೇವೆ. ಹಾಗಾಗಿ ನೀವೆಲ್ಲ ಸೌಭಾಗ್ಯವಂತರು ಎಂದರು.

ಜಿಲ್ಲೆಯಲ್ಲಿ 15ನೇ ಡಿಸ್ಟ್ರೀಬ್ಯೂಶನ್ ಕೆಲಸ ನಡೆದಿದೆ. ಮುಂದಿನ ಮಳೆಗಾಲಕ್ಕೆ 6 ಪ್ಯಾಕೇಜ್ ಸಿದ್ಧವಾಗಬೇಕು. ಸಣ್ಣ ನೀರಾವರಿ ಇಲಾಖೆಯಿಂದ ಪ್ರಯತ್ನಿಸೋಣ. ಒಂದು ವೇಳೆ ಅದು ಸಾಧ್ಯವಾದಲ್ಲಿ 118 ಹಳ್ಳಗಳಿಗೆ 176 ಕೋಟಿ ರೂ. ವೆಚ್ಚದಲ್ಲಿ ಹಳ್ಳ ತುಂಬಿಸುವ ಕಾರ್ಯ ಮಾಡಲಾಗುವುದು. ಕೆರೆ ತುಂಬಿದ ಮೇಲೆ ಅಂತರ್ಜಲ ಹೆಚ್ಚಳವಾದ ಮಾದರಿಯಲ್ಲೇ, ಇದರಿಂದ ಇನ್ನಷ್ಟು ಅಂತರ್ಜಲ ಹೆಚ್ಚಳವಾಗಲಿದೆ. ನೀರಾವರಿಯಿಂದ ಈ ಭಾಗದಲ್ಲಿ ಜಮೀನುಗಳು ಇಂದು 20 ಲಕ್ಷ ರೂ. ಬೆಲೆ ಬಾಳುತ್ತೇವೆ. ಆದಕ್ಕೆ ಜಮೀನು ಮಾರಾಟ ಮಾಡಬಾರದು ಎಂದರು.

ಇಲ್ಲಿ ಹತ್ತು ಪ್ಯಾಕೇಜ್ ಅಂದಾಜು ಒಂದು ನೂರ ಕೋಟಿ ರೂ. ಈ ಅಂತರ್ಜಲ ಅಭಿವೃದ್ಧಿಪಡಿಸಲು ಇಲ್ಲಿಂದ ಪ್ರಾಯೋಗಿಕಾವಗಿ ಆರಂಭಿಸಲಾಗಿದೆ. ನಮ್ಮ ಮತಕ್ಷೇತ್ರದಲ್ಲಿ ಹತ್ತು ಪ್ಯಾಕೇಜ್ ನಿರ್ಮಿಸುವ ಗುರಿ ಹೊಂದಲಾಗಿದೆ ಎಂದರು.

ವಿವಿಧ ಇಲಾಖೆಯ ಅಧಿಕಾರಿಗಳು, ಸಾರ್ವಜನಿಕರು ಇದ್ದರು.



> **ನಮ್ಮ ಮತಕ್ಷೇತ್ರದಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುವ ಮೂಲಕ ನಂತರದ ದಿನಗಳಲ್ಲಿ ಇಡೀ ಜಿಲ್ಲೆಯಲ್ಲಿ ಸರಣಿ ಚೆಕ್ ಡ್ಯಾಂ ಯೋಜನೆಗೆ ಚಾಲನೆ ನೀಡಲಾಗುವುದು. ಈ ಯೋಜನೆ ಯಶಸ್ವಿಯಾಗುವುದರಲ್ಲಿ ಯಾವುದೇ ಅನುಮಾನವೇ ಇಲ್ಲ. ಈ ನೀರಾವರಿ ಯೋಜನೆಯಿಂದ ಈ ಭಾಗದ ರೈತರಿಗೆ ಸಾಕಷ್ಟು ಅನುಕೂಲವಾಗಲಿದೆ.**
> ■ ಎಂ.ಬಿ. ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವ

»» ಜಿಲ್ಲೆಯಲ್ಲಿ 15ನೇ ಡಿಸ್ಟ್ರೀಬ್ಯೂಶನ್ ಕೆಲಸ ನಡೆದಿದೆ. ಮುಂದಿನ ಮಳೆಗಾಲಕ್ಕೆ 6 ಪ್ಯಾಕೇಜ್ ಸಿದ್ಧ

ಮೈ ಭಾರತ್ ಬಜೆಟ್ ಕ್ವಿಸ್-2026 ಫಿನಾಲೆಗೆ ಪ್ರವೀಣ ಬಿರಾದಾರ ಆಯ್ಕೆ

ವಿಜಯಪುರ: ರಾಷ್ಟ್ರಮಟ್ಟದಲ್ಲಿ ಯುವಜನರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಕೇಂದ್ರ ಯುವಕಾರ್ಯ ಮತ್ತು ಕ್ರೀಡಾ ಸಚಿವಾಲಯದ ಆಶ್ರಯದಲ್ಲಿ ನಡೆಯುತ್ತಿರುವ ಮೈ ಭಾರತ್ ಬಜೆಟ್ ಕ್ವಿಸ್- 2026 ಕಾರ್ಯಕ್ರಮಕ್ಕೆ ಜಿಲ್ಲೆಯ ವಿದ್ಯಾರ್ಥಿ ಪ್ರವೀಣ ಬಿರಾದಾರ ಫಿನಾಲೆಗೆ ಆಯ್ಕೆಯಾಗಿದ್ದಾರೆ.

ದೇಶದ ವಿವಿಧ ರಾಜ್ಯಗಳಿಂದ ಹಲವು ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದು, ವಿವಿಧ ಹಂತಗಳ ನಂತರದ ಅಂತಿಮ ಹಂತಕ್ಕೆ ಆಯ್ಕೆಯಾಗುವುದು ಅತ್ಯಂತ ಪ್ರತಿಷ್ಠಿತ ಸಾಧನೆ ಎಂದು ಪರಿಗಣಿಸಲಾಗುತ್ತಿದೆ.

ಈ ಸ್ಪರ್ಧೆಯ ಮೂಲಕ ಯುವಜನರಲ್ಲಿ ಕೇಂದ್ರ ಬಜೆಟ್ ಕುರಿತು ಅರಿವು ಮೂಡಿಸುವುದು ಮತ್ತು ದೇಶದ ಅಭಿವೃದ್ಧಿಯಲ್ಲಿ ಅವರ ಪಾತ್ರವನ್ನು ಹೆಚ್ಚಿಸುವುದು ಮುಖ್ಯ ಉದ್ದೇಶವಾಗಿದೆ.



ಕಳೆದ ಏ. 12, 13ರಂದು ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಹಮ್ಮಿಕೊಂಡ ಫಿನಾಲೆಯಲ್ಲಿ ಆಯ್ಕೆಯಾಗಿ ಪ್ರವೀಣ ಬಿರಾದಾರ ಅವರು ಜಿಲ್ಲೆಯ ಯುವ ಪ್ರತಿಭೆಯಾಗಿ ಭಾಗವಹಿಸಿ ಗಮನ ಸೆಳೆದಿದ್ದಾರೆ.

ಪ್ರವೀಣ ಅವರು ಪ್ರಸ್ತುತ ನಗರದ ದರ್ಬಾರ್ ಪದವಿ ಮಹಾವಿದ್ಯಾಲಯದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಯಾಗಿ ವ್ಯಾಸಂಗ ಮಾಡುತ್ತಿದ್ದಾರೆ, ಅವರಿಗೆ ಮಹಾವಿದ್ಯಾಲಯದ, ಶಿಕ್ಷಕರು, ಸ್ನೇಹಿತರು ಹಾಗೂ ಜಿಲ್ಲೆಯ ಜನತೆ ಅಭಿನಂದಿಸಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಬಸವ ಜಯಂತಿ ಇಂದು

ಮುದ್ದೇಬಿಹಾಳ: ವೀರಶೈವ ಲಿಂಗಾಯತ ಸಮಾಜದ ತಾಲೂಕು ಘಟಕದ ವತಿಯಿಂದ ಅಕ್ಷಯ ತೃತೀಯ ಶುಭ ಮುಹೂರ್ತದಂದು ಬಸವ ಜಯಂತಿ ಕಾರ್ಯಕ್ರಮ ಏ.20ರಂದು ಸೋಮವಾರ ಸಂಜೆ 4 ಗಂಟೆಯಿಂದ ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ ಬಸವ ಭಾವಚಿತ್ರವನ್ನು ಮೆರವಣಿಗೆ ಮಾಡುವ ಪೂರ್ವದಲ್ಲಿ ಹೊಸಮಠದ ಆವರಣದಲ್ಲಿ ಸಮಾಜದ ಎಲ್ಲಾ ಒಳ ಪಂಗಡಗಳ ಮುಖಂಡರು ಸೇರಿಕೊಂಡು ಸಭೆ ನಡೆಸುವರು. ಹೊಸಮಠದ ಅಮರೇಶ್ವರ ದೇವರು ಆಶೀರ್ವಚನ ನೀಡುವರು. ನಂತರ ಊರಿನ ಪ್ರಮುಖ ಬೀದಿಗಳಲ್ಲಿ ಭಾವಚಿತ್ರ ಮೆರವಣಿಗೆ, ಸಂಜೆ ಬ್ರಹ್ಮಲಿಂಗೇಶ್ವರ ದೇವಸ್ಥಾನದಲ್ಲಿ ಕಾರ್ಯಕ್ರಮ ಸಂಪನ್ನವಾಗುವುದು ಎಂದು ಮಹಾಸಭಾ ತಾಲೂಕು ಘಟಕದ ಮುಖಂಡ ಪ್ರಭುರಾಜ್ ಕಲ್ಬುರ್ಗಿ ತಿಳಿಸಿದ್ದಾರೆ.

ದೇಶಕ್ಕೆ ಜಿಲ್ಲೆ ಮಾದರಿಯಾಗುವಂತೆ ಕಾರ್ಯ

ವಿಜಯಪುರ: ಅಂತರ್ಜಲ ನಿರ್ವಹಣೆಯಲ್ಲಿ ಜಿಲ್ಲೆ ದೇಶಕ್ಕೆ ಮಾದರಿಯಾಗುವಂತೆ ಕಾರ್ಯ ಮಾಡಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಸಣ್ಣ ನೀರಾವರಿ ಇಲಾಖೆಯ 997 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಕಾರಜೋಳ, ದೂಡಿಹಾಳ, ಸಂಗಾಪುರ, ಕಾಖಂಡಕಿ, ಮಮದಾಪುರ ಮತ್ತು ಸಂಗಾಪುರ- ನಂದ್ಯಾಳ ಗ್ರಾಮಗಳ ಹಳ್ಳಗಳಿಗೆ ಅಡ್ಡಲಾಗಿ ಸರಣಿ ಚೆಕ್ ಡ್ಯಾಂ ಮತ್ತು ರೀಚಾರ್ಜ್ ಶಾಫ್ಟ್ ನಿರ್ಮಾಣ ಮಾಡುವ ಮೂಲಕ ಅಂತರ್ಜಲ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಭೂಮಿಪೂಜೆ ಹಾಗೂ ಲೋಕೋಪಯೋಗಿ ಇಲಾಖೆಯ 5 ಕೋಟಿ ರೂ. ವೆಚ್ಚದಲ್ಲಿ ಕಂಬಾಗಿ- ನಂದ್ಯಾಳ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ನಂತರ ಕೆಆರ್‌ಐಡಿಎಲ್ ಇಲಾಖೆಯ 50 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ನಂದ್ಯಾಳ ಗ್ರಾಮದಲ್ಲಿ ಭಾನುವಾರ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಪ್ರತಿ ಕಿಮೀ ಒಂದರಂತೆ ಹತ್ತು ಪ್ಯಾಕೇಜ್ ನಂತೆ ಪ್ರಸ್ತುತ ಆರು ಪ್ಯಾಕೇಜ್ 39 ಗ್ರಾಮಗಳ ಕೆಳಭಾಗದ ಕೊಳವೆಬಾವಿ, ತೆರೆದ ಬಾವಿ, ಕೃಷಿ ಚಟುವಟಿಕೆ, ಪ್ರಾಣಿ ಪಕ್ಷಿಗಳಿಗೆ ಅನುಕೂಲ ಆಗುವುದರ ಜೊತೆಗೆ ಬೇಸಿಗೆಯಲ್ಲಿಯೂ ಹಳ್ಳ ಕೊಳ್ಳಗಳು ಭರ್ತಿಯಾಗಲಿವೆ. ಇದರಿಂದ ಬಿರು ಬೇಸಿಗೆಯಲ್ಲೂ ಜೀವ ಸಂಕುಲ ಬದುಕಲು ಅನುಕೂಲವಾಗಲಿದೆ ಎಂದರು.

ಹಳ್ಳಗಳಿಂದ ಬರುವ ನೀರನ್ನು ಸರಣಿ ಬಾಂದಾರ ನಿರ್ಮಿಸಿ ನೀರು ಹಿಂಗುವ ಈ ಯೋಜನೆಯಿಂದ ಅಂತರ್ಜಲ ಮಟ್ಟ ಹೆಚ್ಚಾಗಿ ರೈತರಿಗೆ ಸಾಕಷ್ಟು ಅನುಕೂಲವಾಗಲಿದೆ. ಕೆನಾಲ್ ನೆಟ್ ವರ್ಕ್ ಎಸ್ಕೇಪ್ ಮಾಡುವ ಮೂಲಕ ಇಪ್ಪತ್ತು ಬಾಂದಾರ ಹತ್ತು ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗುವುದು ಎಂದು ಅವರು, 2013ರಲ್ಲಿ ನೀರಾವರಿ ಸಚಿವನಾದ ಮೇಲೆ ಬರದ ಜಿಲ್ಲೆ ಎಂಬುದನ್ನು ಅಳಿಸಿಹಾಕುವ ಕಾರ್ಯ ಮಾಡಿದ್ದಾಗಿ ಸಚಿವರು ಸ್ಮರಿಸಿದರು.

ಶಿವಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಣ್ಣನೀರಾವರಿ ಇಲಾಖೆಯ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆಯ ಎಇಇ ಪ್ರಮೋದ ಹೆಬ್ಬಿ, ಗ್ಯಾರಂಟಿ ಯೋಜನೆಗಳ ತಾಲೂಕು ಅಧ್ಯಕ್ಷ ಹಣಮಂತರಾಯ ದಳವಾಯಿ ಇದ್ದರು.



ರಕ್ತದಾನದಿಂದ ಅಮೂಲ್ಯ ಜೀವ ರಕ್ಷಣೆ: ಕಲ್ಯಾಣದಯ್ಯ ಶ್ರೀ

ಸಿಂದಗಿ: ಮಾನವನಿಗೆ ಆಕಸ್ಮಿಕ ಸಂದರ್ಭಗಳಲ್ಲಿ ತುರ್ತಾಗಿ ಅಗತ್ಯವಾಗಿ ಬೇಕಾಗುವ ರಕ್ತವು ಅಮೂಲ್ಯ ಜೀವ ಉಳಿಸುವ ವಸ್ತುವಾಗಿದೆ ಎಂದು ಕಲ್ಯಾಣದೇಶ್ವರ ಮಠದ ಪೀಠಾಧಿಪತಿಗಳದ ಅಭಿನವ ಕಲ್ಯಾಣದಯ್ಯ ಸ್ವಾಮಿಗಳು ಹೇಳಿದರು.

ತಾಲೂಕಿನ ಹೊನ್ನಳ್ಳಿ ಹಾಗೂ ಬ್ರಹ್ಮದೇವನಮಡು ಗ್ರಾಮದ ಶ್ರೀ ಕಲ್ಯಾಣದೇಶ್ವರ ಮಠದ ಜಾತ್ರಾ ಮಹೋತ್ಸವ ಅಂಗವಾಗಿ ರವಿವಾರ ಹಮ್ಮಿಕೊಂಡ ರಕ್ತದಾನ ಶಿಬಿರವನ್ನು ಸ್ವತಃ ರಕ್ತದಾನ ಮಾಡುವುದರ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ದಾನಗಳಲ್ಲಿ ರಕ್ತದಾನ ಮಹಾದಾನ. ಜನರ ಜೀವ ರಕ್ಷಣೆಗೆ ರಕ್ತ ಅತ್ಯವಶ್ಯಕವಾಗಿದ್ದು, ರಕ್ತದ ಅವಶ್ಯಕತೆ ಇರುವ ವ್ಯಕ್ತಿಗಳಿಗೆ ರಕ್ತದಾನ ಮಾಡುವುದರ ಮೂಲಕ ಎಲ್ಲರೂ ಜನರ ಅಮೂಲ್ಯವಾದ ಜೀವ ರಕ್ಷಣೆಗೆ ಮುಂದಾಗಬೇಕು ಎಂದರು.

ಜಿಲ್ಲಾ ರಕ್ತನಿಧಿ ಕೇಂದ್ರದ ವೈದ್ಯಾಧಿಕಾರಿ ಡಾ.ಅರ್ಷದ ಮುಂಡರಗಿ ಮಾತನಾಡಿ, ರಕ್ತದಾನ ಮಾಡಿದರೆ ತಮ್ಮ ದೇಹದ ಕೊಬ್ಬಿನಾಂಶ ಕಡಿಮೆಯಾಗಿ ಹೊಸ ರಕ್ತ ಉತ್ಪತ್ತಿಯಾಗಲಿದೆ. ಪ್ರತಿಯೊಬ್ಬರೂ ಪ್ರಮುಖವಾಗಿ ಯುವ ಜನಾಂಗ ವರ್?ಕ್ಕೆ 3-4ಬಾರಿ ರಕ್ತದಾನ ಮಾಡುವ ಮೂಲಕ ಅಮೂಲ್ಯ ಜೀವಗಳನ್ನು ಉಳಿಸಬಹುದು. ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳು ಹೆಚ್ಚಾಗಿ ನಡೆಯಬೇಕು ಎಂದರು. ರಕ್ತದಾನ ನೀಡಿ ಮಾತನಾಡಿದ ಶಿಕ್ಷಕ ಈರಣ್ಣ ಡಿಗ್ಗಿ ಮಾತನಾಡಿದರು. ಶಿಬಿರದಲ್ಲಿ ಜಿಲ್ಲಾ ರಕ್ತನಿಧಿ ಕೇಂದ್ರದ ರುತುಜಾ ಮೈಸೂರ, ಅರುಣ ಕುಮಾರ, ಅಸ್ಕಿ ಪ್ರಾಥಮಿಕ ಆರೋಗ್ಯ ಕೇಂದ್ರದ ರೇಷ್ಮಾ ಬಿ.ನಾಯಕ್, ಸುಚಿತ್ರಾ ಪಾಟೀಲ, ಶಿವನಗೌಡ ಬೇನಾಳ, ನಿರ್ಮಲ ಕರಿಕಲ್, ಚಂದ್ರಭಾಗಮ್ಮ ತಳವಾರ ಸಿಬ್ಬಂದಿಗಳು ಉಪಸ್ಥಿತರಿದ್ದರು. ಸಂಗಮೇಶ ಡಿಗ್ಗಿ, ಅರವಿಂದ ಸಾಹು ಕುರಳಗೆರೆ, ಕರಬಸಪ್ಪ ಸಾಹು ಮನಗೂಳಿ, ರಮೇಶ ಸಾಸಾಬಾಳ, ಈರಣ್ಣ ಭಜಂತ್ರಿ, ಶರಣು ಮನಗೂಳಿ, ರಮೇಶ ಬಮನಳ್ಳಿ, ಪ್ರವೀಣ ಅಮರಗೋಳ, ಚಂದ್ರು ಬಳಬಟ್ಟಿ, ಬಸವರಾಜ ಕೋರವಾರ, ಪ್ರತೀಕ್ಷಾ ಕರೀಕಲ, ನಿಂಗನಗೌಡ ಪಾಟೀಲ, ಬಾಲರೆಡ್ಡಿ ರಕ್ತದಾನ ಮಾಡಿದರು.



ಏ.24ರಿಂದ ತೊರವಿ ನರಸಿಂಹ ಜಯಂತಿ

ವಿಜಯಪುರ: ನಗರ ಹೊರ ವಲಯ ತೊರವಿಯ ಲಕ್ಷ್ಮೀ ನರಸಿಂಹ ಸನ್ನಿಧಾನದಲ್ಲಿ ಪರಾಭವ ನಾಮ ಸಂವತ್ಸರ ವೈಶಾಖ ಶುದ್ಧ ಅಷ್ಟಮಿ ಏ.24ರಿಂದ ಮೇ 2ರ ವರೆಗೆ ಲಕ್ಷ್ಮೀ ನರಸಿಂಹ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಮದುತ್ತರಾದಿ ಮಠಾಧೀಶ ಸತ್ಯಾತ್ಮತೀರ್ಥ ಶ್ರೀಗಳ ಪರಮಾನುಗ್ರಹ ಪೂರ್ವಕ ಆಜ್ಞಾನುಸಾರವಾಗಿ ಪ್ರಾರಂಭಿಸಿದ ಜ್ಞಾನಸತ್ರ, ಸರ್ವಮೂಲಗ್ರಂಥ ಪಾರಾಯಣ, ಪ್ರವಚನ ಹಾಗೂ ದಾಸವಾಣಿ ಸೇರಿ ಇತರೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಏ.22ರಂದು ಬೆಳಗ್ಗೆ ಮನ್ಯು ಸೂಕ್ತ ಹೋಮ, ಏ.24ರಂದು ಬೆಳಗ್ಗೆ 9 ಗಂಟೆಗೆ ಪವಮಾನ ಹೋಮ, ಸರ್ವಮೂಲ ಗ್ರಂಥ ಪಾರಾಯಣ ಆರಂಭ, ಏ. 25 ಮತ್ತು ಏ. 26 ರಂದು ಎರಡು ದಿನಗಳ ಕಾಲ ಸರ್ವಮೂಲ ಗ್ರಂಥ ಪಾರಾಯಣ ನಡೆಯಲಿವೆ. ಪ್ರತಿದಿನ ಬೆಳಗ್ಗೆ ಪಂಡಿತ ಅಜಯ ಆಚಾರ್ಯ ಜೋಶಿ (ತೊರವಿ), ಪಂಡಿತ ಕೃಷ್ಣಾಚಾರ್ಯ ಜೋಶಿ, ಪಂಡಿತ ಸಂಜೀವಾಚಾರ್ಯ ಬುರ್ಲಿ, ಪಂಡಿತ ಅಜಿತಾಚಾರ್ಯ ಹನಗಂಡಿ, ಪಂಡಿತ ಕಶ್ಯಪಾಚಾರ್ಯ ಗೊರನಾಳ ಅವರಿಂದ ಪ್ರವಚನ ನಡೆಯಲಿವೆ.

ಉತ್ಸವದ ಕಾಲದಲ್ಲಿ ಪ್ರತಿನಿತ್ಯ ಬೆಳಗ್ಗೆ 10 ಗಂಟೆ ಶ್ರೀಮದ್ಭಾಗವತ ಪುರಾಣ ಸಂಜೆ ಪಲ್ಲಕ್ಕಿ ಸೇವೆ, ಸ್ವಸ್ತಿ ವಾಚನ ದಾಸ ವಾಣಿ ಜರುಗಲಿವೆ. ವಿವಿಧ ಗಾಯಕರಾದ ಸುಧೇಂದ್ರ ವೈದ್ಯ, ಅಥಣಿಯ ಶ್ರೀರಾಮ ಜೋಶಿ, ಧಾರವಾಡದ ಉದಯ ದೇಶಪಾಂಡೆ, ಸುಮತಿ ನರಸಿಂಹ ಜೋಶಿ ಅವರಿಂದ ಏ.30 ರಂದು ಮಾಧ್ಯಾಹ್ನ 3ರಿಂದ 4 ಗಂಟೆ ವರೆಗೆ ಗೀತಾ ಸಂಜೀವ ಕುಲಕರ್ಣಿ, ಶ್ರೀಹರಿ ಹಾಗೂ ಶ್ರೀನಿಧಿ ಕುಲಕರ್ಣಿ ಅವರಿಂದ ದಾಸವಾಣಿ ಕಾರ್ಯಕ್ರಮ ಜರುಗಲಿವೆ.

ಏ.30ರಂದು ಬೆಳಗ್ಗೆ ಸರ್ವಮೂಲ ಗ್ರಂಥ ಪಾರಾಯಣ ನರಸಿಂಹ ಹೋಮ, ನರಸಿಂಹ ಜಯಂತಿ ನಿಮಿತ್ತ ಸಂಜೆ 6.49ಕ್ಕೆ ನರಸಿಂಹ ದೇವರ ಜನನೋತ್ಸವ ಸಂಜೆ ಪಂಡಿತ ನರಹರಿ ಆಚಾರ್ಯ ರಿಂದ ಪ್ರವಚನ ನಡೆಯಲಿವೆ. ಮೇ 1ರಂದು ಬೆಳಗ್ಗೆ 10ಕ್ಕೆ ಸತ್ಯನಾರಾಯಣ ಪೂಜೆ, 11 ಗಂಟೆಗೆ ಪುರಾಣ ಮಂಗಲೋತ್ಸವ ಅಪರಾಹ್ನ 12 ಗಂಟೆಗೆ ರಥೋತ್ಸವ ಜರುಗಲಿದೆ. ಏ.2 ರಂದು ಬೆಳಗ್ಗೆ ಸರ್ವಮೂಲ ಗ್ರಂಥ ಪಾರಾಯಣ ಸಮಾಪ್ತಿ, ಬಳಿಕ 8.30 ಗಂಟೆಗೆ ಗೋಪಾಲ ಕಾವಲಾ ನಡೆದು ಮಧ್ಯಾಹ್ನ 2 ಗಂಟೆಗೆ ಮಹಾಪೂಜೆ, ಪಂಡಿತರ ಸನ್ಮಾನ ನೈವೇದ್ಯ ತೀರ್ಥ ಪ್ರಸಾದವಿದೆ ಎಂದು ದೇವಸ್ಥಾನ ಕಮಿಟಿ ತಿಳಿಸಿದೆ.

ಬಯಲಾಟಕ್ಕೆ ಪ್ರೋತ್ಸಾಹ ಅಗತ್ಯ

ಝಳಕಿ: ವಿಜಯಪುರ ಜಿಲ್ಲೆಯಲ್ಲಿ ನಡೆಯುವ ಬಯಲಾಟ ಕಲಾವಿದರ ಸಂಘ ಮಾಡುವ ಕುರಿತು ಪೂರ್ವಭಾವಿ ಸಭೆಯು ಸಮೀಪದ ಬರಡೋಲ ಗ್ರಾಮದಲ್ಲಿ ಜರಗಿತು.

ಈ ವೇಳೆ ರಾಜ್ಯ ಬಯಲಾಟ ಕಲಾವಿದರ ಪ್ರತಿನಿಧಿ ಶಿವಣ್ಣಗೌಡ ಬಿರಾದಾರ ಚಡಚಣ ಮಾತನಾಡಿ, ಏ.22ರಂದು ವಿಜಯಪುರ ಜಿಲ್ಲೆಯಲ್ಲಿ ನಡೆಯುವ ಬಯಲಾಟ ಕಲಾವಿದರ ಸಂಘ ರಚಿಸಲು ಎಲ್ಲಾ ತಾಲೂಕಿನ ಬಯಲಾಟ ಕಲಾವಿದರ ಒಬ್ಬಬರನ್ನು ಆಯ್ಕೆ ಮಾಡಿ ಜಿಲ್ಲಾ ಮಟ್ಟದ ಬಯಲಾಟ ಕಲಾವಿದರ ಸಂಘ ರಚನೆ ಮಾಡಲಾಗುವುದು. ಬಯಲಾಟ ಕಲೆ ನಶಿಸಿ ಹೋಗುತ್ತದೆ. ಆದರಿಂದ ಮುಂದಿನ ಪೀಳಿಗೆಗೆ ಬಯಲಾಟ ಕಲೆ ಉಳಿಬೇಕಾದರೆ ಬಯಲಾಟ ಕಲೆಗಳನ್ನು ನೋಡುತ್ತಾ ಇದ್ದರೆ ಕಲೆ ಉಳಿಯುತ್ತವೆ. ರಾಜ್ಯ ಸರ್ಕಾರ ಬಯಲಾಟ ಕಲಾವಿದರು ಗುರುತಿಸಿ ಅವರನ್ನು ಕಲಾವಿದರಿಗೆ ಗೌವರ ಸಹಾಯಧಾನ ನೀಡಬೇಕು ಬಯಲಾಟ ಕಲೆ ಕಲೆಯಾಗಿ ಉಳಿಸಬೇಕು ಎಂದು ಹೇಳಿದರು.

ಎಸ್.ಎಲ್.ಮೇತ್ರಿ ಮಾತನಾಡಿದರು. ಬಯಲಾಟ ಕಲೆ ಉಳಿಯಬೇಕಾದರೆ ಯುವಕರು ಮುಂದೆ ಬರಬೇಕು ಇಂತಹ ಯುವಕರು ಗುರುತಿಸಿ ಸರ್ಕಾರವು ಪ್ರೋತ್ಸಾಹಿಸಿದರೆ ಕಲೆ ಉಳಿಸಲು ಸಾಧ್ಯ ಎಂದರು. ಬಯಲಾಟ ಕಲಾವಿದರಾದ ಕಾಸುಗೌಡ ಪಾಟೀಲ ತದ್ದೇವಾಡಿ ಅನೇಕ ಬಯಲಾಟ ಕಲಾವಿದರು ಉಪಸ್ಥಿತರಿದ್ದರು.



ಕಳೆದುಹೋದ ಮೊಬೈಲ್‌ಗಳು ಪತ್ತೆ

ದೇವರಹಿಪ್ಪರಗಿ: ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕಳೆದುಕೊಂಡಿದ್ದ ಮೊಬೈಲ್ ಅನ್ನು ಸಿಇಐಆರ್ ಪೋರ್ಟಲ್ ಸಹಾಯದಿಂದ ಪತ್ತೆಹಚ್ಚುವ ಮೂಲಕ ಮಾಲೀಕರಿಗೆ ಹಸ್ತಾಂತರಿಸಿದರು.

ಪಟ್ಟಣದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದುಹೋಗಿದ್ದ ಮೊಬೈಲ್‌ಗಳನ್ನು ಸಿಇಐಆರ್ (ಅಇಐಖ) ಪೋರ್ಟಲ್ ಸಹಾಯದಿಂದ ಕ್ರೈಂ ಬ್ರ್ಯಾಂಚ್ ಪೊಲೀಸರಿಂದ ಪತ್ತೆಹಚ್ಚಲಾಗಿದೆ. ನಂತರ ಪಿಎಸ್ಐ ಸಚಿನ್ ಆಲಮೇಲಕರ ಅವರ ನೇತೃತ್ವದಲ್ಲಿ ಇಲ್ಲಿಯವರೆಗೆ ಸುಮಾರು 40ಕ್ಕೂ ಹೆಚ್ಚು ಮೊಬೈಲ್ ಗಳನ್ನು ಪೊಲೀಸ್ ಸಿಬ್ಬಂದಿ ಅವರ ಕೈಗೆಸುರಕ್ಷಿತವಾಗಿಹಸ್ತಾಂತರಿಸಿದ್ದಾರೆ. ಸಾರ್ವಜನಿಕರು ಬಸ್ ನಿಲ್ದಾಣ, ಮಾರುಕಟ್ಟೆಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮೊಬೈಲ್ ಸೇರಿದಂತೆ ತಮ್ಮ ಸಾಮಾನುಗಳ ಬಗ್ಗೆ ಸುರಕ್ಷಿತವಾಗಿರಬೇಕೆಂದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಮೂಲಕ ಹಾಗೂ ತಂತ್ರಜ್ಞಾನವನ್ನು ಬಳಸಿಕೊಂಡು ಸಂಬಂಧಿತ ವಾರಸುದಾರರನ್ನು ಗುರುತಿಸಿ, ಪೊಲೀಸ್ ಸಿಬ್ಬಂದಿ ಅವರ ಕೈಗೆಸುರಕ್ಷಿತವಾಗಿಹಸ್ತಾಂತರಿಸಿದ್ದಾರೆ. ಬಸ್ ನಿಲ್ದಾಣದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿಮಾತನಾಡಿದಅವರು, ಬಸ್ ನಿಲ್ದಾಣ, ಮಾರುಕಟ್ಟೆಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಮೊಬೈಲ್ ಸೇರಿದಂತೆ ತಮ್ಮ ಸಾಮಾನುಗಳ ಬಗ್ಗೆ ಸುರಕ್ಷಿತವಾಗಿರಬೇಕೆಂದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ.

ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಂಡು ಸಾರ್ವಜನಿಕರಿಗೆ ನೆರವಾದ ಪೊಲೀಸ್ ಇಲಾಖೆಯ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗುತ್ತಿದೆ.



ಕುಡಿಯುವ ನೀರಿನ ಘಟಕದ ಸದುಪಯೋಗ ಪಡೆಯಿರಿ

ಸಿಂದಗಿ: ಇಲ್ಲಿನ ನಿವಾಸಿಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಿ ನೀರಿನ ಬವಣೆ ನೀಗಿಸಬೇಕು ಎಂದು ಸದುದ್ದೇಶದಿಂದ ಈ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಇದರ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ನಗರದ ವಿದ್ಯಾ ನಗರದ 4ನೇ ಕ್ರಾಸ್ ನಲ್ಲಿರುವ ಶಿವನಗುಡಿಯಲ್ಲಿ ಸಿಂದಗಿ ನಗರಸಭೆ ವತಿಯಿಂದ 2023-24ನೇ ಸಾಲಿನ 15ನೇ ಹಣಕಾಸು ಯೋಜನೆ ಅಡಿಯಲ್ಲಿ ರೂ.10.98ಲಕ್ಷ ಅನುದಾನದಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ ಭೂಮಿ ಪೂಜೆಯನ್ನು ನೆರವೇರಿಸಿ ಮಾತನಾಡಿದ ಅವರು, ನಗರಸಭೆ 15ನೆಯ ಹಣಕಾಸು ಯೋಜನೆ ಅಡಿಯಲ್ಲಿ ಒಟ್ಟು 5 ಶುದ್ಧ ಕುಡಿಯುವ ನೀರಿನ ಘಟಕಗಳು ಮಂಜೂರಾಗಿದ್ದು, ಅದರಲ್ಲಿ ಶಿವನಗುಡಿ, ವಿದ್ಯಾನಗರದ ಪ್ರಾಥಮಿಕ ಶಾಲೆ, ಐಬಿ ಹಿಂದುಗಡೆ ಇರುವ ಉರ್ದು ಶಾಲೆ, ಚನ್ನವೀರ ಸ್ವಾಮೀಜಿ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಕಲ್ಯಾಣ ನಗರದ ಪ್ರಾಥಮಿಕ ಶಾಲೆ ಸೇರಿ ಒಟ್ಟು ರೂ.54ಲಕ್ಷ 90ಸಾವಿರ ವೆಚ್ಚದ ಈ ಘಟಕಗಳು ಮಂಜೂರಾಗಿವೆ. ಈ ಭಾಗದ ನಿವಾಸಿಗಳಿಗೆ ಮಾತು ಕೊಟ್ಟಂತೆ ಶಿವನ ಗುಡಿಯ ಜೀರ್ಣೋದ್ಧಾರಕ್ಕೆ ರೂ.30ಲಕ್ಷ ಅನುದಾನವನ್ನು ನೀಡಲಾಗಿದೆ. ಇನ್ನೊಂದು ತಿಂಗಳಲ್ಲಿ ಈ ಉದ್ಯಾನವನ ಉದ್ಘಾಟನೆ ಮಾಡಲಾಗುವುದು. ನೂತನ ಸೆಟೆಲೈಟ್ ಬಸ್ ನಿಲ್ದಾಣಕ್ಕಾಗಿ ನಿರ್ಮಿತಿ ಕೇಂದ್ರದ ಭೂಮಿಯು ಸೆಟೆಲೈಟ್ ಬಸ್ ನಿಲ್ದಾಣಕ್ಕಾಗಿ ವರ್ಗಾವಣೆಯಾಗಿದೆ. ಸಿಂದಗಿಯಿಂದ ಶಹಾಪುರ ಪೆಟ್ರೋಲ್ ಪಂಪ್ ವರೆಗೆ, ಡಾಲ್ಫಿನ್ ದಾಬಾದಿಂದ ರಾಂಪುರ ಗ್ರಾಮದವರೆಗೆ ರಸ್ತೆ ನಿರ್ಮಾಣಕ್ಕೆ ರೂ.6 ಕೋಟಿ ಅನುದಾನವನ್ನು ರಾಜ್ಯ ಸರಕಾರ ಈಗಾಗಲೇ ಅನುದಾನ ಮಂಜೂರು ಮಾಡಿದೆ. ಅತೀ ಶೀಘ್ರದಲ್ಲಿ ಭೂಮಿಪೂಜೆ ಮಾಡಲಾಗುವುದು ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಪೂಜಾರ ಮಾತನಾಡಿದರು. ಈ ವೇಳೆ ನಗರಸಭೆ ಹಿರಿಯ ಆರೋಗ್ಯ ಅಧಿಕಾರಿ ನಬಿರಸೂಲ್ ಉಸ್ತಾದ್, ಪ್ರಥಮ ದರ್ಜೆ ಗುತ್ತಿಗೆದಾರ ಮುತ್ತು ಮುಂಡೇವಾಡಗಿ, ನಗರಸಭೆ ಮಾಜಿ ಉಪಾಧ್ಯಕ್ಷ ಹಾಸಿಂಪೀರ ಆಳಂದ, ಗುತ್ತಿಗೆದಾರ ಸತೀಶ ಬಿರಾದಾರ, ಮಹಾಂತೇಶ ಪಟ್ಟಣಶೆಟ್ಟಿ, ಈರನಗೌಡ ಬಿರಾದಾರ, ಮಲ್ಲು ಶಂಬೇವಾಡ, ಜಯಶ್ರೀ ಹದನೂರ, ಶಶಿಕಲಾ ಅಂಗಡಿ ಸೇರಿದಂತೆ ಸ್ಥಳೀಯ ನಿವಾಸಿಗಳು ಇದ್ದರು.



ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಕಿರುಸುದ್ದಿ

ದ್ಯಾಮಮ್ಮ ದೇವಿ ದೇವಾಲಯ ಉದ್ಘಾಟನೆ ಇಂದು



ಕುಷ್ಟಗಿ: ತಾಲೂಕಿನ ಹಿರೇಮನ್ನಾಪೂರು ಗ್ರಾಮದ ಗ್ರಾಮ ದೇವತೆ ಶ್ರೀದ್ಯಾಮಮ್ಮ ದೇವಿಯ ನೂತನ ದೇವಾಲಯ ಉದ್ಘಾಟನೆ ಹಾಗೂ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ಏ.20 ರಂದು ಮುಂಜಾನೆ 10 ಗಂಟೆಗೆ ಗೋಪೂಜೆ ವಿಶೇಷ ಪೂಜೆ ಕಾರ್ಯಕ್ರಮಗಳು ಜರಗುವವು ಏ 21 ರಂದು ಗ್ರಾಮದ ಎಲ್ಲಾ ದೇವಸ್ಥಾನಗಳಿಗೆ ಹುಡಿ ತುಂಬುವುದು ಮತ್ತು ಭಕ್ತರಿಗೆ ಅನ್ನ ಸಂತರ್ಪಣೆ ನಡೆಯುವುದು ಎಂದು ದ್ಯಾಮಮ್ಮ ದೇವಿಯ ದೇವಸ್ಥಾನದ ಪ್ರಕಟಣೆ ತಿಳಿಸಿದೆ.

ಚಿತ್ರಕಲಾ ಪ್ರದರ್ಶನಕ್ಕೆ ಆಯ್ಕೆ



ಕುಷ್ಟಗಿ: ತಾಲೂಕಿನ ಹಿರೇಮನ್ನಾಪೂರು ಗ್ರಾಮದ ಯುವ ಕಲಾವಿದ ಮರಿಯಪ್ಪ ಮಳ್ಳೂರು ಮೈಸೂರಿನಲ್ಲಿ ನಡೆಯಲಿರುವ ಚಿತ್ರಕಲಾ ಪ್ರದರ್ಶನಕ್ಕೆ ಆಯ್ಕೆಯಾಗಿದ್ದಾರೆ. ರಂಗಮಂದಿರದಲ್ಲಿ ಜರುಗುವ ಆರ್ಟ್ಸ್ ನಾನಾ ಗ್ರೂಪ್ ನಾನಾ ನಡೆಯುವ ಕಲಾ ಕೃತಿಗಳನ್ನು ಏ.24ರಿಂದ 26ವರಗೆ ಪ್ರದರ್ಶನಗೊಳಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂಡಿ ಒಕ್ಕೂಟ ವಿರುದ್ಧ ಮಾಜಿ ಶಾಸಕ ಪರಣ್ಣ ಆಕ್ರೋಶ

ಗಂಗಾವತಿ: ದೇಶದ ಕೋಟ್ಯಂತರ ತಾಯಂದಿರ ರಾಜಕೀಯ ಹಕ್ಕನ್ನು ಮತ್ತು ಶಾಸಕಾಂಗದಲ್ಲಿ ಪ್ರಾತಿನಿಧ್ಯದ ಅವಕಾಶ ಹತ್ತಿಕ್ಕಿದ ಕಾಂಗ್ರೆಸ್ ನೇತೃತ್ವದ ಇಂಡಿ ಒಕ್ಕೂಟದ ಮಿತ್ರಪಕ್ಷಗಳಿಂದ ಮಹಿಳಾ ವಿರೋಧಿ ಧೋರಣೆ ಅತ್ಯಂತ ಖಂಡನೀಯ ಎಂದು ಮಾಜಿ ಶಾಸಕ ಪರಣ್ಣ ಮುನವಳ್ಳಿ ಹೇಳಿದರು.ಈ ಕುರಿತು ಪ್ರಕಟಣೆ ನೀಡಿದ ಅವರು, ಭಾರತೀಯ ನಾರಿ ಶಕ್ತಿಯ ಹಕ್ಕು, ಗೌರವ ಮತ್ತು ಸಬಲೀಕರಣಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ನಾರಿಶಕ್ತಿ ವಂದನಾ ಕಾಯ್ದೆ ಜಾರಿತರಲು ಪ್ರಯತ್ನಿಸಿದ್ದರು.



ಆದರೆ ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಇಂಡಿ ಒಕ್ಕೂಟದ ಮಿತ್ರ ಪಕ್ಷಗಳು ಭಾರತದ ಮಹಿಳಾ ಶಕ್ತಿಗೆ ಚಾರಿತ್ರಿಕ ದ್ರೋಹ ಬಗೆದಿವೆ. ಇದು ಮಸೂದೆಯ ಸೋಲಲ್ಲ ಇಡೀ ಮಹಿಳೆಯರ ಹಕ್ಕುಗಳನ್ನು ಹತ್ತಿಕ್ಕುವ ಕೆಲಸ ಇಂಡಿ ಒಕ್ಕೂಟದ ವಿರೋಧ ಪಕ್ಷಗಳಿಂದ ಆಗಿದೆ ಎಂದರು.

ಇದರಿಂದ ನಮ್ಮ ದೇಶದ ನಾರಿಯರು ನಾರಿತಕ್ತಿ ವಂದನಾ ಕಾಯ್ದೆ ವಿರೋಧಿಸಿದ ಇಂಡಿ ಒಕ್ಕೂಟದ ಕಾಂಗ್ರೇಸ್ ಪಕ್ಷದ ನಾಯಕರಿಗೆ ಮುಂಬರುವ ದಿನಗಳಲ್ಲಿ ದೇಶದಾದ್ಯಂತ ನಾರಿಯರು ತಕ್ಕ ಪಾಠ ಕಲಿಸುವುದು ನಿಶ್ಚಿತ. ಮಹಿಳೆಯರಿಗೆ ಗೌರವ ಮತ್ತು ಅವರ ಹಕ್ಕುಗಳನ್ನು ನೀಡುವ ನಿಟ್ಟಿನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರಯತ್ನ ನಿರಂತರವಾಗಿ ಮುಂದುವರಿಯಲಿದೆ ಮುಂದೆ ಸಂಸತ್ತಿನಲ್ಲಿ ನಾರಿಶಕ್ತಿ ವಂದನಾ ಕಾಯ್ದೆ ಜಾರಿಗೆ ತಂದು ಮಹಿಳೆಯರಿಗೆ ಗೌರವ ಮತ್ತು ಅವರ ಹಕ್ಕುಗಳನ್ನು ನಿಡಲಿದ್ದೇವೆ ಎಂದು ತಿಳಿಸಿದರು.

ಮಾಧ್ಯಮ ರತ್ನ ರಾಜ್ಯ ಪ್ರಶಸ್ತಿಗೆ ಹಿರೇಮಠ ಭಾಜನ

ಕುಕನೂರು: ವಿಶ್ವ-ವಿಜಯ ಪತ್ರಿಕೆಯ 21ನೇ ವರ್ಷಾಚರಣೆಯ ಅಂಗವಾಗಿ ಪತ್ರಿಕಾ ರಂಗದಲ್ಲಿ ಗಣನೀಯ ಸಾಧನೆ ಸಲ್ಲಿಸಿದ ಸಾಧಕರನ್ನು ಗುರುತಿಸಿ ಕೊಡಮಾಡುವ ಮಾಧ್ಯಮ ರತ್ನ ರಾಜ್ಯ ಪ್ರಶಸ್ತಿಗೆ ಕುಕನೂರು ತಾಲೂಕ ವರದಿಗಾರ ಚನ್ನಯ್ಯ ಹಿರೇಮಠ ಇವರನ್ನು ಆಯ್ಕೆ ಮಾಡಲಾಗಿದೆ. ನಾಡಿನೆಲ್ಲೆಡೆ ಎಲೆಮರೆ ಕಾಯಿಯಂತೆ ಉಳಿದಿರುವ, ಉಳಿಯುತ್ತಿರುವ ವಿವಿಧ ಕ್ಷೇತ್ರದಲ್ಲಿ ವಿಷೇಶವಾಗಿ ಪತ್ರಿಕಾ ಮಾಧ್ಯಮ ಹಾಗೂ ಟಿ. ವಿ ಮಾಧ್ಯಮ, ತಾಂತ್ರಿಕ ಕ್ಷೇತ್ರದಲ್ಲಿ ಗಣನೀಯ ಸೇವೆ ಮಾಡುತ್ತಿರುವುದಕ್ಕಾಗಿ ಹುಬ್ಬಳ್ಳಿಯ ಸಂಗೋಳ್ಳಿ ರಾಯಣ್ಣ ನಗರದ ಡಾ. ಬಿ. ಆರ್ ಅಂಬೇಡ್ಕರ ಸಭಾ ಭವನದಲ್ಲಿ ಏಪ್ರೀಲ್ 26.04.2026ರಂದು ನಡೆಯುವ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಚನ್ನಯ್ಯ ಹಿರೇಮಠ ಇವರಿಗೆ ಮಾಧ್ಯಮ ರತ್ನ ರಾಜ್ಯ ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದು ವ್ಯವಸ್ಥಾಪಕ ಸಂಪಾದಕರಾದ ಮಾರುತಿ. ಎಂ ಬುರುಡಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಕುಕನೂರು: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾನುವಾರ ಮೇ 4 ರಂದು ವಿವಿಧ ಮಹನೀಯರ ಮೂರ್ತಿ ಪ್ರತಿಷ್ಠಾಪನೆ ಭೂಮಿ ಪೂಜೆ ಕಾರ್ಯಕ್ರಮ ಕುರಿತು ನಡೆದ ಸುದ್ದಿಗೋಷ್ಠಿಯಲ್ಲಿ ಎಂ ಆರ್ಥಿಕ ಸಲಹೆಗಾರ ಶಾಸಕ ಬಸವರಾಜ ರಾಯರಡ್ಡಿ ಮಾತನಾಡಿದರು.

ಮಹನೀಯರ ಮೂರ್ತಿ ಪ್ರತಿಷ್ಠಾಪನೆ

ಕುಕನೂರು: ಮೇ 4 ರಂದು ವಿವಿಧ ಮಹನೀಯರ ಮೂರ್ತಿ ಪ್ರತಿಷ್ಠಾಪನೆ ಭೂಮಿ ಪೂಜೆ ಕಾರ್ಯಕ್ರಮ ನಡೆಯಲಿದೆ ಎಂದು ಸಿಎಂ ಆರ್ಥಿಕ ಸಲಹೆಗಾರ ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದವರು ಇಂದಿನ ಆಧುನಿಕ ಜಗತ್ತಿನಲ್ಲಿ ಮಹನೀಯರ ಆದರ್ಶಗಳು ನಮ್ಮೆಲ್ಲರಿಗೂ ಮಾದರಿಯಾಗಿದೆ ಅದಕ್ಕಾಗಿ ಪಟ್ಟಣದಲ್ಲಿ ಜಗಜ್ಯೋತಿ ಬಸವೇಶ್ವರ, ಸವಿಂದಾನ ಶಿಲ್ಪಿ ಡಾ, ಬಿ ಆರ್ ಅಂಬೇಡ್ಕರ್, ಕ್ರಾಂತಿಕಾರಿ ಸಂಗೊಳ್ಳಿ ರಾಯಣ್ಣನವರ ಮೂರ್ತಿ ಪ್ರತಿಷ್ಠಾಪನೆಯನ್ನು ಮಾಡಲಾಗುವುದು ಪ್ರತಿ ಮೂರ್ತಿಗೂ 40 ಲಕ್ಷ ರೂ. ವೆಚ್ಚದಲ್ಲಿ ಕಂಚಿನ ಮೂರ್ತಿ ಪ್ರತಿಷ್ಠಾಪನೆ ಆಗಲಿದ್ದು ಪಟ್ಟಣದಲ್ಲಿ ಹೆಚ್ಚುವರಿ ಮೂಲಭೂತ ಸೌಕರ್ಯಗಳಿಗಾಗಿ ಇನ್ನಷ್ಟು ಅನುದಾನವನ್ನು ಕೂಡ ಬಳಕೆ ಮಾಡಲಾಗಿದ್ದು ಇದರ ಭೂಮಿ ಪೂಜೆಯನ್ನು ಮೇ 4 ರಂದು ಮಾಡಲಾಗುವುದು ಆ ದಿನದಂದು ತಾಲೂಕಿನ ಎಲ್ಲಾ ಜನರು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿ ಜಾತಿ ಮತ ಭೇದ ಭಾವ ಎನ್ನದೆ ಕಾರ್ಯಕ್ರಮ ಯಶಸ್ವಿಗೊಳಿಸಲು ಮುಂದಾಗಬೇಕು ಹಾಗೂ ಅಕ್ಕಮಹಾದೇವಿಯ ಪುಸ್ತಕ ಲೋಕಾರ್ಪಣೆ ಕೂಡ ನಡೆಯಲಿದ್ದು ಎಂದರು. ಈ ಸಂದರ್ಭದಲ್ಲಿ ಮುಖ್ಯ ಅಕಾರಿ ನಾಗೇಶ್, ಹನುಮಂತಗೌಡ ಚಂಡೂರು, ನಾರಯಣಪ್ಪ ಹರಪನಹಳ್ಳಿ ಕೆರಿಬಸಪ್ಪ ನಿಡುಗುಂದಿ ಮಂಜುನಾಥ್ ಕಡೇಮನಿ, ಸಂತೋಷ್ ಬನ್ನಿಕೊಪ್ಪ, ಪಪಂ ಸದಸ್ಯ ಗಗನ್ ನೋಟ್ಗಾರ್, ಸಂಗಮೇಶ್ ಗುತ್ತಿ ಹಾಗೂ ಇತರರಿದ್ದರು



ಕಲಬುರಗಿ: ಬಸವ ಜಯಂತಿ ಅಂಗವಾಗಿ ನಗರದ ಐತಿಹಾಸಿಕ ಶರಣಬಸವೇಶ್ವರ ದೇವಸ್ಥಾನದಲ್ಲಿ ನಡೆದ ಸಾಮೂಹಿಕ ಇಷ್ಟಲಿಂಗ ಪೂಜೆ ಹಾಗೂ ದೀಕ್ಷಾ ಸಮಾರಂಭ ಭಕ್ತಿಭಾವದ ಮಹಾಸಾಗರವಾಗಿತ್ತು. ಜಿಲ್ಲಾ ಬಸವ ಜಯಂತಿ ಉತ್ಸವ ಸಮಿತಿಯ ವತಿಯಿಂದ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ಭಕ್ತರು ಪಾಲ್ಗೊಂಡುದರು.

ವಿಚಾರ ಸಂಕಿರಣ ಕಾರ್ಯಕ್ರಮ ; ಶಾಸಕ ಬಸನಗೌಡ ಹೇಳಿಕೆ

ಕಲ್ಯಾಣಕ್ಕೆ ಪ್ರತ್ಯೇಕ ಅನುದಾನ ನೀಡಿ

ರಾಯಚೂರು: ಪ್ರತಿ ಇಲಾಖೆಯ ಯೋಜನೆಗಳನ್ನು ಜಾರಿಗೊಳಿಸುವುದಕ್ಕೆ ಆಯಾ ಇಲಾಖೆಗೆ ಸಂಬಂಧಿಸಿದ ಸಿಬ್ಬಂಧಿಗಳನ್ನು ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ನೇಮಕವಾದಾಗ ಮಾತ್ರ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಬಸನಗೌಡ ದದ್ದಲ ಹೇಳಿದರು.

ನಗರದ ಎಪಿಎಂಸಿ ಸಭಾಂಗಣದಲ್ಲಿ ಹೈದರಾಬಾದ್ ಕರ್ನಾಟಕ ಜನಾಂದೋಲನ ಕೇಂದ್ರ, ಪ್ರೋ. ಗೋವಿಂದರಾವ್ ಸಮಿತಿ ಸಲ್ಲಿಸಿರುವ ವರದಿ ಕಲ್ಯಾಣ ಕರ್ನಾಟಕದ ಸಾಧಕ ಬಾಧಕಗಳ ಕುರಿತು ಆಯೋಜಿಸಿದ್ದ ವಿಚಾರ ಸಂಕೀರ್ಣವ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿ, ಪ್ರಸಕ್ತ ಕೆಕೆಆರ್‌ಡಿಬಿಯಲ್ಲಿ ಕೆಲವು ಇಂಜನೀಯರ್‌ಗಳು ಸೇರಿದಂತೆ ಕೆಲವು ಸಿಬ್ಬಂಧಿಗಳಿಂದ ಕೆಲಸ ಪಡೆದುಕೊಳ್ಳಲಾಗುತ್ತಿದೆ. ಇದರಿಂದ ಇರುವ ಸಿಬ್ಬಂಧಿಗಳು ಇಲಾಖೆಯ ಕೆಲಸಗಳಿಗೆ ಹೆಚ್ಚಿನ ಆದ್ಯತೆ ನೀಡುವುದರಿಂದ ಇತರೆ ಇಲಾಖೆಗಳ ಕೆಲಸ ಕಾರ್ಯಗಳು ಸಕಾಲದಲ್ಲಿ ಆಗುತ್ತಿಲ್ಲ ಎಂದರು.

371ಜೆ ಹೋರಾಟಗಾರ ಡಾ. ಅಬ್ದುಲ್ ರಝಾಕ್ ಮಾತನಾಡಿ, ಕೆಕೆಆರ್‌ಡಿಬಿಯ ಅನುದಾನದ ಬಳಕೆಗೂ ಪ್ರಾದೇಶಿಕಅಭಿವೃದ್ಧಿಅರ್ಥಕ್ಕೆಯಾವುದೇಸಂಬಂಧವಿಲ್ಲ . ಕ.ಕ ಭಾಗದಲ್ಲಿ ಇಂದಿನವರೆಗೂ ಯೋಜನೆ ತಲುಪಿಲ್ಲವೋ ಅಂತಹ ಕಡೆ ಯೋಜನೆಯನ್ನು ಅನುಷ್ಠಾನಗೊಳಿಸುವ ಉದ್ದೇಶವಿದೆ. ಜಾರಿಯಲ್ಲಿರುವ ಯೋಜನೆಗಳ ಸೌಲಭ್ಯ ಹಾಳಾಗಿದ್ದರೆ ಅವನ್ನು ಕೆಡವಿ ಅದೇ ಜಾಗೆಯಲ್ಲಿ ನೂತನವಾಗಿ ನಿರ್ಮಿಸುವ ಕಾರ್ಯ ಕೆಕೆಆರ್‌ಡಿಬಿಯ ಅನುದಾನದಲ್ಲಿ ಕೈಗೊಂಡರೆ ಇನ್ನು ಎಷ್ಟೇ ದಶಗಳು ಹೋದರೂ ಕ.ಕ ಅಭಿವೃದ್ಧಿ ಸಾಧ್ಯವಾಗುವುದಿಲ್ಲ ಎಂದರು. ಇಗಾಗಲೇ ಇರುವ ಶಾಲಾಕಟ್ಟಡಶಿಥಿಲಾವಸ್ಥೆಯಲ್ಲಿದ್ದರೆಅದರನಿರ್ಮಾಣಕ್ಕೆ



ಸರ್ಕಾರ ರಾಜ್ಯದ ಬೊಕಕಸದಿಂದ ನೀಡಬೇಕು. ಇದಕ್ಕೂ ಕೆಕೆಆರ್‌ಡಿಬಿಯ ಅನುದಾನ ನೀಡಿದರೆ ಕ.ಕ ಪ್ರತ್ಯೇಕ ಅನುದಾನ ನೀಡಿದಂತಾಗುವುದಿಲ್ಲ. ಅದೇ ರೀತಿ ಆರೋಗ್ಯ ಇಲಾಖೆಯಲ್ಲಿ ಮೂಲಭೂತ ಸೌಲಭ್ಯ ಒದಗಿಸುವ ಸಂದರ್ಭದಲ್ಲಿ ಇದೇ ಮಾತನ್ನು ಹೇಳಲಾಗುತ್ತಿದೆ. ರಾಜ್ಯದ ಬೇರೆ ಭಾಗಗಳಲ್ಲಿ ಈ ರೀತಿಯ ಅಭಿವೃದ್ಧಿ ಕಾರ್ಯಗಳಿಗೆ ನೀಡಿದಂತೆ ಇಲ್ಲಿಯೂ ನೀಡುವ ಕಾರ್ಯವಾಗಬೇಕೆಂದರು.

ಪ್ರೋ. ಗೋವಿಂದರಾವ್ ವರದಿಯಲ್ಲಿ ಕ.ಕ, ಮುಂಬೈ ಕರ್ನಾಟಕ, ದಕ್ಷಿಣ ಕರ್ನಾಟಕ ಹಾಗೂ ದಕ್ಷಿಣ ಕನ್ನಡ ಎಂದು ವಿಭಾಗಿಸಿ ಪ್ರತಿ ವಿಭಾಗಕ್ಕೆ 59 ತಾಲೂಕುಗಳನ್ನಾಗಿ ವಿಂಗಡಿಸಲಾಗಿದೆ. ಕ.ಕ ಅಭಿವೃದ್ಧಿಗೆ ಕೆಕೆಆರ್‌ಡಿಬಿಯಿಂದ ಅನುದಾನ ಪಡೆದುಕೊಳ್ಳುವಂತೆ ಹೇಳಲಾಗಿದೆ ಆದರೆ ಮುಂಬೈ ಕರ್ನಾಟಕದ ಹಳೆಯ ಯೋಜನೆಗಳ ಮರು ನಿರ್ಮಾಣಕ್ಕೆ ಮಂಡಳಿ ಇಲ್ಲ ಎಂಬ ಕಾರಣಕ್ಕೆ ಸರ್ಕಾರ ಅನುದಾನ ನೀಡಬೇಕೆಂದು ಸೂಚನೆ ನೀಡಿದ್ದಾರೆ. ಹಾಗಿದ್ದರೆ ಕೆಕೆಆರ್‌ಡಿಬಿ ರಚಿಸಿದ್ದಾರೂ ಏಕೆ ಎಂಬ ಗೊಂದಲ, ಗೋಜು ಮೂಡುತ್ತಿದೆ. ಆದ್ದರಿಂದ ಪ್ರತಿ ವರ್ಷದ ಬಜೆಟ್‌ನಲ್ಲಿ ಇಲ್ಲನ ಅಭಿವೃದ್ಧಿಗೆ ಅನುದಾನ ನೀಡಿದ್ದಲ್ಲದೆ ಕೆಕೆಆರ್‌ಡಿಬಿಗೆ ಪ್ರತ್ಯೇಕ ಅನುದಾನ ನೀಡಿದಾಗ ಮಾತ್ರ ಪ್ರಾದೇಶಿಕ ಅನುದಾನ ನೀವಾರಣೆ ಆಗಲು ಸಾಧ್ಯ ಎಂದರು.

ನಂಜುಂಡಪ್ಪ ವರದಿ ಸಮೀತಿಯ ಮಾಜಿ ಅಧ್ಯಕ್ಷ ತ್ರಿವಿಕ್ರಂ ಜೋಶಿ ಮಾತನಾಡಿ, ಇಂದಿರಾ ಗಾಂಧಿ ಕಾಲದಲ್ಲಿ, ನಂಜುಂಡಪ್ಪ ವರದಿ ನೀಡಿದಸಂದರ್ಭದಿಂದ ಇಂದಿನ ವರೆಗೂ ರಾಯಚೂರು, ಯಾದಗಿರಿ ಅತ್ಯಂತ ಹಿಂದುಳಿದ ಪ್ರದೇಶಗಳೆಂದು ಗುರುತಿಸುತ್ತಲೇ ಬರುತ್ತಿವೆ. 371ಜೆ ಜಾರಿಗೂ ಪೂರ್ವದಲ್ಲಿ ಶೇ.90 ರಷ್ಟು ಹಿಂದುಳಿದಿದ್ದ ಈ ಜಿಲ್ಲೆಗಳು ಈಗ ಶೇ.100 ಹಿಂದುಳಿದ ಪ್ರದೇಶಗಳೆಂದು ಪ್ರೋ.ಗೋವಿಂದರಾವ್ ವರದಿಯಲ್ಲಿ ತಿಳಿಸಲಾಗಿರುವುದು ವಿಷಾಧಕರ ಸಂಗತಿ ಎಂದರು.

ಪ್ರಾಸ್ತಾವಿಕವಾಗಿ ರಾಘವೇಂದ್ರ ಕುಷ್ಟಗಿ, ಚಾಮರಸ ಮಾಲಿಪಾಟೀಲ, ಕಮಲಕುಮಾರ ಜೈನ್, ಪಶುಪತಿ, ಹರವಿ ನಾಡಗೌಡ ಮಾತನಾಡಿದರು. ವೇದಿಕೆಯಲ್ಲಿ ಡಾ. ಶಾರದಾ ಹುಲಿನಾಯಕ, ಮಲ್ಲಿಕಾರ್ಜುನಗೌಡ ಪಾಟೀಲ, ಬಿ.ಬಸವರಾಜ, ವೀರಹನುಮಾನ ಸೇರಿದಂತೆ ಇತರರಿದ್ದರು.

ಬೆಳೆ ಕಟಾವಿಗೆ ಅಡ್ಡಿಪಡಿಸಿದರೆ ಎಫ್‌ಐಆರ್: ಡಿಸಿ

ಕಲಬುರಗಿ: ಜಿಲ್ಲೆಯಲ್ಲಿ ಬೆಳೆ ಕಟಾವು ಪ್ರಯೋಗಗಳಿಗೆ ಅಡ್ಡಿಪಡಿಸುವ ಅಥವಾ ಅಕಾರಿಗಳ ಮೇಲೆ ಒತ್ತಡ ಹೇರುವ ಮಧ್ಯವರ್ತಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಿ ಎಂದು ಜಿಲ್ಲಾಕಾರಿ ಬಿ. ಫೌಜಿಯಾ ತರುನ್ನಮ್ ಅವರು ಹೇಳಿದರು.

ನಗರದ ಜಿಲ್ಲಾಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಪ್ರಥಮ ತ್ರೈಮಾಸಿಕ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಬೆಳೆ ಕಟಾವು ಪ್ರಯೋಗಗಳ ವೇಳೆ ವಿಮಾ ಸೌಲಭ್ಯದ ದುರುಪಯೋಗಕ್ಕಾಗಿ ಅಕಾರಿಗಳ ಮೇಲೆ ಪ್ರಭಾವ ಬೀರಲು ಯತ್ನಿಸುವವರ ವಿರುದ್ಧ ತಕ್ಷಣವೇ ಎಫ್‌ಐಆರ್ ದಾಖಲಿಸಬೇಕು. ಅತಿಯಾದ ಒತ್ತಡವಿರುವ ಪ್ರದೇಶಗಳಲ್ಲಿ ಪೊಲೀಸ್ ರಕ್ಷಣೆ ಪಡೆದು ಪಾರದರ್ಶಕವಾಗಿ ಕಟಾವು ಪ್ರಕ್ರಿಯೆ ನಡೆಸಬೇಕು ಎಂದು ಅಕಾರಿಗಳಿಗೆ ಆದೇಶ ನೀಡಿದರು.

ಇದೇ ವೇಳೆ ಜನನ -ಮರಣ ನೋಂದಣಿ ಪ್ರಕ್ರಿಯೆಯಲ್ಲಿನ ಲೋಪಗಳ ಬಗ್ಗೆ ಜಿಲ್ಲಾಕಾರಿಗಳು ಆಕ್ರೋಶ ವ್ಯಕ್ತಪಡಿಸಿದರು. ಇ-ಎಚಿಟಿಚಿಟಚಿ ಪೋರ್ಟಲ್‌ನಲ್ಲಿ ಅಸ್ಪಷ್ಟ ದಾಖಲೆಗಳನ್ನು ಅಪ್‌ಲೋಡ್ ಮಾಡುತ್ತಿರುವುದು ಹಾಗೂ ಪ್ರಮಾಣಪತ್ರ ವಿತರಣೆಯಲ್ಲಿ 30 ದಿನಗಳಿಗಿಂತ ಹೆಚ್ಚು ವಿಳಂಬ ಮಾಡುತ್ತಿರುವುದು ಅಕ್ಷಮ್ಯ. ಇಂತಹ ಪ್ರಕರಣಗಳಲ್ಲಿ ಕರ್ತವ್ಯ ಲೋಪ ಎಸಗುವ ನೊಂದಣಾಕಾರಿ ಹಾಗೂ ಉಪ ನೊಂದಣಾಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಜನನ ಮರಣ ನೋಂದಣಿ ಪ್ರಕ್ರಿಯೆಯಲ್ಲಿ ಆಗುವಂತಹ ತಾಂತ್ರಿಕ ಸಮಸ್ಯೆಗಳಿಗೆ ಕುರಿತು ಹಾಗೂ ಸದರಿ ಸಮಸ್ಯೆಗಳನ್ನು ಸರಿಪಡಿಸಲು ಅಕಾರಿಗಳಿಗೆ ವಿಶೇಷ ಕಾರ್ಯಾಗಾರ ನಡೆಸುವಂತೆ ಯಾಕೆಂದರೆ ಹೋಗ್ತದೆ ಜಿಲ್ಲಾ ಸಂಖ್ಯಾ ಸಂಗ್ರಣಾಕಾರಿಗಳಿಗೆ ಸೂಚಿಸಲಾಯಿತು.

ಸಭೆಗೆ ಗೈರಾದ ಅಕಾರಿಗಳು, ಮುಂದಿನ ಸಭೆಗೆ ಕಡ್ಡಾಯವಾಗಿ ಹಾಜರಿರಲು ತಾಕೀತು ಮಾಡಿದರು. ಕಟಾವು ಪ್ರಯೋಗದಲ್ಲಿ ಕಳಪೆ ಪ್ರದರ್ಶನ ನೀಡಿದ 10 ಪ್ರಯೋಗಗಳನ್ನು ಗುರುತಿಸಿ ಸಂಬಂಧಪಟ್ಟ ಅಕಾರಿಗಳ ವಿರುದ್ಧ ಕ್ರಮಕ್ಕೆ ನಿರ್ಧರಿಸಲಾಗಿದೆ. ಸರ್ಕಾರದ ಸೌಲಭ್ಯಗಳು ಅರ್ಹರಿಗೆ ತಲುಪಬೇಕು, ಇದರಲ್ಲಿ ಹಸ್ತಕ್ಷೇಪ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಕಾರಿ ಹೇಳಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಕಾರಿಗಳಾದ ಎಸ್ ಎಸ್ ಮಠಪತಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಸಮದ್ ಪಟೇಲ್, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕರಾದ ಸಂತೋಷ ಇನಾಮದಾರ್, ಎಮ್.ಡಿ.ಇಮ್ರಾನ್ ಅಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಕಾರಿಗಳು, ಶರಣಬಸವ ಸಹಾಯಕ ನಿರ್ದೇಶಕರು, ಜಿಲ್ಲಾ ಸಂಖ್ಯಾ ಸಂಗ್ರಹಣಾಕಾರಿಗಳ ಕಚೇರಿಯ ಅಕಾರಿಗಳು ಹಾಗೂ ಜಿಲ್ಲಾ ಮಟ್ಟದ ಹಾಗೂ ತಾಲೂಕ ಮಟ್ಟದ ಅಕಾರಿಗಳು ಹಾಜರಿದ್ದರು

ಶುದ್ಧ ಕುಡಿಯುವ ನೀರಿನ ಘಟಕಗಳ ಪರಿಶೀಲನೆ



ಹನುಮಸಾಗರ: ಸಮೀಪದ ಯರಗೇರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾವಿನ ಹಾಗೂ ಗುಡದೂರಕಲ್ ಗ್ರಾಮಗಳಲ್ಲಿನ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ತಾಲ್ಲೂಕು ಪಂಚಾಯಿತಿ ಇಒ ಪಂಪಾಪತಿ ಹಿರೇಮಠ ಪರಿಶೀಲಿಸಿದರು.

ಯರಗೇರ ಗ್ರಾಪಂ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹಾಗೂ ಹದಗೆಟ್ಟಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಕುರಿತು ಹೊಸ ದಿಗಂತ ಪತ್ರಿಕೆಯಲ್ಲಿ ಏ.16 ರಂದು'' ಅಧಿಕಾರಿಗಳ ನಿರ್ಲಕ್ಷ್ಯದಿಂದ ಹಾಳಾದ ನೀರಿನ ಘಟಕಗಳು ಎಂಬ ಶೀರ್ಷಿಕೆಯಲ್ಲಿ ವರದಿ ಪ್ರಕಟಿಸಿತ್ತು ವರದಿ ಹಿನ್ನೆಲೆ ಅಧಿಕಾರಿಗಳು ಎಚ್ಚೆತ್ತು ಪರಿಶೀಲನೆ ನಡೆಸಿದ್ದಾರೆ.

ಅಧಿಕಾರಿಗಳೊಂದಿಗೆ ಆಗಮಿಸಿದ್ದ ಅವರು, ಹಲವು ದಿನಗಳಿಂದ ಸ್ಥಗಿತಗೊಂಡಿದ್ದ ಘಟಕಗಳ ಸ್ಥಿತಿಗತಿ ಪರಿಶೀಲಿಸಿದರು.

ಘಟಕಗಳ ನಿರ್ವಹಣೆಯ ಕೊರತೆ,ಯಂತ್ರೋಪಕರಣಗಳ ದುಸ್ಥಿತಿ ಹಾಗೂ ನೀರು ಸರಬರಾಜಿನ ಸ್ಥಗಿತದಿಂದ ಗ್ರಾಮಸ್ಥರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅಧಿಕಾರಿಗಳಿಂದ ಸ್ಥಳದಲ್ಲೇ ಮಾಹಿತಿ ಪಡೆದ ನಂತರ ಕುಡಿಯುವ ನೀರಿನ ಘಟಕಗಳ ದುರಸ್ತಿ ಕಾರ್ಯಕ್ಕೆ ಅಗತ್ಯವಿರುವ ಅಂದಾಜು ವೆಚ್ಚದ ವರದಿಯನ್ನು ತಕ್ಷಣ ಸಿದ್ಧಪಡಿಸಲು ಪಿಡಿಒ ಗಂಗಯ್ಯ ವಸ್ತ್ರದ ಅವರಿಗೆ ಸ್ಥಳದಲ್ಲೇ ಸೂಚನೆ ನೀಡಿದರು ಶೀಘ್ರದಲ್ಲೇ ಕ್ರಮ ಕೈಗೊಂಡು ಶುದ್ಧ ಸರಬರಾಜು ಪುನರಾರಂಭ ಮಾಡುವ ಭರವಸೆ ಗ್ರಾಮಸ್ಥರಿಗೆ ನೀಡಿದರು.

ಗುಡುಗು, ಸಿಡಿಲು ಮಿಶ್ರಿತ ಮಳೆ: 3 ಎತ್ತು, ಒಂದು ಎಮ್ಮೆ ಬಲಿ

ಹನುಮಸಾಗರ: ಸಮೀಪದ ರಂಗಾಪುರ ಮತ್ತು ಮೀಯಾಪೂರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.19 ರವಿವಾರ ಸಂಜೆ ಮಿಂಚು, ಗುಡುಗು, ಸಿಡಿಲು ವಿಶೀತ ಮಳೆಯಾಗಿದೆ. ಬೆಳಿಗ್ಗೆಯಿಂದಲೇ ಅತ್ಯಂತ ಪ್ರಖರ ಬಿಸಿಲಿಗೆ ಬೆಂದು ಹೋಗಿದ್ದ ಜನ,ದನಕರುಗಳಿಗೆ ಅಲ್ಪ ಪ್ರಮಾಣದ ನೆಮ್ಮದಿ ದೊರಕಿದ್ದರೂ, ಬೂವಿಗೆ ಬಿದ್ದ ಅಲ್ಪ ಮಳೆಯಿಂದ ಕಾಯ್ದ ಹಂಚಿಗೆ ಹನಿ ನೀರು ಸುರಿದಂತಾಗಿ ಮತ್ತಷ್ಟು ಸೆಖೆ, ಧಗೆ ಹೆಚ್ಚಾಗಿದೆ. ಅಲ್ಲಲ್ಲಿ ಸಿಡಿಲಿಗೆ ಜಾನುವಾರುಗಳು ಸಾವನ್ನಪ್ಪಿದ ಘಟನೆ ಜರುಗಿದೆ.

ಸಮೀಪದ ರಂಗಾಪೂರ ಗ್ರಾಮದ ಸರ್ವೆನಂ.55/1ರ ಜಮೀನಿನಲ್ಲಿ ಕಟ್ಟಿದ್ದ ಮುತ್ತಪ್ಪ ಶರಣಪ್ಪ ಮಜ್ಜಗಿ ಎನ್ನುವವರಿಗೆ ಸೇರಿದ ಎತ್ತು ಅಸು ನೀಗಿದ್ದು, 80 ಸಾವಿರ ರೂ. ನಷ್ಟವಾಗಿದೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದಾರೆ. ಅದೇ ರಂಗಪೂರ ಗ್ರಾಮದ ಸರ್ವೆನಂ. 29 ರಲ್ಲಿ ಶೇಖಪ್ಪ ಕನಕಪ್ಪ ವಾಲೀಕಾರ ಎನ್ನುವವರ ಎಮ್ಮೆ ಸಿಡಿಲಿಗೆ ಬಲಿಯಾಗಿದೆ. 50 ಸಾವಿರ ರೂ. ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಸ್ಥಳಕ್ಕೆ ಕಂದಾಯ ನಿರೀಕ್ಷಕ ಉಮೇಶಗೌಡ ಮಾಲಿಪಾಟೀಲ, ಹನುಮನಾಳ ಗ್ರಾಮ ಲೆಕ್ಕಾಧಿಕಾರಿ ಮಲ್ಲಿಕಾರ್ಜುನ ಕಾಳಗಿ, ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶಿಲಿಸಿದ್ದು, ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸುವುದಾಗಿ ತಿಳಿಸಿದ್ದಾರೆ.

ಜೋಡೆತ್ತುಗಳು ಸಾವು: ಸಮೀಪದ ಮೀಯಾಪೂರ ಗ್ರಾಮದ ಸರ್ವೆ ನಂ. 24 ರ ಹೊಲವೊಂದರಲ್ಲಿ ಕಟ್ಟಿದ್ದ ಶಿವಶಂಕರಪ್ಪ ನಿಂಗಪ್ಪ ಮದ್ನೂರ ಎಂಬುವವರಿಗೆ ಸೇರಿದ ಎರಡು ಜೋಡೆತ್ತುಗಳು ಸಿಡಿಲಿಗೆ ಬಲಿಯಾಗಿವೆ. ಸುಮಾರು ಎರಡು ಲಕ್ಷ ರೂ. ಹಾನಿಯಾಗಿದೆ ಎಂದು ಅಂದಾಜಿಸಲಾಗಿದೆ. ಸ್ಥಳಕ್ಕೆ ಗ್ರಾಮ ಲೆಕ್ಕಾಧಿಕಾರಿ ಅಭಿಷೇಕ ಕರಡಿ, ಯಮನೂರಪ್ಪ ವಾಲೀಕಾರ ಭೇಟಿ ನೀಡಿ ಪರಿಶೀಲಿಸಿದ್ದು, ಮೇಲಕಾರಿಗಳಿಗೆ ವರದಿ ಸಲ್ಲಿಸುವುದಾಗಿ ತಿಳಿಸಿದ್ದಾರೆ. ಎತ್ತುಗಳು ಮತ್ತು ಎಮ್ಮೆಯನ್ನು ಕಳೆದುಕೊಂಡ ರೈತರಿಗೆ ಸೂಕ್ತ ಪರಿಹಾರ ದೊರಕಿಸಿಕೊಡಬೇಕೆಂದು ಆಯಾ ಗ್ರಾಮಸ್ಥರು ಸಂಬಂಧಪಟ್ಟ ಅಧಿಕಾರಿಗಳಿಗೆ ವಿನಂತಿಸಿದ್ದಾರೆ.

ಕಲಬುರಗಿಯಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ, ಲಿಂಗದೀಕ್ಷೆ

ಕಲಬುರಗಿ: ಬಸವ ಜಯಂತಿ ಅಂಗವಾಗಿ ನಗರದ ಐತಿಹಾಸಿಕ ಶರಣಬಸವೇಶ್ವರ ದೇವಸ್ಥಾನದಲ್ಲಿ ನಡೆದ ಸಾಮೂಹಿಕ ಇಷ್ಟಲಿಂಗ ಪೂಜೆ ಹಾಗೂ ದೀಕ್ಷಾ ಸಮಾರಂಭ ಭಕ್ತಿಭಾವದ ಮಹಾಸಾಗರವಾಗಿತ್ತು. ಜಿಲ್ಲಾ ಬಸವ ಜಯಂತಿ ಉತ್ಸವ ಸಮಿತಿಯ ವತಿಯಿಂದ ಭಾನುವಾರ ಆಯೋಜಿಸಲಾದ ಈ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಧಾರ್ಮಿಕ ಶ್ರದ್ಧೆ ವ್ಯಕ್ತಪಡಿಸಿದರು. ಇಳಕಲ್ ಮಹಾಂತೇಶ್ವರ ಮಠದ ಗುರು ಮಹಾಂತ ಮಹಾಶಿವಯೋಗಿಗಳು ಹಾಗೂ ಪ್ರಭು ಮಾತಾಜಿಯವರ ದಿವ್ಯ ಮಾರ್ಗದರ್ಶನದಲ್ಲಿ ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ಡಾ. ದೊಡ್ಡಪ್ಪ ಅಪ್ಪ ಮತ್ತು ಡಾ. ದಾಕ್ಷಾಯಿಣಿ ಎಸ್ ಅಪ್ಪ ಅವರ ಸಮ್ಮುಖದಲ್ಲಿ ಪೂಜೆ ನೆರವೇರಿದವು. ಸುಮಾರು 1000ಕ್ಕೂ ಹೆಚ್ಚು ಬಸವ ಅನುಯಾಯಿಗಳು ಏಕಾಲದಲ್ಲಿ ಇಷ್ಟಲಿಂಗ ಪೂಜೆ ಸಲ್ಲಿಸುವ ಮೂಲಕ ಶರಣ ಸಂಸ್ಕೃತಿಯ ವೈಶಿಷ್ಟ್ಯತೆ ಪ್ರತಿಬಿಂಬಿಸಿದರು. ಬಸವಣ್ಣನವರ ಕಾಯಕ-ದಾಸೋಹ ತತ್ವಗಳು, ಸಾಮಾಜಿಕ ಸಮಾನತೆ ಮತ್ತು ಮಾನವೀಯ ಮೌಲ್ಯಗಳ ಕುರಿತು ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಉತ್ಸವಸಮಿತಿ ಅಧ್ಯಕ್ಷಬಿ.ಆರ್. ಪಾಟೀಲ್, ಕಾರ್ಯಾಧ್ಯಕ್ಷಬಿ.ಜಿ. ಪಾಟೀಲ್ ಹಾಗೂ ಶಾಸಕ ಅಲ್ಲಮಪ್ರಭು ಪಾಟೀಲ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಬೃಹತ್ ಕಾರ್ ರ್‍ಯಾಲಿ

ವಿಶ್ವಗುರು ಬಸವಣ್ಣನವರ ಜಯಂತಿ ಅಂಗವಾಗಿ ನಗರದಲ್ಲಿ ನಡೆದ ಬೃಹತ್ ಕಾರ್ ರ್‍ಯಾಲಿ ನಡೆಯಿತು. ಬಸವ ಮಿತ್ರ ಮಂಡಲದ ಜಗದೀಶ್ ದೇಶಮುಖ ನೇತೃತ್ವದಲ್ಲಿ ನಡೆದ ಅದ್ದೂರಿ ಮೆರವಣಿಗೆಗೆ ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ಡಾ. ದೊಡ್ಡಪ್ಪ ಅಪ್ಪ ಚಾಲನೆ ನೀಡಿ ಆಶೀರ್ವದಿಸಿದರು. ದೇವಸ್ಥಾನದ ಆವರಣದಿಂದ ಆರಂಭವಾದ ರ್‍ಯಾಲಿ ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತ, ಅನ್ನಪೂರ್ಣ ಕ್ರಾಸ್ ಮೂಲಕ ಸಾಗುತ್ತಾ ಜಗತ್ ವೃತ್ತ ತಲುಪಿತು. ಅಂತಿಮವಾಗಿ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮ ಸಮಾಪ್ತಿಯಾಯಿತು. ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್, ಶಾಸಕ ಎಂ.ವೈ.ಪಾಟೀಲ್, ಡಾ. ಅಜಯ್ ಸಿಂಗ್, ದತ್ತಾತ್ರೇಯ ಪಾಟೀಲ್ ರೇವೂರ್, ಶಶೀಲ್ ನಮೋಶಿ, ಮಾಜಿ ಸಂಸದ ಡಾ. ಉಮೇಶ್ ಜಾಧವ ಹಾಗೂ ಹಲವು ಮುಖಂಡರು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದರು.

ಬಸವೇಶ್ವರ ಜಾತ್ರಾ ಮಹೋತ್ಸವ ಇಂದಿನಿಂದ

ಯಲಬುರ್ಗಾ: ಬಸವ ಜಯಂತಿ ಅಂಗವಾಗಿ ಏ.20 ರಂದು ಪ್ರಾರಂಭವಾಗಿ 24ರವರೆಗೆ ಪಟ್ಟಣದ ಮೊಗ್ಗಿಬಸವೇಶ್ವರ ದೇವಸ್ಥಾನ ಜಾತ್ರಾ ಮಹೋತ್ಸವದಲ್ಲಿ ಸಾಮೂಹಿಕ ವಿವಾಹಗಳು ಹಾಗೂ ವಿವಿಧ ಕಾರ್ಯಕ್ರಮಗಳು ಜರುಗಲಿವೆ.

ಸ್ಥಳೀಯ ಶ್ರೀಧರ ಮುರಡಿ ಹಿರೇಮಠದ ಪೀಠಾಧಿಪತಿ ಬಸವಲಿಂಗೇಶ್ವರ ಶ್ರೀಗಳು ಹಾಗೂ ಕುಕನೂರಿನ ಅನ್ನದಾನೇಶ್ವರ ಮುಂಡರಗಿ ಶಾಖಾ ಮಠದ ಡಾ.ಮಹಾದೇವ ಶ್ರೀಗಳು ದಿವ್ಯ ಸಾನಿಧ್ಯದಲ್ಲಿ ಏ.20ರಂದು ಮೊಗ್ಗಿಬಸವೇಶ್ವರ ದೇವಸ್ಥಾನ ಜಾತ್ರಾ ಮಹೋತ್ಸವದ ಅಂಗವಾಗಿ ಬೆಳಿಗ್ಗೆ 6-30ಕ್ಕೆ ಧ್ವಜಾರೋಹಣ ಹಾಗೂ ಮಹಾರುದ್ರಾಭಿಷೇಕ ನಂತರ ಬೆಳಿಗ್ಗೆ 12-30ಕ್ಕೆ ಸಾಮೂಹಿಕ ವಿವಾಹಗಳು ಸಂಜೆ 5 ಗಂಟೆಗೆ ಪಂಚಕಳಸ ನೂತನ ಮಹಾರಥೋತ್ಸವ ಜರುಗಲಿದೆ.

ಕೊಪ್ಪಳ ಗವಿಮಠದ ಅಭಿನವ ಗವಿಸಿದ್ದೇ ಶ್ವರ ಶ್ರೀಗಳು, ಸ್ಥಳೀಯ ಬಸವಲಿಂಗೇಶ್ವರ ಶ್ರೀಗಳು, ಕುಕನೂರಿನ ಡಾ.ಮಹಾದೇವ ಶ್ರೀಗಳು, ನಗರಗಡ್ಡಿಮಠದ ಶಾಂತಲಿಂಗೇಸ್ವರ ಶ್ರೀಗಳು, ನಿಡಗುಂದಿಕೊಪ್ಪದ ಅಭಿನವ ಚನ್ನಬಸವ ಶ್ರೀಗಳು, ಚಿಕ್ಕಮ್ಯಾಗೇರಿ-ಇಟಗಿಯ ಡಾ.ಗುರುಶಾಂತವೀರ ಶ್ರೀಗಳು, ತಹಶಿಲ್ದಾರ್ ಪ್ರಕಾಶ ನಾಶಿ, ಸಿಪಿಐ ಮೌನೇಶ್ವರ ಮಾಲಿಪಾಟೀಲ, ವೀರನಗೌಡ ಬನ್ನಪ್ಪಗೌಡ್ರ, ಸಿಡಿಪಿಒ ಬೆಟದೇಶ ಮಾಳೆಕೊಪ್ಪ, ಮೊಗ್ಗಿಬಸವೇಶ್ವರ ಜಾತ್ರಾ ಸಮಿತಿ ಅಧ್ಯಕ್ಷ ಮಂಜುನಾಥ ಅಧಿಕಾರಿ ಮತ್ತಿತರರು ಭಾಗವಹಿಸಲಿದ್ದಾರೆ.



ಏ.21ರಂದು ಬೆಳಿಗ್ಗೆ 10 ಕ್ಕೆ ಸ್ಥಳಿಯ ಸರಕಾರಿ ಆಯುರ್ವೇದ ಆಸ್ಪತ್ರೆ ವತಿಯಿಂದ ಉಚಿತ ಆರೋಗ್ಯ ತಪಾಸಣೆ ಹಾಗೂ ಆಯುರ್ವೇದ ಹಾಗೂ ಹೋಮಿಯೋಪತಿ ಚಿಕಿತ್ಸಾ ಶಿಬಿರದಲ್ಲಿ ಆಯುರ್ವೇದ ತಜ್ಞವೈದ್ಯ,ಡಾ.ಎ.ಆರ್.ತಾಳಿಕೋಟಿ,ಹೂಮಿಯೋಪತಿ ತಜ್ಞ ವೈದ್ಯ ಡಾ.ವಿವೇಕ್ ವಾಗುಲೆ,ಆಯುರ್ವೇದ ತಜ್ಞ ವೈದ್ಯ ಡಾ.ಶಿಲ್ಪ ಬಾಚಲಾಪುರ, ಆಯುರ್ವೇದ ತಜ್ಞ ವೈದ್ಯ ಡಾ.ಪುಷ್ಪ ಪಾಗಿ ಭಾಗವಹಿಸುವರು.

ಬಸವೇಶ್ವರ ಭಾವಚಿತ್ರದ ಮೆರವಣಿಗೆ ಹಾಗೂ 101ಜೋಡೆತ್ತಿನ ಮೆರವಣಿಗೆ ಜರುಗುವುದು. ಏ.22ರಂದು ಸಂಜೆ 7ಕ್ಕೆ ಬೆಂಗಳೂರಿನ ಜ್ಯೂನಿಯರ್ ರಾಜಕುಮಾರರಿಂದ ರಸಮಂಜರಿ ಕಾರ್ಯಕ್ರಮ ಕುಕನೂರಿನ ಡಾ.ಮಹಾದೇವ ಶ್ರೀಗಳು, ಶಿಂಹಾಸನಾಧೀಶ್ವರ ಶಾಂತಲಿಂಗೇಶ್ವರ ಶ್ರೀಗಳು, ದಿವ್ಯ ಸಾನಿಧ್ಯ ವಹಿಸುವರು. ಸಿಎ ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ ರಾಯರಡ್ಡಿ ಸಭೆ ಅಧ್ಯಕ್ಷತೆ ವಹಿಸುವರು. ಜಿಲ್ಲಾ ಕಾಂಗ್ರೇಸ್ ಅಧ್ಯಕ್ಷ ಅಮರೇಗೌಡ ಬಯ್ಯಾಪೂರ, ಆರ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಶೇಖರಗೌಡ ಉಳ್ಳಾಗಡ್ಡಿ, ತಾಲೂಕಾ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಕೆರಿಬಸಪ್ಪ ನಿಡಗುಂದಿ ಅತಿಥಿಗಳಾಗಿ ಇನ್ನಿತರರು ಭಾಗವಹಿಸಲಿದ್ದಾರೆ.

ಏ,23ರಂದು ಸಂಜೆ 7ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ ಕೊಪ್ಪಳದ ಗವಿಸಿದ್ದೇಶ್ವರ ಶ್ರೀಗಳು, ಮುರುಡಿ ಹಿರೇಮಠದ ಬಸವಲಿಂಗೇಶ್ವರ ಶ್ರೀಗಳು ಸಾನಿಧ್ಯ ವಹಿಸುವವರು. ವಿಜಯಪುರ ನಗರ ಶಾಸಕ ಬಸನಗೌಡ ಯತ್ನಾಳ ಅಧ್ಯಕ್ಷತೆ ವಹಿಸುವರು. ಅತಿಥಿಗಳಾಗಿ ಮಾಜಿ ಸಚಿವ ಹಾಲಪ್ಪ ಆಚಾರ, ಜಿಲ್ಲಾ ಬಿಜೆಪಿ ಅಧ್ಯಕ್ಷ ನವೀನಕುಮಾರ ಗುಳಗಣ್ಣನವರ್, ಮುಖಂಡರಾದ ಬಸವಲಿಂಗಪ್ಪ ಭೂತೆ,ಅರವಿಂದಗೌಡ ಪಾಟೀಲ, ಡಾ.ಬಸವರಾಜ ಕ್ಯಾವಟರ್, ವೀರಣ್ಣ ಹುಬ್ಬಳ್ಳಿ ಮತ್ತಿತರರು ಭಾಗವಹಿಸುವರು.ಏ.24ರಂದು ಸಂಜೆ 7ಕ್ಕೆ 101ಜೋಡುತ್ತುಗಳಿಗೆ ಬಹುಮಾನ ವಿತರಣೆ ನಡೆಯಲಿದೆ ಎಂದು ಸಮಿತಿ ಪ್ರಧಾನ ಕಾರ್ಯದರ್ಶಿ ಶರಣಪ್ಪ ಕೊಡಗಲಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇಲ್ಛಾವಣಿ ಇಲ್ಲದ ಮನೆಯಲ್ಲೇ ಅಜ್ಜಿ ವಾಸ

ಸಿದ್ದಯ್ಯ ಹೆಸರೂರು.

ಮಸ್ಕಿ: ರಾಯಚೂರು ಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಎಷ್ಟೋ ಜನರು ತಮ್ಮ ತಮ್ಮ ಮಕ್ಕಳನ್ನು ವಯಸ್ಸಾದ ಅಜ್ಜಿಗಳೊಂದಿಗೆ ಬಿಟ್ಟು ಬೆಂಗಳೂರು ನಗರದಲ್ಲಿ ಹೊಟ್ಟೆಪಾಡಿಗಾಗಿ ಕೂಲಿಗೆ ಹೋಗಿರುತ್ತಾರೆ, ಕೆಲವು ಅಜ್ಜಿಯರಿಗೆ ತಮ್ಮ ಗಂಡ ಹಾಗೂ ಮಕ್ಕಳು ಸಹ ಇರದೇ ಒಬ್ಬಂಟಿಯಾಗಿ ಕಷ್ಟದ ಜೀವನ ಸಾಗಿಸುತ್ತಿದ್ದಾರೆ.



ಬದುಕಿನ 'ಸಂಧ್ಯಾಕಾಲದ'ಲ್ಲಿ ಆಸರೆ ಇಲ್ಲದೆ, ಹರಿದ ಸೂರು ಮತ್ತು ಹಸಿದ ಹೊಟ್ಟೆಯೊಂದಿಗೆ ಅವಳು ನಡೆಸುತ್ತಿರುವ ಈ ಏಕಾಂಗಿ ಹೋರಾಟ ಸಮಾಜದ ಕಟು ವಾಸ್ತವಕ್ಕೆ ಹಿಡಿದ ಕನ್ನಡಿಯಾಗಿದೆ.

ಬದುಕಿನ ಬಂಡಿ ಎಳೆಯಲು ಶಕ್ತಿಯಿಲ್ಲ , ಮಳೆಯಿಂದ ರಕ್ಷಿಸಿಕೊಳ್ಳಲು ಸರಿಯಾದ ಸೂರು ಇಲ್ಲ, ರಂಗಮ್ಮನ ಕಣ್ಣೀರಿನ ಕಥೆ ನತದೃಷ್ಟ ಬದುಕಿನ ದಾರುಣ ವ್ಯಥೆ.ಸಂಸಾರವೆಲ್ಲಾ ಮರೀಚಿಕೆಯಾಗಿ, ಗುಡಿಸಲೇ ಇಡೀ ಪ್ರಪಂಚವಾಗಿ ಹೋದ ಈ ಅಜ್ಜಿಯ ಬದುಕು, ಹಸಿದವನಿಗಷ್ಟೇ ಗೊತ್ತು ಅದರ ನೋವು ಮತ್ತು ಸತ್ಯ. ಇಂತಹ ಎಷ್ಟೋ ನಿದರ್ಶನಗಳಲ್ಲಿ

ತಾಲ್ಲೂಕಿನ ತುಗ್ಗಲದಿನ್ನಿ ಗ್ರಾಮದ ರಂಗಮ್ಮ ನಾಯಕ ಎಂಬ ಅಜ್ಜಿಯು ತನ್ನ ಗುಡಿಸಲಿಗೆ ಸೂರು ಸಹ ಇಲ್ಲದೆ ಅದರಲ್ಲೇ ಹಾಗೆಯೇ ಕಷ್ಟದ ಜೀವನ ನಡೆಸುತ್ತಿರುವ ದೃಶ್ಯ, ನೋಡಿದವರಿಗೆ ಕೆಲವೊಬ್ಬರ ಜೀವನ ಅದೆಷ್ಟು ಕಷ್ಟದ್ದಾಗಿರುತ್ತದೆ ಎಂಬುದನ್ನು ಮನ ಕಲಕುವಂತಿತ್ತು.

ರಂಗಮ್ಮ ನಾಯಕಳಿಗೆ ಈ ಮೊದಲು ಗುಡಿಸಲು ಇತ್ತು. ಆದರೆ ಗಾಳಿ ಮಳೆಯಿಂದ ಅದು ಕಿತ್ತು ಹೋಗಿದ್ದು, ಸರಿ ಸುಮಾರ ಹತ್ತು ವರ್ಷಗಳಿಂದ ಗಾಳಿ, ಮಳೆ, ಬಿಸಿಲಿನಲ್ಲಿ ಸುತ್ತ ಗೋಡೆ ಮೇಲೆ ಏನು ಇಲ್ಲದೆ ಅವರ ಇವರ ಮನೆಯಲ್ಲಿ ಕೂಲಿ ನಾಲಿ ಮಾಡಿ ಬದುಕು ಸಾಗಿಸುವ ರಂಗಮ್ಮಳಿಗೆ ಒಬ್ಬ ಮಗನಿದ್ದು, ಅಮ್ಮಾ ನಮ್ಮ ಜೊತೆ ಇರಲು ಬಾ ಎಂದು ಕರೆದರೆ, ನನ್ನ ಕೈಕಾಲು ಗಟ್ಟಿಯಾಗಿದೆ ನಾನು ಬಿದ್ದಮೇಲೆ ನಿಮ್ಮಕೂಡ ಬರುತ್ತೇನೆ ಎಂದು ಸ್ವಾಭಿಮಾನಿ ರಂಗಮ್ಮ ತನ್ನ ಸ್ವತಂತ್ರ ಬದುಕು ಸಾಗಿಸುತ್ತಿದ್ದಾಳೆ. ಮುಪ್ಪು ವಯಸ್ಸಿನ ರಂಗಮ್ಮಜ್ಜಿಗೆ ಈಗ ಬದುಕಿನ ಬಂಡಿಸಾಗಿಸಲು ಬಹಳ ಕಷ್ಟವಾಗಿದೆ, ಕೆಲಸ ಮಾಡಲು ಶಕ್ತಿ ಇಲ್ಲ. ಆಸರೆಗೆ ಮನೆ ಇಲ್ಲದೆ ಪರದಾಡುವ ಪರಿಸ್ಥಿತಿ ಇದ್ದು, ಮನೆ ಬೇಕು ಎಂದು ಹಲವಾರ ಬಾರಿ ಸಂಬಂಸಿದ ಅಕಾರಿಗಳಿಗೆ ಹಾಗೂ ಜನಪ್ರತಿನಿಗಳಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನ ಆಗಿಲ್ಲ, ಈಗಲಾದರೂ ಸಂಬಂಸಿದ ಜನಪ್ರತಿನಿಗಳು ಹಾಗೂ ಅಕಾರಿಗಳು ಈ ರಂಗಮ್ಮಳಿಗೆ ಸೂರು ಒದಗಿಸುವ ಮೂಲಕ ಮಾನವೀಯತೆಗೆ ಸಾಕ್ಷಿಯಾಗಬೇಕಾಗಿದೆ. ರಂಗಮ್ಮ ಅಜ್ಜಿ ತನ್ನ ಸ್ವಾಭಿಮಾನ ಬಿಟ್ಟು ಮಗನೊಂದಿಗೆ ಬದುಕು ಕಟ್ಟಿಕೊಳ್ಳುವಂತೆ ಊರಿನವರು ತಿಳಿಸಿದ್ದಾರೆ ಅವರ ಮಾತಿಗೆ ಸ್ಪಂದಿಸಬೇಕಾಗಿದೆ.

ಶೀಘ್ರ ಸೂರು

ಮಗನ ಹತ್ತಿರ ಇರುವಂತೆ ಮನವೊಲಿಸಿದರೂ ಕೂಡ ರಂಗಮ್ಮಜ್ಜಿ ಹೋಗದೆ ಇಲ್ಲಿಯೇ ಇದ್ದು, ಆಕೆಗೆ ಸೂರು ಒದಗಿಸಲು ಪ್ರಯತ್ನ ಮಾಡುತ್ತಿರುವುದಾಗಿ ಗ್ರಾ.ಪಂ. ಸದಸ್ಯ ಅಮರೇಶ ನಾಯಕರವರ ಮಾತು.

> ಜಂತಾಮನಿ ಆಗಿಲ್ರೀ ನಮ್ಗೆ, ಬರೇ ಗ್ವಾಡ್ಯಾಗೇ ಆದೀನಿ, ತಗಡಿಲ್ಲ ಏನಿಲ್ಲ ಏನು ಮಾಡ್ಬೇಕು. ಯಾರಿಲ್ರೀ ಏನು ಮಾಡ್ಬೇಕು.
>
> ■ ರಂಗಮ್ಮ ತುಗ್ಗಲದಿನ್ನಿ, ಸೂರು ಇಲ್ಲದ ಅಜ್ಜಿ

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಎ.21ರಂದು

ಬಳ್ಳಾರಿ: ಗ್ರಾಮೀಣ ಜೆಸ್ಕಾಂ ವ್ಯಾಪ್ತಿಯ 110/11 ಕೆ.ವಿ ಸೋಮಸಮುದ್ರ ಉಪ-ಕೇಂದ್ರದ ವಿದ್ಯುತ್ ವಿತರಣಾ ಕೇಂದ್ರದಲ್ಲಿ 4ನೇ ಮಾಸಿಕ ನಿರ್ವಹಣೆ ಮತ್ತು ದುರಸ್ತಿ ಕಾರ್ಯ ಕೈಗೊಂಡಿದ್ದು, ಏ.21ರಂದು ಬೆಳಗ್ಗೆ 8ರಿಂದ ಮಧ್ಯಾಹ 3ರವರೆಗೆ 110/11ಕೆ.ವಿ ಸೋಮಸಮುದ್ರ ವಿದ್ಯುತ್ ಉಪ-ಕೇಂದ್ರ ಮತ್ತು 33/11ಕೆ.ವಿ ಗುಡದೂರು ವಿದ್ಯುತ್ ಉಪಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ವಿವಿಧ 11ಕೆ.ವಿ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಎಫ್-1 ಎನ್.ಜೆ.ವೈ ಬಾಲಾಜಿ ನಗರ ಕ್ಯಾಂಪ್ ಮಾರ್ಗದ ಕರ್ಲಗುಂದಿ, ವಿಜಯನಗರ ಕ್ಯಾಂಪ್, ಜಾಲಿಬೆಂಜಿ, ಬಾಲಾಜಿ ನಗರ ಕ್ಯಾಂಪ್, ಜ್ಯಾಲಿಬೆಂಜಿ. ಎಫ್-11 ಐ.ಪಿ ಸೆಟ್ ಫೀಡರ್ ಸೋಮಸಮುದ್ರ ಮಾರ್ಗದ ಸೋಮಸಮುದ್ರ ವಕ್ರಾಣಿ ಕ್ಯಾಂಪ್, ಲಕ್ಷ್ಮೀನಗರ ಕ್ಯಾಂಪ್, ವೀರಾಂಜಿನೇಯ ಕ್ಯಾಂಪ್, ಕೋಳೂರು, ಮದಿರೆ, ಕೊಳಗಲ್ಲು, ಭಾಗ್ಯನಗರ ಕ್ಯಾಂಪ್, ಮಲ್ಲಾರೆಡ್ಡಿ ಕ್ಯಾಂಪ್, ಕೃಷಿ ಪ್ರದೇಶಗಳು. ಎಫ್-10 ಶ್ರೀಧರಗಡ್ಡೆ ಎನ್.ಜೆ.ವೈ ಫೀಡರ್ ಮಾರ್ಗದ ಸೋಮಸಮುದ್ರ, ವಕ್ರಾಣಿ ಕ್ಯಾಂಪ್, ಲಕ್ಷ್ಮೀನಗರ ಕ್ಯಾಂಪ್, ವೀರಾಂಜಿನೇಯ ಕ್ಯಾಂಪ್, ಕೋಳೂರು, ಮದಿರೆ, ಭಾಗ್ಯನಗರ ಕ್ಯಾಂಪ್, ಮಲ್ಲಾರೆಡ್ಡಿ ಕ್ಯಾಂಪ್, ಕೋಳೂರು ಕ್ರಾಸ್, ದಮ್ಮೂರು, ಡಿ.ಕಗ್ಗಲ್, ವಿ.ಟಿ.ಕ್ಯಾಂಪ್. ಎಫ್-4 ಐ.ಪಿ ಸೆಟ್ ಕರ್ಲಗುಂದಿ ಫೀಡರ್ ಮಾರ್ಗದ ಕರ್ಲಗುಂದಿ, ಬಾಲಾಜಿನಗರ ಕ್ಯಾಂಪ್, ಜ್ಯಾಲಿಬೆಂಜಿ, ಶ್ರೀಧರಗಡ್ಡ, ವಿಜಯನಗರ ಕ್ಯಾಂಪ್ ಕೃಷಿ ಪ್ರದೇಶಗಳು. ಎಫ್-5 ಡಾಕ್ಟರ್ ಕ್ಯಾಂಪ್ ಮಾರ್ಗದ ಶ್ರೀಧರಗಡ್ಡೆ, ಗುಡಾರ್ ನಗರ, ಎಸ್ಆರ್‌ಕೆ ಲೇಔಟ್ 1 ಮತ್ತು 2 ಪ್ಯೂಪಿಲ್ ಟ್ರೀ ಸ್ಕೂಲ್, ಬಸವೇಶ್ವರ ಲೇ?ಔಟ್, ಎನ್.ಆರ್ ರಾಮಮೂರ್ತಿ ಮತ್ತು ಡಾಕ್ಟರ್ ಕ್ಯಾಂಪ್. ಎಫ್-10 ಸಿಟಿ ಫೀಡರ್ ಮಾರ್ಗದ ವಕ್ರಾಣಿ ಕ್ಯಾಂಪ್. ಎಫ್-01 ಡಿ.ಕಗ್ಗಲ್ ಐಪಿ ಮಾರ್ಗದ ಡಿ.ಕಗ್ಗಲ್ ಕೃಷಿ ಪ್ರದೇಶಗಳು. ಎಫ್-02 ಗುಡುದೂರು ಐಪಿ ಮಾರ್ಗದ ಗುಡುದೂರು ಕೃಷಿ ಪ್ರದೇಶಗಳು. ಎಫ್-03 ಹಂದಿಹಾಳ್ ಐಪಿ ಮಾರ್ಗದ ಹಂದಿಹಾಳ್ ಚಾನಾಳ್ ಕೃಷಿ ಪ್ರದೇಶಗಳು. ಎಫ್-04 ಗುಡುದೂರು ಎನ್.ಜೆ.ವೈ ಮಾರ್ಗದ ಹಂದಿಹಾಳ್, ಚಾನಾಳ್, ಗುಡುದೂರು ಗ್ರಾಮಗಳು. ಎಫ್-05 ಚಾನಾಳ್ ಐಪಿ ಮಾರ್ಗದ ಚಾನಾಳ್ ಕೃಷಿ ಪ್ರದೇಶಗಳು. ಎಫ್-06 ತಾಳೂರು ಐಪಿ ಮಾರ್ಗದ ಹಡ್ಲಿಗಿ, ಹೀರೆ ಹಡ್ಲಿಗಿ, ಬರಸಕೋಡು, ತಾಳೂರು ಕೃಷಿ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಹಾಗಾಗಿ ಸಾರ್ವಜನಿಕರು, ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಸಿಡಿಲಿಗೆ ಎತ್ತು ಬಲಿ

ಕುಷ್ಟಗಿ: ಭಾನುವಾರ ರಭಸವಾಗಿ ಗುಡುಗು ಸಿಡಿಲು ಬಡಿತ ತಾಲೂಕಿನ ಮಿಯ್ಯಾಪೂರ ಗ್ರಾಮದಲ್ಲಿ ಎತ್ತುಗಳು ಸಾವನ್ನಪ್ಪಿದ ಘಟನೆ ನಡೆದಿದೆ. ಗ್ರಾಮದ ರೈತ ಶಿವಶಂಕರಪ್ಪ ನಿಂಗಪ್ಪ ಮದ್ದೂರು ಎಂಬುವವರಿಗೆ ಸೇರಿದ ಜೋಡೆತ್ತು ಹಾಗೂ ಎಮ್ಮೆ ಅಸುನೀಗಿದೆ. ಜಮೀನ ಮರಕ್ಕೆ ಕಟ್ಟಿದ್ದ ಎತ್ತುಗಳು ಪರಸ್ಪರವಾಗಿ ಸಿಡಿಲಿಗೆ ಬಡಿತದಿಂದ ಸಾವಿಗೀಡಾಗಿದ್ದೇವೆ. ಸುದ್ದಿ ತಿಳಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಕಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ಪೊಲೀಸರು ಭೇಟಿ ನೀಡಿದರು.

ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ವಿಜಯನಗರ: ಜಿಲ್ಲೆಯ ಹರಪನಹಳ್ಳಿ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಿ ಆದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಒಟ್ಟು 55743 ಜನಸಂಖ್ಯೆ ಇದ್ದು, 27 ವಾರ್ಡುಗಳಿರುತ್ತವೆ. ಅವುಗಳನ್ನು 31 ವಾರ್ಡ್‌ಗಳಾಗಿ ಪುನರ್ ವಿಂಗಡಣೆ ಮಾಡಿರುವ ಚಕ್ಕುಬಂದಿ ಹಾಗೂ ಜನಸಂಖ್ಯೆ ವಿವರಗಳೊಂದಿಗೆ ಪೌರಾಯುಕ್ತರಿಂದ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಬಗ್ಗೆ ಯಾವುದೇ ಹಕ್ಕು ಆಕ್ಷೇಪಣೆ ಇದ್ದಲ್ಲಿ ಏಪ್ರಿಲ್ 27 ರೊಳಗೆ ನಗರಸಭೆ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ ಕಚೇರಿಗೆ ಸಲ್ಲಿಸಬಹುದು. ಅವಧಿ ಮುಗಿದ ನಂತರ ಬಂದಂತಹ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಯೋಜನಾ ಕಚೇರಿ ಸ್ಥಳಾಂತರ

ವಿಜಯನಗರ: ಜಿಲ್ಲೆಯ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಯನ್ನು ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಯಿಂದ ಆನೇಕ್ಸ್ ಕಟ್ಟಡ ನೆಲಮಹಡಿ ರೂಂ. ನಂ. 01 ಎಸ್.ಪಿ ಆಫೀಸ್ ಹಿಂಭಾಗ ಸ್ಥಳಾಂತರಿಸಲಾಗಿದೆ. ಸಾರ್ವಜನಿಕರು ಇಲಾಖೆಗೆ ಸಂಬಂಧಪಟ್ಟ ದೈನಂದಿನ ಕೆಲಸಗಳಿಗೆ ಇಲ್ಲಿಗೆ ಭೇಟಿ ನೀಡಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ದೂ.99869 41553 ಗೆ ಸಂಪರ್ಕಿಸಬಹುದು ಎಂದು ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಿಂಧನೂರು: ನಗರದ ಕೇಂದ್ರ ಬಸ್ ನಿಲ್ದಾಣದ ಮುಂದಿನ ಕೆಎಸ್ ಆರ್‌ಟಿಸಿ ಮಳಿಗೆ ಮುಂದಿರುವ ಡಬ್ಬಿ, ತಳ್ಳುವ ಬಂಡೆಗಳನ್ನು ಡಿಪೋ ಮ್ಯಾನೇಜರ್ ಹೊನ್ನಪ್ಪ ತೆರವುಗೊಳಿಸಿದರು.

ಅಕ್ಷಯ ತೃತೀಯ: ಬಂಗಾರ ಖರೀದಿಗೆ ಮನವಿ

ವಿಜಯನಗರ: ಅಕ್ಷಯ ತೃತೀಯದ ಶುಭ ಸಂದರ್ಭದಲ್ಲಿ ಹಿಂದೂ ಬಾಂಧವರು ಹಿಂದೂ ಮಾಲೀಕತ್ವದ ಆಭರಣ ಮಳಿಗೆಯಲ್ಲೇ ಬಂಗಾರವನ್ನು ಖರೀದಿಸಬೇಕೆಂದು ಶ್ರೀರಾಮ ಸೇನೆಯ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ್ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಹೊಸಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಅಕ್ಷಯ ತೃತೀಯ ಹಿಂದೂಗಳ ಪವಿತ್ರ ಹಬ್ಬವಾಗಿದೆ. ಮೂರ್ತಿ ಪೂಜೆ ವಿರೋಧಿಸುವವರು, ಗೋಮಾಂಸಸೇವಿಸುವವರು, ಉಗ್ರ ವಾದ ಬೆಂಬಲಿಸುವ ಸಮುದಾಯದ ಅಂಗಡಿಗಳಲ್ಲಿ ವ್ಯವಹಾರ ಮಾಡಬಾರದು. ಈ ಸಂದರ್ಭದಲ್ಲಿ ಲವ್ ಜಿಹಾದ್ ಪ್ರಕರಣಗಳ ಬಗ್ಗೆ ಮಾತನಾಡಿದ ಅವರು, ಇದೊಂದು 'ವೈರಸ್' ಎಲ್ಲೆಡೆ ವ್ಯಾಪಕವಾಗಿ ಹರಡುತ್ತಿದೆ. ಶಾಲಾ-ಕಾಲೇಜು, ಐಟಿ -ಬಿಟಿ ಕ್ಷೇತ್ರಗಳಲ್ಲಿ ಹಿಂದೂ ಯುವತಿಯರನ್ನೇ ಗುರಿಯಾಗಿಸಲಾಗುತ್ತಿದೆ ಈ ಬಗ್ಗೆ ಪಾಲಕರು ಜಾಗೃತಿ ವಹಿಸ ಬೇಕು ಎಂದು ಎಚ್ಚರಿಸಿದರು. ಕೊಪ್ಪಳ ಜಿಲ್ಲೆಯ ಅಳವಂಡಿಯಲ್ಲಿ ಅಶ್ಲೀಲ ವಿಡಿಯೋ ಹೊಂದಿದ್ದ ಆರೋಪಿ ಮುಸ್ತಾಕ್ ಎಂಬಾತನನ್ನು ಪೊಲೀಸರು ಇದುವರೆಗೂ ಬಂಧಿಸಿಲ್ಲ, ದೇಶದಲ್ಲಿ ಹೆಚ್ಚುತ್ತಿರುವ ಲವ್ ಜಿಹಾದ್ ಪ್ರಕರಣಗಳನ್ನು ತಡೆಗಟ್ಟಲು ಕೇಂದ್ರ ಸರ್ಕಾರವು ಸಮಗ್ರ ತನಿಖೆಯನ್ನು ಎನ್‌ಐಎಗೆ ವಹಿಸಬೇಕು ಎಂದು ಒತ್ತಾಯಿಸಿದರು. ಹಿಂದೂ ಹೆಣ್ಣು ಮಕ್ಕಳು ಸಂಕಷ್ಟದಲ್ಲಿದ್ದರೆ ಅಥವಾ ಲವ್ ಜಿಹಾದ್ ಪ್ರಕರಣಗಳು ಕಂಡುಬಂದಲ್ಲಿ ಶ್ರೀರಾಮ ಸೇನೆಯಿಂದ 90904 43444 ಸಂಖ್ಯೆಗೆ ಕರೆ ಮಾಡಬಹುದು. ಎಲ್ಲಾ ಹಿಂದೂ ಸಂಘಟನೆಗಳು ಒಗ್ಗೂಡಿ ರಕ್ಷಣೆ ಮಾಡುವ ಕೆಲಸ ಮಾಡುತ್ತೇವೆ. ಲವ್ ಜಿಹಾದ್ ತಡೆಗೆ ಶ್ರೀರಾಮ ಸೇನೆಯಿಂದ ಆರಂಭಿಸಲಾದ ಸಹಾಯವಾಣಿಗೆ ಕಳೆದ ಎರಡು ವರ್ಷಗಳಲ್ಲಿ ಸುಮಾರು 8,000 ಕರೆಗಳು ಬಂದಿವೆ ಎಂದು ಮುತಾಲಿಕ್ ಮಾಹಿತಿ ನೀಡಿದರು.



ಬಳ್ಳಾರಿ: ಲಕ್ಷಾಂತರ ರೈತರ ಜೀವನಾಡಿ ತುಂಗಭದ್ರಾ, ಜಲಾಶಯದಲ್ಲಿ ಸುಮಾರು 33 ಟಿಎಂಸಿ ಹೂಳು ಸಂಗ್ರಹವಾಗಿದ್ದು, ಕೂಡಲೇ ತೆರವುಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ಇಲ್ಲಿನ ತುಂಗಭದ್ರಾ, ರೈತ ಸಂಘದ ಪದಾಧಿಕಾರಿಗಳು ತುಂಗಭದ್ರಾ, ಜಲಾಶಯದ ಮಂಡಳಿ ಅಧಿಕಾರಿ, ಎಂಜಿನೀಯರ್ ಅವರಿಗೆ ಮನವಿ ಸಲ್ಲಿಸಿದರು.

ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಆರೋಪ

ಎಸ್ಸಿ, ಎಸ್ಟಿ ಮೀಸಲಾತಿಯಲ್ಲಿ ವಿಫಲ

ಬಳ್ಳಾರಿ: ರಾಜ್ಯ ಹಾಗೂ ಕೇಂದ್ರ ಸರ್ಕಾರ ಎಸ್ಟಿ ಹಾಗೂ ಎಸ್ಸಿ ಮೀಸಲಾತಿ ಹೆಚ್ಚಳ ಮಾಡುವಲ್ಲಿ ಸಂಪೂರ್ಣ ವಿಫಲವಾಗಿವೆ. ಈ ವಿಚಾರವನ್ನೇ ಮುಂದಿಟ್ಟುಕೊಂಡು ಸಮುದಾಯಗಳ ಹೆಸರನ್ನು ಹೇಳಿಕೊಂಡು ಮತ ಪಡೆದು ಗೆಲುವು ಸಾಧಿಸಿದ ಶಾಸಕರು, ಸಂಸದರು, ಸಚಿವರು ಸಮುದಾಯಕ್ಕೆ ಮೀಸಲಾತಿ ಸೌಲಭ್ಯವನ್ನು ಕಲ್ಪಿಸುವಲ್ಲಿ ಅನ್ಯಾಯ ಮಾಡಿದ್ದಾರೆ, ಹೀಗೆ ಮಾಡಿದರೆ ಜನ ಸುಮ್ಮನಿರೋಲ್ಲ ಎಂದು ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಎಚ್ಚರಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಎಸ್ಟಿ ಸಮುದಾಯದವರು ಸುಮಾರು 50 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇದೆ. 1.25 ಕೋಟಿ, ಎಸ್ಸಿ, 2.15 ಕೋಟಿ, ಒಬಿಸಿ ಸಮುದಾಯವರಿದ್ದಾರೆ. ಜನಸಂಖ್ಯೆ ಆಧಾರದ ಮೇಲೆ ಕೇಂದ್ರದಲ್ಲಿ ಶಿಕ್ಷಣ, ಉದ್ಯೋಗ ಕ್ಷೇತ್ರಕ್ಕೆ ಮೀಸಲಾತಿ ದೊರೆತಿದೆ. ಜನಸಂಖ್ಯೆ ಅನುಗುಣವಾಗಿ ಕಳೆದ 2013ರಿಂದ ರಾಜ್ಯದಲ್ಲಿ ಎಸ್ ಸಿಪಿ, ಟಿಎಸ್ಪಿ ಅಡಿ ಅನುದಾನ ನೀಡಲು ಕಾನೂನು ಮಾಡಿದೆ ಎಂದರು.

ನ್ಯಾಯಮೂರ್ತಿ ನಾಗಮೋಹನ ದಾಸ್ ಅವರು, ಆದಿ ಸಮಿತಿ ವರದಿ ಆಧಾರದ ಮೇಲೆ ಜನಸಂಖ್ಯೆ ತಕ್ಕಂತೆ ಮೀಸಲಾತಿ ಕಲ್ಪಿಸಬಹುದು. ತಮಿಳುನಾಡಿನಲ್ಲಿ ಶೇ.69 ರಷ್ಟು ಮೀಸಲಾತಿ ನೀಡಿದೆ. ಅದೇ ರೀತಿ ರಾಜ್ಯದಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರು, ಅವಧಿಯಲ್ಲಿ ಎಸ್ಸಿಗೆ ಶೇ.17, ಎಸ್ಟಿಗೆ 7 ಹಾಗೂ ಒಬಿಸಿ ಅವರಿಗೆ 32 ರಷ್ಟು ಮೀಸಲು ಘೋಷಣೆ ಮಾಡಿದೆ. ಆದರೆ,



> **ರಾಜ್ಯದಲ್ಲಿ ಎಸ್ಟಿ ಸಮುದಾಯದವರು ಸುಮಾರು 50 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇದೆ. 1.25 ಕೋಟಿ, ಎಸ್ಸಿ, 2.15 ಕೋಟಿ, ಒಬಿಸಿ ಸಮುದಾಯವರಿದ್ದಾರೆ. ಜನಸಂಖ್ಯೆ ಆಧಾರದ ಮೇಲೆ ಕೇಂದ್ರದಲ್ಲಿ ಶಿಕ್ಷಣ, ಉದ್ಯೋಗ ಕ್ಷೇತ್ರಕ್ಕೆ ಮೀಸಲಾತಿ ದೊರೆತಿದೆ. ಜನಸಂಖ್ಯೆ ಅನುಗುಣವಾಗಿ ಕಳೆದ 2013ರಿಂದ ರಾಜ್ಯದಲ್ಲಿ ಎಸ್ ಸಿಪಿ, ಟಿಎಸ್ಪಿ ಅಡಿ ಅನುದಾನ ನೀಡಲು ಕಾನೂನು ಮಾಡಿದೆ.**
>
> ■ ವಿ.ಎಸ್.ಉಗ್ರಪ್ಪ, ಮಾಜಿ ಸಂಸದ

ಇದನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಿ, ಶೆಡ್ಯೂಲ್ 9ಗೆ ಸೇರಿಸಲು ಆಗಲಿಲ್ಲ. ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೋಲಿಗಳನ್ನು, ಕುರುಬರನ್ನು ಎಸ್ಟಿ ಮಾಡಲಾಗುವುದು ಎಂದು ಹೇಳುತ್ತಾರೆ. ಯಾರು ಅರ್ಹರು ಅವರನ್ನದರನ್ನು ಮಾಡಿ. ಆದರೆ, ಕುಲಶಾಸ್ತ್ರ ಅಧ್ಯಯನ ಆಗಬೇಕು. ಈ ಕುರಿತು ಪತ್ರ ಬರೆದರೆ, ಮೋದಿ ಅವರು, ಪರಿಶಿಷ್ಟ ವರ್ಗಕ್ಕೆ, ಒಬಿಸಿ ಇಲಾಖೆಗೆ ಬರಲಿದೆ ಅಲ್ಲಿಗೆ ಪತ್ರ ಬರೆಯಿರಿ ಎಂದು ತಿಳಿಸಿದ್ದಾರೆ. ರಾಜ್ಯದಲ್ಲಿನ ಶೇ.56 ರಷ್ಟು ಮೀಸಲಾತಿ ಜಾರಿಗೆ ತರಲು ನ್ಯಾಯಾಲಯ ತಡೆ ನೀಡಿದೆ. ಅದನ್ನು ತೆಗೆಸಲು ಸರ್ಕಾರ ಮುಂದಾಗಿಲ್ಲ, ಶೆಡ್ಯೂಲ್ 9ಗೆ ಸೇರಿಸಲು ಕೇಂದ್ರದ ಮೇಲೆ ಒತ್ತಡ ತಂದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಿರ್ಲಕ್ಷ್ಯ ಮುಂದುವರೆದರೆ, ಸಮುದಾಯದವರಿಂದ ಬೃಹತ್ ಹೋರಾಟ ನಡೆಸುವೆ ಎಂದು ಎಚ್ಚರಿಸಿದರು.

ನರಸಿಂಹಯ್ಯ, ರಾಜಣ್ಣ, ವೆಂಕಟೇಶ್ ನಾಯಕ, ಅವಂಬಾವಿ ಲೋಕೇಶ್, ಜೋಳದರಾಶಿ ತಿಮ್ಮಪ್ಪ, ವೆಂಕಟೇಶ್ ಹೆಗಡೆ, ಹನುಮಂತರಾಯಪ್ಪ, ಶ್ರೀರಾಮುಲು ಇತರರಿದ್ದರು.

ಮಹಿಳೆ ಪುರುಷನಷ್ಟೇ ಸಬಲಳು: ಕವಿತಾ

ಕೊಟ್ಟೂರು: ಎಲ್ಲ ಕ್ಷೇತ್ರಗಳಲ್ಲಿ ಇಂದು ಮಹಿಳೆ ಸಾಧನೆ ಗೈವ ಮೂಲಕ ಎಲ್ಲಾ ಕ್ಷೇತ್ರಗಳಲ್ಲಿ ಸಶಕ್ತವೆನಿಸಿಕೊಂಡಿದ್ದಾಳೆ ಎಂದು ವಿಜಯನಗರ ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಹೇಳಿದರು.

ಕೊಟ್ಟೂರಿನ ಚಾನುಕೋಟಿ ಮಠದಲ್ಲಿ ಬಸವ ಜಯಂತಿ ನಿಮಿತ್ತ ಹಮ್ಮಿಕೊಂಡಿದ ಮಹಿಳಾ ಸಬಲೀಕರಣ ಸಮಾವೇಶ ಹಾಗೂ ಕರಕುಶಲ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿ, ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ಮಾತಿನಂತೆ ಹೆಣ್ಣು ಮಕ್ಕಳ ಶಿಕ್ಷಣ ಅರ್ಧಕ್ಕೆ ಮಟಕುಗೊಳಿಸದೆ ಶಿಕ್ಷಣ ನೀಡಲು ಮನೆಯಲ್ಲಿ ಪ್ರೋತ್ಸಾಹಿಸಬೇಕು. ಉನ್ನತ ಶಿಕ್ಷಣ ಪಡೆದ ಮಹಿಳೆಯರು ಉನ್ನತ ಸ್ಥಾನಕ್ಕೆ ಏರಿ ಸಾಧನೆ ಮಾಡಿರುವುದು ಇತಿಹಾಸ ಇವೆ. ನಿಮ್ಮ ಮನೆಯ ಹೆಣ್ಣು ಮಕ್ಕಳು ಸಹ ಇಂತಹ ಸಾಧನೆ ಮಾಡಲು ನೀವು ಪ್ರೋತ್ಸಾಹ ನೀಡಬೇಕು ಎಂದರು.

ಮಹಿಳೆ ಒಂದು ದಿನ ಮನೆ ನಡೆಸುವುದನ್ನು ಬಿಟ್ಟರೆ ಮನೆ ನಡೆಯುವುದು ತುಂಬಾ ಕಷ್ಟ. ಇದನ್ನು ಅರ್ಥ ಮಾಡಿಕೊಂಡು ಪುರುಷರು ಮಹಿಳೆಯರಿಗೆ ಸಹಕಾರ ನೀಡಬೇಕು. ವಯಸ್ಸಾದ ತಂದೆ ತಾಯಿಗಳನ್ನು ಕೊನೆಗಾಲದಲ್ಲಿ ನೋಡಿಕೊಳ್ಳುವರು ಹೆಣ್ಣು ಮಕ್ಕಳೇ ಆಗಿರುತ್ತಾರೆ. ಹೆಣ್ಣು ಪುರುಷನಷ್ಟೇ ಸಬಲಳಾಗಿದೆ. ಕೊಟ್ಟೂರಿನ ಚಾನುಕೋಟಿ ಮಠವು ಉಚಿತ ಶಿಕ್ಷಣ ಹಾಗೂ ಸಾಮಾಜಿಕ ಕಾರ್ಯ ಮಾಡುತ್ತಿದ್ದು ಸಂಸ್ಥೆ ಇನ್ನೂ ಉನ್ನತ ಮಟ್ಟಕ್ಕೆ ಬೆಳೆಯಲಿ ಎಂದರು.

ಡೋಣೂರು ಚಾನುಕೋಟಿ ಮಠದ ಪೀಠಾಧ್ಯಕ್ಷ ಡಾ.ಸಿದ್ದಲಿಂಗ ಶಿವಾಚಾರ್ಯ ಶ್ರೀಗಳು ಮಾತನಾಡಿ, ಮಹಿಳೆಯರು ಸಶಕ್ತರಾದರೆ ಕುಟುಂಬವನ್ನು ಜವಾಬ್ದಾರಿಯಿಂದ ನಿಭಾಯಿಸಬಹುದು. ಇಂದು ಎಲ್ಲಾ ರಂಗಗಳಲ್ಲೂ ಸಾಧನೆ ಮಾಡಿದ್ದಾಳೆ. ಇಂದಿನ ಕಾರ್ಯಕ್ರಮ ಮಹಿಳೆಯರನ್ನು ಗೌರವಿಸುವಂತದ್ದಾಗಿದೆ ಎಂದರು.

ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಐ.ಎಂ.ದಾರುಕೇಶ ಮಾತನಾಡಿದರು. ಕೊಟ್ಟೂರು ತಹಶೀಲ್ದಾರ್ ಅಮರೇಶ್ ಜಿ. ಕೆ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ, ವೀಣಾ ವಿವೇಕಾನಂದಗೌಡ, ಅಡಿಕೆ ಮಂಜುನಾಥ್ ಇತರರಿದ್ದರು.

ಜೀವನ ದರ್ಶಿನಿ ಮಹಿಳಾ ಸಂಘದ ಸದಸ್ಯರು ಪ್ರಾರ್ಥಿಸಿದರು. ಶಿಕ್ಷಕ ನಾಗರಾಜ್ ಮತ್ತಿಹಳ್ಳಿ ಸ್ವಾಗತಿಸಿದರು. ಮಲ್ಲಿಕಾರ್ಜುನ್ ಮಠದ ನಿರೂಪಿಸಿದರು.



ಮನೆಗೊಂದು ಗ್ರಂಥಾಲಯ ಅನುಷ್ಠಾನಕ್ಕೆ ಚಾಲನೆ

ಕೊಪ್ಪಳ: ಪುಸ್ತಕ ನಮ್ಮೆಲ್ಲರ ಆಸ್ತಿಯಾಗಿದ್ದು, ಓದುವ ಅಭಿಯಾನವನ್ನು ವಿಸ್ತರಿಸುವ ನಿಟ್ಟಿನಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಮಹತ್ವದ ಯೋಜನೆ ಮನೆಗೊಂದು ಗ್ರಂಥಾಲಯ ಅನುಷ್ಠಾನ ಕಾರ್ಯಕ್ರಮಕ್ಕೆ ಜಿಲ್ಲೆಯಲ್ಲಿ ಚಾಲನೆ ಸಿಕ್ಕಿತು.

ಕರ್ನಾಟಕ ಸರ್ಕಾರದ ರಾಜ್ಯ ಕನ್ನಡ ಪುಸ್ತಕ ಪ್ರಾಧಿಕಾರ ಹಾಗೂ ಜಿಲ್ಲಾ ಜಾಗೃತಿ ಸಮಿತಿ ಇವರ ಆಶ್ರಯದಲ್ಲಿ ಕುಷ್ಟಗಿ ನಗರದ ಹಿರಿಯ ಚಿಂತಕರು ಹಾಗೂ ಮಾಜಿ ಶಾಸಕ ಕೆ.ಶರಣಪ್ಪ ವಕೀಲರ ಮನೆಯಲ್ಲಿನ ಪುಟ್ಟ ಗ್ರಂಥ ಭಂಡಾರದ ಸಮ್ಮುಖದಲ್ಲಿ ಲಕ್ಷ ಗ್ರಂಥಾಲಯಗಳ ಯೋಜನೆ ಮನೆಗೊಂದು ಗ್ರಂಥಾಲಯದ ರೂಪು ರೇಷದ ಕರಪತ್ರವನ್ನು ವಿತರಿಸುವ ಮೂಲಕ ಪ್ರಾಧಿಕಾರದ ರಾಜ್ಯಾಧ್ಯಕ್ಷರಾದ ಡಾ.ಮಾನಸ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾನಸ ಅವರು ಮಾತನಾಡಿ, ಓದಬೇಕು, ಬರೆಯಬೇಕು ಎನ್ನುವ ಆಶಯದ ಅರ್ಥಪೂರ್ಣ ಮನಸುಗಳ ಮನೆಯಲ್ಲಿ ಕಾರ್ಯಕ್ರಮಕ್ಕೆ ಚಾಲನೆ ಸಿಗುತ್ತಿರುವುದು ಸಂತಷದ ಸಂಗತಿ ಎಂದರು.


ನೀನು ಜೀವನದಲ್ಲಿ ಎರಡು ರೂ. ಗಳಿಸುತ್ತಿದ್ದರೆ ಅದರಲ್ಲಿ ಒಂದು ರೂಪಾಯಿ ಆಹಾರಕ್ಕೆ ಬಳಸು. ಮತ್ತೊಂದು ರೂಪಾಯಿಯನ್ನು ಪುಸ್ತಕಕ್ಕೆ ಬಳಸು ಎಂಬುದು ಜ್ಞಾನದ ಶಿಖರ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೇಳಿಕೆಯಾಗಿದೆ. ಅವರ ಈ ಹೇಳಿಕೆಯೇ ಮನೆಯಲ್ಲಿ ಪುಟ್ಟದೊಂದು ಗ್ರಂಥಾಲಯ ಇರಬೇಕು ಎಂಬ ಯೋಜನೆ ರೂಪುಗೊಳ್ಳಲು ಪ್ರೇರಣೆಯಾಯಿತು ಎಂದರು.

ನಾವೆಲ್ಲರೂ ಈಗಾಗಲೇ ಆಹಾರಕ್ಕಾಗಿ ಒಂದು ರೂಪಾಯಿ ಬಳಸಿದ್ದೇವೆ. ಆದರೆ, ಪುಸ್ತಕಕ್ಕಾಗಿ ಮೀಸಲಿಡಬೇಕಾದ ಮತ್ತೊಂದು ರೂಪಾಯಿಯನ್ನು ಇನ್ನಾವುದಕ್ಕೋ ಬಳಸಿದ್ದು ಅದನ್ನು ಹುಡುಕಲೆಂದೇ ನಾವು ಲಕ್ಷ ಗ್ರಂಥಾಲಯಗಳ ಯೋಜನೆ ರೂಪಿಸಿ ಅನುಷ್ಠಾನ ಮಾಡುತ್ತಿದ್ದೇವೆ. ರಾಜ್ಯದಲ್ಲಿ ಲಕ್ಷ ಮನೆಗಳಲ್ಲಿ ಗ್ರಂಥಾಲಯದ ಬೀಜ ಬಿತ್ತುತ್ತೇವೆ ಎಂದರು.

ಹಿರಿಯರಾದ ಕೆ.ಶರಣಪ್ಪ ವಕೀಲರು ಮಾತನಾಡಿದರು.

ಬುದ್ಧ ಬಸವ ಅಂಬೇಡ್ಕರ ಅವರ ತತ್ವಗಳನ್ನು ನಾವು ಅರಿಯಬೇಕು. ಅಂದಾಗ ಸಮಸಮಾಜ ನಿರ್ಮಾಣ ಸಾಧ್ಯವಾಗಲಿದೆ ಎಂದರು.

ಸಮಾರಂಭದಲ್ಲಿ ರಾಜ್ಯೋತ್ಸವ ಪುರಸ್ಕೃತ ಶೇಖರಗೌಡ ಮಾಲಿಪಾಟೀಲ, ಪುಸ್ತಕ ಪ್ರಾಧಿಕಾರದ ಸದಸ್ಯರು ಹಾಗೂ ಸಂಶೋಧಕ ಡಾ.ಶರಣಬಸಪ್ಪ ಕೋಲಕಾರ, ರಾಜ್ಯ ಚಲನಚಿತ್ರ ಅಕಾಡೆಮಿಯ ಸದಸ್ಯರು ಮತ್ತು ಲೇಖಕಿ ಸಾವಿತ್ರಿ ಮುಜುಮದಾರ, ಜಿಲ್ಲಾ ವಾರ್ತಾಧಿಕಾರಿ ಗವಿಸಿದ್ದಪ್ಪ ಹೊಸಮನಿ ಇದ್ದರು.



ಸರಕು ಸಾಗಾಣಿಕೆ, ಪರಿಷ್ಕೃತ ದರ ಒಪ್ಪಂದಕ್ಕೆ ಸಹಿ

ಬಳ್ಳಾರಿ: ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ನೇತೃತ್ವದಲ್ಲಿ ಬಳ್ಳಾರಿ ನಗರದ ಎಪಿಎಂಸಿ ಎತ್ತಿನ ಬಂಡಿಗಳಲ್ಲಿ ಸರಕು ಸಾಗಾಣಿಕೆ ಮಾಡುವ ಕುರಿತು ಬಂಡಿ ಚಾಲಕರ ಸಂಘ, ಅಕ್ಕಿ ವರ್ತಕರ ಸಂಘ ಮತ್ತು ಬಳ್ಳಾರಿ ಕಿರಾಣಿ ಅಸೋಸಿಯೇಷನ್ ಮಧ್ಯೆ ದರ ಪರಿಷ್ಕರಣೆ ಮಾಡಿ, ಒಪ್ಪಂದ ಮಾಡಿಕೊಳ್ಳಲಾಗಿದೆ.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಬಂಡಿ ಚಾಲಕರ ಸಂಘದ ಪ್ರತಿನಿಧಿಗಳಾಗಿ ಬಿ.ರಾಜೇಶ್ ಮತ್ತು ನೂರ್, ಅಕ್ಕಿ ವರ್ತಕರ ಸಂಘದ ಅಧ್ಯಕ್ಷ ಜಿ. ಹನುಮೇಶ್, ಕಾರ್ಯದರ್ಶಿ ಆರ್. ರಮೇಶ್ ಮತ್ತು ಬಳ್ಳಾರಿ ಕಿರಾಣಿ ಅಸೋಸಿಯೇಷನ್‌ನ ಪ್ರತಿನಿಧಿಯಾಗಿ ಬೆಲ್ಲಂಕೊಂಡ ವೀರಾಂಜಿನೇಯಲು ಅವರು ನೂತನ ಧರಪಟ್ಟಿ ಕರಾರು ಒಪ್ಪಂದಕ್ಕೆ ಸಹಿ ಮಾಡಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಅವ್ವಾರು ಮಂಜುನಾಥ್ ಹಾಗೂ ಗೌರವ ಕಾರ್ಯದರ್ಶಿಗಳಾದ ಕೆ.ಸಿ. ಸುರೇಶಬಾಬು ಅವರು, ಬಂಡಿ ಚಾಲಕರ ಸಂಘದ ಪದಾಧಿಕಾರಿಗಳು, ಸರಕು ಸಾಗಾಣಿಕೆಯ ವೆಚ್ಚ ಹೆಚ್ಚಳಕ್ಕೆ ನಮ್ಮ ಸಂಸ್ಥೆಯನ್ನು ಕೋರಿದಾಗ, ಸಂಬಂಧಿಸಿದವರ ಜಂಟಿ ಸಭೆ ನಡೆಸಿದರು. ನೂತನ ಧರಪಟ್ಟಿ ಸಿದ್ದಪಡಿಸಿ, ಒಪ್ಪಂದವನ್ನು ಮಾಡಲಾಯಿತು ಎಂದರು.



ಈ ಸಂದರ್ಭದಲ್ಲಿ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಎಸ್. ದೊಡ್ಡನಗೌಡ, ಖಜಾಂಚಿಗಳಾದ ಸಿ.ಎಸ್. ಸತ್ಯನಾರಾಯಣ, ಪತ್ರಿಕಾ ಮತ್ತು ಮಾಧ್ಯಮ ಚೇರ್ಮನ್ ಟಿ. ಶ್ರೀನಿವಾಸರಾವ್, ಈವೆಂಟ್ಸ್ ಕಮಿಟಿ ಚೇರ್ಮನ್ ನೇಕಾರ ನಾಗರಾಜ್, ಮ್ಯಾಗಜಿನ್ ಕಮಿಟಿ ಚೇರ್ಮನ್ ಕೌಡಿಕಿ ಹನುಮೇಶಬಾಬು, ವಿಶೇಷ ಆಹ್ವಾನಿತರಾದ ಕೆ.ಎಂ. ಭೋಗೇಶ್ ಸೇರಿ ಸಂಬಂಧಿಸಿದ ಸಂಘಟನೆಗಳ ಸದಸ್ಯರು ಉಪಸ್ಥಿತರಿದ್ದರು.

ತುಂಗಭದ್ರಾ ಜಲಾಶಯ ರೈತನ ಜೀವನಾಡಿ: ಪುರುಷೋತ್ತಮ

ಬಳ್ಳಾರಿ: ಲಕ್ಷಾಂತರ ರೈತರ ಜೀವನಾಡಿ ತುಂಗಭದ್ರಾ, ಜಲಾಶಯದಲ್ಲಿ ಸುಮಾರು 33 ಟಿಎಂಸಿ ಹೂಳು ಸಂಗ್ರಹವಾಗಿದ್ದು, ಕೂಡಲೇ ತೆರವುಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿ ಇಲ್ಲಿನ ತುಂಗಭದ್ರಾ, ರೈತ ಸಂಘದ ಪದಾಧಿಕಾರಿಗಳು ತುಂಗಭದ್ರಾ, ಜಲಾಶಯದ ಮಂಡಳಿ ಅಧಿಕಾರಿ, ಎಂಜಿನೀಯರ್ ಅವರಿಗೆ ಮನವಿ ಸಲ್ಲಿಸಿದರು.

ರೈತ ಸಂಘದ ಅಧ್ಯಕ್ಷ ಡಾ.ಜಿ.ಪುರುಷೋತ್ತಮ ಗೌಡ ಅವರು ಮಾತನಾಡಿ, ವರ್ಷದಿಂದ ವರ್ಷಕ್ಕೆ ತುಂಗಭದ್ರಾ, ಜಲಾಶಯದಲ್ಲಿ ಹೂಳು ಸಾಕಷ್ಟು ಪ್ರಮಾಣದಲ್ಲಿ ಸಂಗ್ರವಾಗುತ್ತಿದ್ದು, ಇದರಿಂದ ರೈತರಿಗೆ, ಜನರಿಗೆ ನಾನಾ ರೀತಿಯಲ್ಲಿ ಸಾಕಷ್ಟು ತೊಂದರೆಯಾಗುತ್ತಿದೆ. ಈ ಕುರಿತು ಸರ್ಕಾರಕ್ಕೆ, ಅಧಿಕಾರಿಗಳಿಗೆ, ಎಂಜಿನಿಯರ್‌ಗಳ ಗಮನಕ್ಕಿದ್ದರೂ ಕ್ರಮಕ್ಕೆ ಮುಂದಾಗದಿರುವುದು ಅತ್ಯಂತ ದುಃಖದ ವಿಚಾರ. ಹೂಳು ತೆರವುಗೊಳಿಸುವುದು ಅಸಾಧ್ಯ ಎಂದು ಅಧಿಕಾರಿಗಳೇ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಎಂದರು.

ಜನಪ್ರತಿನಿಧಿಗಳಿಗೆ ಈ ಕುರಿತು ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳು ಗೊಂದಲ ಹಿಡಿಸಿ, ತಪ್ಪು ಮಾಹಿತಿ ನೀಡುತ್ತಿದ್ದಾರೆ. ಸರ್ಕಾರ ಮನಸ್ಸು ಮಾಡಿದರೆ ಯಾವುದು ಅಸಾಧ್ಯವಲ್ಲ. ಜಲಾಶಯದಲ್ಲಿ ನೀರು ಹೆಚ್ಚಿನ ಪ್ರಮಾಣದಲ್ಲಿ ನಿಲ್ಲುತ್ತಿಲ್ಲ, ಇದರಿಂದ ಕೊನೆ ಭಾಗದ ನಮ್ಮ ರೈತರ ಜಮೀನುಗಳಿಗೆ ನೀರು ತಲುಪುತ್ತಿಲ್ಲ. ಹೂಳು ತೆರವುಗೊಳಿಸಿದರೆ ನೀರು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾಗಿ ರೈತರ ಜಮೀನುಗಳಿಗೆ ಸಮೃದ್ಧಿ ನೀರು ಹರಿಯಲಿದೆ. ನಗರ ಗ್ರಾಮೀಣ ಭಾಗದಲ್ಲಿ ನಾಗರಿಕರಿಗೆ ನೀರಿನ ಕೊರತೆ, ಬವಣೆ, ತಪ್ಪಲಿದೆ. ಕೂಡಲೇ ಅಿಕಾರಿಗಳು, ಸರ್ಕಾರಗಳು ಜಲಾಶಯದ ಹೂಳು ತೆರವುಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ರೈತ ಮುಖಂಡರು ಇತರರಿದ್ದರು.

ಇಂದು ಬಂಡಿಹಾಳದ ಕೆರಿಬಸವೇಶ್ವರ ಜಾತ್ರಾಮಹೋತ್ಸವ

▸ ಶಿವಮೂರ್ತಿ ಇಟಗಿ

ಯಲಬುರ್ಗಾ: ತಾಲೂಕಿನ ಬಂಡಿಹಾಳ ಗ್ರಾಮದ ಕೆರಿಬಸವೇಶ್ವರ ಜಾತ್ರೆಯು ಏ.20ರಂದು ಅದ್ದೂರಿಯಿಂದ ನಡೆಯಲಿದೆ.

ಕೆರಿಬಸವೇಶ್ವರನಿಗೆ ಸುಮಾರು ಸಾವಿರ ವರ್ಷಗಳ ಕಾಲದ ಇತಿಹಾಸವಿದೆ. ಈ ಗ್ರಾಮದಲ್ಲಿ ಒಂದು ಬೃಹತ್ ಕೆರೆ ಇದೆ. ಸುತ್ತ-ಮುತ್ತಲಿನ ಹತ್ತಾರು ಹಳ್ಳಿಗಳಿಗೆ ಜೀವ-ಜಲವಾಗಿರುವ ಈ ಕೆರೆ ನಿರ್ಮಾಣದ ಸಂದರ್ಭದಲ್ಲಿ ಅಪರೂಪವಾಗಿ ಪ್ರತ್ಯಕ್ಷವಾದ ಬಸವಣ್ಣನ ಮೂರ್ತಿಯನ್ನು ಕಂಡು ಗಾಬರಿಯಾದ ಗ್ರಾಮಸ್ಥರು ಮೂರ್ತಿಗೆ ಕೆರೆಬಸವೇಶ್ವರ ಎಂದು ನಾಮಕರಣ ಮಾಡಿ ಅಂದಿನಿಂದ ಪೂಜಿಸುತ್ತಾ ಬರುತ್ತಿದ್ದಾರೆ.

ದಿನದಿಂದ ದಿನಕ್ಕೆ ಪ್ರಚಾರ ಹೆಚ್ಚಿದಂತೆ ಇಲ್ಲಿಗೆ ಹಂಪಿ ಅರಸರು ಕೆರೆ ವೀಕ್ಷಣೆಗೆಂದು ಆಗಮಿಸುತ್ತಾರೆ. ಇಲ್ಲಿನ ವಿಶಾಲವಾದ ಬೃಹತ್ ಕೆರೆಯನ್ನು ಕಂಡು ಸಂತೋಷಭರಿತರಾದ ನಿಜಾಮರು ಇಲ್ಲಿನ ದೇವಸ್ಥಾನಕ್ಕೆ ರಥೋತ್ಸವ ನಿರ್ಮಾಣ ಮಾಡುವಂತೆ ಗ್ರಾಮದ ಕುಲಕರ್ಣಿಗೆ ಸೂಚಿಸುತ್ತಾರೆ.

ನಿಜಾಮರ ಸೂಚನೆಯಂತೆ



ಕುಲಕರ್ಣಿಯವರು ಕುಷ್ಟಗಿ ತಾಲೂಕಿನ ಚಳಗೇರಿ ಗ್ರಾಮದಿಂದ ಸಿದ್ದನಗೌಡ ಪಾಟೀಲ ಎಂಬ ಶಿಲ್ಪಿಯನ್ನು ಕರೆಯಿಸಿ ರಥೋತ್ಸವ ನಿರ್ಮಾಣ ಮಾಡಿಸುತ್ತಾರೆ. 101 ವರ್ಷಗಳಿಂದ ಸತತವಾಗಿ ಕೆರಿಬಸವೇಶ್ವರನ ರಥೋತ್ಸವ ಅದ್ದೂರಿಯಾಗಿ ನಡೆದುಕೊಂಡು ಬರುತ್ತಿರುವದು ಭಕ್ತರ ಶ್ರಮಕ್ಕೆ ಸಿಕ್ಕ ಫಲವಾಗಿದೆ. ಈ ಗ್ರಾಮಕ್ಕೆ ಭೇಟಿ ನೀಡುವ ಪ್ರತಿಯೊಬ್ಬರೂ ಕೆರಿಬಸವೇಶ್ವರನ ಆಶೀರ್ವಾದ ಪಡೆದುಕೊಂಡೇ ಮುಂದೆ ಸಾಗುತ್ತಾರೆ ಇದರಿಂದ ಪ್ರತಿಯೊಬ್ಬರಿಗೂ ಒಳಿತಾಗುತ್ತದೆ ಎಂಬುದು ಜನರ ವಾಡಿಕೆ.

ಈ ದೇವಸ್ಥಾನದ ವಿಶೇಷವೆಂದರೆ ದೇವಸ್ಥಾನ ಮೇಲ್ಛಾವಣಿ ನಿರ್ಮಾಣ ಮಾಡಿದರೆ ಫಲಕಾರಿಯಾಗುವದಿಲ್ಲ ತನ್ನಿಂದಾನೆ ಕುಸಿದು ಬೀಳುತ್ತದೆ. ದೇವಸ್ಥಾನದ ಸುತ್ತಲೂ ಸುಂದರವಾದ ಗಿಡ-ಮರಗಳು ಇದ್ದರೂ ಮರಗಳ ನೆರಳು ಗರ್ಭಗುಡಿ ಮೇಲೆ ಬೀಳುವ ಮೊದಲೇ ಗಿಡದ ಆ ಕೊಂಪೆಗಳು ತುಂಡಾಗಿ ಬೀಳುತ್ತವೆ. ದೇವಸ್ಥಾನ ಇತಿಹಾಸದ ಮೂಲಗಳ ಪ್ರಕಾರ ಮರಳು, ನೀರು, ಕಲ್ಲು ಮತ್ತು ಕಟ್ಟಡ ಕಾರ್ಮಿಕರನ್ನು ವಿವಿಧ ಏಳು ಗ್ರಾಮಗಳಿಂದ ಕರೆಯಿಸಿ ಒಂದೇ ದಿನದಲ್ಲಿ ನಿರ್ಮಾಣ ಮಾಡಿದಾಗ ಮಾತ್ರ ಮೇಲ್ಛಾವಣಿ ನಿಲ್ಲುತ್ತದೆ ಎಂಬುದು ಇಲ್ಲಿನ ಪೂಜಾರಿಗಳ ವಾದವಾಗಿದೆ.

ಬಸವಣ್ಣನಿಗೆ ಅಭಿಷೇಕ, ವಿಶೇಷ ಪೂಜೆ, ಪ್ರಸಾದ ವಿನಿಯೋಗ, ಅನ್ನದಾಸೋಹ, ಮನರಂಜನಾ ಕಾರ್ಯಕ್ರಮಗಳು ಜರುಗಲಿವೆ. ಈ ಜಾತ್ರೆಗೆ ತೊಂಡಿಹಾಳ, ಹಾಲಕೆರೆ, ನರೇಗಲ್, ಯಲಬುರ್ಗಾ, ಬಿನ್ನಾಳ, ಯರೇಹಂಚಿನಾಳ, ಕರಮುಡಿ, ಹಿರೇಮ್ಯಾಗೇರಿ, ಮುಧೋಳ, ಗದಗ, ಕೊಪ್ಪಳ ಸೇರಿದಂತೆ ಸುತ್ತ-ಮುತ್ತಲಿನ ಹಲವಾರು ಗ್ರಾಮಗಳಿಂದ ಭಕ್ತರು ಆಗಮಿಸಿ ಕೆರಿಬಸವೇಶ್ವರನ ಕೃಪೆಗೆ ಪಾತ್ರರಾಗುತ್ತಾರೆ.

ಭಟಪ್ಪನಹಳ್ಳಿ ಭಕ್ತಿ, ಸಂಸ್ಕಾರದ ಗ್ರಾಮ: ಕಳಕಪ್ಪ ಕಂಬಳಿ

ಕುಕನೂರು: ತಾಲೂಕಿನಲ್ಲಿ ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುವ ಭಟಪ್ಪನಹಳ್ಳಿ ಗ್ರಾಮವು ಭಕ್ತಿ, ಸಂಸ್ಕಾರ ಮತ್ತು ಏಕತೆಯ ಜೀವಂತ ಪ್ರತೀಕವಾಗಿದ್ದು, ಇದು ನನ್ನ ಅತ್ಯಂತ ನೆಚ್ಚಿನ ಗ್ರಾಮವಾಗಿದೆ ಎಂದು ತಾ.ಪಂ ಮಾಜಿ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಹೇಳಿದರು.

ತಾಲೂಕಿನ ಭಟಪ್ಪನಹಳ್ಳಿ ಗ್ರಾಮದಲ್ಲಿ ಭೀಮಾಂಬಿಕಾದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಯುವ ನಾಟ್ಯ ಸಂಘದಿಂದ ಹಮ್ಮಿಕೊಂಡಿದ್ದ ರೈತರ ರಾಜ್ಯದಲ್ಲಿ ರಾಯಣ್ಣ ಎಂಬ ಸಾಮಾಜಿಕ ನಾಟಕ ಉದ್ಘಾಟಿಸಿ ಮಾತನಾಡಿ, ಗ್ರಾಮವು ಕೇವಲ ಧಾರ್ಮಿಕ ಆಚರಣೆಗಳಲ್ಲಿ ಮಾತ್ರವಲ್ಲದೆ, ಮಾನವೀಯ ಮೌಲ್ಯಗಳು, ಸಂಸ್ಕಾರ, ಪರಸ್ಪರ ಗೌರವ ಮತ್ತು ಸಹಕಾರ ಮನೋಭಾವಗಳಲ್ಲಿ ಕೂಡ ವಿಶಿಷ್ಟ ಸ್ಥಾನ ಹೊಂದಿದೆ ಎಂದರು.

ನಾನು ಅನೇಕ ಗ್ರಾಮಗಳಿಗೆ ಭೇಟಿ ನೀಡಿದ್ದೇನೆ. ಆದರೆ ಭಟಪ್ಪನಹಳ್ಳಿ ಗ್ರಾಮದಲ್ಲಿ ಕಾಣುವ ಪ್ರೀತಿ, ಆತ್ಮೀಯತೆ ಮತ್ತು ಒಗ್ಗಟ್ಟು ಅಪರೂಪದದ್ದು, ಇಲ್ಲಿನ ಜನರು ತೋರಿಸುವ ಅಭಿಮಾನ ನನಗೆ ಸದಾ ಮನಸಿಗೆ ಹತ್ತಿರವಾಗುತ್ತದೆ ಎಂದು ಹೇಳಿದರು.

ಯಲಬುರ್ಗಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಲ್ಲು ಮಾಟರಂಗಿ ಮಾತನಾಡಿ, ಗ್ರಾಮದಲ್ಲಿ ಭಕ್ತಿ ಭಾವ ಮೇಳೈಸಿದ್ದು, ನೂತನ ರಥೋತ್ಸವ ನಿರ್ಮಾಣ ಕಾರ್ಯ ಶ್ಲಾಘನೀಯ. ನಾಟಕಗಳ ಮೂಲಕ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಾಗುತ್ತದೆ. ರಂಗಭೂಮಿ ಕಲೆ ಉಳಿಸಲು ಕಲಾವಿದರು ಮಾಡುತ್ತಿರುವ ಶ್ರಮ ಪ್ರಶಂಸನೀಯವಾಗಿದೆ ಎಂದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶ್ರೀಧರ ಹೊಸಮನಿ



ಮಾತನಾಡಿ, ಇಂತಹ ಸಾಂಸ್ಕೃತಿಕ ಕಾರ್ಯಕ್ರಮ ಯುವಕರಿಗೆ ಪ್ರೇರಣೆಯಾಗುತ್ತವೆ ಎಂದರು.

ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ ದೊಡ್ಡಮನಿ ಮಾತನಾಡಿ, ಗ್ರಾಮದಲ್ಲಿ ಇಂತಹ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಎಲ್ಲರ ಸಹಕಾರ ಅತ್ಯಗತ್ಯ ಎಂದು ತಿಳಿಸಿದರು.

ವೇದಮೂರ್ತಿ ವೀರಯ್ಯ ಹಿರೇಮಠ ಅವರು ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ದೇವರಾಜ ನಡೂಲಮನಿ, ಸಂಗಪ್ಪ ಅಡಗಿಮನಿ, ಶ್ರೀಕಾಂತ ಕಲಗೋಡಿ, ಹನುಮಪ್ಪ ಪೂಜಾರ, ಹನುಮಪ್ಪ ಗಾಳಿ, ಫಕೀರಪ್ಪ ಮೋತುಂಡಿ, ಪ್ರಕಾಶ ಕುರಿ, ಮರಿಯಪ್ಪ ಪೂಜಾರ, ಹರೀಶ ಕುಡಗುಂಟಿ, ಮಾರುತಿ ಗುಡಿಹಿಂದಲ, ಸಂತೋಷ ಹಂದ್ರಾಳ, ಕುಮಾರಸ್ವಾಮಿ ಭದ್ರಾಪೂರ, ಸಂತೋಷ ಹೊಸಮನಿ, ಗವಿ ದೊಡ್ಡಮನಿ, ರಮೇಶ ಮೋತುಂಡಿ, ಮಂಜುನಾಥ, ಯಲ್ಲಪ್ಪ ಸೇರಿದಂತೆ ಹಲವಾರು ಗಣ್ಯರು, ಕಲಾಭಿಮಾನಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.